ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangothri, Mysuru - 570 006



## ಎಂ.ಎ. (ಅಂತಿಮ)

# ಸಮಾಜಶಾಸ್ತ್ರ

## ಗ್ರಾಮೀಣ ಸಮಾಜದ ಅಧ್ಯಯನ








ಕೋರ್ಸ್ – 6

ಬ್ಲಾಕ್ 1–7

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570006

## ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ

## ಅಂತಿಮ ಎಂ.ಎ. ಸಮಾಜಶಾಸ್ತ್ರ

### ಕೋರ್ಸ್ – 6 : ಗ್ರಾಮೀಣ ಸಮಾಜದ ಅಧ್ಯಯನ


| ಬ್ಲಾಕ್ – 1 | | ಪುಟ ಸಂಖ್ಯೆ |
|---|---|---|
| ಘಟಕ – 1 : | ಗ್ರಾಮೀಣ ಸಮಾಜಶಾಸ್ತ್ರ : ಸ್ವರೂಪ, ವ್ಯಾಖ್ಯೆ, ವಸ್ತು ವಿಷಯ, ಸಮಂಜಸತೆ (ಸಂಗತತೆ) | 01–14<br>ಪ್ರೊ. ಎಮ್ ಎಚ್ ಕೃಷ್ಣಪ್ಪ |
| ಘಟಕ – 2 : | ಗ್ರಾಮೀಣ ಸಮಾಜಶಾಸ್ತ್ರದ ಐತಿಹಾಸಿಕ ಬೆಳವಣಿಗೆ; ಪಾಶ್ಚಾತ್ಯ–ಭಾರತ | 15–33<br>ಪ್ರೊ. ಎಮ್ ಎಚ್ ಕೃಷ್ಣಪ್ಪ |
| ಘಟಕ – 3 : | ಗ್ರಾಮ ಸಮುದಾಯ; ಉಗಮ ಮತ್ತು ಬೆಳವಣಿಗೆ, ವಿನ್ಯಾಸಗಳು (ಮಾದರಿಗಳು) | 34–55<br>ಪ್ರೊ. ಎ ಈ ಪುನೀತ್ |
| ಘಟಕ – 4 : | ಗ್ರಾಮೀಣ ಸಮಾಜ; ಗುಣಲಕ್ಷಣಗಳು, ಗ್ರಾಮ–ನಗರ ತುಲನೆ, ಗ್ರಾಮ ನಗರಗಳ ಸಾತತ್ಯ, ಗ್ರಾಮ ನಗರಗಳ ಪರಸ್ಪರಾವಲಂಬನೆ | 56–76<br>ಪ್ರೊ. ಎ ಈ ಪುನೀತ್ |
| **ಬ್ಲಾಕ್ – 2** | | |
| ಘಟಕ – 5 : | ಜನಸಂಖ್ಯಾ ಬೆಳವಣಿಗೆಯ ಒಲವುಗಳು; ವಿಶ್ವ–ಭಾರತ–ಕರ್ನಾಟಕ | 77–108<br>ಪ್ರೊ. ಎ ಈ ಪುನೀತ್ |
| ಘಟಕ – 6 : | ಫಲಿತತೆ ಮತ್ತು ಮರ್ತ್ಯತೆ | 109–131<br>ಪ್ರೊ. ಎ. ಈ. ಪುನೀತ್ |
| ಘಟಕ – 7 : | ವಲಸೆ | 132–145<br>ಪ್ರೊ. ಎಮ್ ಎಚ್ ಕೃಷ್ಣಪ್ಪ |
| ಘಟಕ – 8 : | ವಲಸೆಯ ಸಿದ್ಧಾಂತಗಳು | 146–154<br>ಪ್ರೊ. ಎಮ್ ಎಚ್ ಕೃಷ್ಣಪ್ಪ |
| **ಬ್ಲಾಕ್ – 3** | | |
| ಟಕ – 9 : | ಗ್ರಾಮೀಣ ಸಂಸ್ಥೆಗಳು – ವಿವಾಹ, ಕುಟುಂಬ, ಕಳ್ಳುಬಳ್ಳಿ | 155–189<br>ಪ್ರೊ. ಎ. ಈ. ಪುನೀತ್ |
| ಘಟಕ – 10 : | ಗ್ರಾಮೀಣ ಧರ್ಮ ಹಾಗು ಮನರಂಜನೆ | 190–214<br>ಪ್ರೊ. ಎ. ಈ. ಪುನೀತ್ |
| ಘಟಕ – 11 : | ಸಾಮಾಜಿಕ ಸ್ತರವಿನ್ಯಾಸ ; ಸನ್ನೆಗಳು / ಆಧಾರಗಳು, ಅಂದು–ಇಂದು, ಕೃಷಿ ಏಣಿ, ಪ್ರಬಲ ಜಾತಿ | 215–249<br>ಪ್ರೊ. ಎ. ಈ. ಪುನೀತ್ |
| ಘಟಕ – 12 : | ಜಾತಿ ಪದ್ಧತಿಯಲ್ಲಿನ ಚಲನೆ–ಸಂಸ್ಕೃತೀಕರಣ ಹಾಗು ಪಾಶ್ಚಾತ್ಯೀಕರಣ | 250–276<br>ಪ್ರೊ. ಎ. ಈ. ಪುನೀತ್ |

## ಬ್ಲಾಕ್ – 4

ಘಟಕ – 13 : ಗ್ರಾಮೀಣ ಆರ್ಥಿಕತೆ 277–296
ಪ್ರೊ. ಎಮ್ ಏಚ್ ಕೃಷ್ಣಪ್ಪ

ಘಟಕ – 14 : ಕ್ರಾಂತಿಕಾರಕ ಬದಲಾವಣೆಗಳು 297–319
ಪ್ರೊ. ಎಮ್ ಏಚ್ ಕೃಷ್ಣಪ್ಪ

ಘಟಕ – 15 : ಗ್ರಾಮೀಣ ಸಾಲ 320–344
ಪ್ರೊ. ಎಮ್ ಏಚ್ ಕೃಷ್ಣಪ್ಪ

ಘಟಕ – 16 : ಗ್ರಾಮ ಸಹಕಾರ ಸಂಘಗಳು 345–364
ಪ್ರೊ. ಎಮ್ ಏಚ್ ಕೃಷ್ಣಪ್ಪ

## ಬ್ಲಾಕ್ – 5

ಘಟಕ – 17 : ಗ್ರಾಮೀಣ ಸಮಸ್ಯೆಗಳು ; ಗ್ರಾಮೀಣ ಸಾಲಋಣ – ಜೀತಪದ್ಧತಿ 365–376
ಪ್ರೊ. ಎಮ್ ಏಚ್ ಕೃಷ್ಣಪ್ಪ

ಘಟಕ – 18: ಜಾತಿ ಘರ್ಷಣೆಗಳು 377–384
ಪ್ರೊ. ಎಮ್ ಏಚ್ ಕೃಷ್ಣಪ್ಪ

ಘಟಕ – 19 : ಅನಕ್ಷರತೆ 385–403
ಪ್ರೊ. ಎಮ್ ಏಚ್ ಕೃಷ್ಣಪ್ಪ

ಘಟಕ – 20: ಪರಿಸರ ಹಾನಿ 404–420
ಪ್ರೊ. ಎಮ್ ಏಚ್ ಕೃಷ್ಣಪ್ಪ

## ಬ್ಲಾಕ್ – 6

ಘಟಕ – 21 : ಗ್ರಾಮೀಣ ಪುನರ್‌ನಿರ್ಮಾಣ 421–430
ಡಾ. ಎನ್. ದೊಡ್ಡಸಿದ್ಧಯ್ಯ

ಘಟಕ – 22: ಗ್ರಾಮೀಣ ಪುನರ್‌ನಿರ್ಮಾಣವನ್ನು ಕುರಿತು ಗಾಂಧೀಜಿಯವರ ದೃಷ್ಟಿಕೋನ 431–442
ಡಾ. ಎನ್. ದೊಡ್ಡಸಿದ್ಧಯ್ಯ

ಘಟಕ – 23 : ಭಾರತದಲ್ಲಿ ಪಂಚಾಯಿತಿ ರಾಜ್ಯ ವ್ಯವಸ್ಥೆ 443–472
ಶ್ರೀ ಎಮ್ ಆರ್ ಶ್ರೀನಿವಾಸ

ಘಟಕ – 24 : ಕರ್ನಾಟಕದಲ್ಲಿ ಪಂಚಾಯಿತಿ ರಾಜ್ಯ – ಗ್ರಾಮೀಣ ನಾಯಕತ್ವ 473–490
ಶ್ರೀ ಎಮ್ ಆರ್ ಶ್ರೀನಿವಾಸ

## ಬ್ಲಾಕ್ – 7

ಘಟಕ – 25 : ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು 491–509
ಡಾ. ಎನ್. ದೊಡ್ಡಸಿದ್ದಯ್ಯ

ಘಟಕ – 26 : 20 ಅಂಶಗಳ ಕಾರ್ಯಕ್ರಮಗಳು, ಎಸ್.ಎಫ್.ಡಿ.ಎ ಮತ್ತು ಎಮ್.ಎಫ್.ಎ.ಎಲ್, ಡಿ.ಪಿ.ಎ.ಪಿ, ಟ್ರೈಸಂ, ಐ.ಆರ್.ಡಿ.ಪಿ ಮತ್ತು ಜೆ.ಆರ್.ವೈ 510–531
ಡಾ. ಎನ್. ದೊಡ್ಡಸಿದ್ದಯ್ಯ

ಘಟಕ – 27 : ಗ್ರಾಮೀಣಾಭಿವೃದ್ಧಿಯಲ್ಲಿ ಸ್ವಯಂಪ್ರೇರಿತ ಸಂಘಟನೆಗಳ ಪಾತ್ರ ; ಸರ್ಕಾರೇತರ ಸಂಘಟನೆಗಳ ಪಾತ್ರ 532–546
ಪ್ರೊ. ಎಮ್ ಏಚ್ ಕೃಷ್ಣಪ್ಪ

ಘಟಕ – 28 : ಕವಲು ದಾರಿಯಲ್ಲಿ ಗ್ರಾಮೀಣ ಸಮಾಜ 547–572
ಪ್ರೊ. ಎಮ್ ಏಚ್ ಕೃಷ್ಣಪ್ಪ

**ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ**

**ಪ್ರೊ. ಎಮ್ ಜಿ ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮೈಸೂರು.

**ಪ್ರೊ. ಟಿ ಡಿ ದೇವೇಗೌಡ**
ಡೀನ್ (ಶೈಕ್ಷಣಿಕ) (ಪ್ರಭಾರ) ಮತ್ತು
ಸಂಚಾಲಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮೈಸೂರು.

**ಸಂಪಾದಕರು ಮತ್ತು ವಿಷಯ ಸಂಯೋಜಕರು**

**ಪ್ರೊ. ಎಮ್ ಏಚ್ ಕೃಷ್ಣಪ್ಪ**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮೈಸೂರು.

**ಕೋರ್ಸ್ ಲೇಖಕರು**

**ಪ್ರೊ. ಎಮ್ ಏಚ್ ಕೃಷ್ಣಪ್ಪ** — ಬ್ಲಾಕ್ – 1 — ಘಟಕಗಳು – 01 ಮತ್ತು 02
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು

**ಪ್ರೊ. ಏ ಈ ಪುನೀತ್** — ಘಟಕಗಳು – 03 ಮತ್ತು 04
ಪ್ರಾಧ್ಯಾಪಕರು
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ವಿಶ್ವವಿದ್ಯಾನಿಲಯ
ಧಾರವಾಡ – 580003.

**ಪ್ರೊ. ಏ ಈ ಪುನೀತ್** — ಬ್ಲಾಕ್ – 2 — ಘಟಕಗಳು – 05 ಮತ್ತು 06
ಪ್ರಾಧ್ಯಾಪಕರು
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ವಿಶ್ವವಿದ್ಯಾನಿಲಯ
ಧಾರವಾಡ – 580003.

**ಪ್ರೊ. ಎಮ್ ಏಚ್ ಕೃಷ್ಣಪ್ಪ** — ಘಟಕಗಳು – 07 ಮತ್ತು 08
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು

**ಪ್ರೊ. ಏ ಈ ಪುನೀತ್** — ಬ್ಲಾಕ್ – 3 — ಘಟಕಗಳು – 09 ರಿಂದ 12
ಪ್ರಾಧ್ಯಾಪಕರು,
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ವಿಶ್ವವಿದ್ಯಾನಿಲಯ
ಧಾರವಾಡ – 580003.

**ಪ್ರೊ. ಎಮ್ ಏಚ್ ಕೃಷ್ಣಪ್ಪ** ಬ್ಲಾಕ್ – 4 ಘಟಕಗಳು 13 ರಿಂದ 16
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು

**ಪ್ರೊ. ಎಮ್ ಏಚ್ ಕೃಷ್ಣಪ್ಪ** ಬ್ಲಾಕ್ – 5 ಘಟಕಗಳು 17 ರಿಂದ 20
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು

**ಡಾ. ಎನ್ ದೊಡ್ಡಸಿದ್ಧಯ್ಯ** ಬ್ಲಾಕ್ – 6 ಘಟಕಗಳು 21 ಮತ್ತು 22
ಸಹ ಪ್ರಾಧ್ಯಾಪಕರು
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮೈಸೂರು.

**ಶ್ರೀ. ಎಮ್ ಆರ್ ಶ್ರೀನಿವಾಸ** ಘಟಕಗಳು 23 ಮತ್ತು 24
ಆಯ್ಕೆ ಶ್ರೇಣಿ ಅಧ್ಯಾಪಕರು,
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು

**ಡಾ. ಎನ್ ದೊಡ್ಡಸಿದ್ಧಯ್ಯ** ಬ್ಲಾಕ್ – 7 ಘಟಕಗಳು 25 ಮತ್ತು 26
ಸಹ ಪ್ರಾಧ್ಯಾಪಕರು
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮೈಸೂರು.

**ಪ್ರೊ. ಎಮ್ ಏಚ್ ಕೃಷ್ಣಪ್ಪ** ಘಟಕಗಳು 27 ರಿಂದ 28
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು

ಪ್ರಕಾಶಕರು

ಕುಲಸಚಿವರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು–6

**ಕ.ರಾ.ಮು.ವಿ.ಯ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ.**

**© ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2016**

ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಯಾವುದೇ ಬಗೆಯಲ್ಲಿ ಕೃತಿಯ ಯಾವುದೇ ಭಾಗವನ್ನು ಮಿಮಿಯೊಗ್ರಾಸ್ ಅಥವಾ ಯಾವುದೇ ಪ್ರಕಾರಗಳಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಲಿಖಿತ ಒಪ್ಪಿಗೆ ಪಡೆಯದೆ ಪುನರ್‌ಮುದ್ರಿಸಬಾರದು.

ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮುಕ್ತಗಂಗೋತ್ರಿ, ಮೈಸೂರು–6 ಮತ್ತು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.karnatakastateopenuniversity.in ಇಲ್ಲಿಂದ ಪಡೆಯಬಹುದು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಮುದ್ರಿತವಾಗಿದೆ ಹಾಗು ಪ್ರಕಟಿಸಲಾಗಿದೆ.

# ಗ್ರಾಮೀಣ ಸಮಾಜದ ಅಧ್ಯಯನ
## ಕೋರ್ಸ್ ಪರಿಚಯ

ಪ್ರಿಯ ಶಿಕ್ಷಣಾರ್ಥಿ,

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ವಿಭಾಗಕ್ಕೆ ಮತ್ತೊಮ್ಮೆ ನಿಮ್ಮನ್ನು ಸ್ವಾಗತಿಸಲು ಸಂತೋಷವಾಗುತ್ತದೆ. ಪ್ರಥಮ ವರ್ಷದ ಎಂ.ಎ. ಶೈಕ್ಷಣಿಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುತ್ತೀರಿ ಎಂದು ನಂಬಿರುತ್ತೇನೆ. ಪ್ರಥಮ ವರ್ಷದ ಐದು ಪತ್ರಿಕೆಗಳನ್ನು ಅಧ್ಯಯನ ಮಾಡಿದ ಅನುಭವ ನಿಮಗಿರುವುದರಿಂದ ಸಮಾಜಶಾಸ್ತ್ರದ ಅಧ್ಯಯನವು ಎಷ್ಟು ಪ್ರಾಮುಖ್ಯ ಎಂಬುದು ನಿಮಗೆ ಈಗ ಅರ್ಥವಾಗಿದ್ದು ಸಮಾಜಶಾಸ್ತ್ರ ವಿಷಯವನ್ನು ಪ್ರಶಂಸಿಸಲು ಪ್ರಾರಂಭಿಸಿರಬಹುದು. ಈಗ ಸ್ನಾತಕೋತ್ತರ ಪದವಿಯ ಅಂತಿಮ ಘಟ್ಟದ ಶೈಕ್ಷಣಿಕ ಕಾರ್ಯಕ್ರಮಕ್ಕೆ ನೀವು ಬರುತ್ತಿದ್ದೀರಿ. ಮುಂದೆಯು ಕೂಡ ಸಮಾಜಶಾಸ್ತ್ರದ ಅಧ್ಯಯನವನ್ನು ಆನಂದಿಸುತ್ತೀರಿ ಎನ್ನುವ ಖಾತರಿ ನನಗಿದೆ. ಭಾರತವು ಹಳ್ಳಿಗಳ ನಾಡಾಗಿತ್ತು. ಈಗಲೂ ನಾಡಾಗಿದೆ ಮತ್ತು ಮುಂದಿನ ಹಲವಾರು ವರ್ಷಗಳವರೆಗೂ ನಾಡಾಗಿರುತ್ತದೆ. ಆದುದರಿಂದ, ಸಮಾಜಶಾಸ್ತ್ರದ ವಿದ್ಯಾರ್ಥಿಗಳಿಗೆ ಗ್ರಾಮಗಳ ಬಗೆಗಿನ ಪರಿಪೂರ್ಣ ಜ್ಞಾನ ಇರಬೇಕಾಗಿದ್ದುದು ಅತ್ಯವಶ್ಯ.

ಗ್ರಾಮಗಳ ಉಗಮದಿಂದ ಪ್ರಾರಂಭಗೊಂಡು ಅವುಗಳಲ್ಲಿ ಉಂಟಾಗುತ್ತಿರುವ ಹಲವಾರು ಬದಲಾವಣೆಗಳನ್ನು ಒಳಗೊಂಡಂತೆ ಭಾರತೀಯ ಗ್ರಾಮಗಳ ಹಲವಾರು ಅಂಶಗಳ ಬಗೆಗೆ ಚರ್ಚಿಸುವ ಪ್ರಯತ್ನವನ್ನು ಈ ಪತ್ರಿಕೆಯಲ್ಲಿ ಮಾಡಲಾಗಿದೆ.

ಒಂದನೇ ಬ್ಲಾಕ್ ನಾಲ್ಕು ಘಟಕಗಳನ್ನು ಒಳಗೊಂಡಿದೆ. ಮೊದಲನೆಯ ಘಟಕದಲ್ಲಿ ಗ್ರಾಮೀಣ ಸಮಾಜಶಾಸ್ತ್ರದ ವಸ್ತು ವಿಷಯವನ್ನು ಚರ್ಚೆ ಮಾಡಿರುವುದು ಮಾತ್ರವಲ್ಲದೆ ಅದರ ಸಮಂಜಸತೆಯನ್ನು ಸಮರ್ಥಿಸುವ ಪ್ರಯತ್ನವನ್ನು ಮಾಡಲಾಗಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮತ್ತು ಭಾರತದಲ್ಲಿ ಗ್ರಾಮೀಣ ಸಮಾಜಶಾಸ್ತ್ರ ಪೂರ್ಣ ಪ್ರಮಾಣದ ಅಧ್ಯಯನದ ವಿಷಯವಾಗಿ ಹೇಗೆ, ಯಾಕೆ ಮತ್ತು ಯಾವಾಗ ಉಗಮಗೊಂಡಿತು ಎನ್ನುವ ಮೂಲಭೂತ ಪ್ರಶ್ನೆಗಳನ್ನು ಕುರಿತು ಘಟಕ ಎರಡರಲ್ಲಿ ಚರ್ಚಿಸಲಾಗಿದೆ. ಭಾರತದಲ್ಲಿನ ಗ್ರಾಮ ಸಮುದಾಯಗಳ ಉಗಮ ಮತ್ತು ಬೆಳವಣಿಗೆಯನ್ನು ಕುರಿತು ಚರ್ಚಿಸಲಾಗಿರುವುದು ಮಾತ್ರವಲ್ಲದೆ, ಪಾಶ್ಚಾತ್ಯ ರಾಷ್ಟ್ರಗಳಲ್ಲಿನ ಮತ್ತು ಭಾರತದಲ್ಲಿನ ಗ್ರಾಮ ವಿನ್ಯಾಸಗಳನ್ನು ಕೂಡ ಚರ್ಚಿಸಲಾಗಿದೆ. ಗ್ರಾಮ ಮತ್ತು ನಗರ ಸಮುದಾಯಗಳ ನಡುವೆ ಹೋಲಿಕೆ ಮಾಡುವುದರ ಮೂಲಕ ಅವುಗಳ ಪ್ರಮುಖ ಲಕ್ಷಣಗಳನ್ನು ತಿಳಿದುಕೊಳ್ಳುವ ಮತ್ತು ಪರಸ್ಪರಾವಲಂಬನೆಯ ಮುಖ್ಯಾಂಶಗಳನ್ನು ಹೇಳುವ ಪ್ರಯತ್ನ ಮಾಡಲಾಗಿದೆ.

ಎರಡನೇ ಬ್ಲಾಕ್ ನಾಲ್ಕು ಘಟಕಗಳನ್ನು ಒಳಗೊಂಡಿದೆ. ಕರ್ನಾಟಕ, ಭಾರತ ಮತ್ತು ಪ್ರಪಂಚದ ಜನಸಂಖ್ಯಾ ಬೆಳವಣಿಗೆಯ ಪ್ರವೃತ್ತಿಗಳನ್ನು ಗುರುತಿಸುವ ಪ್ರಯತ್ನವನ್ನು ಘಟಕ 5ರಲ್ಲಿ ಮಾಡಲಾಗಿದೆ. ಫಲಿತತೆ ಮತ್ತು ಮರ್ತ್ಯತೆಗಳಂತಹ ಜನಸಂಖ್ಯಾ ಪರಿವರ್ತ್ಯತೆಗಳ ಮೂಲಭೂತ ಅಂಶಗಳನ್ನು ಕುರಿತು ಘಟಕ 6ರಲ್ಲಿ ಚರ್ಚಿಸಲಾಗಿದೆ. ಜನಸಂಖ್ಯಾ ಪರಿವರ್ತ್ಯತೆಯ ಮತ್ತೊಂದು ಪ್ರಮುಖ ಅಂಶವಾದ ವಲಸೆ ಕುರಿತು ಘಟಕ 7ರಲ್ಲಿ ಚರ್ಚಿಸಿದ್ದರೆ, ವಲಸೆಯ ಸಿದ್ಧಾಂತಗಳ ಬಗೆಗೆ ಘಟಕ 8ರಲ್ಲಿ ಚರ್ಚೆ ಮಾಡಲಾಗಿದೆ.

ಮೂರನೇ ಬ್ಲಾಕ್‌ನಲ್ಲಿ ನಾಲ್ಕು ಘಟಕಗಳಿವೆ. ವಿವಾಹ, ಕುಟುಂಬ ಮತ್ತು ಕಳ್ಳುಬಳ್ಳಿ ಸಂಬಂಧ (ಬಂಧುತ್ವ)ಗಳಂತಹ ಗ್ರಾಮ ಸಮುದಾಯದ ಮೂಲಭೂತ ಸಂಸ್ಥೆಗಳನ್ನು ಘಟಕ 9ರಲ್ಲಿ ಚರ್ಚಿಸಲಾಗಿದೆ. ಸಂಸ್ಥೆಗಳನ್ನು ಕುರಿತು ಚರ್ಚೆ ಮಾಡುವಾಗ ಸಂಸ್ಥೆಗಳಲ್ಲಿ ಆಗುತ್ತಿರುವ ಬದಲಾವಣೆ ಮತ್ತು ಬದಲಾವಣೆಗೆ ಕಾರಣಗಳನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ. ವಿಶೇಷವಾಗಿ ಭಾರತಕ್ಕೆ ಸಂಬಂಧಿಸಿದಂತೆ ಗ್ರಾಮೀಣ ಧರ್ಮ ಮತ್ತು ಮನರಂಜನೆಯನ್ನು ಕುರಿತು

ಘಟಕ 10 ಚರ್ಚಿಸುತ್ತದೆ. ಮೂಲಭೂತ ವಿಷಯಗಳಾದ ಗ್ರಾಮೀಣ ಧರ್ಮ ಮತ್ತು ಅದರ ಹಲವಾರು ಆಯಾಮಗಳನ್ನು ಕೂಡ ಚರ್ಚಿಸಲಾಗಿದೆ. ಭಾರತೀಯ ಗ್ರಾಮಗಳಲ್ಲಿನ ಇತ್ತೀಚಿನ ಸಂಘಟಿತ ಮತ್ತು ಸಾಂಸ್ಥೀಕರಣಗೊಂಡ ಮನರಂಜನೆಯನ್ನು ಕೂಡ ವಿದ್ಯಾರ್ಥಿಗಳ ಗಮನಕ್ಕೆ ತರಲಾಗಿದೆ. ಘಟಕ 11 ಮತ್ತು 12 ಭಾರತೀಯ ಗ್ರಾಮಗಳಲ್ಲಿನ ಸ್ತರವಿನ್ಯಾಸ ಮತ್ತು ಸಾಮಾಜಿಕ ಚಲನೆಯನ್ನು ಕುರಿತು ಚರ್ಚಿಸುತ್ತವೆ. ವಿಶಿಷ್ಟ ಸಂಸ್ಥೆಯಾದ ಜಾತಿಯು ಆಳವಾಗಿ ಪ್ರಭಾವ ಉಂಟುಮಾಡುವುದರಿಂದಾಗಿ ಭಾರತೀಯ ಗ್ರಾಮ ಸ್ತರವಿನ್ಯಾಸವು ತನ್ನದೆ ಆದ ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ. ವಿಶಿಷ್ಟ ಲಕ್ಷಣಗಳನ್ನೊಳಗೊಂಡ ಜಾತಿಯು ಶಿಲಾ ವ್ಯವಸ್ಥೆಗೆ ದಾರಿ ಮಾಡಿಕೊಡುತ್ತದೆ ಎನ್ನುವ ನಂಬಿಕೆಗೆ ವಿರುದ್ಧವಾಗಿ ಭಾರತದಲ್ಲಿ ಜಾತಿ, ವರ್ಗವನ್ನು ಒಳಗೊಂಡ ಸ್ತರೀಕೃತ ಸಮಾಜವು ಚಲನೆಯಿಂದ ಮುಕ್ತವಾಗಿಲ್ಲ. ಆದುದರಿಂದ ಹೇಗೆ, ಯಾಕೆ ಮತ್ತು ಯಾವಾಗ ಚಲನೆ ಸಂಭವಿಸುತ್ತದೆ ಎನ್ನುವ ಪ್ರಶ್ನೆಗಳು ಮತ್ತು ಹಲವಾರು ಬದಲಾವಣೆಗಳಿಗೆ ಗ್ರಾಮಗಳಲ್ಲಿ ಚಲನೆಯು ಹೇಗೆ ದಾರಿ ಮಾಡಿ ಕೊಡುತ್ತದೆ ಎಂಬುದನ್ನು ಚರ್ಚಿಸಲಾಗಿದೆ.

ನಾಲ್ಕನೇ ಬ್ಲಾಕ್‌ನ ಎಲ್ಲ ಘಟಕಗಳಲ್ಲಿ ಗ್ರಾಮ ಸಮುದಾಯಗಳ ಆರ್ಥಿಕ ಸಂಘಟನೆಗಳನ್ನು ಕುರಿತು ಚರ್ಚೆ ಮಾಡಲಾಗಿದೆ. ಎಲ್ಲ ಆರ್ಥಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿರುವ ಕೃಷಿಗೆ ಒತ್ತು ನೀಡುವುದರೊಂದಿಗೆ ಹಲವಾರು ಗ್ರಾಮೀಣ ವೃತ್ತಿಗಳನ್ನು ಘಟಕ 13ರಲ್ಲಿ ಚರ್ಚಿಸಲಾಗಿದೆ. ಭಾರತೀಯ ಕೃಷಿ ಮೇಲೆ ಜಾಗತಿಕೀಕರಣದ ಪ್ರಭಾವವನ್ನು ವಿಶ್ಲೇಷಿಸುವ ಪ್ರಯತ್ನವನ್ನು ಕೂಡ ಮಾಡಲಾಗಿದೆ. ಹಸಿರು ಕ್ರಾಂತಿ, ಶ್ವೇತ ಕ್ರಾಂತಿ ಮತ್ತು ಮತ್ಸ್ಯ ಕ್ರಾಂತಿಗಳಂತಹ ಮೂರು ಪ್ರಮುಖ ಕ್ರಾಂತಿಗಳನ್ನು ಘಟಕ 14ರಲ್ಲಿ ಚರ್ಚಿಸಲಾಗಿದೆ. ಈ ಕ್ರಾಂತಿಗಳಿಂದ ಕೃಷಿ, ಪಶು ಸಂಗೋಪನೆ ಮತ್ತು ಮೀನು ಸಾಕಾಣಿಕೆಗಳ ಮೇಲೆ ಉಂಟಾದ ಪ್ರಭಾವಗಳನ್ನು ಚರ್ಚಿಸಲಾಗಿದೆ. ಘಟಕ 15 ಮತ್ತು 16ರಲ್ಲಿ ಗ್ರಾಮೀಣ ಸಾಲ ಮತ್ತು ಗ್ರಾಮ ಸಹಕಾರ ಸಂಘಗಳನ್ನು ಕುರಿತು ಚರ್ಚೆ ಮಾಡಲಾಗಿದೆ. ಗ್ರಾಮ ಸಹಕಾರ ಸಂಘಗಳ ಉಗಮ ಮತ್ತು ಬೆಳವಣಿಗೆಯನ್ನು ಗುರುತಿಸುವ ಹಾಗು ವ್ಯವಸ್ಥೆಯಲ್ಲಿನ ದೋಷಗಳನ್ನು ಮತ್ತು ದೋಷಗಳ ನಿವಾರಣ ಕ್ರಮಗಳನ್ನು ಕುರಿತು ಪರಿಶೀಲನೆಯ ಪ್ರಯತ್ನವನ್ನು ಮಾಡಲಾಗಿದೆ.

ಐದನೇ ಬ್ಲಾಕ್‌ನಲ್ಲಿ ಭಾರತೀಯ ಗ್ರಾಮ ಸಮುದಾಯಗಳನ್ನು ಆವರಿಸಿಕೊಂಡಿರುವ ಮುಖ್ಯ ಸಮಸ್ಯೆಗಳನ್ನು ಕುರಿತು ಚರ್ಚಿಸಲಾಗಿದೆ. ಗ್ರಾಮೀಣ ಸಾಲಋಣ ಮತ್ತು ಜೀತ ಪದ್ಧತಿ, ಜಾತಿ ಘರ್ಷಣೆಗಳು, ಅನಕ್ಷರತೆ ಮತ್ತು ಪರಿಸರ ಹಾನಿ ಇವುಗಳೆ ಮುಖ್ಯವಾದ ಗ್ರಾಮಿಣ ಸಮಸ್ಯೆಗಳಾಗಿವೆ. ಪಿತ್ರಾರ್ಜಿತ ಸಾಲ, ಅನಕ್ಷರತೆ ಹವಾಗುಣ ವೈಪರೀತ್ಯ, ಲೇವಾದೇವಿಗಾರನ ಕುತಂತ್ರ ಮತ್ತು ಅನುತ್ಪಾದಕ ವೆಚ್ಚಗಳು ಗ್ರಾಮೀಣ ಸಾಲಋಣಕ್ಕೆ ದಾರಿ ಮಾಡಿಕೊಟ್ಟಿವೆ. ಗ್ರಾಮೀಣ ಸಾಲಋಣ ಮತ್ತು ಸಾಂಪ್ರದಾಯಿಕ ಜಾತಿ ಆಚರಣೆಗಳು ಜೀತ ಪದ್ಧತಿಗೆ ಕಾರಣಗಳಾದರೆ, ಆಳವಾಗಿ ಬೇರು ಬಿಟ್ಟಿರುವ ಜಾತಿ ಪೂರ್ವಗ್ರಹಗಳು ಜಾತಿ ಘರ್ಷಣೆಗಳನ್ನು ತರುತ್ತವೆ. ಸಾವಿರಾರು ವರ್ಷಗಳವರೆಗೆ ಶಿಕ್ಷಣವು ಧರ್ಮದಿಂದ ಬಂದುದ್ದಾಗಿದೆ ಎಂಬುದನ್ನು ಕಾಣಬಹುದಾಗಿತ್ತು.

ಶಿಕ್ಷಣ ಸಾರ್ವತ್ರೀಕರಣಗೊಂಡಾಗ ಅದು ಭಾರತದ ಕೆಳ ಜಾತಿಯವರಿಗೂ ಮತ್ತು ಮಧ್ಯಮ ವರ್ಗದವರಿಗೂ ಹರಡಿತು. ಅಕ್ಷರತೆ ಪ್ರಸಾರದಲ್ಲಿ ಪ್ರಶಂಸನೀಯ ಪ್ರಗತಿಯನ್ನು ಸಾಧಿಸಿದ್ದಾಗ್ಯೂ ಅನಕ್ಷರತೆಯನ್ನು ಪೂರ್ಣ ಪ್ರಮಾಣದಲ್ಲಿ ಹೋಗಲಾಡಿಸಲು ಮಾಡಬೇಕಾದುದು ಬಹಳಷ್ಟಿದೆ. ಸಾಮ್ರಾಜ್ಯಶಾಹಿ ಆಡಳಿತ ಮತ್ತು ಕೈಗಾರಿಕೆಗಳ ಮಿತಿಮೀರಿದ ಬೆಳವಣಿಗೆ ಭಾರತದಲ್ಲಿ ಪರಿಸರಾತ್ಮಕ ಹಾನಿಗೆ ಮುಖ್ಯ ಕಾರಣಗಳಾಗಿವೆ. ಈ ಸಮಸ್ಯೆಗೆ ಕಡಿವಾಣ ಹಾಕಲು ಕ್ರಮಗಳನ್ನು ಇಂದು ಕೈಗೊಳ್ಳಲಾಗುತ್ತಿದೆ. ಇಲ್ಲದೆ ಹೋದಲ್ಲಿ ರಾಷ್ಟ್ರೀಯ ವಿಪತ್ತಿಗೆ ದಾರಿ ಮಾಡಿಕೊಡುತ್ತಿತ್ತು.

ಆರನೇ ಬ್ಲಾಕ್‌ನಲ್ಲಿ ಭೂದಾನ, ಗ್ರಾಮದಾನ, ಸರ್ವೋದಯ ಮತ್ತು ಪಂಚಾಯಿತಿ ರಾಜ್‌ಗಳಂತಹ ಗ್ರಾಮ ಪುನರ್‌ನಿರ್ಮಾಣ ಚಟುವಟಿಕೆಗಳನ್ನು ಕುರಿತು ಚರ್ಚಿಸಲಾಗಿದೆ. ಈ ಗ್ರಾಮ ಪುನರ್‌ನಿರ್ಮಾಣ ಕಾರ್ಯಕ್ರಮಗಳು ಪ್ರಶಂಸನೀಯವಾದುದ್ದಾದರೂ ಸಾಧಿಸಬೇಕಾದುದು ಇನ್ನೂ ಉಳಿದಿದೆ. ಗ್ರಾಮೀಣ ಭಾರತದಲ್ಲಿನ ನಾಯಕತ್ವ ಕುರಿತಂತೆ

ಬೆಳಕನ್ನು ಚೆಲ್ಲುವ ಪ್ರಯತ್ನಗಳನ್ನು ಕೂಡ ಈ ಬ್ಲಾಕ್‌ನಲ್ಲಿ ಮಾಡಲಾಗಿದೆ. ಗ್ರಾಮೀಣ ನಾಯಕತ್ವದಲ್ಲಿ ಮತ್ತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳಿಗೆ ಕಾರಣವಾಗಿರುವ ಹಲವಾರು ಬದಲಾವಣಾ ಅಂಶಗಳನ್ನು ಕೂಡ ಚರ್ಚಿಸಲಾಗಿದೆ.

ಏಳನೇ ಬ್ಲಾಕ್‌ನಲ್ಲಿ ಗ್ರಾಮೀಣ ಪುನರ್‌ನಿರ್ಮಾಣ ಯೋಜನೆಗಳ ಬಗೆಗೆ ಚರ್ಚೆಯನ್ನು ಮಾಡಲಾಗಿದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಾರಂಭಿಸಲ್ಪಟ್ಟಿರುವ ಹಲವಾರು ಯೋಜನೆಗಳಾದ ಸಿ.ಡಿ.ಪಿ, ಎಸ್.ಎಫ್.ಡಿ.ಎ, ಎಂ.ಎಫ್.ಎ.ಎಲ್, ಡಿ.ಪಿ.ಎ.ಪಿ., ಟ್ರೈಸಂ, ಐ.ಆರ್.ಡಿ.ಪಿ ಮತ್ತು ಜೆ.ಆರ್.ವೈಗಳನ್ನು ಚರ್ಚಿಸಲಾಗಿದೆ. ಮಹತ್ವಾಕಾಂಕ್ಷೆಯ ಯೋಜನೆಗಳ ಪರಿಶೀಲನೆಯ ಪ್ರಯತ್ನವನ್ನು ಕೂಡ ಮಾಡಲಾಗಿದೆ. ಘಟಕ 27ರಲ್ಲಿ ಸರ್ಕಾರೇತರ ಸಂಘಟನೆಗಳ ಬಗೆಗೆ ಚರ್ಚಿಸಲಾಗಿದೆ. ದುರ್ಬಲ ವರ್ಗಗಳ ಕ್ಷೇಮಾಭಿವೃದ್ಧಿ ಮತ್ತು ಅಭಿವೃದ್ಧಿಕಾರಕ ಯೋಜನೆಗಳ ಜಾರಿಗೊಳಿಸುವಿಕೆಯು ಹೆಚ್ಚಿನ ಮಟ್ಟದಲ್ಲಿ ಉಂಟಾಗದಿದ್ದರೆ ಸರ್ಕಾರಗಳು ಮತ್ತು ಸರ್ಕಾರೇತರ ಸಂಘಟನೆಗಳು ಜೊತೆಗೂಡಿ ಕಾರ್ಯ ನಿರ್ವಹಿಸಿದಾಗ ಸಾಧ್ಯವಾಗುತ್ತದೆ ಎಂಬುದನ್ನು ಕಾಣಲಾಯಿತು. ಕಾಲಾನುಗತಿಯಲ್ಲಿ ಗ್ರಾಮ ಸಮುದಾಯಗಳಲ್ಲಿ ಉಂಟಾಗಿರುವ ಬದಲಾವಣೆಯ ವಿಹಂಗಮವನ್ನು ಘಟಕ 28ರಲ್ಲಿ ಕಾಣಬಹುದಾಗಿದೆ. ಈಗ ಭಾರತದ ಗ್ರಾಮಗಳು ಕವಲುದಾರಿಯಲ್ಲಿ ಇವೆ. ಜಾಗತಿಕೀಕರಣದ ಪ್ರಭಾವ ಇರುವ ಕಾಲದಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಮುನ್ನುಗ್ಗಿ ಹೊಂದಿಕೊಂಡು ಹೋಗಬೇಕೆ ಇಲ್ಲವೆ ಹಳೆಯದನ್ನು ಪುನರುಜ್ಜೀವನಗೊಳಿಸಬೇಕೆ ಎಂಬುದರ ಬಗೆಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಿದೆ. ಹೀಗಾಗಿ ರಾಷ್ಟ್ರಗಳ ಜೊತೆ ಸೇರಿಕೊಂಡು ಬದಲಾಗುತ್ತಿರುವ ಕಾಲಕ್ಕನುಗುಣವಾಗಿ ಬದಲಾವಣೆ ಹೊಂದುವ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ.

ಶುಭ ಹಾರೈಕೆಗಳೊಂದಿಗೆ,

**ಪ್ರೊ. ಎಮ್ ಏಚ್ ಕೃಷ್ಣಪ್ಪ**
ಮುಖ್ಯಸ್ಥರು
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು

# ಗ್ರಾಮೀಣ ಸಮಾಜದ ಅಧ್ಯಯನ

## ಬ್ಲಾಕ್ ಪರಿಚಯ

### ಬ್ಲಾಕ್ – 1 ರ ಪರಿಚಯ

ಸಮಾಜಶಾಸ್ತ್ರದ ಆಸಕ್ತಿಯುತ ಶಾಖೆಯಾದ ಗ್ರಾಮೀಣ ಸಮಾಜಶಾಸ್ತ್ರವನ್ನು ಓದುಗರಿಗೆ ಪರಿಚಯಿಸುವ ಪ್ರಯತ್ನವನ್ನು ನಾಲ್ಕು ಘಟಕಗಳನ್ನೊಳಗೊಂಡ ಈ ಬ್ಲಾಕ್‌ನಲ್ಲಿ ಮಾಡಲಾಗಿದೆ.

ಗ್ರಾಮೀಣ ಸಮಾಜಶಾಸ್ತ್ರದ ವ್ಯಾಖ್ಯೆ ಸ್ವರೂಪ, ವಸ್ತು ವಿಷಯ ಮತ್ತು ಅದರ ಅಧ್ಯಯನದ ಸಮಂಜಸತೆಯನ್ನು ಮೊದಲನೆ ಘಟಕ ಒಳಗೊಂಡಿದೆ. ಅಂತಿಮವಾಗಿ ಪರಿಸರದಲ್ಲಿನ ಸಾಮಾಜಿಕ ಸಂಬಂಧಗಳು ಮತ್ತು ಅವುಗಳ ಆಯಾಮಗಳು ಹಾಗು ಪರಿವರ್ತ್ಯತೆಗಳು ಗ್ರಾಮೀಣ ಸಮಾಜಶಾಸ್ತ್ರದ ಗಮನವನ್ನು ಕೇಂದ್ರೀಕರಿಸುವ ಮುಖ್ಯಾಂಶಗಳಾಗಿವೆ. ಇಂದಿಗೂ ಕೂಡ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಕೂಡ ಗ್ರಾಮ ಪ್ರಧಾನ ರಾಷ್ಟ್ರಗಳಾಗಿವೆ. ವಿದ್ವಾಂಸರ ಅಭಿಪ್ರಾಯದ ಪ್ರಕಾರ ಈ ಪರಿಸ್ಥಿತಿ ಮುಂದಿನ ಹಲವಾರು ದಶಕಗಳಲ್ಲೂ ಮುಂದುವರಿಯುತ್ತದೆ. ಈ ಅಂಶದ ಆಧಾರದ ಮೇಲೆ ಗ್ರಾಮೀಣ ಸಮಾಜಶಾಸ್ತ್ರದ ಸಮಂಜಸತೆಗೆ ಒತ್ತು ನೀಡುವ ಅಗತ್ಯವನ್ನು ಹೇಳಬೇಕಾಗಿಲ್ಲ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮತ್ತು ಭಾರತದಲ್ಲಿ ಸಮಾಜಶಾಸ್ತ್ರದ ವಿಶೇಷ ಶಾಖೆಯಾಗಿ ಗ್ರಾಮೀಣ ಸಮಾಜಶಾಸ್ತ್ರದ ಐತಿಹಾಸಿಕ ಬೆಳವಣಿಗೆಯ ಪರಿವರ್ತನೆಯನ್ನು ಕುರಿತು ಎರಡನೆಯ ಘಟಕ ಚರ್ಚಿಸುತ್ತದೆ. ವಾಸ್ತವತಾವಾದದ ಶಿಶು ಎಂದು ಸಮಾಜಶಾಸ್ತ್ರವನ್ನು ಕರೆಯಲಾಗುತ್ತಿದ್ದರೆ, ಗ್ರಾಮೀಣ ಸಮಾಜಶಾಸ್ತ್ರವನ್ನು ಮಾನವತಾವಾದದ ಶಿಶು ಎಂದು ಕರೆಯಲಾಗುತ್ತಿರುವುದು ಗಮನಿಸಬೇಕಾದ ಮಹತ್ತ್ವದ ಅಂಶವಾಗಿದೆ. ಧರ್ಮವನ್ನು ವಿರೋಧಿಸಿದ ಮತ್ತು ಅದರ ಅಂಧ ನಂಬಿಕೆಯನ್ನು ಆಕ್ಷೇಪಿಸಿದ ವಾಸ್ತವತಾವಾದಿಗಳಾದ ಸೈಂಟ್ ಸೈಮನ್ ಮತ್ತು ಆಗಸ್ಟ್‌ಕಾಮ್ಟ್ ಅವರುಗಳು ಸಮಾಜಶಾಸ್ತ್ರದ ಆಧಾರ ಸ್ತಂಭಗಳಾಗಿದ್ದರೆ ದೇವರಲ್ಲಿ ಅಗಾಧವಾದ ನಂಬಿಕೆ ಹೊಂದಿದ್ದ ಧರ್ಮಾನುಯಾಯಿಗಳು ಗ್ರಾಮೀಣ ಸಮಾಜಶಾಸ್ತ್ರದ ಆಧಾರ ಸ್ತಂಭಗಳಾಗಿದ್ದರು. ಆದುದರಿಂದ ಮಾನವ ಕಲ್ಯಾಣ ಮತ್ತು ಮಾನವ ಏಳಿಗೆಗಳ ಬಗೆಗೆ ಆಳವಾದ ಕಳಕಳಿ ಹೊಂದಿದ್ದ ಪಾಶ್ಚಾತ್ಯ ಮತ್ತು ಭಾರತದಲ್ಲಿನ ಧರ್ಮಾನುಯಾಯಿಗಳು ಗ್ರಾಮೀಣ ಸಮಾಜಶಾಸ್ತ್ರದ ಮೂಲ ಪರುಷರಾಗಿದ್ದುದು ಕೇವಲ ಕಾಕತಾಳಿಯವಲ್ಲ.

ಗ್ರಾಮ ಸಮುದಾಯಗಳ ಉಗಮ ಮತ್ತು ಬೆಳವಣಿಗೆಯನ್ನು ಗುರುತಿಸುವ ಹಾಗು ಗ್ರಾಮೀಣ ಮಾದರಿಗಳ ಹಲವಾರು ಬಗೆಗಳ ಪರಿಶೀಲನೆಯ ಪ್ರಯತ್ನಗಳನ್ನು ಮೂರನೆಯ ಘಟಕದಲ್ಲಿ ಮಾಡಲಾಗಿದೆ. ಆದಿವಾಸಿ ಅಲೆಮಾರಿಗಳು ತಮ್ಮ ಅಲೆದಾಟದ ಜೀವನವನ್ನು ಕೊನೆಗಾಣಿಸಿ ಒಂದು ಸ್ಥಳದಲ್ಲಿ ಶಾಶ್ವತವಾಗಿ ನೆಲೆಯೂರಿ ನಿಂತಾಗ ಗ್ರಾಮ ಸಮುದಾಯಗಳು ಅಸ್ತಿತ್ವವನ್ನು ಕಂಡುಕೊಂಡವು ಎಂಬುವ ಅಂಶವನ್ನು ಗ್ರಾಮ ಸಮುದಾಯಗಳ ಸಾಮಾಜಿಕ ವಿಕಾಸದ ಸೂಕ್ಷ್ಮ ಅಧ್ಯಯನ ಮಾಡಿದಾಗ ಗೊತ್ತಾಗಿದೆ. ಭೂ ಸಾಗುವಳಿ ಹಂತವೆಂದು ಕರೆಯಲ್ಪಡುವ ಸಾಮಾಜಿಕ ವಿಕಾಸದ ನಾಲ್ಕನೇ ಹಂತಕ್ಕೆ ಜನರು ಕಾಲಿಟ್ಟಾಗ ಶಾಶ್ವತ ನೆಲೆಯೂರಿಕೆ ಸಾಧ್ಯವಾಯಿತು. ಗ್ರಾಮಗಳಲ್ಲಿನ ಜನರುಗಳ ನಡುವಣ ಸಂಬಂಧ, ಜನರು ಮತ್ತು ಭೂಮಿಯೊಡಗಿನ ಸಂಬಂಧವಲ್ಲದೆ ಗ್ರಾಮಗಳಲ್ಲಿ ಮನೆಗಳನ್ನು ನಿರ್ಮಿಸಿರುವ ವಿನ್ಯಾಸವು ಗ್ರಾಮ ಮಾದರಿಗೆ ಅನ್ವಯಿಸುತ್ತದೆ. ಈ ಘಟಕದಲ್ಲಿ ಗ್ರಾಮ ಮಾದರಿಗಳ ಭಿನ್ನ ಬಗೆಗಳನ್ನು ಹಾಗು ಅವುಗಳ ಅನುಕೂಲತೆ ಮತ್ತು ಅನಾನುಕೂಲತೆಗಳನ್ನು ಅಧ್ಯಯನ ಮಾಡುವ ಪ್ರಯತ್ನ ಮಾಡಲಾಗಿದೆ.

ಗ್ರಾಮ ಸಮುದಾಯಗಳ ವಿಶಿಷ್ಟ ಗುಣಲಕ್ಷಣಗಳನ್ನು ಪರಿಶೀಲಿಸುವ ಪ್ರಯತ್ನಗಳನ್ನು ನಾಲ್ಕನೆಯ ಘಟಕದಲ್ಲಿ ಮಾಡಲಾಗಿದೆ. ಮಾನವ ವಾಸಸ್ಥಾನದ ಮುಂಚಿನ ಸ್ಥಳಗಳಾಗಿದ್ದ ಮತ್ತು ಇಂದಿಗೂ ಕೂಡ ಪ್ರಪಂಚದ ಹಲವಾರು ರಾಷ್ಟ್ರಗಳಲ್ಲೂ ಮುಂದುವರಿಯುತ್ತಿರುವ ಗ್ರಾಮ ಸಮುದಾಯಗಳು ತಮ್ಮದೆ ಆದ ವಿಶಿಷ್ಟ ಲಕ್ಷಣಗಳನ್ನು ಒಳಗೊಂಡಿದೆ. ಕಳೆದ ಹಲವಾರು ಶತಮಾನಗಳಲ್ಲಿ ಉಂಟಾದ ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಜನಸಾಂಖ್ಯಿಕ ಕಾರಣಗಳಿಂದಾಗಿ ಮಾನವ ವಾಸದ ತಾಣವಾಗಿ ನಗರವು ಉಗಮಗೊಂಡಿತು. ಕೈಗಾರಿಕ ಕ್ರಾಂತಿಯ ನಂತರ ನಗರಗಳು

ತೀವ್ರವಾದ ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಜನಸಾಂಖ್ಯಿಕ ಚಟುವಟಿಕೆಗಳ ಪ್ರಮುಖ ಕೇಂದ್ರಗಳಾದವು. ಇದೇ ರೀತಿಯಲ್ಲಿ ಇವುಗಳು ಎಲ್ಲ ದಿಕ್ಕಿನಿಂದ ಜನರನ್ನು ಆಕರ್ಷಿಸುವ ಕೇಂದ್ರಗಳಾದವು. ಕೈಗಾರಿಕ ರಾಷ್ಟ್ರಗಳಲ್ಲಿ ನಗರಗಳು ಕೆಲವು ಶತಮಾನಗಳಷ್ಟು ಕಡಿಮೆ ಅವಧಿಯಲ್ಲಿ ಗ್ರಾಮಗಳನ್ನು ಹಿಂದಕ್ಕೆ ನೂಕಿ ಮಾನವ ವಾಸಸ್ಥಾನದ ಆಧಾರಗಳಾದವು. ಇದರಿಂದಾಗಿ ನಗರಗಳು ಗ್ರಾಮಗಳಿಗೆ ಭಿನ್ನವಾದ ಲಕ್ಷಣಗಳನ್ನು ಒಳಗೊಂಡಿರುವುದು ವಾಸ್ತವವೆ ಆಗಿದೆ.

ಈ ದೃಷ್ಟಿಯಿಂದ ಗ್ರಾಮೀಣ ಮತ್ತು ನಗರ ಲಕ್ಷಣಗಳ ತೌಲನಿಕ ಚಿತ್ರಣವನ್ನು ನೀಡುವ ಪ್ರಯತ್ನವನ್ನು ಕೂಡ ಈ ಘಟಕದಲ್ಲಿ ಮಾಡಲಾಗಿದೆ. ಈ ತೌಲನಿಕ ಅಧ್ಯಯನವು ಗ್ರಾಮ ಮತ್ತು ನಗರಗಳ ನಡುವಿನ ವ್ಯತ್ಯಾಸಗಳನ್ನು ಗ್ರಹಿಸಲು ಸಹಾಯ ಮಾಡುವುದಲ್ಲದೆ. ಅಂತಿಮವಾಗಿ ಗ್ರಾಮ ಮತ್ತು ನಗರಗಳು ಆದರ್ಶ ಪ್ರರೂಪಗಳು ಎಂಬುವ ವಾಸ್ತವತೆಯನ್ನು ತಿಳಿಸಿಕೊಡುತ್ತದೆ. ವಾಸ್ತವ ಜೀವನ ಸನ್ನಿವೇಶದಲ್ಲಿ ಗ್ರಾಮ ಮತ್ತು ನಗರಗಳನ್ನು ಶುದ್ಧ ಹಾಗು ಅಮಿಶ್ರಿತ ಗ್ರಾಮ ಮತ್ತು ಶುದ್ಧ ಹಾಗು ಅಮಿಶ್ರಿತ ನಗರಗಳೆಂದು ಕಂಡುಕೊಳ್ಳುವುದು ಅಸಾಧ್ಯವಲ್ಲವಾದರು ಅತೀ ಕಷ್ಟ ಎನ್ನುವುದು ವಾಸ್ತವವೇ ಆಗಿದೆ. ಗ್ರಾಮ ಮತ್ತು ನಗರದ ಲಕ್ಷಣಗಳು ಒಂದಕ್ಕೊಂದು ಬೆರತು ಹೋಗಿರುವ ಕಾರಣದಿಂದಾಗಿ "ಇಲ್ಲಿ ಗ್ರಾಮ ಕೊನೆಗೊಂಡಿದೆ : ಇಲ್ಲಿಂದ ನಗರ ಪ್ರಾರಂಭಗೊಳ್ಳುತ್ತದೆ" ಎಂಬ ಗೆರೆಯನ್ನು ಎಳೆಯಲು ಬರುವುದಿಲ್ಲ. ಇದರಿಂದಾಗಿ ಗ್ರಾಮ–ನಗರ ಲಕ್ಷಣಗಳ ಮಗಿಯದ ನಿರಂತರತೆ ಹಾಗು ಗ್ರಾಮ–ನಗರಗಳ ಸಾತತ್ಯತೆಯನ್ನು ಕುರಿತು ಮಾತನಾಡುತ್ತೇವೆ (ಪಾರಸ್ಪರಿಕ ಪರಸ್ಪರಾವಲಂಬನೆಯನ್ನು ಹೊಂದಿರುವ). ಸಾತತ್ಯದಿಂದಾಗಿ ಬಿಡಿಸಲಾಗದ ಬಂಧನವನ್ನು ಹೊಂದಿರುವ ಗ್ರಾಮ ನಗರಗಳು ಸ್ವಲ್ಪ ಮಟ್ಟಿನ ಆಶ್ಚರ್ಯವನ್ನು ಕೂಡ ತಂದಿವೆ. ವರ್ಷಗಳು ಉರುಳಿದಂತೆ ಈ ಪರಸ್ಪರಾವಲಂಬನೆಯ ಬೆಳವಣಿಗೆಗೊಳ್ಳುವುದು ಮಾತ್ರವಲ್ಲದೆ ಬಲಗೊಳ್ಳುವುದರಿಂದಲು ಕೂಡ ಒಂದನ್ನು ಹೊರತುಪಡಿಸಿ ಇನ್ನೊಂದನ್ನು ಯೋಚಿಸುವುದು ಕಷ್ಟವಾಗುತ್ತದೆ.

## ಬ್ಲಾಕ್ – 2 ರ ಪರಿಚಯ

ಸಾಮಾನ್ಯವಾಗಿ ಭಾರತದ ಜನಸಂಖ್ಯೆಯ ಮತ್ತು ವಿಶೇಷವಾಗಿ ಗ್ರಾಮೀಣ ಜನಸಂಖ್ಯೆಯ ಜನಸಾಂಖ್ಯಿಕ ಅಂಶಗಳನ್ನು ಕುರಿತು ಎರಡನೇ ಬ್ಲಾಕ್‌ನ ಘಟಕಗಳಲ್ಲಿ ಚರ್ಚಿಸಲಾಗಿದೆ. ಫಲಿತತೆ, ಮರ್ತ್ಯತೆ ಮತ್ತು ವಲಸೆಯಂತಹ ಮೂರು ನಿರ್ಧಾರಕ ಅಂಶಗಳು ಜನಸಂಖ್ಯೆಯ ಪರಿವರ್ತ್ಯತೆಗಳನ್ನು ನಿರ್ಧರಿಸುತ್ತವೆ. ಜನಸಂಖ್ಯಾ ಸ್ಥಿತ್ಯಂತರದ ಪ್ರಾರಂಭಿಕ ಹಂತದಲ್ಲಿ ಹೆಚ್ಚಿನ ಫಲಿತತೆ ಮತ್ತು ಮರ್ತ್ಯತೆ ಇದ್ದಿತು ಎಂಬುದು ಗೊತ್ತಾಗಿದೆ. ಈ ಹಂತದ ಅವಧಿಯಲ್ಲಿ ಜನಸಂಖ್ಯೆಯು ಮಹತ್ತ್ವದ ಬೆಳವಣಿಗೆಯನ್ನಾಗಲಿ ಅಥವಾ ಇಳಿಕೆಯನ್ನಾಗಲಿ ಕಾಣದೆ ಸ್ಥಿರವಾಗಿದ್ದಿತು. ವಿಜ್ಞಾನದಲ್ಲಿನ ಗಮನಾರ್ಹ ಘಟನೆಗಳ ಆವಿಷ್ಕಾರದೊಂದಿಗೆ ಪ್ರಾರಂಭಗೊಂಡಿದೆ ಎಂದು ಹೇಳಲಾಗುವ ಎರಡನೇ ಹಂತದಲ್ಲಿ ಆಶ್ಚರ್ಯಕರ ರೀತಿಯಲ್ಲಿ ಮರ್ತ್ಯತೆ ದರ ಇಳಿಮುಖಗೊಂಡಿದೆ. ಈ ಹಂತದಲ್ಲಿ ಮರ್ತ್ಯತೆ ದರದಲ್ಲಿನ ಇಳಿಕೆ ಮತ್ತು ಫಲಿತತೆ ದರವು ತನ್ನ ಸಾಂಪ್ರದಾಯಿಕ ಹೆಚ್ಚಿನ ಮಟ್ಟವನ್ನು ಕಾಯ್ದುಕೊಂಡಿರುವುದರಿಂದ ಜನಸಂಖ್ಯೆಯು ಹೆಚ್ಚಳಗೊಂಡಿದೆ.

ಮೂರನೇ ಹಂತದಲ್ಲಿ ಗರ್ಭ ನಿರೋಧಕ ಸಾಧನಗಳ ಆವಿಷ್ಕಾರವು ಬೆಳಕಿಗೆ ಬಂದಿತು ಎಂದು ಹೇಳಲಾಗುತ್ತದೆ. ಮೊದಲ ಬಾರಿಗೆ ಮನುಷ್ಯರು ಮಕ್ಕಳನ್ನು ಪಡೆಯದೇ ಲೈಂಗಿಕ ಜೀವನವನ್ನು ನಡೆಸುವ ಅವಕಾಶ ಗರ್ಭ ನಿರೋಧಕ ಸಾಧನಗಳ ಸಹಾಯದಿಂದ ಒದಗಿ ಬಂದಿತು. ಇದರಿಂದಾಗಿ ಸಣ್ಣ ಕುಟುಂಬದ ನಿಯಮಗಳು ಆಚರಣೆಗೆ ಬಂದಿರುವುದರಿಂದಾಗಿ ಫಲಿತತೆ ದರವು ಕಡಿಮೆಯಾಯಿತು. ಹೀಗಾಗಿ, ಜನಸಂಖ್ಯಾ ಬೆಳವಣಿಗೆಯು ಪುನಃ ಗಣನೀಯವಾಗಿ ಹೆಚ್ಚಳವು ಆಗದೇ ಅಥವಾ ಕಡಿಮೆಯೂ ಆಗದೇ ಸ್ಥಿರತೆಯನ್ನು ಹೊಂದಿತ್ತು. ಮೊದಲ ಹಂತದಲ್ಲಿನ ಸ್ಥಿರತೆಗೆ ಹೆಚ್ಚಿನ ಫಲಿತತೆ ದರ ಮತ್ತು ಹೆಚ್ಚಿನ ಮರ್ತ್ಯತೆ ದರ ಕಾರಣವಾದರೆ ಮೂರನೇ ಹಂತದಲ್ಲಿ ಕಡಿಮೆ ಫಲಿತತೆ ದರ ಮತ್ತು ಕಡಿಮೆ ಮರ್ತ್ಯತೆ ದರ ಸ್ಥಿರತೆ ಹೊಂದಲು ಕಾರಣವಾಯಿತು.

ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಉಂಟಾಗುವ ಜನರ ಚಲನೆಯು ವಲಸೆಯಾಗಿದೆ. ಪ್ರಮುಖವಾದ ಜನಸಾಂಖ್ಯಿಕ ಘಟನಾವಳಿ (ವಿದ್ಯಮಾನ) ಯಾಗಿರುವ ವಲಸೆಯನ್ನು ಕೂಡ ಚರ್ಚಿಸಲಾಗಿದೆ. ಎರಡು ಕಡೆ ಕತ್ತರಿಸಬಹುದಾದ

ಎರಡು ಏಣುವಿನ ಕತ್ತಿಯ ರೀತಿಯಲ್ಲಿ ವಲಸೆ ಇರುತ್ತದೆ. ಇದು ಕಳುಹಿಸುವ ಸಮಾಜ ಮತ್ತು ಸ್ವೀಕರಿಸುವ ಸಮಾಜ ಇವೆರಡರ ಮೇಲೆಯೂ ಪ್ರಭಾವವನ್ನು ಉಂಟು ಮಾಡುತ್ತದೆ. ವಲಸೆಯ ಸಿದ್ಧಾಂತಗಳನ್ನು ಚರ್ಚಿಸುವ ಪ್ರಯತ್ನವನ್ನು ಕೂಡ ಮಾಡಲಾಗಿದೆ.

## ಬ್ಲಾಕ್ – 3 ರ ಪರಿಚಯ

ಭಾರತದಲ್ಲಿನ ಗ್ರಾಮ ಸಮುದಾಯಗಳ ಮುಖ್ಯ ಸಂಸ್ಥೆಗಳಲ್ಲಿನ ಹಲವಾರು ಅಂಶಗಳ ಬಗೆಗಿನ ಕೆಲವು ವಿವರಣೆಗಳನ್ನು ಚರ್ಚಿಸುವ ಪ್ರಯತ್ನವನ್ನು ಈ ಬ್ಲಾಕ್‌ನಲ್ಲಿ ಮಾಡಲಾಗಿದೆ. ಸಂಪ್ರದಾಯಬದ್ಧ ಸಮುದಾಯಗಳಂತಹ ಭಾರತೀಯ ಗ್ರಾಮಗಳಲ್ಲಿ ಕುಟುಂಬ ಮತ್ತು ಕಳ್ಳುಬಳ್ಳಿ (ಬಂಧುತ್ವ) ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಭಾರತೀಯ ಗ್ರಾಮಗಳಲ್ಲಿನ ಹಿಂದೂ ಅವಿಭಕ್ತ ಕುಟುಂಬದ ಶಿಥಿಲತೆಗೆ ಬದಲಾವಣೆಯ ಹಲವಾರು ಅಂಶಗಳು ಕಾರಣಗಳಾಗಿದ್ದರು ಕೂಡ ಅವಿಭಕ್ತ ಕುಟುಂಬದ ಮೌಲ್ಯಗಳು, ನಿಯಮಗಳು ಮತ್ತು ಭಾವನೆಗಳು ಇಂದಿಗೂ ಕೂಡ ಆಚರಣೆಯಲ್ಲಿರುವುದನ್ನು ಕಾಣಬಹುದು. ಇದು ಕಳ್ಳುಬಳ್ಳಿ (ಬಂಧುತ್ವ) ವಿಷಯದಲ್ಲಂತು ವಾಸ್ತವವೆ ಆಗಿದೆ. ಬಂಧುತ್ವ ಸಂಘಟನೆಯು ದುರ್ಬಲಗೊಳ್ಳುವುದಕ್ಕೆ ಅವಿಭಕ್ತ ಕುಟುಂಬದ ಶಿಥಿಲತೆಯು ಕಾರಣವಾಗುತ್ತದೆ. ಬಿಕ್ಕಟ್ಟುಗಳ ನಿರ್ದಿಷ್ಟ ಕಾಲಗಳಲ್ಲಿನ ಅವಧಿಯನ್ನು ಹೊರತುಪಡಿಸಿದರೆ ಬಂಧುತ್ವಕ್ಕೆ ಸಂಬಂಧಿಸಿದ ವ್ಯಕ್ತಿಯು ಗ್ರಾಮದಲ್ಲಿನ ಯಾವುದೇ ವ್ಯಕ್ತಿಗಿಂತ ಭಿನ್ನವಾಗಿರದೆ ಇತರರಂತೆ ಸಮಾನವಾಗಿ ನೋಡಿಕೊಳ್ಳಲಾಗುವುದು. ಅವಿಭಕ್ತ ಕುಟುಂಬ ಪದ್ಧತಿಯ ಶಿಥಿಲತೆಯಾಗಲಿ ಇಲ್ಲವೆ ಕಳ್ಳುಬಳ್ಳಿಯ (ಬಂಧುತ್ವ) ಸಂಘಟನೆಯ ಸಡಿಲತೆಯಾಗಲಿ ಜಾತಿ ಪದ್ಧತಿಯ ಶಿಥಿಲತೆಗೆ ಕಾರಣವಾಗದಿರುವುದು ಅತ್ಯಂತ ಆಶ್ಚರ್ಯಕರ ಸಂಗತಿಯಾಗಿದೆ. ಚೇತರಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವ ಜಾತಿ ಪದ್ಧತಿಯು ಬದಲಾವಣೆಯ ಅಂಶಗಳನ್ನು ವಿರೋಧಿಸುತ್ತದೆ. ಜಾತಿಗೆ ಸಂಬಂಧಿಸಿದ ಅಂಶಗಳು ಬದಲಾವಣೆ ಹೊಂದಿದ್ದಾಗಿಯು ಅದರ ಸಾರ ಹಾಗೆಯೇ ಇದೆ. ಎಂದರೆ ಜಾತಿಯು ತನ್ನ ಸದಸ್ಯರ ಮೇಲೆ ಹಿಂದೆ ಇದ್ದಂತೆ ಇಂದಿಗೂ ಕೂಡ ನಿಯಂತ್ರಣ ಹಾಕುವ ಮೂಲಕ ಬಿಗಿಯಾದ ಪ್ರಭುತ್ವವನ್ನು ಹೊಂದಿದೆ. ಗ್ರಾಮಗಳಲ್ಲಿನ ಗುಂಪು ಪರಿವರ್ತ್ಯತೆಗಳ ಧ್ರುವೀಕರಣದ ಕೇಂದ್ರ ಬಿಂದು ಜಾತಿಯೇ ಇಂದಿಗೂ ಕೂಡ ಆಗಿದೆ. ಪವಿತ್ರ ಗ್ರಂಥಗಳಲ್ಲಿ ನಾವು ಕಾಣಲಾಗುವ ಸಾಂಪ್ರದಾಯಿಕವಾದ ಪಾರಮಾರ್ಥಿಕ ಧರ್ಮಕ್ಕೂ ಮತ್ತು ಗ್ರಾಮಸ್ಥರು ವಾಸ್ತವಿಕವಾಗಿ ಆಚರಿಸುತ್ತಿರುವ ಗ್ರಾಮೀಣ ಧರ್ಮಕ್ಕೂ ಇರುವ ವ್ಯತ್ಯಾಸಗಳನ್ನು ಓದುಗರ ಗಮನಕ್ಕೆ ತರುವ ಪ್ರಯತ್ನವನ್ನು ಗ್ರಾಮೀಣ ಧರ್ಮವನ್ನು ಚರ್ಚಿಸುವಾಗ ಮಾಡಲಾಗಿದೆ.

ಹಿಂದಿನ ದಿನಗಳಲ್ಲಿ ವ್ಯವಸ್ಥಿತ ಮನರಂಜನೆಯನ್ನು ಕಾಣಲಾಗುತ್ತಿರಲಿಲ್ಲ. ಆದರೆ ಇಂದಿನ ದಿನಗಳಲ್ಲಿ ವ್ಯವಸ್ಥಿತ ಮನರಂಜನೆಯನ್ನು ಕಾಣಲಾಗುತ್ತಿದ್ದು ಇದು ಗ್ರಾಮೀಣ ಮನರಂಜನೆಯಲ್ಲಿನ ಅಧ್ಯಯನದಲ್ಲಿ ಆಸಕ್ತಿಯುತ ಅಂಶವಾಗಿದೆ. ಭಾರತದಲ್ಲಿನ ಗ್ರಾಮೀಣ ಸ್ತರವಿನ್ಯಾಸವನ್ನು ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಕೋನಗಳಿಂದ ನೋಡಬಹುದಾಗಿದೆ. ಸ್ತರವಿನ್ಯಾಸಕ್ಕೆ ವ್ಯಾವಸಾಯಿಕ ಶ್ರೇಣಿ ಎಂದು ಜನಪ್ರಿಯವಾಗಿರುವ ಭೂಮಿಯಂತಹ ಆರ್ಥಿಕ ಅಂಶವು ಆಧಾರವಾಗಿದೆ. ಜಾತಿ ಆಧಾರಿತ ಸ್ತರವಿನ್ಯಾಸವನ್ನು ಜಾತಿ ಗೋಪುರವೆಂದು ಕರೆಯಲಾಗುತ್ತದೆ. ಈ ಸನ್ನಿವೇಶದಲ್ಲಿ ಎಮ್.ಎನ್. ಶ್ರೀನಿವಾಸ್ ಅವರ ಜಾತಿ ಪದ್ಧತಿಯ ಚಲನೆಯ ಸಿದ್ಧಾಂತವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವ ಪ್ರಯತ್ನವನ್ನು ಮಾಡಲಾಗಿದೆ. ಅದೇ ರೀತಿ ಚಲನೆಯ ಸಾಧನವಾದ ಸಂಸ್ಕೃತೀಕರಣ ಮತ್ತು ಪಾಶ್ಚಾತ್ಯೀಕರಣ ಪ್ರಕ್ರಿಯೆಗಳನ್ನು ಕೂಡ ಚರ್ಚಿಸಲಾಗಿದೆ.

## ಬ್ಲಾಕ್ – 4 ರ ಪರಿಚಯ

ಭಾರತದಲ್ಲಿನ ಗ್ರಾಮ ಸಮುದಾಯಗಳ ಆರ್ಥಿಕತೆಯ ಹಲವಾರು ಅಂಶಗಳನ್ನು ಕುರಿತಂತೆ ಅಧ್ಯಯನ ಮಾಡುವ ಪ್ರಯತ್ನವನ್ನು ನಾಲ್ಕು ಘಟಕಗಳನ್ನು ಹೊಂದಿರುವ ಈ ಬ್ಲಾಕ್‌ನಲ್ಲಿ ಮಾಡಲಾಗಿದೆ.

ಕೃಷಿಯನ್ನೇ ಪ್ರಮುಖ ವೃತ್ತಿಯನ್ನಾಗಿರಿಸಿಕೊಂಡಿರುವ ಭಾರತವು ಹೇಗೆ ಗ್ರಾಮಗಳ ನಾಡಾಗಿ ಮುಂದುವರಿದಿದೆ ಎಂಬುದನ್ನು ಘಟಕ 13 ವಿವರಿಸುತ್ತದೆ. ಭಾರತದ ಕೃಷಿ ಕ್ಷೇತ್ರವು ಲಾಭದಾಯಕವಾಗಿಲ್ಲ. ಶೇಕಡ 60ರಷ್ಟು ಜನರು

ಕೃಷಿಯಲ್ಲಿ ನಿರತರಾಗಿದ್ದರೂ ಕೂಡ ಒಟ್ಟು ದೇಶೀಯ ಉತ್ಪನ್ನಕ್ಕೆ ಕೃಷಿಯು ನೀಡಿರುವ ಕಾಣಿಕೆ ಶೇಕಡ 25ರಷ್ಟು ಮಾತ್ರ. ಆದರೆ ಕೃಷಿಯೇತರ ಕ್ಷೇತ್ರಗಳಲ್ಲಿ ತೊಡಗಿರುವ ಶೇಕಡ 40ರಷ್ಟು ಜನರು ಒಟ್ಟು ದೇಶೀಯ ಉತ್ಪನ್ನಕ್ಕೆ ನೀಡಿರುವ ಕಾಣಿಕೆ ಶೇಕಡ 75. ಅನಪೇಕ್ಷಣೀಯ ಸನ್ನಿವೇಶದಂತಹ ಸ್ಥಿತಿಯಲ್ಲಿ ಜಾಗತಿಕೀಕರಣದ ಸವಾಲುಗಳನ್ನು ಎದುರಿಸುವಂತಹ ಪರಿಸ್ಥಿತಿ ಭಾರತಕ್ಕೆ ಬಂದಿದೆ. ಜಾಗತಿಕ ಶಕ್ತಿಗಳು ಆಧುನಿಕೀಕರಣದ ಪ್ರಕ್ರಿಯೆಯನ್ನು ವ್ಯವಸಾಯದಲ್ಲಿ ತ್ವರಿತಗೊಳಿಸುವುದರ ಮೂಲಕ ಕೃಷಿ ಕ್ಷೇತ್ರವನ್ನು ಪರಿಣಾಮಕಾರಿಯಾಗಿಸುತ್ತವೆ ಎಂದು ಭಾವಿಸಲಾಗಿದೆ. ಈ ಘಟಕದಲ್ಲಿ ಸಾಂಪ್ರದಾಯಿಕ ಜಾಜ್‌ಮನಿ ಪದ್ಧತಿಯ ಬಗೆಗೆ ಸಂಕ್ಷಿಪ್ತ ವಿವರಣೆಯನ್ನು ಕೂಡ ನೀಡಲಾಗಿದೆ. ಆದಾಗ್ಯೂ ಪುರಾತನವಾದ ಈ ವ್ಯವಸ್ಥೆ ಇಂದು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಗ್ರಾಮಗಳಲ್ಲಿನ ಆದಾಯ, ವೆಚ್ಚ ಮತ್ತು ಉಳಿತಾಯ ಮಾದರಿಗಳನ್ನು ಕುರಿತ ಸಂಕ್ಷಿಪ್ತ ನೋಟವನ್ನು ಕೂಡ ಈ ಘಟಕ ಒಳಗೊಂಡಿದೆ.

ಭಾರತೀಯ ಗ್ರಾಮಗಳಲ್ಲಿನ ಮೂರು ಕ್ರಾಂತಿಗಳಾದ ಹಸಿರುಕ್ರಾಂತಿ, ಕ್ಷೀರ ಕ್ರಾಂತಿ ಮತ್ತು ಮತ್ಸ್ಯ ಕ್ರಾಂತಿಗಳನ್ನು ಕುರಿತಂತೆ ಘಟಕ 14ರಲ್ಲಿ ಪ್ರಸ್ತಾವನೆ ಮಾಡಲಾಗಿದೆ. 1960ರ ಮಧ್ಯಭಾಗದ ಅವಧಿಯಲ್ಲಿ ಸಂಭವಿಸಿದ ವ್ಯಾವಸಾಯಿಕ ಆಧುನಿಕೀಕರಣದ ಪ್ರತಿಫಲವೆ ಹಸಿರುಕ್ರಾಂತಿ. ಡಾ. ಕುರಿಯನ್ ಅವರ ದೂರದೃಷ್ಟಿಯ ನಾಯಕತ್ವದಿಂದಾಗಿ 1970ರ ಅವಧಿಯಲ್ಲಿ ಕ್ಷೀರಕ್ರಾಂತಿ ಉಂಟಾಯಿತು. 1980ರ ಅವಧಿಯಲ್ಲಿ ಮತ್ಸ್ಯಕ್ರಾಂತಿ ಸಂಭವಿಸಿತೆಂದು ಹೇಳಬಹುದಾಗಿದೆ. ಹಸಿರುಕ್ರಾಂತಿ, ಕ್ಷೀರಕ್ರಾಂತಿ ಮತ್ತು ಮತ್ಸ್ಯಕ್ರಾಂತಿಗಳು ಕ್ರಮವಾಗಿ ಕೃಷಿ ಉತ್ಪನ್ನದಲ್ಲಿನ ಹೆಚ್ಚಳ, ಜಾನುವಾರು ವೃದ್ಧಿ ಮತ್ತು ಮೀನು ಉತ್ಪನ್ನದಲ್ಲಿನ ಗಣನೀಯ ಹೆಚ್ಚಳಕ್ಕೆ ಸಂಬಂಧಿಸಿದ್ದರು ಕೂಡ ಮೂರು ಕ್ಷೇತ್ರಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಗುರಿ ತಲುಪಲಾಗಿದೆ ಎಂದು ಹೇಳಲಿಕ್ಕಾಗುವುದಿಲ್ಲ.

ಭಾರತದಲ್ಲಿನ ಭೂ ಸುಧಾರಣೆಯ ಬಗೆಗೆ ಕೂಡ ಈ ಘಟಕದಲ್ಲಿ ಚರ್ಚೆ ಮಾಡಲಾಗಿದೆ. ಭಾರತದಲ್ಲಿ ಭೂ ಸುಧಾರಣೆ ಬ್ರಿಟಿಷ್‌ರ ಆಳ್ವಿಕೆಯಲ್ಲಿ ಪ್ರಾರಂಭಗೊಂಡರು ಕೂಡ ಸ್ವಾತಂತ್ರ್ಯಾನಂತರವೇ ತನ್ನ ತೀವ್ರತೆಯನ್ನು ಗಳಿಸಿಕೊಂಡಿತು. ಸಮಸ್ಯೆಯ ಬಗೆಗೆ ಸ್ಪಷ್ಟವಾದ ಸ್ಪಂದನ ಕಾಣಲಿಲ್ಲವೆಂಬುದನ್ನು ಪರಿಶೀಲನಾ ಅಧ್ಯಯನಗಳು ದೃಢಪಡಿಸಿವೆ. ಬದಲಿಗೆ ಭೂ ಸುಧಾರಣೆಯನ್ನು ಕುರಿತು ಕೇವಲ ಘೋಷಣೆಗಳೂ ಆಗಿವೆ. ಇದರ ಫಲವಾಗಿ ಬಹುಮಟ್ಟಿನ ಭೂ ಸುಧಾರಣ ಕಾರ್ಯಕ್ರಮಗಳು ಕಾಗದದಲ್ಲಿ ಹಾಗೆಯೇ ಉಳಿದಿವೆ.

ರೈತರಿಗೆ ಹಣಕಾಸಿನ ಸಹಾಯ ತಲುಪಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಡಿರುವ ಹಲವಾರು ಪ್ರಯತ್ನಗಳನ್ನು ಕುರಿತು ಘಟಕ 15 ಜ್ಞಾನ ನೀಡುತ್ತದೆ. ಲೇವಾದೇವಿಗಾರರ ಬಿಗಿಮುಷ್ಟಿಯಿಂದ ರೈತರನ್ನು ಮುಕ್ತಿಗೊಳಿಸುವ ದಿಕ್ಕಿನಲ್ಲಿ ಹಲವಾರು ಪ್ರಾರಂಭಿಕ ಪ್ರಯತ್ನಗಳನ್ನು ಮಾಡಲಾಗಿದೆ. ರೈತರನ್ನು ಲೇವಾದೇವಿಗಾರರ ಬಿಗಿಮುಷ್ಟಿಯಿಂದ ಪಾರು ಮಾಡುವಲ್ಲಿ ಈ ಪ್ರಯತ್ನಗಳು ಸೀಮಿತ ಪ್ರಮಾಣದ ಯಶಸ್ಸು ಗಳಿಸಿದ್ದರು ಕೂಡ ರೈತರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ಇಲ್ಲವಾಗಿಸುವಲ್ಲಿ ಸಫಲವಾಗಿಲ್ಲ ಎಂಬುದು ತಿಳಿದುಬರುತ್ತದೆ.

ಗ್ರಾಮಗಳಲ್ಲಿನ ಸಹಕಾರ ಸಂಘಗಳ ಬಗೆಗೆ ಘಟಕ 16 ಜ್ಞಾನವನ್ನು ನೀಡುತ್ತದೆ. ಗ್ರಾಮ ಸಹಕಾರ ಸಂಘಗಳ ಉಗಮದ ಇತಿಹಾಸವನ್ನು 1904ರಿಂದ ಗುರುತಿಸಬಹುದಾಗಿದೆ. ವ್ಯಾವಸಾಯಿಕ ಮತ್ತು ಗ್ರಾಮೀಣ ಅಭಿವೃದ್ಧಿಗೆ ಸಹಾಯ ಮಾಡುವ ಉದ್ದೇಶದಿಂದ ಸಹಕಾರಿ ಚಳವಳಿಯನ್ನು ಸದೃಢಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಪ್ರಯತ್ನಗಳನ್ನು ಮಾಡಿವೆ. ಇಲ್ಲಿಯೂ ಕೂಡ ಚಳವಳಿ ನಿರೀಕ್ಷಿತ ಮಟ್ಟವನ್ನು ಮುಟ್ಟಲಿಲ್ಲ.

## ಬ್ಲಾಕ್ – 5 ರ ಪರಿಚಯ

ನಾಲ್ಕು ಘಟಕಗಳನ್ನು ಒಳಗೊಂಡಿರುವ ಐದನೇ ಬ್ಲಾಕ್ ಮುಖ್ಯವಾಗಿ ಗ್ರಾಮೀಣ ಸಮಸ್ಯೆಗಳನ್ನು ಕುರಿತು ಚರ್ಚಿಸುತ್ತದೆ. ಸಾಲಋಣ ಮತ್ತು ಜೀತ ಪದ್ಧತಿಯಂತಹ ಸಮಸ್ಯೆಗಳನ್ನು ಕುರಿತು ಘಟಕ 17 ಚರ್ಚಿಸುತ್ತದೆ. ಗ್ರಾಮೀಣ ಸಾಲಋಣ ಭಾರತಕ್ಕೆ ಮಾತ್ರವೇ ವಿಶಿಷ್ಟವಾದುದಲ್ಲ. ಗ್ರಾಮೀಣ ಸಾಲಋಣ ಎಲ್ಲ ಕಾಲಗಳಲ್ಲೂ ಮತ್ತು ಎಲ್ಲ ದೇಶಗಳಲ್ಲೂ

ಕಂಡು ಬರುತ್ತದೆ. ಕೃಷಿಯ ಸ್ವರೂಪ, ಗ್ರಾಮೀಣ ಆರ್ಥಿಕ ಸಂಘಟನೆಯ ಮೂಲಾಧಾರ ಇವುಗಳು ಭಾರತೀಯ ರೈತರನ್ನು ಆರ್ಥಿಕ ಅನಿಶ್ಚಿತತೆಗೆ ನೂಕುವುದರಿಂದ ಆರ್ಥಿಕ ಸಹಾಯವನ್ನು ಕೋರುವಂತಹ ಪರಿಸ್ಥಿತಿ ನಿರ್ಮಾಣವಾಗಿ ಸಾಲಋಣಕ್ಕೆ ದಾರಿ ಮಾಡಿಕೊಡುತ್ತದೆ. ಆದುದರಿಂದ, ಭಾರತೀಯ ರೈತ ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಜೀವಿಸಿ, ಸಾಲದಲ್ಲಿ ಸಾಯುತ್ತಾನೆ ಎಂದು ಹೇಳಲಾಗುತ್ತದೆ.

ಭಾರತೀಯ ಗ್ರಾಮಗಳಿಗಿರುವ ಶಾಪಗಳಲ್ಲಿ ಒಂದಾದ ಜೀತ ಪದ್ಧತಿಯನ್ನು ಕುರಿತಂತೆ ಈ ಘಟಕದ ಕೊನೆಯ ಭಾಗದಲ್ಲಿ ಚರ್ಚಿಸಲಾಗಿದೆ. ಈ ಸಮಸ್ಯೆಯು ಹಲವಾರು ಮುಖಗಳನ್ನು ಹೊಂದಿದೆ. ಆರ್ಥಿಕ ಅಂಶಗಳು, ಧಾರ್ಮಿಕ ಅಂಶಗಳು, ಸಂಪ್ರದಾಯ ಮತ್ತು ದೈವಾಯುಕ್ತ ಇವುಗಳು ಈ ಸಮಸ್ಯೆಯ ಮೂಲ ಮತ್ತು ಹೇಯ ಆಚರಣೆಯ ಉಳಿವಿಗೆ ಒಟ್ಟಿಗೆ ಕೆಲಸ ಮಾಡಿವೆ. ಈ ಸಮಸ್ಯೆಯನ್ನು ಮೂಲೋತ್ಪಾಟನೆ ಮಾಡಲು ಹಲವಾರು ಪ್ರಯತ್ನಗಳನ್ನು ಮಾಡಿದ್ದಾಗ್ಯೂ ಈ ಸಮಸ್ಯೆಯನ್ನು ಪೂರ್ಣ ಮಟ್ಟದಲ್ಲಿ ಹೋಗಲಾಡಿಸಲಾಗಿದೆ ಎಂದು ಹೇಳಲಾಗುವುದಿಲ್ಲ.

ಜಾತಿ ಘರ್ಷಣೆಗಳನ್ನು ಕುರಿತು ಘಟಕ 18 ಚರ್ಚಿಸುತ್ತದೆ. ಘರ್ಷಣೆಯು ಸಾರ್ವತ್ರಿಕ ಮತ್ತು ಸರ್ವವ್ಯಾಪಿಯಾಗಿದೆ. ವಾಸ್ತವವಾಗಿ ಘರ್ಷಣಾ ರಹಿತ ಸಮಾಜ ಸಮಾಜಶಾಸ್ತ್ರೀಯ ಮಿಥ್ಯ ಎಂದು ಸಮಾಜಶಾಸ್ತ್ರದಲ್ಲಿ ಹೇಳಲಾಗಿದೆ. ಘರ್ಷಣಾ ರಹಿತ ಸಮಾಜ ಎಲ್ಲಿದೆ ಎಂದರೆ ಅದು ಸ್ಮಶಾನ ಭೂಮಿಯಲ್ಲಿ (ರುದ್ರಭೂಮಿಯಲ್ಲಿ). ಜಾತಿ ಪದ್ಧತಿಯೊಂದಿಗೆ ಸಂಬಂಧವಿರುವ ಮೇಲು ಮತ್ತು ಕೀಳು, ಮಡಿ–ಮೈಲಿಗೆ, ಸ್ಪೃಶ್ಯ–ಅಸ್ಪೃಶ್ಯ ಎನ್ನುವ ಭಾವನೆಗಳ ಆಧಾರದಿಂದಾಗಿ ಭಾರತೀಯ ಗ್ರಾಮ ಸಮುದಾಯಗಳಲ್ಲಿ ಘರ್ಷಣೆ ಕಂಡು ಬರುವುದು ವೈಶಿಷ್ಟ್ಯವಾಗಿದೆ. ಇಂತಹ ಘರ್ಷಣೆಗಳು ಯಾವುದೇ ಸಕಾರಾತ್ಮಕ ಫಲಿತಾಂಶಗಳನ್ನು ಸಂಪೂರ್ಣವಾಗಿ ಇಲ್ಲದಂತೆ ಮಾಡುತ್ತವೆ. ಗ್ರಾಮಗಳಲ್ಲಿ ವಾಸಿಸುವ ಹಲವಾರು ಜಾತಿಗಳ ಜನರ ನಡುವೆ ಉಂಟಾಗುವ ಕಲಹ ಮತ್ತು ವೈಮನಸ್ಸು ಘರ್ಷಣೆಗೆ ಕಾರಣವಾಗುವ ಮೂಲಕ ಜೀವನ ಹೆಚ್ಚು ದುಸ್ತರವಾಗುತ್ತದೆ.

ಭಾರತದಲ್ಲಿ ಅನಕ್ಷರತೆಯ ಸಮಸ್ಯೆಯನ್ನು ಕುರಿತು ಘಟಕ 19 ಚರ್ಚೆ ಮಾಡುತ್ತದೆ. ಭಾರತದಲ್ಲಿನ ಸ್ಥೂಲ ಪ್ರಮಾಣದ ಅನಕ್ಷರತೆಗೆ ಮುಖ್ಯ ಕಾರಣ ಬ್ರಿಟಿಷ್ ಆಳ್ವಿಕೆ ಪ್ರಾರಂಭವಾಗುವ ಮುಂಚೆ ಧರ್ಮಾಧಾರಿತ ಶಿಕ್ಷಣವು ಮೇಲ್ಜಾತಿಯವರ ಹಕ್ಕಾಗಿದ್ದುದು. ಇಂತಹ ಪರಿಸ್ಥಿತಿಯಲ್ಲಿ ಭಾರತ ಜನಸಂಖ್ಯೆಯ ಬಹು ಜನರು ಕುಲೀನ ವರ್ಗ ಅಥವಾ ವರ್ಣದಿಂದ ಹೊರಗುಳಿದು ಶಿಕ್ಷಣವನ್ನು ಗಳಿಸುವುದರಿಂದ ವಂಚಿತರಾದರು. ಧರ್ಮದಿಂದ ಶಿಕ್ಷಣವನ್ನು ಬೇರ್ಪಡಿಸಿ ಎಲ್ಲರಿಗೂ ದೊರಕುವಂತೆ ಬ್ರಿಟಿಷರು ಮಾಡಿದರು. ಅಲ್ಲಿಂದೀಚೆಗೆ ಅಕ್ಷರತೆಯು ಜಾತಿ ಪದ್ಧತಿಯಲ್ಲಿನ ಕೆಳಸ್ತರದವರಿಗೂ ಹರಡಲು ಪ್ರಾರಂಭವಾಯಿತು. ಶಿಕ್ಷಣದ ಕ್ಷೇತ್ರದಲ್ಲಿ ಕೇರಳದಂತಹ ರಾಜ್ಯ ಹೆಚ್ಚಿನ ಪ್ರಗತಿಯನ್ನು ಮಾಡಿದೆ. ಇದನ್ನೇ ನಾವು ಬೇರೆ ರಾಜ್ಯಗಳಿಗೆ ಹೇಳಲಾಗುವುದಿಲ್ಲ. ಏನೇ ಆದರೂ ಭಾರತದ ಇಂದಿನ ಅಕ್ಷರತೆಯ ಚಿತ್ರಣವು ಹಿಂದಿನ ದಿನಗಳಿಗೆ ಹೋಲಿಸಿದರೆ ಉತ್ತಮವಾಗಿವೆ ಎಂದು ಹೇಳಬಹುದಾಗಿದೆ.

ಪರಿಸರಾತ್ಮಕ ಹಾನಿಯ ಅಪಾಯವನ್ನು ಕುರಿತು ಘಟಕ 20 ಅಧ್ಯಯನ ಮಾಡುತ್ತದೆ. ಪರಿಸರ ಹಾನಿ ದೀರ್ಘ ಇತಿಹಾಸವನ್ನು ಹೊಂದಿದ್ದಾಗ್ಯೂ ಕೈಗಾರಿಕ ಕ್ರಾಂತಿಯ ನಂತರ ಭಯಸೂಚಕ ಆಯಾಮವನ್ನು ಗಳಿಸಿತು. ಭಾರತದಲ್ಲಿ ಕೈಗಾರಿಕೆಗಳು ಅನಿಯಂತ್ರಿತ ಹಾನಿಗೆ ದಾರಿಮಾಡಿಕೊಟ್ಟಿತು. ಕೈಗಾರಿಕ ಅಭಿವೃದ್ಧಿಯ ಗತಿಯನ್ನು ತೀವ್ರಗೊಳಿಸುವ ಉತ್ಸಾಹದಲ್ಲಿ ಯೋಜನಕಾರರು ಪರಿಸರ ಹಾನಿಯ ಸಮಸ್ಯೆಗೆ ಗಮನವನ್ನು ನೀಡಲಿಲ್ಲ. ಇತ್ತೀಚಿನ ದಿನಗಳಲ್ಲಿ ಯೋಜನಾಕಾರರು ಸಮಸ್ಯೆಯ ಗಂಭೀರತೆಯನ್ನು ಅರಿತುಕೊಂಡು ಅಪಾಯಕರ ಪ್ರಕ್ರಿಯೆಯನ್ನು ತಡೆಗಟ್ಟಲು ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾರೆ.

## ಬ್ಲಾಕ್ – 6 ರ ಪರಿಚಯ

ಗ್ರಾಮೀಣ ಪುನರ್‌ನಿರ್ಮಾಣ ಮತ್ತು ಗ್ರಾಮೀಣ ಪುನರುಜ್ಜೀವನದ ಹಲಹಾರು ಯೋಜನೆಗಳನ್ನು ಈ ಬ್ಲಾಕ್‌ನಲ್ಲಿ ಚರ್ಚಿಸಲಾಗಿದೆ. ಗಾಂಧೀಜಿಯವರ ಅನುಯಾಯಿಯಾಗಿ ಹೆಸರು ಪಡೆದ ವಿನೋಬಾ ಬಾವೆ ಭೂದಾನ ಚಳವಳಿಯ ನೇತೃತ್ವವನ್ನು ವಹಿಸಿದ್ದರು. ಹುಲಿಗೆ ಮಾಂಸ ತಿನ್ನುವುದನ್ನು ಬಿಟ್ಟು ಹುಲ್ಲನ್ನು ತಿನ್ನುವಂತೆ ಕೇಳಿಕೊಂಡ ಹಾಗೆ ಭೂ ಒಡೆಯರನ್ನು ತಮ್ಮ ಭೂಮಿಯನ್ನು ಬಿಟ್ಟು ಕೊಡಿ ಎಂದು ಕೇಳಿದಂತೆ ಆಗುತ್ತದೆ ಎಂದು ಸಮತಾವಾದದಲ್ಲಿ ಬದ್ಧತೆಯನ್ನು

ಹೊಂದಿರುವ ರಷ್ಯಾದ ಅಧ್ಯಕ್ಷ ಕ್ರುಷ್ಚೇವ್ ಹೇಳಿದ್ದಾರೆ. ಈ ಹೇಳಿಕೆಯನ್ನು ದೃಢಪಡಿಸಲು ವಿನೋಬಾ ಭಾವೆಯವರು ಭೂದಾನ ಚಳವಳಿಯನ್ನು ಪ್ರಾರಂಭಿಸಿದರು. ಈ ಕಾರಣಕ್ಕಾಗಿ ವಿನೋಬಾ ಬಾವೆಯವರು ಭಾರತದ ಉದ್ದಗಲಕ್ಕೂ ಗ್ರಾಮಗಳಲ್ಲಿ ಸಂಚರಿಸುತ್ತಾ ಭೂ ರಹಿತ ಬಡವರಿಗೆ ಭೂಮಿಯನ್ನು ಹಂಚಲು ಕಳಕಳಿಯ ಮನವಿಯನ್ನು ಮಾಡಿಕೊಂಡರು. ಈ ಚಳವಳಿಯ ಯಶಸ್ಸು ಮತ್ತು ವಿಫಲತೆಯ ಬಗೆಗೆ ಭಿನ್ನಾಭಿಪ್ರಾಯಗಳು ಇವೆ. ಸಾವಿರಾರು ಎಕರೆಗಳಷ್ಟು ಜಮೀನನ್ನು ಶ್ರೀಮಂತ ಜಮೀನ್ದಾರರು ಸ್ವಯಂಪ್ರೇರಿತರಾಗಿ ದೇಣಿಗೆ ನೀಡುವುದರೊಂದಿಗೆ (ಭೂರಹಿತರಿಗೆ ಹಂಚಲು) ಚಳವಳಿ ಹೆಚ್ಚಿನ ಮಟ್ಟದಲ್ಲಿ ಯಶಸ್ಸು ಕಂಡಿತು ಎಂದು ವಿನೋಬಾ ಬಾವೆಯನ್ನು ಬೆಂಬಲಿಸಿದ ಗಾಂಧಿವಾದಿಗಳು ಹೇಳಿದ್ದಾರೆ. ವಿಮರ್ಶಕರು ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಬದಲಿಗೆ ಭೂದಾನ ಚಳವಳಿ ಸಂಪೂರ್ಣವಾಗಿ ಒಂದು ತಮಾಷೆಯಾಗಿತ್ತು ಎಂದು ಟೀಕಾಕಾರರು ಅಭಿಪ್ರಾಯ ಪಟ್ಟಿದ್ದಾರೆ. ದೇಣಿಗೆಯಾಗಿ ನೀಡಿದ ಭೂಮಿಯು ಯೋಗ್ಯವಲ್ಲದ್ದು, ಕಾನೂನಿನ ತೊಡಕಿನಲ್ಲಿ ಸಿಲುಕಿಕೊಂಡಿರುವುದು ಆಗಿತ್ತು ಎಂಬುದು ಇಲ್ಲಿ ಗಮನಾರ್ಹವಾದ ಅಂಶವಾಗಿದೆ. ಭೂದಾನ ಚಳವಳಿಯ ಮಾದರಿಯಲ್ಲಿಯೇ ಗ್ರಾಮದಾನ ಚಳವಳಿಯನ್ನು ಪ್ರಾರಂಭಿಸಲಾಯಿತು. ಈ ಚಳವಳಿ ಎಷ್ಟರ ಮಟ್ಟಿಗೆ ಯಶಸ್ವಿಯಾಯಿತು ಎನ್ನುವುದು ವಿವಾದಾಸ್ಪದವಾಗಿದೆ.

ಗ್ರಾಮೀಣ ಪುನರ್‌ನಿರ್ಮಾಣದ ಬಗೆಗೆ ಗಾಂಧೀಜಿಯವರ ದೃಷ್ಟಿಕೋನ ಹೇಗಿತ್ತು ಎಂಬುದನ್ನು ಘಟಕ 22ರಲ್ಲಿ ಚರ್ಚಿಸಲಾಗಿದೆ. ಗಾಂಧೀಜಿಯವರ ಜನಪ್ರಿಯ ಸರ್ವೋದಯ ಕಾರ್ಯಕ್ರಮದಲ್ಲಿ ಗ್ರಾಮೀಣ ಪುನರ್ ನಿರ್ಮಾಣವನ್ನು ಕುರಿತಂತೆ ಗಾಂಧೀಜಿಯವರ ಅಭಿಪ್ರಾಯಗಳಿವೆ. ಪ್ರಾಚೀನ ಭಾರತದ "ಪುಟ್ಟ ಗಣರಾಜ್ಯವನ್ನು" ಪುನರುಜ್ಜೀವನಗೊಳಿಸಲು ಗಾಂಧೀಜಿಯವರು ಬಯಸಿದ್ದರು. ಕೈಮಗ್ಗ, ಕೈಗಾರಿಕೆಗಳು, ಗೃಹ ಕೈಗಾರಿಕೆಗಳು, ಗ್ರಾಮೀಣ ಕರಕುಶಲ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು ಮತ್ತು ಗ್ರಾಮೀಣ ಸ್ವಯಂ ಪರಿಪೂರ್ಣತೆಯನ್ನು ಹೊಂದಲು ಗಾಂಧೀಜಿಯವರು ಬಯಸಿದ್ದರು. ಪ್ರಾಚೀನ ಗ್ರಾಮ ಪಂಚಾಯಿತಿಗಳನ್ನು ಪುನರುಜ್ಜೀವನಗೊಳಿಸುವ ಬಾರಿ ಕನಸನ್ನು ಕೂಡ ಮಹಾತ್ಮ ಗಾಂಧೀಜಿಯವರು ಹೊಂದಿದ್ದರು. ಭಾರತದಂತಹ ರಾಷ್ಟ್ರಕ್ಕೆ ಹೆಚ್ಚಿನ ಮಟ್ಟದಲ್ಲಿ ಸೂಕ್ತವಾಗಿರುವ ಆದರ್ಶ ಯೋಜನೆ ಇದಾಗಿದೆ. ಪ್ರಪಂಚದಲ್ಲಿನ ಹಲವಾರು ಹೆಸರಾಂತ ಜನರು ಸರ್ವೋದಯ ಯೋಜನೆಯನ್ನು ಪ್ರಶಂಸಿಸುತ್ತಿದ್ದಾರೆ. ಆದರೆ, ಸರ್ವೋದಯ ಕಾರ್ಯಕ್ರಮವು ವಾಸ್ತವವಾಗಿ ಹೆಚ್ಚೆಂದರೆ ಕನಸಿನ ಕಾಲ್ಪನಿಕ ರಾಜ್ಯವಾಗಿದ್ದು ಅದನ್ನು ಸಾಧಿಸಲು ಸಾಧ್ಯವಿಲ್ಲವೆಂದು ಬರಹಗಾರರು ಅಭಿಪ್ರಾಯಿಸಿದ್ದಾರೆ.

ಪಂಚಾಯಿತಿ ಪದ್ಧತಿಯನ್ನು ಕುರಿತು ಘಟಕ 23 ಚರ್ಚಿಸುತ್ತದೆ. 'ನೆಹರು ನಂತರ ಯಾರು' ಎಂಬ ಅಚ್ಚು ಮೆಚ್ಚಿನ ಪ್ರಶ್ನೆಯನ್ನು ನೆಹರು ಜೀವನ ವೃತ್ತಿಯ ಕೊನೆಯಲ್ಲಿ ಚರ್ಚಿಸಲಾಯಿತು. ಭಾರತದಲ್ಲಿ ನೆಹರು ಕಣ್ಮರೆಯಾದರೆ ಭಾರತ ಏನಾಗಬಹುದು ಎನ್ನುವ ಸಾಮಾನ್ಯ ದಿಗಲನ್ನು ಈ ಪ್ರಶ್ನೆ ಒಳಗೊಂಡಿತ್ತು. ಪ್ರಜಾಪ್ರಭುತ್ವ ಉಳಿಯುವುದೇ? ಛಿದ್ರಕಾರಕ ಶಕ್ತಿಗಳನ್ನು ನಿಯಂತ್ರಣದಲ್ಲಿ ಹಿಡಿದಿಡಿಯಲಾಗುತ್ತದೆಯೇ? ಒಮ್ಮೆ ನೆಹರು ಅವರಿಗೆ ಈ ಪ್ರಶ್ನೆಯನ್ನು ಕೇಳಲಾಯಿತು. ಅದಕ್ಕೆ ಅವರು ನೆಹರು ನಂತರ 'ಪಂಚಾಯತ್ ರಾಜ್' ಎಂದು ಉತ್ತರ ನೀಡಿದರು. ಒಮ್ಮೆ ಪ್ರಜಾಪ್ರಭುತ್ವ ತಳಮಟ್ಟದಲ್ಲಿ ನೆಲೆಯೂರಿದರೆ ವ್ಯಕ್ತಿಗಳು ಮತ್ತು ನಾಯಕರು ಲೆಕ್ಕಕ್ಕೆ ಬರುವುದಿಲ್ಲವೆಂಬುದು ನೆಹರು ಅವರ ಹೇಳಿಕೆಯು ಸೂಚಿಸುತ್ತದೆ. ಇದರ ಪರಿಣಾಮ ಭಾರತದಾದ್ಯಂತ 'ಪಂಚಾಯತ್ ರಾಜ್' ವ್ಯವಸ್ಥೆಯನ್ನು ಕಾಣಬಹುದಾಗಿದೆ. ಕೆಲವು ರಾಜ್ಯಗಳು ಮೂರು ಹಂತದ ವ್ಯವಸ್ಥೆಯನ್ನು ಹೊಂದಿದ್ದರೆ, ಕೆಲವು ರಾಜ್ಯಗಳು ಪ್ರಾಂತೀಯ ಮತ್ತು ಸ್ಥಳೀಯ ಸನ್ನಿವೇಶಗಳಿಗೆ ಸೂಕ್ತವಾಗಿರುವ ಭಿನ್ನರಚನೆಗಳನ್ನು ಜಾರಿಗೊಳಿಸಿದ್ದಾರೆ. "ಪಂಚಾಯತ್ ರಾಜ್" ವ್ಯವಸ್ಥೆಯು ತನ್ನ ನೆಲೆಯನ್ನು ಕಂಡುಕೊಂಡು ದಿನೇ ದಿನೇ ತನ್ನ ಶಕ್ತಿಯನ್ನು ವೃದ್ಧಿಸಿಕೊಳ್ಳುತ್ತಿದೆ.

ಭಾರತೀಯ ಗ್ರಾಮಗಳಲ್ಲಿನ ನಾಯಕತ್ವವನ್ನು ಕುರಿತು ಘಟಕ 24ರಲ್ಲಿ ಚರ್ಚಿಸಲಾಗಿದೆ. ಭಾರತದ ಗ್ರಾಮಗಳಲ್ಲಿ ಆರ್ಥಿಕ, ರಾಜಕೀಯ ಮತ್ತು ಸಮಾಜೋ ಸಾಂಸ್ಕೃತಿಕ ಬದಲಾವಣೆಗಳು ಉಂಟಾಗಿರುವುದರಿಂದಾಗಿ ಗ್ರಾಮ ನಾಯಕತ್ವದ ಸ್ವರೂಪದಲ್ಲಿ ಮೂಲಭೂತ ಬದಲಾವಣೆ ಉಂಟಾಗಿದೆ. ಇಡೀ ಗ್ರಾಮದ ಮೇಲೆ ಸಾಂಪ್ರದಾಯಿಕ ಮುಖ್ಯಸ್ಥ ಹೊಂದಿದ್ದ ಸಂಪೂರ್ಣ ಅಧಿಕಾರದ ದಿನಗಳು ಕಳೆದು ಹೋಗಿದ್ದು ಮತ್ತೆ ಬರುವ ಸ್ಥಿತಿಯಲ್ಲಿಲ್ಲ. ಭಾರತೀಯ ಗ್ರಾಮಗಳಲ್ಲಿ ಇಂದು

ಸಂಪೂರ್ಣವಾಗಿ ಪ್ರಜಾಪ್ರಭುತ್ವೀಕರಣಗೊಂಡಿದೆ ಎಂದು ಹೇಳಲಾಗದಿದ್ದಾಗ್ಯೂ ಬದಲಾವಣೆಯ ಗಾಳಿಯು ಸಮಾನತ ವ್ಯವಸ್ಥೆಯನ್ನು ಭಾರತದಾದ್ಯಂತ ಪ್ರಸರಿಸಿದೆ ಎಂದು ನಿಶ್ಚಿತವಾಗಿ ಹೇಳಬಹುದಾಗಿದೆ. ಭಾರತವು ಪ್ರಜಾಪ್ರಭುತ್ವದ ವಿಕೇಂದ್ರೀಕರಣವನ್ನು ಒಪ್ಪಿಕೊಳ್ಳುವ ಸ್ವತಂತ್ರ ರಾಷ್ಟ್ರವಾಗುತ್ತದೆ ಎಂದು ನಿರೀಕ್ಷಿಸಲಾಗಿದೆ. ಗ್ರಾಮಗಳ ತಳಮಟ್ಟದಲ್ಲಿ ಸಾಂಪ್ರದಾಯಿಕ ಉಳ್ಳದವರ ಉಗಮವಾಗಿ ಅವರು ಮಂಚೂಣಿಯಲ್ಲಿ ಬರುತ್ತಿರುವುದು ಮತ್ತೊಂದು ಉಂಟಾಗಿರುವ ಪ್ರಮುಖ ಬದಲಾವಣೆ ಎಂದರೆ ತಪ್ಪಾಗಲಾರದು. ವಿಶೇಷವಾಗಿ ದುರ್ಬಲ ವರ್ಗಗಳ ವಿದ್ಯಾವಂತ ಯುವಕರು ಇಂದು ತಮ್ಮಗಳ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಿರುವುದು ನಾಯಕತ್ವದ ಮಾದರಿಯಲ್ಲಿ ಗಣನೀಯ ಬದಲಾವಣೆಗೆ ದಾರಿ ಮಾಡಿಕೊಟ್ಟಿದೆ.

## ಬ್ಲಾಕ್ – 7 ರ ಪರಿಚಯ

ಹಲವಾರು ಸಮಾಜೋ–ಆರ್ಥಿಕ ಯೋಜನೆಗಳ ಮೂಲಕ ಗ್ರಾಮೀಣ ಸಂಘಟನೆಯಲ್ಲಿ ಬದಲಾವಣೆಗಳನ್ನು ತರಲು ಮಾಡಲಾಗಿರುವ ಪ್ರಯತ್ನಗಳನ್ನು ಈ ಬ್ಲಾಕ್‌ನ ಘಟಕಗಳಲ್ಲಿ ಚರ್ಚೆ ಮಾಡಲಾಗಿದೆ.

ಘಟಕ 25ರಲ್ಲಿ ಮಹತ್ವಾಕಾಂಕ್ಷೆಯುಳ್ಳದ್ದಾದ ಸಾಮುದಾಯಿಕ ಅಭಿವೃದ್ಧಿ ಯೋಜನೆಯನ್ನು ಕುರಿತು ಚರ್ಚಿಸಲಾಗಿದೆ. ಭಾರತೀಯ ಗ್ರಾಮಗಳ ಅಸಂಖ್ಯಾತ ಸ್ವಹಿತಾಸಕ್ತಿ ಗುಂಪುಗಳನ್ನು ಮತ್ತು ಜಾತಿ ಸಮೂಹಗಳನ್ನು ಒಂದು ಸಮುದಾಯವನ್ನಾಗಿ ಒಟ್ಟುಗೂಡಿಸುವುದು ಮತ್ತು ಗ್ರಾಮಸ್ಥರಲ್ಲಿ ನಾವು ನಮ್ಮದು ಎನ್ನುವ ಭಾವನೆಯನ್ನು ಪಾಲನೆ ಪೋಷಣೆ ಮಾಡುವುದು ಸಾಮುದಾಯಿಕ ಅಭಿವೃದ್ಧಿ ಯೋಜನೆಯ ಮುಖ್ಯ ಗುರಿ ಆಗಿದೆ. ಅದಕ್ಕೋಸ್ಕರವಾಗಿಯೇ ಹಲವಾರು ಜನರು ಸಾಮುದಾಯಿಕ ಅಭಿವೃದ್ಧಿ ಯೋಜನೆಯನ್ನು ಸಾಮುದಾಯಿಕ ಸೃಷ್ಟಿಯೋಜನೆ ಎಂದು ಹೆಚ್ಚು ಯುಕ್ತವಾಗಿಯೇ ಕರೆದಿದ್ದಾರೆ. ಸಮುದಾಯವನ್ನು ಒಡೆಯುವುದರ ಮೂಲಕ ಸಣ್ಣ ಸಣ್ಣ ಗುಂಪುಗಳಾಗಿ ಮಾಡುವ ಶಕ್ತಿಗುಂದದ ಜಾತಿ ವ್ಯವಸ್ಥೆಯ ಸಾಮರ್ಥ್ಯದಿಂದಾಗಿ ಗ್ರಾಮೀಣ ಸಮುದಾಯಗಳು ಒಡೆದ ಮನೆಗಳಾಗಿವೆ. ಇದನ್ನು ತಡೆಗಟ್ಟಲು ಜರೂರಾಗಿ ಏನಾದರೂ ಮಾಡಬೇಕಾಗಿದೆ ಮತ್ತು ಜಾತಿ ಉಪಜಾತಿಗಳಿಂದ ಮೀರಿದ ಮೇಲ್ಮಟ್ಟದ ಗ್ರಾಮ ಸಮುದಾಯಗಳನ್ನು ನಿರ್ಮಿಸಲು ಕಾರ್ಯಕ್ರಮಗಳನ್ನು ಪ್ರಾರಂಭಿಸಬೇಕಾಗಿದೆ. ಸಾಮುದಾಯಿಕ ಅಭಿವೃದ್ಧಿ ಯೋಜನೆಯು ಎಷ್ಟರ ಮಟ್ಟಿಗೆ ತನ್ನ ಧ್ಯೇಯೋದ್ದೇಶಗಳನ್ನು ಸಾಧಿಸುವಲ್ಲಿ ಯಶಸ್ವಿಯಾಗಿದೆ ಎನ್ನುವುದು ವಿವಾದಿತ ಪ್ರಶ್ನೆಯಾಗಿದೆ. ಸಾಮುದಾಯಿಕ ಅಭಿವೃದ್ಧಿ ಯೋಜನೆಯು ತನ್ನ ಧ್ಯೇಯೋದ್ದೇಶಗಳನ್ನು ಪೂರ್ಣ ಮಟ್ಟದಲ್ಲಿ ಸಾಧಿಸುವುದು ಸಾಧ್ಯವಿಲ್ಲವಾದರೂ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿದೆ ಎಂಬುದನ್ನು ಕೆಲವು ಪರಿಶೀಲನ ಅಧ್ಯಯನಗಳು ಹೇಳುತ್ತವೆ. ಆದರೆ ಬೇರೆಯವರು ಬೇರೆಯದೆ ಆದ ಅಭಿಪ್ರಾಯ ಹೊಂದಿರುವುದನ್ನು ಕಾಣಬಹುದಾಗಿದೆ.

ಭಾರತದಲ್ಲಿ ಬಡತನ ನಿರ್ಮೂಲನೆಗೆ ಪಂಚವಾರ್ಷಿಕ ಯೋಜನೆಗಳ ಅವಧಿಗಳಲ್ಲಿ ಹಲವಾರು ಮಹತ್ವಾಕಾಂಕ್ಷೆಯುಳ್ಳ ಯೋಜನೆಗಳು ಪ್ರಾರಂಭಗೊಂಡಿರುವುದನ್ನು ಕುರಿತು ಘಟಕ 26ರಲ್ಲಿ ಚರ್ಚಿಸಲಾಗಿದೆ. ದಿವಂಗತ ಪ್ರಧಾನ ಮಂತ್ರಿ ಇಂದಿರಾಗಾಂಧಿಯವರ ಆಡಳಿತದ ಉತ್ತರಾರ್ಧದ ಅವಧಿಯಲ್ಲಿ "ಗರೀಬಿ ಹಟಾವೋ" "ಬಡತನ ನಿರ್ಮೂಲನೆ" ಪ್ರಮುಖ ವಿಷಯಗಳಾಗಿದ್ದವು. ಭಾರತದ ಜನ ಸಂಖ್ಯೆಯ ದೊಡ್ಡ ಪ್ರಮಾಣದಲ್ಲಿನ ಬಡತನ ಬೇಗೆಯ ಪರಿಸ್ಥಿತಿಗಳನ್ನು ಹೋಗಲಾಡಿಸಲು ತ್ವರಿತ ನಿವಾರಣೆಯ ಅಲ್ಪಾವಧಿ ಮತ್ತು ದೀರ್ಘಾವಧಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು. ಪಂಚವಾರ್ಷಿಕ ಯೋಜನೆಗಳು ಅನುಷ್ಠಾನಕ್ಕೆ ಬಂದ ಹಿಂದಿನ ಚಿತ್ರಣವನ್ನು ನೋಡಿದಾಗ ಯೋಜನೆಗಳೆಲ್ಲವು ಸಫಲಕಾರಿಯಾಗಿಲ್ಲ ಎನ್ನುವ ತೀರ್ಮಾನಕ್ಕೆ ಯಾರಾದರೂ ಬರಬಹುದು. ಬಡತನ ನಿರ್ಮೂಲನೆಯ ಧ್ಯೇಯಗಳನ್ನೊಳಗೊಂಡ ಎಲ್ಲ ಯೋಜನೆಗಳು ಅತ್ಯುತ್ತಮವಾದ ಯೋಜನೆಗಳಾಗಿದ್ದರು ಕೂಡ ಅವು ಕೊನೆಗೆ "ಕಾಗದದ ಹುಲಿಗಳು" ಆಗಿ ಕಾಣುವಂತಾಯಿತು. ಕಾಗದದ ಮೇಲೆ ಇವುಗಳು ಅತ್ಯುತ್ತಮವಾದ ಯೋಜನೆಗಳಾಗಿದ್ದು ವಾಸ್ತವತೆಯಲ್ಲಿ ಹೆಚ್ಚಿನ ಮಟ್ಟದಲ್ಲಿ ನಿರಾಶೆಯನ್ನು ತಂದವು. ರಾಜಕೀಯ ಸಂಕಲ್ಪದ ಕೊರತೆ, ಭ್ರಷ್ಟಾಚಾರ, ನಿರುತ್ಸಾಹ, ಬೂಟಾಡಿಕೆ (ಕಪಟಾಚರಣೆ) ಮುಂತಾದ ಹಲವಾರು ಕಾರಣಗಳು ಈ ಪರಿಸ್ಥಿತಿಗೆ ವಿವರಣೆ ನೀಡುತ್ತವೆ.

ಗ್ರಾಮ ಸಮುದಾಯಗಳ ಕ್ಷೇಮಾಭಿವೃದ್ಧಿ ಮತ್ತು ಬೆಳವಣಿಗೆಯ ಸಾಧನಗಳಾಗಿ ಸರ್ಕಾರೇತರ ಸಂಘಟನೆಗಳು ಕಾರ್ಯ ನಿರ್ವಹಿಸುವುದುನ್ನು ಕುರಿತಂತೆ ಘಟಕ 27 ಚರ್ಚಿಸುತ್ತದೆ. ಕೆಲವು ಕ್ಷೇತ್ರಗಳಲ್ಲಿ ಸರ್ಕಾರಿ ಆಡಳಿತ ಯಂತ್ರ ಜನರ ಕ್ಷೇಮಾಭಿವೃದ್ಧಿ ಮತ್ತು ಬೆಳವಣಿಗೆಯ ಕಾರ್ಯಕ್ರಮಗಳನ್ನು ಪರಿಚಯಿಸಿ ಯಶಸ್ಸು ಸಾಧಿಸಲು ಸೂಕ್ತವಾಗಿಲ್ಲವೆಂಬುದನ್ನು

ಪ್ರಪಂಚದ ಎಲ್ಲ ಸರ್ಕಾರಗಳು ಮನಗಂಡಿವೆ. ಇಂತಹ ಪರಿಸ್ಥಿತಿಯಲ್ಲಿ ಕ್ಷೇಮಾಭಿವೃದ್ಧಿ ದೃಷ್ಟಿಕೋನವುಳ್ಳ ಹಾಗು ಲಾಭ ರಹಿತ ಉದ್ದೇಶ ಹೊಂದಿರುವ ಸರ್ಕಾರೇತರ ಸಂಘಟನೆಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಬಡವರ ಮತ್ತು ದುರ್ಬಲ ವರ್ಗಗಳ ಕಣ್ಣೀರೊರೆಸಲು ಪರಹಿತ ದೃಷ್ಟಿಕೋನದೊಂದಿಗೆ ದಿವ್ಯಜ್ಞಾನಿಗಳಿಂದ ಸ್ಥಾಪಿತವಾದ ಸರ್ಕಾರೇತರ ಸಂಘಟನೆಗಳು ಅಸಾಧಾರಣ ಸೇವೆಯನ್ನು ನೀಡುತ್ತಿವೆ.

ಗ್ರಾಮ ಸಮುದಾಯಗಳ ಕ್ಷೇಮಾಭಿವೃದ್ಧಿ ಮತ್ತು ಬೆಳವಣಿಗೆಯಲ್ಲಿ ಸರ್ಕಾರಗಳು ಮತ್ತು ಸರ್ಕಾರೇತರ ಸಂಘಟನೆಗಳು ಕಾರ್ಯ ನಿರ್ವಹಿಸುತ್ತಿರುವುದು ಇತ್ತೀಚಿನ ದಿನಗಳಲ್ಲಿನ ಪ್ರವೃತ್ತಿಯಾಗಿದೆ. ಕಳೆದ ಶತಮಾನಗಳಲ್ಲಿ ಗ್ರಾಮೀಣ ಸಮುದಾಯಗಳಲ್ಲಿ ಉಂಟಾಗಿರುವ ಬದಲಾವಣೆ ಮತ್ತು ಬದಲಾವಣೆಯ ತಳಮಟ್ಟದಲ್ಲಿ ನೆಲೆಯೂರಿರುವ ಸಂಕ್ಷಿಪ್ತ ಪರಿಚಯ ಒದಗಿಸುವ ಪ್ರಯತ್ನವನ್ನು ಘಟಕ 28ರಲ್ಲಿ ಮಾಡಲಾಗಿದೆ. ಭಾರತ ತನ್ನ ಹಿಂದಿನ ಸಾಂಪ್ರದಾಯಿಕ ವ್ಯವಸ್ಥೆಗೆ ಹೋಗಬೇಕೆ ಅಥವಾ ಅದು ಆಧುನೀಕರಣಗೊಳ್ಳಬೇಕೆ ಮತ್ತು ಇತರೆ ಅಭಿವೃದ್ಧಿ ರಾಷ್ಟ್ರಗಳ ಜೊತೆ ಮುಂದುವರಿಯಬೇಕೆ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಈ ವಿವಾದಿತ ವಿಷಯ ನ್ಯಾಯಸಮ್ಮತವಲ್ಲ. ಆಯ್ಕೆ ಮಾಡುವುದು ಸುಲಭವೆಂದು ಕಾಣುತ್ತದೆ. ಸ್ವಾಭಾವಿಕವಾಗಿ ನಾವು ಪುಟ್ಟ ಗಣರಾಜ್ಯಗಳನ್ನು ಪುನರ್ ಸ್ಥಾಪಿಸಲು ಹಿಂದಕ್ಕೆ ಹೋಗುವುದಿಲ್ಲ. ನಮ್ಮ ರಾಷ್ಟ್ರವನ್ನು ಪ್ರಗತಿ ಮತ್ತು ಅಭ್ಯುದಯದ ಕಡೆಗೆ ತೆಗೆದುಕೊಂಡು ಹೋಗಲು ನಮ್ಮ ಮುಂದಿರುವ ಏಕೈಕ ಮಾರ್ಗವೆಂದರೆ ಎಷ್ಟರ ಮಟ್ಟಿಗೆ ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಹೊಂದಿಕೊಂಡು ಹೋಗುವುದು ಎನ್ನುವುದೇ ಆಗಿದೆ.

**ಪ್ರೊ. ಎಮ್ ಏಚ್ ಕೃಷ್ಣಪ್ಪ**
ಮುಖ್ಯಸ್ಥರು
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು

# ಘಟಕ 1 : ಗ್ರಾಮೀಣ ಸಮಾಜಶಾಸ್ತ್ರ : ಸ್ವರೂಪ, ವ್ಯಾಖ್ಯೆ, ವಸ್ತುವಿಷಯ, ಸಮಂಜಸತೆ (ಸಂಗತತೆ)

ರಚನೆ


1.0 ಉದ್ದೇಶಗಳು

1.1 ಪರಿಚಯ

1.2 ಸ್ವರೂಪ

1.3 ವ್ಯಾಖ್ಯೆ

1.4 ವಸ್ತುವಿಷಯ

1.5 ಸಮಂಜಸತೆ (ಸಂಗತತೆ)

1.6 ಸಾರಾಂಶ

1.7 ಪ್ರಮುಖ ಪದಗಳು

1.8 ನಿಮ್ಮ ಪ್ರಗತಿ ಪರೀಕ್ಷೆಗೆ ಉತ್ತರಗಳು

1.9 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

1.10 ಸಲಹಾ ಗ್ರಂಥಗಳು

## 1.0 ಉದ್ದೇಶಗಳು

ಸಾಪೇಕ್ಷವಾಗಿ ಹೊಸ ಶಾಖೆಯೆನಿಸಿರುವ ಗ್ರಾಮೀಣ ಜೀವನದ ಸಮಾಜಶಾಸ್ತ್ರವೆಂದು ಜನಪ್ರಿಯವಾಗಿರುವ 'ಗ್ರಾಮೀಣ ಸಮಾಜಶಾಸ್ತ್ರ'ದ ಪರಿಚಯದ ಪ್ರಯತ್ನವನ್ನು ನಿಮಗೆ ಈ ಘಟಕದಲ್ಲಿ ಮಾಡಲಾಗಿದೆ. ಈ ಘಟಕವನ್ನು ಅಧ್ಯಯನ ಮಾಡಿದ ನಂತರ ನೀವು ;

- ಗ್ರಾಮೀಣ ಸಮಾಜಶಾಸ್ತ್ರವು ಯಾವ ಸನ್ನಿವೇಶದಲ್ಲಿ ಸಮಾಜಶಾಸ್ತ್ರದ ಶಾಖೆಯಾಗಿ ಬೆಳವಣಿಗೆಯನ್ನು ಕಂಡುಕೊಂಡಿತು ಎಂಬುದನ್ನು ತಿಳಿಯುವವರಿದ್ದೀರಿ.
- ಹೇಗೆ ಮತ್ತು ಏಕೆ ನಗರೀಕರಣಗೊಂಡಿರುವ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಗ್ರಾಮೀಣ ಸಮಾಜಶಾಸ್ತ್ರ ಬೆಳವಣಿಗೆಯನ್ನು ಕಂಡುಕೊಂಡಿತು ಎಂದು ಅರ್ಥ ಮಾಡಿಕೊಳ್ಳುವಿರಿ.
- ಗ್ರಾಮೀಣ ಸಮಾಜಶಾಸ್ತ್ರವು ಮಾನವತಾವಾದದ ಶಿಶು ಎಂದು ಹೇಗೆ ಹೆಸರು ಪಡೆದಿದೆ ಎಂಬುದಕ್ಕೆ ಕಾರಣಗಳನ್ನು ನೀಡಲು ಶಕ್ತರಾಗುವಿರಿ.
- ಗ್ರಾಮೀಣ ಸಮಾಜಶಾಸ್ತ್ರವನ್ನು ವ್ಯಾಖ್ಯಾನಿಸುವ ಮತ್ತು ಅದರ ಅರ್ಥ, ವಸ್ತುವಿಷಯ ಮತ್ತು ಸಮಂಜಸತೆಯನ್ನು ವಿವರಿಸುವ ಸಾಮರ್ಥ್ಯ ಪಡೆಯುವಿರಿ.

## 1.1 ಪರಿಚಯ

ಸಮಾಜಶಾಸ್ತ್ರವು ಜ್ಞಾನೋದಯದ ಶಿಶು ಎಂದು ಕರೆಯಲಾಗುತ್ತಿರುವುದರ ಅರಿವು ನಿಮಗಿದೆ. ಏಕೆಂದರೆ ವೈಜ್ಞಾನಿಕ ಚಿಂತಕರಾದ ಸೈಂಟ್ ಸೈಮನ್ ಮತ್ತು ಆಗಸ್ಟ್ ಕಾಮ್ಟರವರು ತಮ್ಮ ಬರಹಗಳಲ್ಲಿ ಮಾನವನ ಮನಸ್ಸನ್ನು ಧರ್ಮದ ದಾಸ್ಯದಿಂದ ವಿಮುಕ್ತಿಗೊಳಿಸಿ ಅದನ್ನು ವೈಜ್ಞಾನಿಕ ದೃಷ್ಟಿಕೋನದಿಂದ ನೋಡುವಂತೆ ಮಾಡಿದರು.

ಸಮಾಜಶಾಸ್ತ್ರವು ಜ್ಞಾನೋದಯದ ಶಿಶು ಎಂದು ಹೆಸರು ಪಡೆದಿದ್ದರೆ, ಗ್ರಾಮೀಣ ಸಮಾಜಶಾಸ್ತ್ರವು ಮಾನವತಾವಾದದ ಶಿಶು ಎಂದು ಹೆಸರು ಪಡೆದಿದೆ. ಸಮಾಜಶಾಸ್ತ್ರದ ಮೂಲ ಪುರುಷರು ಧರ್ಮದ ಮೂಲ ತತ್ವಗಳನ್ನು ವಿರೋಧಿಸುವುದರ ಮತ್ತು ತಿರಸ್ಕರಿಸುವುದರ ಜೊತೆಗೆ ಪ್ರತಿಯೊಂದು ಘಟನೆಯನ್ನು ತಾರ್ಕಿಕ ಮತ್ತು ವೈಜ್ಞಾನಿಕ ದೃಷ್ಟಿಕೋನದಿಂದ ಅಧ್ಯಯನ ಮಾಡಿ ಕಾರಣ ಮತ್ತು ಪರಿಣಾಮಾತ್ಮಕ ಸಂಬಂಧವನ್ನು ಸ್ಥಾಪಿಸುವ ಪ್ರಯತ್ನ ಮಾಡಿದ್ದಾರೆ. ಮಾನವ ಕಲ್ಯಾಣ ಮತ್ತು ಮಾನವ ಘನತೆ ಇವುಗಳಿಗೆ ಅಮೆರಿಕದಲ್ಲಿನ ಪುರೋಹಿತ ವರ್ಗ ಮತ್ತು ಕ್ರೈಸ್ತ ಪಾದ್ರಿಗಳು ತೋರಿದ ವಚನಬದ್ಧ ಬದ್ಧತೆಯಿಂದಾಗಿ ಗ್ರಾಮೀಣ ಸಮಾಜಶಾಸ್ತ್ರ ತನ್ನ ನೆಲೆ ಕಂಡುಕೊಂಡಿತು.

ಮುಂದುವರಿಯುವ ಮೊದಲು ವಿರೋಧಾಭಾಸ ಅಥವಾ ಗೂಢಪ್ರಶ್ನೆಯ ಬಗೆಗೆ ನಿಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ಗ್ರಾಮ ಪ್ರಧಾನವಾದ ಆಫ್ರಿಕಾ, ಚೀನಾ ಮತ್ತು ಭಾರತದಂತಹ ರಾಷ್ಟ್ರಗಳಲ್ಲಿ ಗ್ರಾಮೀಣ ಸಮಾಜಶಾಸ್ತ್ರವು ಬೆಳವಣಿಗೆಯನ್ನು ಕಂಡುಕೊಳ್ಳದೆ ಹೆಚ್ಚು ಕೈಗಾರಿಕೀಕರಣ ಮತ್ತು ನಗರೀಕರಣಗೊಂಡಿರುವ ರಾಷ್ಟ್ರವಾದ ಅಮೆರಿಕದಲ್ಲಿ ಹತ್ತೊಂಬತ್ತನೆಯ ಶತಮಾನದ ಕೊನೆಯ ವೇಳೆಗೆ ಬೆಳವಣಿಗೆಯನ್ನು ಕಂಡುಕೊಂಡಿದ್ದು ಆಶ್ಚರ್ಯವನ್ನುಂಟುಮಾಡಿದೆ. ಈ ವಿರೋಧಾಭಾಸಕ್ಕೆ ಕಾರಣಗಳೇನು? ಭಾರತದಂತಹ ಗ್ರಾಮ ರಾಷ್ಟ್ರದಲ್ಲಿ ಏಕೆ ಗ್ರಾಮೀಣ ಸಮಾಜಶಾಸ್ತ್ರವು ಉಗಮ ಮತ್ತು ಬೆಳವಣಿಗೆಯನ್ನು ಕಂಡುಕೊಳ್ಳಲಿಲ್ಲ.

ಕೌಟಿಲ್ಯನ ಅರ್ಥಶಾಸ್ತ್ರದ ಇಂಗ್ಲೀಷ್ ಅವತರಣಿಕೆಯ ಪೀಠಿಕೆಯಲ್ಲಿ ಜನಪ್ರಿಯ ಇತಿಹಾಸಶಾಸ್ತ್ರಜ್ಞ ಡಾ|| ಶ್ಯಾಮ ಶಾಸ್ತ್ರಿ ಗೂಢಪ್ರಶ್ನೆಗೆ ಸಂಕ್ಷಿಪ್ತವಾದ ಮತ್ತು ಪ್ರಶ್ನಾರ್ಥಕವಾದ ಹೇಳಿಕೆಯನ್ನು ಒದಗಿಸಿದ್ದಾರೆ. "ಭಾರತ ಪುರಾತನವಾದುದಾದರೂ ಸಂಕ್ಷಿಪ್ತ ಇತಿಹಾಸವನ್ನು ಹೊಂದಿದೆ". **('India has a long past but a short history").** ಇವರ ಪ್ರಕಾರ ಭಾರತವು ಕಡಿಮೆ ಎಂದರೆ ಐದರಿಂದ-ಆರು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದ್ದು (ವಿಶ್ವಾಸಾರ್ಹ ಸಂಗತಿಗಳ ದಾಖಲೆ ಆಧಾರ) ಇದು ಕೇವಲ 200 ಅಥವಾ 300 ವರ್ಷಗಳಷ್ಟು ಹಳೆಯದಾಗಿದೆ. ಡಾ|| ಶ್ಯಾಮ ಶಾಸ್ತ್ರಿರವರು ತಮ್ಮ ಅಭಿಪ್ರಾಯವನ್ನು ತಮ್ಮದೇ ಆದ ರೀತಿಯಲ್ಲಿ ವಿವರಿಸುತ್ತಾರೆ. ಭಾರತದ ಎಲ್ಲಾ ಪುರಾತನ ಬರಹಗಳಲ್ಲಿ ಭಾರತದಲ್ಲಿನ ಗ್ರಾಮ ಸಮುದಾಯಗಳ ಮತ್ತು ಅವುಗಳು ಹೊಂದಿದ್ದ ಸಂಸ್ಥೆಗಳ ಬಗೆಗೆ ಆಧಾರಗಳಿದ್ದುದು ವಾಸ್ತವವಾದ ಅಂಶವಾಗಿದೆ. ವಾಸ್ತವವಾಗಿ ಈ ಆಧಾರಗಳು ತಪ್ಪಿಸಿಕೊಳ್ಳಲಾರದಂತಹವು ಅಥವಾ ಯಾವಾಗಲೂ ಇರುವಂತಹುವೆ ಆಗಿವೆ. ಏಕೆಂದರೆ ಭಾರತೀಯ ಜೀವನದ ಆರ್ಥಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ, ಅಥವಾ ದಾರ್ಶನಿಕ ಅಂಶಗಳಾಗಿರಲಿ ಅವು ಗ್ರಾಮೀಣ ಜೀವನದ ಪ್ರಭಾವವನ್ನು ಮೀರಿ ವ್ಯಾಪಿಸಿರುವುದಿಲ್ಲ. ಈ ಸಂಗತಿಯು ಪ್ರಾಚೀನ ಕಾಲಗಳಲ್ಲಿ ಗ್ರಾಮೀಣ ಸಮುದಾಯಗಳ ಬಗೆಗೆ ಮಾಹಿತಿಗಳ ಮಹಾಪೂರದ ಸಂಗ್ರಹಣೆಗೆ ಕಾರಣವಾಗಬೇಕಾಗಿದ್ದಿತು. ಆದರೆ ವಾಸ್ತವದಲ್ಲಿ ಆ ರೀತಿ ಆಗಲಿಲ್ಲ. ಭಾರತೀಯ ವಿದ್ವಾಂಸರುಗಳ ಮಹಾನ್ ಕೃತಿಗಳಾದ ವೇದಗಳು, ಉಪನಿಷತ್ತುಗಳು, ಶಾಸ್ತ್ರಗಳು, ಪುರಾಣಗಳು ಅತ್ಯುತ್ತಮವಾದ ಕಾಣಿಕೆಗಳನ್ನು ನೀಡಿದ್ದರೂ ಐತಿಹಾಸಿಕ ದಾಖಲೆಗಳಾಗಿ ಅವುಗಳನ್ನು ಅಧ್ಯಯನ ಮಾಡಲು ಸಾಧ್ಯವಿಲ್ಲ. ಈ ಕೃತಿಗಳು ಅಂತಹ ಇತಿಹಾಸವನ್ನು ಹೊಂದಿಲ್ಲವೆಂದು ಪ್ರಬಲವಾಗಿ ಶ್ಯಾಮ ಶಾಸ್ತ್ರಿಯವರು ಹೇಳಿದ್ದಾರೆ. ವೇದೋಪನಿಷತ್ತು ಹಾಗೂ ಶಾಸ್ತ್ರಪುರಾಣಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದಾಗ ಪುರಾತನ ಗ್ರಾಮಗಳ ಬಗೆಗಿನ ಚಿತ್ರಣವು ಅಸ್ಪಷ್ಟತೆಯಿಂದ ಕೂಡಿದ್ದು ನಿರಾಶೆಯನ್ನು ಉಂಟು ಮಾಡುತ್ತದೆ. ನೋವನ್ನುಂಟುಮಾಡುವ ಸಂಗತಿ ಎಂದರೆ ಭಾರತೀಯ ಬರಹಗಾರರು ಉತ್ಕೃಷ್ಟ ಗ್ರಂಥಗಳಲ್ಲಿ ತಾರ್ಕಿಕತೆಗೆ ಗಮನ ನೀಡಿದ್ದಾರೆಯೇ ಹೊರತು ಇತಿಹಾಸಕ್ಕಲ್ಲ ಎಂದು ಶ್ಯಾಮ ಶಾಸ್ತ್ರಿಯವರು ಅಭಿಪ್ರಾಯಪಟ್ಟಿದ್ದಾರೆ. ಬರಹಗಾರರು ದಾರ್ಶನಿಕ ಉಪದೇಶಗಳಲ್ಲಿ ಮತ್ತು ತಾರ್ಕಿಕ ಸಿದ್ಧಾಂತಗಳನ್ನು ವ್ಯಾಖ್ಯಾನ ಮಾಡುವುದರಲ್ಲಿ ಆಸಕ್ತಿ ಹೊಂದಿದ್ದರೇ ಹೊರತು ದಿನನಿತ್ಯ ಜೀವನದ ಲೌಕಿಕ ಸಂಗತಿಗಳನ್ನು ದಾಖಲಿಸಲು ಆಸಕ್ತಿ ಹೊಂದಿರಲಿಲ್ಲ. ಇದರ ಪರಿಣಾಮ ಪುರಾತನ ಕಾಲಗಳಲ್ಲಿನ ಗ್ರಾಮ ಸಮುದಾಯಗಳ ಮೂಲಭೂತ ಲಕ್ಷಣಗಳನ್ನು ತಿಳಿದುಕೊಳ್ಳಲು ನಮಗೆ ಸಾಧ್ಯವಾಗಲಿಲ್ಲ. ಗ್ರಾಮಗಳ ನೆಲಸುವಿಕೆಯ ಮಾದರಿ, ವಯಸ್ಸು, ಲಿಂಗ, ಜಾತಿ ಮತ್ತು ವೃತ್ತಿಯನ್ನೊಳಗೊಂಡ ಜನಸಂಖ್ಯಾ ಸಂಯೋಜನೆ, ಭೂ ಒಡೆತನ ವಿಧಾನ, ಭೂ ಒಡೆಯ ಮತ್ತು ಸಾಗುವಳಿದಾರನ ನಡುವಿನ ಸಂಬಂಧ, ಗ್ರಾಮದಲ್ಲಿನ ಅಧಿಕಾರ ರಚನೆ, ಜಾತಿ ಪರಿವರ್ತ್ಯತೆ ಇವುಗಳು ಹೇಗಿದ್ದವು ಎಂಬುದು ನಮಗೆ ಗೊತ್ತಿಲ್ಲ ಎಂಬುದು ವಾಸ್ತವದ ಸಂಗತಿಯಾಗಿದೆ. ಗ್ರಾಮೀಣ ಸಮಾಜಶಾಸ್ತ್ರವು ಸ್ವಾಭಾವಿಕವಾಗಿಯೇ ಭಾರತದಲ್ಲಿ ಉಗಮಗೊಳ್ಳಬೇಕಾದುದು ಭಾರತದಲ್ಲೇ ಉಗಮಗೊಂಡಿಲ್ಲ ಎಂಬುದು ಆಶ್ಚರ್ಯವನ್ನು ತಂದಿದೆ.

ಅಮೆರಿಕದಲ್ಲಿ ಹೇಗೆ ಮತ್ತು ಏತಕ್ಕೆ ಗ್ರಾಮೀಣ ಸಮಾಜಶಾಸ್ತ್ರವು ಉಗಮಗೊಂಡಿತು ಮತ್ತು ಬೆಳವಣಿಗೆಯನ್ನು ಕಂಡಿತು?

ಅಮೆರಿಕ ಸಂಯುಕ್ತ ಸಂಸ್ಥಾನವು 19 ನೆ ಶತಮಾನದ ಕೊನೆಯ ವೇಳೆಯಲ್ಲಿ ಕೈಗಾರಿಕೀಕರಣ ಮತ್ತು ನಗರೀಕರಣಗಳ ಹಿಡಿತದಲ್ಲಿತ್ತು. ನಿಯಂತ್ರಣವಿಲ್ಲದ ಕೈಗಾರಿಕೆಗಳ ಬೆಳವಣಿಗೆಯಿಂದಾಗಿ ಮತ್ತು ನಗರಗಳ ಬೆಳವಣಿಗೆಯಿಂದಾಗಿ ಸಾಹಿತ್ಯ, ಜನಪದ ಕಲೆ, ಗೃಹ ಕೈಗಾರಿಕೆಗಳು, ಗ್ರಾಮೀಣ ವ್ಯಾಪಾರ ಮತ್ತು ವ್ಯವಸಾಯವು ವಿನಾಶ ಮತ್ತು ಅವನತಿಯ ಅಂಚಿನಲ್ಲಿ ಇದ್ದುದ್ದನ್ನು ಅಮೆರಿಕದಲ್ಲಿ ಕಾಣಬಹುದಾಗಿತ್ತು. ಇದರಿಂದಾಗಿ ಗುರುತರ ಪ್ರಮಾಣದಲ್ಲಿ ನಿರುದ್ಯೋಗ ಉಂಟಾಗಿ ಗ್ರಾಮದಲ್ಲಿನ ಜನರು ಪೂರ್ಣಪ್ರಮಾಣದಲ್ಲಿ ನಗರಗಳಿಗೆ ವಲಸೆ ಹೋಗುವಂತಹ ಪರಿಸ್ಥಿತಿ ನಿರ್ಮಾಣಗೊಂಡಿತ್ತು.

ಆದರ್ಶವಾಗಿ, ಗ್ರಾಮಗಳು ಮತ್ತು ನಗರಗಳು ಪರಸ್ಪರಾವಲಂಬನೆ ಹೊಂದಿರುವುದರಿಂದ ಗ್ರಾಮೀಣ ಮತ್ತು ನಗರ ಸಮುದಾಯಗಳ ನಡುವೆ ಪಾರಸ್ಪರಿಕ ಸಕಾರಾತ್ಮಕ ಸಂಬಂಧವು (ಅನ್ಯೋನ್ಯ) (symbiotic) ಇರುವಂತೆ ಮಾಡಿದೆ. ಗ್ರಾಮಗಳು ನಗರಗಳಿಗೆ ಮಾನವ ಸಂಪನ್ಮೂಲ, ಆಹಾರ ಪದಾರ್ಥ ಮತ್ತು ಕಚ್ಚಾ ಪದಾರ್ಥಗಳನ್ನು ಸರಬರಾಜು ಮಾಡಿದರೆ ಪ್ರತಿಫಲವಾಗಿ ಗ್ರಾಮಗಳಿಗೆ ನಗರಗಳು ಸಿದ್ಧಪಡಿಸಿದ ವಸ್ತುಗಳನ್ನು ಮತ್ತು ಹಲವಾರು ಸೇವೆಗಳನ್ನು ಒದಗಿಸುತ್ತವೆ. ಅಸಾಮಾನ್ಯ ಕಾಲದ ಅವಧಿಯಲ್ಲಿ ಗ್ರಾಮ ಮತ್ತು ನಗರಗಳ ನಡುವಿನ ಪಾರಸ್ಪರಿಕ ಸಕಾರಾತ್ಮಕ ಸಂಬಂಧವು (symbiotic) ತೊಂದರೆಗೆ ಒಳಪಡುತ್ತದೆ ಮತ್ತು ಪರಾವಲಂಬಿ ಸಂಬಂಧಗಳು ಉಂಟಾಗುತ್ತವೆ. ಗ್ರಾಮ ಜೀವನದಲ್ಲಿನ ಪ್ರಮುಖವಾದ ಅಂಶಗಳ ಮೇಲೆ ತನ್ನದೆ ಆದ ಪ್ರಭಾವ ಉಂಟುಮಾಡಿ ನಗರಗಳು ಬೆಳವಣಿಗೆಯನ್ನು ಕಂಡುಕೊಳ್ಳಲು ಪ್ರಾರಂಭಿಸುತ್ತವೆ.

ಅಮೇರಿಕವು ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಇಂತಹ ದುರದೃಷ್ಟ ಸನ್ನಿವೇಶವನ್ನು ಅನುಭವಿಸಿತ್ತು. ಕೈಗಾರಿಕೀಕರಣ ಮತ್ತು ನಗರೀಕರಣಗಳ ಬೆಳವಣಿಗೆಯ ಮೇಲೆ ಯಾವುದೇ ರೀತಿಯ ನಿಯಂತ್ರಣ ಇಲ್ಲದಿದ್ದುದರಿಂದಾಗಿ ಗ್ರಾಮ ಸಮುದಾಯಗಳು ವಿನಾಶ ಮತ್ತು ಅವನತಿಯ ಸ್ಥಿತಿಯನ್ನು ತಲುಪಬೇಕಾಯಿತು. ವ್ಯವಸಾಯ, ಗ್ರಾಮೀಣ ವ್ಯಾಪಾರ ಮತ್ತು ಗೃಹ ಕೈಗಾರಿಕೆಗಳು ಬಲವಾದ ಪೆಟ್ಟನ್ನು ಅನುಭವಿಸಿದ್ದುದರಿಂದಾಗಿ ನಿರುದ್ಯೋಗ ಮತ್ತು ಅರೆ ನಿರುದ್ಯೋಗ ಉಂಟಾಗುವ ಪರಿಸ್ಥಿತಿ ನಿರ್ಮಾಣವಾಯಿತು. ಇದರಿಂದಾಗಿ ಗ್ರಾಮೀಣ ಜನರು ಜೀವನಾಧಾರ ಮತ್ತು ಉದ್ಯೋಗಕ್ಕೋಸ್ಕರ ನಗರಗಳಿಗೆ ನಿರ್ಗಮಿಸುವಂತಾಯಿತು. ಜನಪದ ಹಾಡುಗಳು, ಜನಪದ ನೃತ್ಯ ಮತ್ತು ಜನಪದ ಕಲೆ ಮೊದಲಾದ ಸಾಂಸ್ಕೃತಿಕ ಶ್ರೀಮಂತಿಕೆಯಿಂದ ಮೈದುಂಬಿದ್ದ ಗ್ರಾಮಗಳು ಈಗ ಬರಡಾಗಿ ಕಾಣುತ್ತಿವೆ.

ಎಂದೂ ಕಂಡಿರದ ದುರ್ದೆಸೆಯಿಂದಾಗಿ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿನ ಗ್ರಾಮೀಣ ಸಮುದಾಯಗಳು ಪುರೋಹಿತಶಾಹಿಗಳ ಮತ್ತು ಪಾದ್ರಿಗಳ ಗಮನವನ್ನು ಸೆಳೆದವು. ಗ್ರಾಮೀಣ ಸಮುದಾಯಗಳು ಎದುರಿಸುತ್ತಿದ್ದ ಸಮಸ್ಯೆಗಳನ್ನು ಪರಿಹರಿಸಲು ಮಾರ್ಗೋಪಾಯಗಳನ್ನು ಕಂಡುಹಿಡಿಯಲು ಚಿಂತನೆ ನಡೆಯಿತು. ಹೆಚ್ಚು ಕಾಲ ಹರಣ ಮಾಡದೆ ಗ್ರಾಮೀಣ ಸಮುದಾಯಗಳನ್ನು ಪುನರ್ಜೀವಿತ ಮತ್ತು ಪುನಶ್ಚೇತನಗೊಳಿಸುವ ಚಳವಳಿ ಪ್ರಾರಂಭಿಸಿದರು. ಚಳವಳಿಯ ಪ್ರಾರಂಭದಲ್ಲಿ ಅವರು ಗ್ರಾಮೀಣ ಸಮುದಾಯಗಳನ್ನು ಪರಿಣಾಮಕಾರಿ ಕಾರ್ಯಕ್ರಮದ ಮೂಲಕ ಪುನಶ್ಚೇತನಗೊಳಿಸಲು ಮತ್ತು ಶಕ್ತಿಯುತವಾಗಿರುವಂತೆ ಮಾಡಲು ಗ್ರಾಮ ಸಮುದಾಯಗಳ ವೈಜ್ಞಾನಿಕ ಅಧ್ಯಯನವನ್ನು ಕೈಗೊಂಡರು. ಈ ಕಾರ್ಯಕ್ಕೆ ಸಮಾಜಶಾಸ್ತ್ರಜ್ಞರು ಮತ್ತು ಇತರೆ ಸಾಮಾಜಿಕ ವಿಜ್ಞಾನಿಗಳು ಕೈಜೋಡಿಸಿದರು. ಈ ರೀತಿಯಾಗಿ ಗ್ರಾಮೀಣ ಸಮಾಜಶಾಸ್ತ್ರದಂತಹ ಹೊಸ ಶಾಖೆ ಬೆಳವಣಿಗೆಯನ್ನು ಕಂಡುಕೊಳ್ಳಲು ದಾರಿಮಾಡಿಕೊಟ್ಟಿತು.

ಮಾನವ ಕಲ್ಯಾಣ ಮತ್ತು ಮಾನವ ಘನತೆಯ ಬಗೆಗಿನ ಆಳವಾದ ಕಳಕಳಿಯು ಮಾನವತಾವಾದದ ಸಾರಸತ್ವವಾಗಿದೆ. ಅಮೆರಿಕದ ಗ್ರಾಮೀಣ ಸಮುದಾಯಗಳ ಪುನಶ್ಚೇತನ ಕೆಲಸವನ್ನು ಮಾಡಿದ ಪುರೋಹಿತ ವರ್ಗದಿಂದಾಗಿ ಹೊಸ ಶಾಖೆಯ ಬೆಳವಣಿಗೆಗೆ ದಾರಿಮಾಡಿಕೊಟ್ಟಿತು. ಇದರಿಂದಾಗಿ ಗ್ರಾಮೀಣ ಸಮಾಜಶಾಸ್ತ್ರವನ್ನು ಮಾನವತಾವಾದದ ಶಿಶುವೆಂದು ಸಮಂಜಸವಾಗಿ ಕರೆಯಲಾಗುತ್ತದೆ.

## 1.2 ಸ್ವರೂಪ

ಗ್ರಾಮೀಣ ಸನ್ನಿವೇಶದಲ್ಲಿ ಸಾಮಾಜಿಕ ಸಂಬಂಧಗಳನ್ನು ಅಧ್ಯಯನ ಮಾಡುವುದರಲ್ಲಿ ಗ್ರಾಮೀಣ ಸಮಾಜಶಾಸ್ತ್ರವು ಆಸಕ್ತಿ ಹೊಂದಿದೆ. ಇಲ್ಲಿ ಈಗ ಒಂದು ಮುಖ್ಯ ಮೂಲಭೂತ ಪ್ರಶ್ನೆ ಉದ್ಭವವಾಗುತ್ತದೆ. ಗ್ರಾಮೀಣ ಸಮುದಾಯಗಳಲ್ಲಿನ ಸಾಮಾಜಿಕ ಸಂಬಂಧಗಳನ್ನು ಅಧ್ಯಯನ ಮಾಡಲು ಸಮಾಜಶಾಸ್ತ್ರದ ವಿಶೇಷ ಶಾಖೆಯ ಅವಶ್ಯಕತೆ ಇದೆಯೇ ? ಇದನ್ನು ಸಾಮಾನ್ಯ ಸಮಾಜಶಾಸ್ತ್ರವೇ ಮಾಡಲಾಗುವುದಿಲ್ಲವೆ? ವಿಶೇಷ ಶಾಖೆಯಾಗಿ ಅಧ್ಯಯನ ಮಾಡುವಂತಹ ವಿಶೇಷತೆ ಗ್ರಾಮೀಣ ಸಾಮಾಜಿಕ ಸಂಬಂಧಗಳಲ್ಲಿ

ಏನಿದೆ ? ನಗರ ಪ್ರದೇಶಗಳಲ್ಲಿ ಕಂಡುಬರುವಂಥವುಗಳ ರೀತಿಯಲ್ಲಿಯೇ ಇವುಗಳು ಇವೆಯಲ್ಲವೆ ? ವಿದ್ವಾಂಸರು ಈ ಬಗೆಯ ಪ್ರಶ್ನೆಗಳಿಗೆ ಉತ್ತರವನ್ನು ನೀಡುತ್ತಾರೆ. ಗ್ರಾಮ ಸಮುದಾಯಗಳ ಉಗಮದ ಸ್ವರೂಪ, ಸಾಮಾಜಿಕ ವಿಕಾಸದ ಕಾಲಾನುಗತಿಯಲ್ಲಿ ಅವುಗಳ ಸ್ಥಾನ, ಅವುಗಳು ಬೆಳವಣಿಗೆಯಾದ ರೀತಿ, ಅವುಗಳ ಗಾತ್ರ, ಅವುಗಳ ವೃತ್ತಿ ರಚನೆ, ನಿಸರ್ಗ ಮತ್ತು ಅದರ ವೈಪರೀತ್ಯದೊಡನೆ ಇರುವ ಒಡನಾಟ, ನಂಬಿಕೆಗಳು, ಪದ್ಧತಿಗಳು, ಸಂಪ್ರದಾಯಗಳು ವಾಸ್ತವವಾಗಿ ಭಿನ್ನವಾಗಿದ್ದು ನಗರ ಸಮುದಾಯಗಳಿಗೂ ಅನ್ವಯವಾಗುವಂತಹ ಸಿದ್ಧಾಂತಗಳಿಗೆ ಮತ್ತು ಸಾಮಾನ್ಯೀಕರಣಗಳಿಗೆ ಇವುಗಳು ಸಹಾಯ ಮಾಡುವುದಿಲ್ಲ. ಆದುದರಿಂದ ಕ್ರಮಬದ್ಧ ಮತ್ತು ವೈಜ್ಞಾನಿಕ ಅವಲೋಕನ, ವಿಶ್ಲೇಷಣೆ ಮತ್ತು ಗ್ರಾಮೀಣ ಘಟನಾವಳಿಯ ವಿಶ್ಲೇಷಣೆ ಇವುಗಳು ಗ್ರಾಮೀಣ ಸಮಾಜಶಾಸ್ತ್ರವು ಸಮಾಜಶಾಸ್ತ್ರದ ಸ್ವತಂತ್ರ ಶಾಖೆಯಾಗಿರುವುದಕ್ಕೆ ಸಮರ್ಥನೆ ನೀಡುತ್ತವೆ.

## 1.3 ವ್ಯಾಖ್ಯೆ

ಗ್ರಾಮೀಣ ಸಮಾಜಶಾಸ್ತ್ರವನ್ನು ಕುರಿತು ಹಲವಾರು ವ್ಯಾಖ್ಯೆಗಳನ್ನು ವಿದ್ವಾಂಸರುಗಳು ನೀಡಿದ್ದು ಅವು ಈ ಕೆಳಕಂಡಂತಿವೆ.

ಗ್ರಾಮೀಣ ಸಮಾಜಶಾಸ್ತ್ರವನ್ನು ಗ್ರಾಮೀಣ ಪರಿಸರದಲ್ಲಿನ ಜೀವನದ ಸಮಾಜಶಾಸ್ತ್ರ ( Sociology of life in Rural Environment ) ಎಂಬುದಾಗಿ ಡ್ವೈಟ್ ಸ್ಯಾಂಡರ್‌ಸನ್ (Dwight Sanderson) ತಮ್ಮ ಗ್ರಂಥ **ರೂರಲ್ ಕಮ್ಯೂನಿಟಿ ಆರ್ಗನೈಝೇಶನ್ (Rural Community Organisation)** ಎಂಬುದರಲ್ಲಿ ವ್ಯಾಖ್ಯಾನಿಸಿದ್ದಾರೆ. ಗ್ರಾಮೀಣ ಸನ್ನಿವೇಶದಲ್ಲಿನ ಮಾನವನ ಜೀವನ ಮತ್ತು ಅದರ ಪರಿವರ್ತ್ಯತೆಗಳು ಬೇರೆ ಸನ್ನಿವೇಶಗಳಲ್ಲಿನ ಜೀವನ ಮತ್ತು ಪರಿವರ್ತ್ಯತೆಗಳಿಗಿಂತ ಗಣನೀಯವಾಗಿ ಭಿನ್ನವಾಗಿರುತ್ತವೆ. ಆದುದರಿಂದ ಜೀವನದಲ್ಲಿನ ಏರು ಪೇರುಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಮತ್ತು ಗೌರವಿಸುವುದರ ಜೊತೆಗೆ ಏರು ಪೇರುಗಳಿಗೆ ಕಾರಣಗಳನ್ನು ಗುರುತಿಸುವುದು ಗ್ರಾಮೀಣ ಸಮಾಜಶಾಸ್ತ್ರದ ಪ್ರಮುಖ ಕರ್ತವ್ಯವಾಗಿದೆ.

ಸಾಮಾಜಿಕ ವ್ಯವಸ್ಥೆಯ ರಚನೆ, ಕಾರ್ಯಗಳು ಮತ್ತು ಬೆಳವಣಿಗೆ ಗತಿಯ ಧ್ಯೇಯಗಳನ್ನು ವೈಜ್ಞಾನಿಕವಾಗಿ, ಕ್ರಮಬದ್ಧವಾಗಿ ಮತ್ತು ವಿಶಾಲವಾಗಿ ಅಧ್ಯಯನ ಮಾಡುವುದು ಗ್ರಾಮೀಣ ಸಮಾಜಶಾಸ್ತ್ರದ ಪ್ರಮುಖ ಗುರಿಯಾಗಿರುತ್ತದೆ ಎಂದು ಹೆಸರಾಂತ ಭಾರತೀಯ ಗ್ರಾಮೀಣ ಸಮಾಜಶಾಸ್ತ್ರಜ್ಞರಾದ ಡಾ|| ಎ.ಆರ್.ದೇಸಾಯಿಯವರು ತಮ್ಮ ಗ್ರಂಥ **'ರೂರಲ್ ಸೋಶಿಯಾಲಜಿ ಇನ್ ಇಂಡಿಯ' (Rural Sociology in India)** ಎಂಬ ಗ್ರಂಥದಲ್ಲಿ ವ್ಯಾಖ್ಯಾನಿಸಿದ್ದಾರೆ. ಗ್ರಾಮೀಣ ಸಾಮಾಜಿಕ ವ್ಯವಸ್ಥೆಯ ವೈಜ್ಞಾನಿಕ ತಿಳಿವಳಿಕೆಯು ಗ್ರಾಮೀಣ ಸಮಾಜಶಾಸ್ತ್ರದ ಪ್ರಮುಖ ಮತ್ತು ಪ್ರಥಮ ಆದ್ಯತೆಯಾಗಿರಬೇಕೆಂಬ ನಂಬಿಕೆಯನ್ನು ಪಾಶ್ಚಾತ್ಯ ಗ್ರಾಮೀಣ ಸಮಾಜಶಾಸ್ತ್ರದ ಮೂಲ ಪುರುಷರು ಹೊಂದಿದ್ದರು. ಎ.ಆರ್. ದೇಸಾಯಿರವರು ಕೂಡ ಗ್ರಾಮೀಣ ಸಾಮಾಜಿಕ ವ್ಯವಸ್ಥೆಯ ವೈಜ್ಞಾನಿಕ ಮತ್ತು ಕ್ರಮಬದ್ಧವಾದ ಅಧ್ಯಯನದ ಅವಶ್ಯಕತೆಯನ್ನು ಒತ್ತಿಹೇಳಿದ್ದಾರೆ. ಈ ರೀತಿಯ ಅಧ್ಯಯನದಿಂದ ಬೆಳವಣಿಗೆಯ ನಿಯಮಗಳನ್ನು ಅನ್ವೇಷಿಸಲು ಸಾಧ್ಯವಾಗುತ್ತದೆ ಎಂದು ದೃಢವಾಗಿ ನಂಬಿದ್ದರು. ಅಭಿವೃದ್ಧಿ ಬಗೆಗೆ ನಿಯಮಗಳನ್ನು ಕಂಡುಕೊಂಡ ನಂತರ ಪ್ರಗತಿಯ ದಾರಿಯನ್ನು ಕಂಡುಕೊಳ್ಳುವುದು ಸಾಧ್ಯವಾಗುತ್ತದೆ.

ಗ್ರಾಮೀಣ ಸಾಮಾಜಿಕ ಸಂಬಂಧಗಳ ಅಧ್ಯಯನದಿಂದ ರೂಪಗೊಂಡಿರುವಂತಹ ಸಮಾಜಶಾಸ್ತ್ರೀಯ ಸಂಗತಿಗಳನ್ನು ಮತ್ತು ತತ್ವಗಳನ್ನು ಗ್ರಾಮೀಣ ಸಮಾಜಶಾಸ್ತ್ರ ಎಂಬುದಾಗಿ ಕರೆಯಬಹುದೆಂದು ಟಿ ಲಿನ್‌ಸ್ಮಿತ್‌ರವರು ತಮ್ಮ **ಸೋಶಿಯಾಲಜಿ ಆಫ್ ರೂರಲ್ ಲೈಫ್ (Sociology of Rural Life)** ಎಂಬ ಗ್ರಂಥದಲ್ಲಿ ವ್ಯಾಖ್ಯಾನಿಸಿದ್ದಾರೆ. ಗ್ರಾಮೀಣ ಪರಿಸರದಲ್ಲಿ ಅಸ್ತಿತ್ವದಲ್ಲಿರುವ ಸಾಮಾಜಿಕ ಸಂಬಂಧಗಳು ತಮ್ಮದೆ ಆದ ಗುಣಲಕ್ಷಣಗಳನ್ನು ಹೊಂದಿದ್ದು ಅವುಗಳು ಬೇರೆ ಪರಿಸರದಲ್ಲಿ ಕಂಡುಬರುವುದಕ್ಕಿಂತ ಭಿನ್ನವಾಗಿರುತ್ತವೆ. ಗ್ರಾಮೀಣ ಸಮುದಾಯಗಳಲ್ಲಿ ವಾಸಿಸುವ ಜನರ ಜೀವನ ಮತ್ತು ಜೀವನ ಸನ್ನಿವೇಶಗಳು ಮತ್ತು ನಗರ ಪರಿಸರ

ಮತ್ತು ಗ್ರಾಮೀಣೇತರ ಪ್ರದೇಶಗಳಲ್ಲಿ ಕಂಡುಬರುವ ಜನರ ಜೀವನ ಮತ್ತು ಜೀವನ ಸನ್ನಿವೇಶಗಳು ಒಂದೇ ರೀತಿ ಇರುವುದಿಲ್ಲ. ವ್ಯವಸಾಯವನ್ನೇ ಪ್ರಮುಖ ವೃತ್ತಿಯನ್ನಾಗಿರಿಸಿಕೊಂಡ ಜನರಲ್ಲಿನ ಸಾಮಾಜಿಕ ಸಂಬಂಧಗಳು ಮಾಧ್ಯಮಿಕ ಮತ್ತು ತೃತೀಯ ವೃತ್ತಿಯನ್ನು ಅವಲಂಬಿಸಿಕೊಂಡಿರುವಂತಹವರಿಗಿಂತ ಭಿನ್ನವಾಗಿರುತ್ತವೆ. ಗ್ರಾಮೀಣ ಸಮಾಜಶಾಸ್ತ್ರದ ತತ್ವಗಳ ಆಧಾರದ ಮೇಲೆ ಸಂಗತಿಗಳನ್ನು ಆನ್ವೇಷಿಸಲು ಗ್ರಾಮೀಣ ಪ್ರದೇಶದಲ್ಲಿನ ಸಾಮಾಜಿಕ ಸಂಬಂಧಗಳ ಮತ್ತು ಸಾಮಾಜಿಕ ಘಟನಾವಳಿಗಳ ಅಧ್ಯಯನದ ಅವಶ್ಯಕತೆ ಇದೆ.

ಗ್ರಾಮೀಣೇತರ ಅಥವಾ ನಗರ ಸಾಮಾಜಿಕ ಜನಸಂಖ್ಯೆಗಿಂತ ಭಿನ್ನವಾಗಿರುವ ಸಾಪೇಕ್ಷಿತವಾಗಿ ಸ್ಥಿರತೆಯನ್ನು ಮತ್ತು ಸಾರ್ವತ್ರಿಕ ಲಕ್ಷಣಗಳನ್ನು ಅಥವಾ ಗ್ರಾಮೀಣ ಸಾಮಾಜಿಕ ಪ್ರಪಂಚದ ಸಂಬಂಧಗಳನ್ನು ವರ್ಣಿಸುವ ಮೂಲಭೂತ ಕಾರ್ಯವನ್ನು ಗ್ರಾಮೀಣ ಸಮಾಜಶಾಸ್ತ್ರ ಮಾಡುತ್ತದೆ ಎಂಬುದಾಗಿ ಸಾರೋಕಿನ್ ಮತ್ತು ಜಿಮ್ಮರ್‌ಮ್ಯಾನ್‌ರವರು ತಮ್ಮ ಗ್ರಂಥ ಪ್ರಿನ್ಸಿಪಲ್ಸ್ ಆಫ್ ರೂರಲ್ ಅರ್ಬನ್ ಸೋಶಿಯಾಲಜಿ **(Principles of Rural-urban Sociology)** ಯಲ್ಲಿ ವ್ಯಾಖ್ಯಾನಿಸಿದ್ದಾರೆ. ಸಮಾಜಶಾಸ್ತ್ರವನ್ನು ಸ್ಥಳ ಮತ್ತು ಕಾಲಮಾನಗಳಲ್ಲಿ ಸ್ಥಿರವಾಗಿರುವ ಮತ್ತು ಪುನರಾವರ್ತನೆಗೊಳ್ಳುವಂತಹ ನಿಯಮಗಳನ್ನು ಪರಿಶೋಧಿಸುವ ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರಗಳಂತಹ ಸಮಾಜ ವಿಜ್ಞಾನಗಳೊಂದಿಗೆ ಆದ್ಯಂತವಾಗಿ ಹೋಲಿಸಿದ ನಂತರ ಎತ್ತಿ ಹಿಡಿದಿರುವ ಸತ್ಯ ಸಂಗತಿ ಎಂದರೆ ಸಾಮಾನ್ಯ ಸಮಾಜಶಾಸ್ತ್ರದಂತೆಯೇ ಗ್ರಾಮೀಣ ಸಮಾಜಶಾಸ್ತ್ರವು ನೈಜ ಸಂಕೀರ್ಣ ಗ್ರಾಮೀಣ ಸನ್ನಿವೇಶಗಳಲ್ಲಿ ಕಂಡುಬರುವ / ಅಸ್ತಿತ್ವದಲ್ಲಿರುವ ನೈಜ ಸಂಕೀರ್ಣ ಗ್ರಾಮೀಣ ವಿದ್ಯಮಾನವನ್ನು ಕುರಿತು ಅಧ್ಯಯನ ಮಾಡುತ್ತದೆ.

## 1.4 ವಸ್ತು ವಿಷಯ

ಗ್ರಾಮ ಸಮುದಾಯಗಳ ಉಗಮ ಮತ್ತು ಬೆಳವಣಿಗೆಯ ಪ್ರಾರಂಭದ ಜೊತೆಗೆ ಇನ್ನಿತರೆ ವಿಸ್ತಾರವಾದ ಭಿನ್ನ ವಿಷಯವನ್ನು ಗ್ರಾಮೀಣ ಸಮಾಜಶಾಸ್ತ್ರ ಅಧ್ಯಯನ ಮಾಡುತ್ತದೆ. ಬೇರೆ ರಾಷ್ಟ್ರಗಳಲ್ಲಿರುವಂತೆಯೇ ಭಾರತದಲ್ಲಿಯೂ ಗ್ರಾಮ ಸಮುದಾಯಗಳು ಅಸ್ತಿತ್ವಕ್ಕೆ ಬಂದುದು ಮನುಷ್ಯರು ಭೂ ಸಾಗುವಳಿ ಹಂತಕ್ಕೆ ತಲುಪಿದಾಗಲೆ. ಅಲೆಮಾರಿ ಜನ ಸಮೂಹವು ತಮಗಾಗಿ ಮತ್ತು ತಮ್ಮ ಸಾಕುಪ್ರಾಣಿಗಳ ಆಹಾರಕ್ಕಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅಲೆದು ನಂತರ ಒಂದು ಕಡೆ ನೆಲೆಸಿದ ಮೇಲೆ ಗ್ರಾಮ ಸಮುದಾಯಗಳು ಉಗಮಗೊಂಡವು. ಪ್ರಪಂಚದ ಇತರೆ ಭಾಗಗಳಲ್ಲಿರುವಂತೆಯೇ ಭಾರತದಲ್ಲಿನ ಮುಂಚಿನ ಗ್ರಾಮ ಸಮುದಾಯಗಳು ನದೀ ತೀರ, ಕೆರೆ, ಸರೋವರ ಹಾಗೂ ಇತರೆ ನೀರಿನ ಹರಿವು ಇರುವ ಕಡೆ ನೆಲೆಗೊಂಡವು. ಈ ಪ್ರದೇಶವನ್ನು ವಾಸಸ್ಥಾನಕ್ಕೆ ಆಯ್ಕೆ ಮಾಡಿಕೊಂಡುದರ ಕಾರಣ ಪ್ರಮುಖವಾಗಿ ನೀರಿನ ಲಭ್ಯತೆ ಹಾಗು ಫಲವತ್ತಾದ ಭೂಮಿ.

ನೀರಿನ ಸಂಪನ್ಮೂಲ ಮತ್ತು ಫಲವತ್ತಾದ ಭೂಮಿ ಇರುವ ಸಮೀಪದಲ್ಲಿ ನೆಲೆಗೊಂಡಿರುವ ಗ್ರಾಮಗಳ ವಾಸಸ್ಥಾನ ಮಾದರಿಗಳು ಒಂದೇ ತೆರನಾಗಿಲ್ಲ ಎಂಬುದು ಆಸಕ್ತಿಯುತ ಅಂಶವಾಗಿದೆ. ವಾಸಸ್ಥಾನದ ಮಾದರಿಗಳಲ್ಲಿ ಕೆಲವು ಗುಂಪು ಮಾದರಿಗಳಾಗಿದ್ದರೆ ಕೆಲವು ಚೆದುರಿದ ಮಾದರಿಗಳಾಗಿವೆ. ಇನ್ನೂ ಕೆಲವು ಚಕ್ರಾಕಾರದ ಹಾಗೂ ಸಾಲು ಮಾದರಿಗಳಲ್ಲಿವೆ. ವಾಸಸ್ಥಾನದ ಭಿನ್ನತೆಗೆ ಭೌಗೋಳಿಕ ನಿರ್ಬಂಧ ಹಾಗು ಸಾಂಸ್ಕೃತಿಕ ಅಂಶಗಳು ಕಾರಣಗಳಾಗಿವೆ.

ಸಾಮಾಜಿಕ ವಿಕಾಸದ ನಾಲ್ಕನೆ ಹಂತದ ಅಂದರೆ ಭೂ ಸಾಗುವಳಿ ಹಂತದ ಅವಧಿಯಲ್ಲಿ ಗ್ರಾಮ ಸಮುದಾಯಗಳು ಅಸ್ತಿತ್ವಕ್ಕೆ ಬಂದಿದ್ದರೆ. ನಾವು ಇಂದು ಅರ್ಥಮಾಡಿಕೊಂಡಿರುವಂತೆ ಮುಖ್ಯವಾಗಿ ಕೈಗಾರಿಕಾ ಕ್ರಾಂತಿಯ ನಂತರ ನಗರಗಳು ಉಗಮಗೊಂಡವು. ಗ್ರಾಮ ಸಮುದಾಯಗಳು ಮತ್ತು ನಗರ ಸಮುದಾಯಗಳ ಲಕ್ಷಣಗಳಲ್ಲಿ ಮಹತ್ವದ ವ್ಯತ್ಯಾಸಗಳಿವೆ. ಗ್ರಾಮ - ನಗರ ಇವುಗಳ ನಡುವಣ ವ್ಯತ್ಯಾಸಗಳನ್ನು ಅಧ್ಯಯನ ಮಾಡುವುದರಲ್ಲಿ ಗ್ರಾಮೀಣ ಸಮಾಜಶಾಸ್ತ್ರವು ಆಸಕ್ತಿ ಹೊಂದಿದೆ.

ಗ್ರಾಮ-ನಗರ ಸಮುದಾಯಗಳ ನಡುವಿನ ವ್ಯತ್ಯಾಸಗಳ ಬಗೆಗೆ ಆಳವಾದ ಅಧ್ಯಯನ ಮಾಡಿರುವ ಹೆಸರಾಂತ ಸಮಾಜಶಾಸ್ತ್ರಜ್ಞರು ಒಂದು ಎಚ್ಚರಿಕೆಯೊಂದಿಗೆ ತಮ್ಮ ವಿಶ್ಲೇಷಣೆಯನ್ನು ಪ್ರಾರಂಭಿಸಿದ್ದಾರೆ. ಇವರ ಪ್ರಕಾರ ಅಂತಿಮ ವಿಶ್ಲೇಷಣೆ ಎಂದರೆ ಗ್ರಾಮ ಮತ್ತು ನಗರ ಸಮುದಾಯಗಳು ಆದರ್ಶ ಮಾದರಿಗಳು. ಗ್ರಾಮ ಮತ್ತು ನಗರಗಳು ಮಾನಸಿಕ ರಚನೆಗಳಾಗಿದ್ದು ವಾಸ್ತವಿಕತೆಯಲ್ಲಿ ಇವುಗಳ ಅಸ್ತಿತ್ವವನ್ನು ಕಾಣಲಾಗುವುದಿಲ್ಲ. ಅಪ್ಪಟ ಹಾಗೂ ಮಿಶ್ರವಾಗದಿರುವ ಗ್ರಾಮೀಣ ಸಮುದಾಯವನ್ನಾಗಲಿ ಇಲ್ಲವೆ ಅಪ್ಪಟ ಮಿಶ್ರವಾಗಿರದ ನಗರ ಸಮುದಾಯವನ್ನಾಗಲಿ ವಾಸ್ತವಿಕ ಜೀವನ ಸನ್ನಿವೇಶದಲ್ಲಿ ನಾವು ಕಾಣಲಾಗುವುದಿಲ್ಲ. ನಗರ ಮತ್ತು ಗ್ರಾಮಗಳ ಲಕ್ಷಣಗಳು ಮಿಶ್ರಣವಾಗಿರುವುದನ್ನು ವಾಸ್ತವಿಕ ಸನ್ನಿವೇಶದಲ್ಲಿ ನಾವು ಕಾಣುತ್ತೇವೆ. ಆದುದರಿಂದ 'ಅ' ಎನ್ನುವ ವ್ಯಕ್ತಿಯನ್ನು ಗ್ರಾಮೀಣ ಸಮುದಾಯದವನು ಎಂದು ವರ್ಣಿಸುವಾಗ ಮತ್ತು 'ಇ' ಎನ್ನುವ ವ್ಯಕ್ತಿಯನ್ನು ನಗರ ಸಮುದಾಯದವನು ಎಂದು ಹೇಳುವಾಗ 'ಅ' ಎನ್ನುವ ವ್ಯಕ್ತಿ ನೂರಕ್ಕೆ ನೂರರಷ್ಟು ಗ್ರಾಮದವನಲ್ಲ ಹಾಗೂ 'ಇ' ಎನ್ನುವ ವ್ಯಕ್ತಿ ನೂರಕ್ಕೆ ನೂರರಷ್ಟು ನಗರದವನಲ್ಲ ಎಂಬುದು ವಾಸ್ತವದಲ್ಲಿನ ಅರ್ಥವಾಗಿದೆ. 'ಅ' ಎನ್ನುವ ವ್ಯಕ್ತಿ 'ಇ' ಎನ್ನುವ ವ್ಯಕ್ತಿಗಿಂತ ಹೆಚ್ಚು ಗ್ರಾಮದ ಲಕ್ಷಣಗಳನ್ನು ಮತ್ತು 'ಇ' ಎನ್ನುವ ವ್ಯಕ್ತಿ 'ಅ' ಎನ್ನುವ ವ್ಯಕ್ತಿಗಿಂತ ಹೆಚ್ಚು ನಗರ ಲಕ್ಷಣಗಳನ್ನು ಹೊಂದಿರುವುದನ್ನು ಅರ್ಥೈಸುತ್ತದೆ.

ಮೇಲೆ ಹೆಸರಿಸಿದ ಎಚ್ಚರಿಕೆಯನ್ನು ಗಮನದಲ್ಲಿರಿಸಿಕೊಂಡಿದ್ದಾಗ್ಯೂ ಶೈಕ್ಷಣಿಕ ಉದ್ದೇಶದಿಂದ ಗ್ರಾಮ-ನಗರ ವ್ಯತ್ಯಾಸಗಳನ್ನ ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಹಾಗಾಗಿ ಗ್ರಾಮ - ನಗರ ಸಮುದಾಯಗಳು ಮಹತ್ವದ ವ್ಯತ್ಯಾಸಗಳನ್ನ ಹೊಂದಿವೆ. ಗ್ರಾಮೀಣ ಮತ್ತು ನಗರ ಸಮುದಾಯಗಳನ್ನು ವ್ಯಾಖ್ಯಾನಿಸಲು ಇರುವ ಜನಸಾಂಖ್ಯಿಕ ಮಾನದಂಡ ಏನು ? ಕಾಲದಿಂದ ಕಾಲಕ್ಕೆ, ರಾಷ್ಟ್ರದಿಂದ ರಾಷ್ಟ್ರಕ್ಕೆ ಹಾಗೂ ಸ್ಥಳದಿಂದ ಸ್ಥಳಕ್ಕೆ ಮಾನದಂಡಗಳು ವ್ಯತ್ಯಾಸ ಹೊಂದುತ್ತವೆ. ಎಲ್ಲಾ ಕಡೆ ಮತ್ತು ಎಲ್ಲಾ ಕಾಲಗಳಲ್ಲೂ ಗ್ರಾಮದ ಗಾತ್ರ ನಗರದ ಗಾತ್ರಕ್ಕಿಂತ ಗಣನೀಯವಾಗಿ ಚಿಕ್ಕದಾಗಿರುತ್ತದೆ ಎಂಬುದನ್ನು ಹೇಳಬೇಕಾಗಿಲ್ಲ. ಇದು ಜನಸಂಖ್ಯಾ ಸಾಂದ್ರತೆಗೂ ಅನ್ವಯಿಸುತ್ತದೆ. ಗ್ರಾಮಗಳು ವಿರಳ ಜನಸಂಖ್ಯೆಯನ್ನು ಹೊಂದಿದ್ದರೆ ನಗರಗಳು ದಟ್ಟ ಜನಸಂಖ್ಯೆಯನ್ನು ಹೊಂದಿರುತ್ತವೆ ಎಂಬುದು ಗ್ರಾಮಗಳು ಮತ್ತು ನಗರಗಳನ್ನು ಹೋಲಿಕೆ ಮಾಡಿದಾಗ ಗೊತ್ತಾಗುತ್ತದೆ. ಕೈಗಾರಿಕೆಗಳು ಮತ್ತು ವ್ಯಾಪಾರೋದ್ಯಮಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಪ್ರಮುಖ ವೃತ್ತಿಯಾದ ವ್ಯವಸಾಯಕ್ಕೆ ಹೆಚ್ಚಿನ ಸ್ಥಳಾವಕಾಶದ ಅಗತ್ಯವಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ. ಗ್ರಾಮದಲ್ಲಿರುವ ಜನರಿಗೆ ಗ್ರಾಮದಲ್ಲಿ ಪ್ರಮುಖ ವೃತ್ತಿಯಾದ ವ್ಯವಸಾಯವು ಶೇಕಡ 70 ರಷ್ಟು ನೇರ ಉದ್ಯೋಗವನ್ನು ಇನ್ನುಳಿದ ಶೇಕಡ 30 ರಷ್ಟು ಪರೋಕ್ಷ ಉದ್ಯೋಗವನ್ನು ಒದಗಿಸುತ್ತದೆ. ಆದರೆ ನಗರಗಳಲ್ಲಿ ಮಾಧ್ಯಮಿಕ ಮತ್ತು ತೃತೀಯ ವೃತ್ತಿಗಳು ಉದ್ಯೋಗದ ಮೂಲಗಳಾಗಿರುತ್ತವೆ.

ನಗರದಲ್ಲಿರುವ ಜನರು ಯಾವುದೋ ಒಂದು ಕ್ಷೇತ್ರದಲ್ಲಿ ಪರಿಣಿತಿಯನ್ನು ಪಡೆದಿರುವ ರೀತಿಯಲ್ಲಿ ಗ್ರಾಮದಲ್ಲಿ ವ್ಯವಸಾಯವನ್ನೇ ಆಧಾರವನ್ನಾಗಿರಿಸಿಕೊಂಡ ವ್ಯಕ್ತಿಗಳು ಪರಿಣಿತಿ ಪಡೆದಿರದೆ ಗ್ರಾಮದ ಎಲ್ಲಾ ಚಟುವಟಿಕೆಗಳಲ್ಲೂ ಜ್ಞಾನ ಹೊಂದಿರುವುದನ್ನು ಕಾಣಬಹುದಾಗಿದೆ. ಒಬ್ಬ ಉತ್ತಮ ರೈತ ಸನ್ನಿವೇಶದ ಅಗತ್ಯತೆಯಿಂದಾಗಿ ಹಲವಾರು ವಿಚಾರಗಳಲ್ಲಿ ಕೌಶಲ್ಯಗಳನ್ನು ಹೊಂದಿರುತ್ತಾನೆ. ಉದಾಹರಣೆಗೆ ಗ್ರಾಮದಲ್ಲಿರುವ ವ್ಯಕ್ತಿಗೆ ಋತುಮಾನದ ಬಗೆಗೆ ಜ್ಞಾನವಿರುವುದರಿಂದಾಗಿ ಯಾವಾಗ ಭೂಮಿಯನ್ನು ಉಳಬೇಕು, ಯಾವಾಗ ಬೀಜಗಳನ್ನು ಬಿತ್ತನೆ ಮಾಡಬೇಕು, ಯಾವಾಗ ಗಿಡಗಳಿಗೆ ನೀರು ಹಾಕಬೇಕು ಅಥವಾ ಫಸಲಿಗೆ ನೀರು ಹಾಯಿಸಬೇಕು ಮತ್ತು ಯಾವಾಗ ಬೆಳೆಯನ್ನು ಕೊಯ್ಲು ಮಾಡಬೇಕು ಎಂಬುದರ ಬಗೆಗೆ ನಿರ್ಧಾರ ತೆಗೆದುಕೊಳ್ಳಲು ಶಕ್ತನಾಗಿರುತ್ತಾನೆ. ಗ್ರಾಮದಲ್ಲಿನ ರೈತ ಕೃಷಿ ಪಂಡಿತನ ಜ್ಞಾನವನ್ನು ಹೊಂದಿರಬೇಕಾಗುತ್ತದೆ. ಯಾವ ಭೂಮಿಯಲ್ಲಿ ಏನನ್ನು ಬಿತ್ತಬೇಕು ಹಾಗೂ ಭೂಮಿ ಯಾವ ಬೆಳೆಗೆ ಸೂಕ್ತವಾಗಿದೆ ಎನ್ನುವುದು ಗೊತ್ತಿರಬೇಕು. ಇದರ ಜೊತೆಗೆ ದನ ಕರುಗಳ ರಕ್ಷಣೆಗೆ ಪಶು ವೈದ್ಯನ ಜ್ಞಾನವನ್ನು ರೈತನು ಹೊಂದಿರಬೇಕಾಗುತ್ತದೆ. ಪ್ರಕೃತಿಯ ವೈಪರೀತ್ಯವನ್ನು ಅಳೆಯುವುದು ಮಾತ್ರವಲ್ಲದೆ ಮಾರುಕಟ್ಟೆಯ ಬಗೆಗೆ ಜ್ಞಾನವನ್ನು

ರೈತನು ಹೊಂದಿರಬೇಕಾಗುತ್ತದೆ. ಹೆಚ್ಚು ಆದಾಯವನ್ನು ಹೊಂದಲು ಯಾವಾಗ ಮತ್ತು ಎಲ್ಲಿ ತನ್ನ ಉತ್ಪನ್ನಗಳನ್ನು ಮಾರಾಟ ಮಾಡಬೇಕು ಎಂಬುದರ ಬಗೆಗೂ ಜ್ಞಾನವನ್ನು ಹೊಂದಿರಲೇಬೇಕಾಗುತ್ತದೆ.

ರೈತನಿಗೆ ಭಿನ್ನವಾಗಿ ಕಾಣುವ ನಗರದಲ್ಲಿನ ಜನರು ಪರಿಣತಿ ಮತ್ತು ವಿಶೇಷ ಪರಿಣತಿಗೆ (ತಜ್ಞತೆ) ಹೆಸರು ಪಡೆದಿರುತ್ತಾರೆ. ಪರಿಣತಿಯು (ತಜ್ಞತೆಯು) ನಗರ ಜೀವನದ ಎದ್ದು ಕಾಣುವ ಲಕ್ಷಣವಾಗಿದೆ. ವಿಶೇಷ ಉತ್ಪನ್ನವನ್ನು ತಯಾರಿಸುವಲ್ಲಿ ಪರಿಣತಿಯನ್ನು ಪಡೆದಿರುವ ದುಡಿಯುವ ಘಟಕಗಳಾದ ಗಿರಣಿಗಳು, ಕಾರ್ಖಾನೆಗಳು ಇತ್ಯಾದಿಗಳಿಂದ ನಗರ ಪ್ರದೇಶವು ತುಂಬಿರುತ್ತದೆ. ದುಡಿಯುವ ಘಟಕದಲ್ಲಿ ಕೆಲಸ ಮಾಡುವ ಕೆಲಸಗಾರರು ಪರಿಣತಿಯ ಕೌಶಲ್ಯಗಳಿಂದ ಗುರುತಿಸಲ್ಪಟ್ಟಿರುತ್ತಾರೆ. ವಾಸ್ತವವಾಗಿ ನಗರೀಕರಣ ಮತ್ತು ವಿಶೇಷ ಪರಿಣತಿಗೂ ನೇರ ಸಹ ಸಂಬಂಧವಿರುತ್ತದೆ. ನಗರೀಕರಣ ಹೆಚ್ಚಾದಂತೆ ಬೇಡಿಕೆ ಹೆಚ್ಚಾಗುತ್ತದೆ. ಅಂದರೆ ನಿರ್ದಿಷ್ಟಪಡಿಸಿದ ಕೌಶಲ್ಯಗಳಿಗೆ ಮತ್ತು ಉದ್ಯೋಗಗಳಿಗೆ ಪರಿಣತಿ ಮತ್ತು ಹೆಚ್ಚು ಪರಿಣತಿ ಪಡೆದಿರುವ ಜನರ ಲಭ್ಯತೆಗೆ ಬೇಡಿಕೆ ಉಂಟಾಗುತ್ತದೆ.

ನಗರ ಸಮುದಾಯಗಳಿಗಿಂತ ಭಿನ್ನವಾದ ಗ್ರಾಮ ಸಮುದಾಯದ ಲಕ್ಷಣವೆಂದರೆ ಏಕರೂಪತೆ. ಏಕರೂಪತೆ ಗ್ರಾಮ ಸಮುದಾಯಗಳ ಪ್ರಮುಖ ಲಕ್ಷಣವಾದರೆ ಬಹುರೂಪತೆ ನಗರ ಸಮುದಾಯಗಳ ಲಕ್ಷಣವಾಗಿದೆ. ಗ್ರಾಮ ಸಮುದಾಯದ ಏಕರೂಪತೆಯ ಲಕ್ಷಣಗಳನ್ನು ಹಲವಾರು ಆಯಾಮಗಳಲ್ಲಿ ಕಾಣಬಹುದು. ಗ್ರಾಮಗಳ ಸಮುದಾಯದಲ್ಲಿನ ನಿವಾಸಿಗಳು ಬಹುತೇಕ ಒಂದೇ ಜನಾಂಗೀಯ ಲಕ್ಷಣಗಳನ್ನು ಹೊಂದಿದ್ದು ಒಂದೇ ಭಾಷೆಯನ್ನು ಮಾತನಾಡುವ, ಒಂದೇ ಬಗೆಯ ದೇವರು ಮತ್ತು ದೇವತೆಗಳನ್ನು ಆರಾಧಿಸುವ, ಒಂದೇ ಬಗೆಯ ಪದ್ಧತಿಗಳನ್ನು, ಸಂಪ್ರದಾಯಗಳನ್ನು ಮತ್ತು ಲೋಕರೂಢಿಗಳನ್ನು ಮತ್ತು ನೈತಿಕ ನಿಯಮಗಳನ್ನು ಆಚರಿಸುವವರಾಗಿರುತ್ತಾರೆ. ಮೊದಲೆ ಹೇಳಿದಂತೆ ಗ್ರಾಮದಲ್ಲಿನ ಬಹುತೇಕ ಜನರಲ್ಲಿ ಒಂದೇ ಬಗೆಯ ವೃತ್ತಿಯ ಅನುಸರಣೆಯನ್ನು ಕಾಣಬಹುದಾಗಿದೆ.

ಬಹುರೂಪತೆಯನ್ನು ಹೊಂದಿರುವ ನಗರಗಳು ಮತ್ತು ದಟ್ಟಣೆಯ ನಗರ ಪ್ರದೇಶಗಳಿಗೆ ಗ್ರಾಮದ ಏಕರೂಪತೆ ಲಕ್ಷಣವನ್ನು ಹೇಳಲಾಗುವುದಿಲ್ಲ. ದೊಡ್ಡ ನಗರಗಳಲ್ಲಿ ಭಿನ್ನ ಜನಾಂಗದವರನ್ನು, ಭಿನ್ನ ಭಾಷೆಯಲ್ಲಿ ಮಾತನಾಡುವ ಜನರನ್ನು, ಭಿನ್ನ ಧರ್ಮದಲ್ಲಿ ನಂಬಿಕೆ ಹೊಂದಿ ಅದನ್ನು ಆರಾಧಿಸುವ ಜನರನ್ನು, ಭಿನ್ನ ಪದ್ಧತಿಗಳನ್ನು, ಸಂಪ್ರದಾಯಗಳನ್ನು, ಲೋಕರೂಢಿಗಳನ್ನು ಮತ್ತು ನೈತಿಕ ನಿಯಮಗಳನ್ನು ಹೊಂದಿರುವ ಜನರನ್ನು ನಾವು ಕಾಣಬಹುದಾಗಿದೆ. ಆದ್ದರಿಂದ ನಗರಗಳನ್ನು ಕಡಾಯಿಯಲ್ಲಿ ಇರುವ ಕುದಿಯುವ ನೀರಿಗೆ, ಗ್ರಾಮಗಳನ್ನು ಗಡಿಗೆಯಲ್ಲಿ ಇರುವ ಶಾಂತವಾಗಿರುವ ನೀರಿಗೂ ಹೋಲಿಸಬಹುದಾಗಿದೆ ಎಂದು ಸರಿಯಾಗಿಯೇ ಹೇಳಲಾಗಿದೆ.

ತಿಳಿಸಲಾಗಿರುವ ಈ ಸಾಮಾಜಿಕ ಸಾಮ್ಯತೆಗಳು ಮತ್ತು ಭಿನ್ನತೆಗಳು ಸಮೂಹ ಪರಿವರ್ತ್ಯತೆಗಳ ಮೇಲೆ ಪ್ರಭಾವವನ್ನು ಉಂಟುಮಾಡುತ್ತವೆ. ಗ್ರಾಮಗಳಿಗೆ ಹೋಲಿಸಿದಾಗ ನಗರಗಳು ಹೆಚ್ಚಿನ ಪರಿವರ್ತ್ಯತೆಯ ಅಸ್ತಿತ್ವಗಳಾಗಿವೆ. ನಗರಕ್ಕೆ ಬರುವ ಮತ್ತು ನಗರದಿಂದ ಹೊರ ಹೋಗುವ ಚಲನೆಯ ಪ್ರಕ್ರಿಯೆ ನಿರಂತರವಾಗಿರುತ್ತದೆ. ವಲಸೆಯ ಚಲನೆಗಳು ಗ್ರಾಮಗಳಲ್ಲಿ ಸಂಭವಿಸುವುದಿಲ್ಲ ಎಂದು ಹೇಳಲಿಕ್ಕಾಗದಿದ್ದರೂ ಅವುಗಳ ಸಂಭವಿಸುವಿಕೆ ಕಡಿಮೆ ಪ್ರಮಾಣದಲ್ಲಿರುವುದರಿಂದ ಯಾವುದೇ ಮಹತ್ವವನ್ನು ಹೊಂದಿಲ್ಲ.

ಗ್ರಾಮ ಮತ್ತು ನಗರ ಸಮುದಾಯಗಳ ನಡುವಣ ವರ್ಗ ರಚನೆಯಲ್ಲಿ ಮಹತ್ವದ ವ್ಯತ್ಯಾಸವಿದೆ. ಗ್ರಾಮ ಸ್ತರವಿನ್ಯಾಸವನ್ನು ವ್ಯವಸಾಯದ ಏಣಿ ಎಂದು ಕರೆಯಲಾಗಿದ್ದು, ಇದರಲ್ಲಿ ನಾಲ್ಕು ಮುಖ್ಯ ಮೆಟ್ಟಿಲುಗಳನ್ನು ಕಾಣಬಹುದು. ವರ್ಗ ಗೋಪುರವೆಂದು ಹೆಸರು ಪಡೆದಿರುವ ನಗರ ಸ್ತರವಿನ್ಯಾಸದಲ್ಲಿ ಗೋಪುರವು ತಳದಿಂದ ಮೊದಲುಗೊಂಡು ತುತ್ತ ತುದಿಯವರೆಗೆ ಹಲವಾರು ಸ್ತರಗಳನ್ನು ಹೊಂದಿದೆ. ಗ್ರಾಮ ಸಮುದಾಯಗಳಲ್ಲಿ ವರ್ಗಗಳ ನಡುವೆ ವೈಪರೀತ್ಯದಂತಹ ವ್ಯತ್ಯಾಸಗಳನ್ನು ಕಾಣಲಾಗುವುದಿಲ್ಲ. ಕಾರಣ ಬಡವರ ಮತ್ತು ಶ್ರೀಮಂತರ ನಡುವೆ ಅಂತಹ ವ್ಯತ್ಯಾಸಗಳನ್ನು ಕಾಣಲಾಗುವುದಿಲ್ಲ. ಇದನ್ನೇ ನಾವು ಶ್ರೀಮಂತರ ಮತ್ತು ಬಡವರ ನಡುವೆ ಹೆಚ್ಚಿನ ಪ್ರಮಾಣದಲ್ಲಿ ಕಂದಕವನ್ನು ಹೊಂದಿರುವ ನಗರ ಸಮುದಾಯಗಳಿಗೆ ಹೇಳಲಾಗುವುದಿಲ್ಲ. ಅತಿ ಶ್ರೀಮಂತರು ಮತ್ತು ಅತಿ ಬಡವರು ನಗರಗಳಲ್ಲಿ ಕಂಡುಬರುತ್ತಾರೆಯೇ ವಿನಾ ಗ್ರಾಮಗಳಲ್ಲಲ್ಲ.

ಗ್ರಾಮ ಸಮುದಾಯಗಳ ಜನಸಂಖ್ಯೆ ಮತ್ತು ಜನಸಂಖ್ಯಾ ಪರಿವರ್ತ್ಯತೆಗಳು ಗ್ರಾಮೀಣ ಸಮಾಜಶಾಸ್ತ್ರದ ಅಧ್ಯಯನದ ಪ್ರಮುಖ ಕ್ಷೇತ್ರಗಳಾಗಿವೆ. ಗ್ರಾಮೀಣ ಜನಸಂಖ್ಯೆಯ ಲಕ್ಷಣಗಳಾದ ಜನಸಂಖ್ಯಾ ಗಾತ್ರ ಮತ್ತು ಸಾಂದ್ರತೆ, ವಯಸ್ಸು, ಲಿಂಗ, ವೃತ್ತಿ ಮತ್ತು ಜಾತಿ ರಚನೆ, ಫಲಿತತೆ ಮತ್ತು ಮರ್ತ್ಯತೆ ದರಗಳು, ವಲಸೆಯ ಚಲನೆಗಳಾದ ಗ್ರಾಮ- ನಗರ, ನಗರ-ಗ್ರಾಮ ಮತ್ತು ಗ್ರಾಮ-ಗ್ರಾಮ ಇತ್ಯಾದಿಗಳನ್ನು ಅಧ್ಯಯನ ಮಾಡುತ್ತದೆ. ಗ್ರಾಮದಲ್ಲಿನ ಸಮೂಹ ಪರಿವರ್ತ್ಯತೆಗಳಲ್ಲಿ ಪ್ರಮುಖ ಸ್ಥಾನ ಹೊಂದಿರುವ ವಿವಾಹ, ಕುಟುಂಬ ಮತ್ತು ಕಳ್ಳುಬಳ್ಳಿ (ಬಂಧುತ್ವ) ಗಳಂತವುಗಳಾದ ಗ್ರಾಮೀಣ ಸಂಸ್ಥೆಗಳ ಬಗೆಗೆ ಗಮನವಿಡಬೇಕಾದುದು ಅತ್ಯಾವಶ್ಯಕ.

ಜಾತಿ ಮತ್ತು ಜಾತಿ ಪರಿವರ್ತ್ಯತೆಯು ಭಾರತೀಯ ಗ್ರಾಮೀಣ ಸಮಾಜಶಾಸ್ತ್ರ ಅಧ್ಯಯನದ ಮತ್ತೊಂದು ಕ್ಷೇತ್ರವಾಗಿದೆ. ಜಾತಿ ಮತ್ತು ಅದರ ಪರಿವರ್ತ್ಯತೆಗಳನ್ನು ಪೂರ್ಣ ಪ್ರಮಾಣದಲ್ಲಿ ಪರಿಶೀಲಿಸದೆ ಭಾರತದಲ್ಲಿನ ಗ್ರಾಮ ಸಮುದಾಯಗಳ ಅಧ್ಯಯನ ಪೂರ್ಣಗೊಳ್ಳುವುದಿಲ್ಲವೆಂಬ ಸಂಗತಿಯನ್ನು ಅಲ್ಲಗಳೆಯಲಾಗುವುದಿಲ್ಲ. ಜಾತಿ ಮತ್ತು ಅದರ ಪರಿವರ್ತ್ಯತೆಗಳಿಂದ ಅಗಾಧವಾಗಿ ಪ್ರಭಾವಕ್ಕೊಳಗಾಗದ ಭಾರತದ ಗ್ರಾಮಗಳಲ್ಲಿನ ಜೀವನದ ಯಾವುದೇ ಅಂಶವನ್ನು ಕಾಣಲು ಸಾಧ್ಯವಿಲ್ಲ. ಭಾರತೀಯ ಗ್ರಾಮೀಣ ಸಮಾಜಶಾಸ್ತ್ರದಲ್ಲಿ ಜಾತಿ ಅಧ್ಯಯನವು ಮುಖ್ಯ ಸ್ಥಾನವನ್ನು ಹೊಂದಿದೆ ಎಂದರೆ ಆಶ್ಚರ್ಯವಾಗಲಾರದು. ಜಾತಿಯ ಬಗೆಗಿನ ಅಧ್ಯಯನ ಮುಂದುವರಿದಂತೆ ಹಲವಾರು ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗುತ್ತದೆ. ಜಾತಿ ಎನ್ನುವುದು ಸ್ತರವಿನ್ಯಾಸ ವ್ಯವಸ್ಥೆಯೇ ಅಥವಾ ಶಿಲಾ (petrified) ವ್ಯವಸ್ಥೆಯೇ ? ಜಾತಿಯಲ್ಲಿ ಮೇಲ್ಮುಖ ಚಲನೆ, ಕೆಳ ಮುಖ ಚಲನೆ ಮತ್ತು ಸಮಾನಾಂತರ ಚಲನೆ ಸಾಧ್ಯವೆ? ಸಾಧ್ಯವಾದಲ್ಲಿ ಚಲನೆಗಳಿಗೆ ಕಾರಣವಾದ ಅಂಶಗಳು ಯಾವುವು ? ಚಲನೆಗಳಿಂದ ಉಂಟಾಗುವ ಪರಿಣಾಮಗಳಾವುವು ? ಈ ಬಗೆಯ ಪ್ರಶ್ನೆಗಳು ಸಂಸ್ಕೃತೀಕರಣ ಮತ್ತು ಪಾಶ್ಚಾತ್ಯೀಕರಣದಂತಹ ಪರಿಕಲ್ಪನೆಗಳ ರೂಪಗೊಳ್ಳುವಿಕೆಗೆ ಕಾರಣಗಳಾಗಿವೆ. ಗ್ರಾಮೀಣ ಸಮಾಜಶಾಸ್ತ್ರದಲ್ಲಿ ಜಾತಿಯಲ್ಲಿನ ಚಲನೆಗೆ ಸಂಬಂಧಿಸಿದ ಈ ವಿದ್ಯಮಾನಗಳನ್ನು ವಿವರಿಸುವ ಪ್ರಯತ್ನ ಮಾಡಲಾಗುತ್ತದೆ.

ಬದಲಾವಣೆ ಎನ್ನುವಂತಹುದು ಪ್ರಕೃತಿಯ ಬದಲಾಗದ ನಿಯಮ. ಆದುದರಿಂದ ಗ್ರಾಮ ಸಮುದಾಯಗಳು ಕೂಡ ಬದಲಾವಣೆಗೆ ಒಳಪಡುವಂತಹವು. ಭಾರತದ ಗ್ರಾಮ ಸಮುದಾಯಗಳಲ್ಲಿ ಬದಲಾಗದೆ ಇರುವ ಹಲವು ವಿಷಯಗಳನ್ನು ಅವಲೋಕಿಸಲಾಗಿದೆ. ಬದಲಾವಣೆಯ ಶಕ್ತಿಗಳಿಂದುಂಟಾದ ಆಕ್ರಮಣವನ್ನು ಗ್ರಾಮೀಣ ಸಮುದಾಯಗಳು ಎದುರಿಸಿ ನಿಂತದ್ದು ಮಾತ್ರವಲ್ಲದೆ ಬಹಳ ಕಾಲ ಬದಲಾಗದೆ ಹಾಗೆಯೇ ಉಳಿದುದನ್ನು ಕಾಣಬಹುದು. ಈ ಹೇಳಿಕೆಗಳೆಲ್ಲ ಕಲ್ಪನೆಯ ಕಟ್ಟುಕತೆಗಳಾಗಿವೆ.

ಭಾರತದ ಗ್ರಾಮ ಸಮುದಾಯಗಳು ಯಾವಾಗಲು ಬದಲಾಗುತ್ತಿರುವಂಥವೆ. ಬದಲಾವಣೆಯ ದರ ಮತ್ತು ಬದಲಾವಣೆಯ ವಿಸ್ತಾರ ನಿಧಾನವಾಗಿದ್ದು ತರಬೇತು ಪಡೆಯದ ಅವಲೋಕನಾಕಾರನಿಗೆ ಬಹಳಷ್ಟು ಮಟ್ಟಿಗೆ ಇದು ಗ್ರಹಿಸಲಾರದ ವಿಷಯವಾಗಿರುತ್ತದೆ. ಬಹಳ ಹಿಂದಿನಿಂದಲೂ ಭಾರತದ ಗ್ರಾಮ ಸಮುದಾಯಗಳಲ್ಲಿ ಹಲವಾರು ಆಂತರಿಕ ಮತ್ತು ಬಾಹ್ಯ ಅಂಶಗಳಿಂದಾಗಿ ಬದಲಾವಣೆ ಉಂಟಾಗಿರುವ ಸಂಗತಿ ಹಾಗೆಯೇ ಉಳಿದು ಕೊಂಡಿದೆ. ಬದಲಾವಣೆಯ ಅಂಶಗಳು ಇತಿಹಾಸದ ವಿವಿಧ ಕಾಲಗಳಲ್ಲಿ ಬದಲಾವಣೆಯ ದರ ಮತ್ತು ವಿಸ್ತಾರ ಮತ್ತು ಬದಲಾವಣೆಯಿಂದ ರಾಷ್ಟ್ರದ ಮೇಲೆ ಹಾಗೂ ವಿಶೇಷವಾಗಿ ಗ್ರಾಮಗಳ ಮೇಲೆ ಉಂಟಾಗಿರುವ ಪ್ರತಿಘಾತಗಳ ವಿಶ್ಲೇಷಣೆ ಇವುಗಳ ಅಧ್ಯಯನ ಗ್ರಾಮೀಣ ಸಮಾಜಶಾಸ್ತ್ರದ ಮಹತ್ವದ ವಿಷಯವಾಗಿದೆ.

ಬದಲಾವಣೆಯನ್ನು ಚರ್ಚಿಸುವಾಗ ಮತ್ತೊಂದು ಆಗಾಗ್ಗೆ ಪುನರಾವರ್ತಿತ ಪ್ರಶ್ನೆ ಉದ್ಭವವಾಗುತ್ತದೆ. ಕ್ರಾಂತಿಕಾರಿ ಬದಲಾವಣೆಯ ಸಾಮರ್ಥ್ಯ ಗ್ರಾಮ ಸಮುದಾಯಗಳಿಗಿದೆಯೇ ? ಕ್ರಾಂತಿಯನ್ನುಂಟುಮಾಡುವ ಸಾಮರ್ಥ್ಯ ರೈತರಿಗಿದೆಯೇ ? ಮಹಾನ್ ಚಿಂತಕರಾದ ಕಾರ್ಲ್‌ಮಾರ್ಕ್ಸ್, ಎಂಜಲ್ಸ್, ಮಾವೊ ತ್ಸೆ ತುಂಗ್, ಲೆನಿನ್, ಬ್ಯಾರಿಂಗ್‌ಟನ್ ಮೂರ್, ಇರ್ಫಾನ್ ಹಬೀಬ್ ಮತ್ತು ಇತರರು ಈ ವಿಚಾರಕ್ಕಾಗಿ ಕೂಲಂಕಷವಾಗಿ ತರ್ಕಿಸಿದ್ದಾರೆ ಮತ್ತು ಚರ್ಚಿಸಿದ್ದಾರೆ. ಆದುದರಿಂದ ಗ್ರಾಮ ಸಮುದಾಯದಲ್ಲಿನ ಕ್ರಾಂತಿಕಾರಕ ಬದಲಾವಣೆಯ ಕಾರಣ ಮತ್ತು ಬದಲಾವಣೆಗಳನ್ನು ರೈತ ಚಳವಳಿ ಅಥವಾ ರೈತ ದಂಗೆಯ ಅಡಿಯಲ್ಲಿ ಅಧ್ಯಯನ ಮಾಡಬೇಕು.

ಎಲ್ಲಾ ಕ್ರಾಂತಿಗಳು ವಿನಾಶ, ರಕ್ತಪಾತ ಮತ್ತು ಸಾವುಗಳನ್ನು ಒಳಗೊಂಡ ರಕ್ತಕ್ರಾಂತಿಗಳಾಗಬೇಕಾಗಿಲ್ಲ. ಪ್ರಾಥಮಿಕ ಹಾಗೂ ಮೂಲಭೂತ ಬದಲಾವಣೆಯಾದ ಕ್ರಾಂತಿಕಾರಕ ಬದಲಾವಣೆಯನ್ನು ರಕ್ತರಹಿತ ಕ್ರಾಂತಿಗಳಾದ ಹಸಿರುಕ್ರಾಂತಿ, ಮತ್ಸ್ಯಕ್ರಾಂತಿ ಮತ್ತು ಕ್ಷೀರಕ್ರಾಂತಿಗಳ ಮೂಲಕ ಸಾಧಿಸಬಹುದು. ವ್ಯಾವಸಾಯಿಕ ಆಧುನೀಕರಣಕ್ಕೆ ಸಂಬಂಧಿಸಿದ ಹಸಿರುಕ್ರಾಂತಿಯು ಅಧಿಕ ವ್ಯಾವಸಾಯಿಕ ಉತ್ಪನ್ನವನ್ನು ತಂದುಕೊಟ್ಟಿದೆ. ಇದು ಗ್ರಾಮೀಣ ಸಮಾಜಶಾಸ್ತ್ರದ ಅಧ್ಯಯನದ ವಿಷಯವಾಗಿದೆ. ಹಸಿರುಕ್ರಾಂತಿಯ ರೀತಿಯಲ್ಲಿಯೇ ಮತ್ಸ್ಯಕ್ರಾಂತಿ ಅಥವಾ ನೀಲಿಕ್ರಾಂತಿಯು ಗೊತ್ತಾದ ಪರಿಮಾಣಕ್ಕಿಂತ ಹೆಚ್ಚಿನ ಸಾಗರದ ಆಹಾರೋತ್ಪನ್ನವನ್ನು ಸೂಚಿಸುತ್ತದೆ. ಹಾಗೆಯೇ ಕ್ಷೀರಕ್ರಾಂತಿ ಅಥವಾ ಶ್ವೇತಕ್ರಾಂತಿಯು ಹಾಲು ಮತ್ತು ಹಾಲಿನ ಉತ್ಪನ್ನದಲ್ಲಿ ಉಂಟಾದ ಹೆಚ್ಚಳಕ್ಕೆ ಸಂಬಂಧಿಸಿರುತ್ತದೆ.

ಜಾಗತೀಕರಣವೆಂದರೇನು ? ಭಾರತದ ಗ್ರಾಮಗಳಿಗೆ ಜಾಗತೀಕರಣವು ಅಕ್ಷಯ ಪಾತ್ರೆಯೇ ಅಥವಾ ಸಮಸ್ಯೆಗಳ ಪೆಟ್ಟಿಗೆಯೇ ? ಪ್ರಪಂಚದಾದ್ಯಂತ ಆವರಿಸಿಕೊಂಡಿರುವ ಜಾಗತೀಕರಣದ ಬಿರುಗಾಳಿಯಿಂದ ಭವಿಷ್ಯ ಏನಾಗಬಹುದು.? ಭಾರತೀಯ ಗ್ರಾಮಗಳು ಜಾಗತೀಕರಣದ ಬಿರುಗಾಳಿಯನ್ನು ತಡೆಯಬಲ್ಲವೆ ? ಭಾರತದ ಲಕ್ಷೋಪಲಕ್ಷ ರೈತರು ಜಾಗತೀಕರಣದ ಪ್ರಯೋಜನವನ್ನು ಪಡೆದುಕೊಳ್ಳಬಲ್ಲರೆ ಮತ್ತು ಸಮೃದ್ಧಿಯ ಪ್ರತಿಫಲವನ್ನು ಪಡೆಯಬಲ್ಲರೆ ? ಯಾರಿಗೂ ಒಳಿತಾಗದ ಬಿರುಗಾಳಿಯಲ್ಲಿ ತರಗೆಲೆಯಾಗಿ ತೂರಿ ಹೋಗುವರೇ ? ಜಾಗತೀಕರಣವು ಗ್ರಾಮದ ಜನರನ್ನು ಮೋಸಗೊಳಿಸಿ ನಿತ್ರಾಣರನ್ನಾಗಿಸುವುದೇ ? ಈ ಬಗೆಯ ಹಲವಾರು ಪ್ರಶ್ನೆಗಳಿಗೆ ಗ್ರಾಮೀಣ ಸಮಾಜಶಾಸ್ತ್ರವು ಉತ್ತರವನ್ನು ನೀಡುವ ಪ್ರಯತ್ನವನ್ನು ಮಾಡುತ್ತದೆ.

## 1.5 ಸಮಂಜಸತೆ (ಸಂಗತತೆ)

ಭಾರತದಂತಹ ರಾಷ್ಟ್ರದಲ್ಲಿ ಇಂದಿಗೂ ಬಹುತೇಕ ಜನರು ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ. ಇಂತಹ ರಾಷ್ಟ್ರಗಳಲ್ಲಿ ಗ್ರಾಮೀಣ ಸಮಾಜಶಾಸ್ತ್ರ ಮತ್ತು ಗ್ರಾಮೀಣ ಅರ್ಥಶಾಸ್ತ್ರಗಳಂತಹ ಶಾಸ್ತ್ರಗಳ ಸಮಂಜಸತೆಯನ್ನು ಒತ್ತಿ ಹೇಳಬೇಕಾಗಿಲ್ಲ. ಗ್ರಾಮೀಣ ಸಮಾಜಶಾಸ್ತ್ರ ಮತ್ತು ಗ್ರಾಮೀಣ ಅರ್ಥಶಾಸ್ತ್ರಗಳಂತಹ ವಿಶೇಷ ಶಾಖೆಗಳು ಗ್ರಾಮೀಣ ಸಮಾಜಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಪ್ರಯತ್ನ ಮಾಡಿದರೆ ಭಾರತೀಯ ಗ್ರಾಮಗಳಲ್ಲಿನ ಹಲವಾರು ತೊಂದರೆಗಳನ್ನು ಮತ್ತು ಸಮಸ್ಯೆಗಳನ್ನು ಅಥವಾ ಹಾನಿಕರ ಪರಿಣಾಮಗಳನ್ನು ತಡೆಗಟ್ಟಬಹುದೆಂದು ಹಲವಾರು ವಿದ್ವಾಂಸರು ಅಭಿಪ್ರಾಯ ಹೊಂದಿದ್ದಾರೆ. ಗಾಂಧೀಜಿಯವರು ಈ ವಿಚಾರದ ಬಗೆಗೆ ಹೇಳಲು ಎಂದೂ ಹಿಂಜರಿಯುತ್ತಿರಲಿಲ್ಲ. ಭಾರತ ಹಳ್ಳಿಗಳ ದೇಶವಾಗಿದ್ದು, ಭಾರತವು ಬೆಳವಣಿಗೆ ಮತ್ತು ಪ್ರಗತಿ ಕಾಣಬೇಕಾದರೆ ಪುಟ್ಟಗ್ರಾಮಗಳು ಮೊದಲು ಬೆಳವಣಿಗೆ ಮತ್ತು ಪ್ರಗತಿಯನ್ನು ಕಾಣಬೇಕೆಂದು ಹೇಳುತ್ತಿದ್ದರು. ಆದುದರಿಂದ ಗಾಂಧೀಜಿಯವರು ತಮ್ಮ ಗ್ರಾಮೀಣ ಪುನರ್‌ನಿರ್ಮಾಣದ ಸರ್ವೋದಯ ಕಾರ್ಯಕ್ರಮದಲ್ಲಿ ಗ್ರಾಮಗಳಿಗೆ ಪ್ರಮುಖ ಸ್ಥಾನವನ್ನು ನೀಡಿದ್ದಾರೆ. ಭಾರತದ ಯೋಜನಕಾರರ ಮನಸ್ಸಿಗೆ ಮಹಾತ್ಮಗಾಂಧೀಜಿಯವರ ದೂರದೃಷ್ಟಿ ಸ್ಫೂರ್ತಿದಾಯಕವಾಗಿದೆ ಎಂದರೆ ತಪ್ಪಾಗಲಾರದು. ಪ್ರಮುಖ ಯೋಜನೆಗಳನ್ನು ಜಾರಿಗೊಳಿಸುವಾಗ ಗ್ರಾಮ ಸಮುದಾಯಗಳನ್ನು ಅಲಕ್ಷ್ಯ ಮಾಡಿರುವುದು ನಮ್ಮ ಯೋಜನೆಗಳ ಅವಿವೇಕವನ್ನು ತೋರಿಸುತ್ತದೆ ಎಂಬುದನ್ನು ಕೊನೆಗೂ ಮನಗಾಣಲಾಗಿದೆ. ಆದುದರಿಂದ ಎಲ್ಲಾ ಯೋಜನೆಗಳಲ್ಲೂ ಗ್ರಾಮಗಳು ಮತ್ತು ಅವುಗಳ ಪುನರ್‌ನಿರ್ಮಾಣಕ್ಕೆ ಪ್ರಮುಖ ಸ್ಥಾನ ನೀಡಲು ಗಂಭೀರ ಪ್ರಯತ್ನ ಮಾಡಲಾಗಿದೆ. ವಿಶೇಷವಾಗಿ ಗ್ರಾಮ ಸಮುದಾಯಗಳ ಅಧ್ಯಯನ ಮಾಡುತ್ತಿರುವ ಗ್ರಾಮೀಣ ಅರ್ಥಶಾಸ್ತ್ರ ಮತ್ತು ಗ್ರಾಮೀಣ ಸಮಾಜಶಾಸ್ತ್ರದಂತಹ ಸಾಮಾಜಿಕ ವಿಜ್ಞಾನಗಳು ಗ್ರಾಮಗಳ ಬಗೆಗೆ ವೈಜ್ಞಾನಿಕ ಮಾಹಿತಿಯನ್ನು ಒದಗಿಸುವುದರಿಂದ ಪ್ರಾಮುಖ್ಯವನ್ನು ಪಡೆದಿವೆ.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ.

1. ಮಾನವತಾ ವಾದದ ಶಿಶು ಎಂದು ಗ್ರಾಮೀಣ ಸಮಾಜಶಾಸ್ತ್ರವನ್ನು ಏಕೆ ಕರೆಯಲಾಗುತ್ತದೆ ?

'ಸರಿ' ಅಥವಾ 'ತಪ್ಪು' ಗುರುತಿಸಿ.

2. ಅ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಗ್ರಾಮೀಣ ಸಮಾಜಶಾಸ್ತ್ರವು ಉಗಮಗೊಂಡಿತು.

   ಆ. ಭಾರತೀಯ ವಿದ್ವಾಂಸರ ಮಹಾನ್ ಕೃತಿಗಳು ಪುರಾತನ ಭಾರತದಲ್ಲಿನ ಗ್ರಾಮ ಸಮುದಾಯಗಳ ಬಗೆಗಿನ ಮಾಹಿತಿಯ ಉಗ್ರಾಣಗಳ ಆಗರಗಳಾಗಿವೆ.

   ಇ. ಶ್ಯಾಮ ಶಾಸ್ತ್ರಿಯವರ ಪ್ರಕಾರ "ಭಾರತ ಪುರಾತನವಾದುದಾದರೂ ಸಂಕ್ಷಿಪ್ತ ಇತಿಹಾಸವನ್ನು ಹೊಂದಿದೆ"

   ಈ. ಭಾರತವು ಹಳ್ಳಿಗಳ ನಾಡು ಎಂಬುದಾಗಿ ಗಾಂಧೀಜಿಯವರು ಅಭಿಪ್ರಾಯಪಟ್ಟಿದ್ದಾರೆ.

ಸರಿ ಉತ್ತರವನ್ನು ಆಯ್ಕೆ ಮಾಡಿ.

3. ಅ. ಆಫ್ರಿಕಾ, ಚೀನಾ ಮತ್ತು ಭಾರತದಂತಹ ರಾಷ್ಟ್ರಗಳಲ್ಲಿ ಗ್ರಾಮೀಣ ಸಮಾಜಶಾಸ್ತ್ರವು ಉಗಮಗೊಂಡಿದೆ.

   ಆ. ಗ್ರಾಮೀಣ ಸಮಾಜಶಾಸ್ತ್ರದ ಉಗಮಕ್ಕೆ ಪುರೋಹಿತರು ಮತ್ತು ಕ್ರೈಸ್ತ ಪಾದ್ರಿಗಳು ದಾರಿ ಮಾಡಿಕೊಟ್ಟರು.

   ಇ. ಹಳೆಯ ವಿಜ್ಞಾನಗಳಲ್ಲಿ ಗ್ರಾಮೀಣ ಸಮಾಜಶಾಸ್ತ್ರವು ಒಂದಾಗಿದೆ.

   ಈ. ಫ್ರಾನ್ಸ್‌ನ ವಾಸ್ತವತಾವಾದಿಗಳು ಗ್ರಾಮೀಣ ಸಮಾಜಶಾಸ್ತ್ರದ ಉಗಮಕ್ಕೆ ಕಾರಣರಾದರು.

## 1.6 ಸಾರಾಂಶ

ಜ್ಞಾನೋದಯದ ಶಿಶು ಎಂದು ಸಮಾಜಶಾಸ್ತ್ರವು ಹೆಸರು ಪಡೆದಿದ್ದರೆ ಮಾನವತಾವಾದದ ಶಿಶು ಎಂದು ಗ್ರಾಮೀಣ ಸಮಾಜಶಾಸ್ತ್ರವು ಹೆಸರು ಪಡೆದಿದೆ. ಗ್ರಾಮ ಪ್ರಧಾನ ರಾಷ್ಟ್ರವಾದ ಭಾರತದಂತಹ ರಾಷ್ಟ್ರದಲ್ಲಿ ಗ್ರಾಮೀಣ ಸಮಾಜಶಾಸ್ತ್ರವು ಬೆಳವಣಿಗೆಯನ್ನು ಕಾಣದೆ ಹೆಚ್ಚು ಕೈಗಾರಿಕೀಕರಣ ಮತ್ತು ನಗರೀಕರಣಗೊಂಡಿರುವ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಬೆಳವಣಿಗೆಯನ್ನು ಕಂಡಿರುವುದು ವಾಸ್ತವವಾಗಿದ್ದರೂ ಆಶ್ಚರ್ಯವನ್ನುಂಟು ಮಾಡಿದೆ. ಸಾಮಾಜಿಕ ಸಂಬಂಧಗಳನ್ನು, ಸಂಸ್ಥೆಗಳನ್ನು ಮತ್ತು ಗ್ರಾಮ ಸಮುದಾಯಗಳ ಸಂಘಟನೆಗಳನ್ನು ಪ್ರಭಾವಿಸುವ ಗ್ರಾಮೀಣ ಪರಿಸರವನ್ನು ವಿಶ್ಲೇಷಿಸುವ ಮತ್ತು ವ್ಯಾಖ್ಯಾನಿಸುವ ವಿಶೇಷ ವಿಜ್ಞಾನದ ಅವಶ್ಯಕತೆ ಇದೆ. ಗ್ರಾಮ ಸಮುದಾಯಗಳಲ್ಲಿನ ಕುಟುಂಬ, ಬಂಧುತ್ವ, ಜಾತಿ, ಸಮುದಾಯ, ಆರ್ಥಿಕ ಸಂಘಟನೆ, ರಾಜಕೀಯ ಸಂಘಟನೆ, ಧಾರ್ಮಿಕ ಸಂಘಟನೆ ಈ ಸಂಸ್ಥೆಗಳು ಮತ್ತು ಸಂಘಟನೆಗಳು ಸಾಮಾಜಿಕ ವ್ಯವಸ್ಥೆಯನ್ನು ಹೇಗೆ ಕಾಪಾಡುತ್ತವೆ ಎನ್ನುವ ಹಲವಾರು ವಿಷಯಗಳ ಅಧ್ಯಯನವನ್ನು ನಾವು ಗ್ರಾಮೀಣ ಸಮಾಜಶಾಸ್ತ್ರದಲ್ಲಿ ಮಾಡುತ್ತೇವೆ. ಜೀವ ರಚನೆಗಳಂತಿರುವ ಗ್ರಾಮ ಸಮುದಾಯಗಳು ಸ್ಥಿರತೆಯನ್ನು ಹೊಂದಿರದೆ ನಿರಂತರವಾಗಿ ಬದಲಾಗುತ್ತಿರುತ್ತವೆ. ಗ್ರಾಮೀಣ ಬದಲಾವಣೆಯ ಹಲವಾರು ಅಂಶಗಳು, ಬದಲಾವಣೆಯ ಕಾರಣಗಳು ಮತ್ತು ಬದಲಾವಣೆಯಿಂದ ಉಂಟಾಗುವ ಪರಿಣಾಮಗಳನ್ನು ಅಧ್ಯಯನ ಮಾಡುವುದು ಗ್ರಾಮೀಣ ಸಮಾಜಶಾಸ್ತ್ರದ ಮಹತ್ವದ ಪ್ರಮುಖ ವಿಷಯವಾಗಿದೆ. ಈ ಸನ್ನಿವೇಶದಲ್ಲಿ ಎರಡು ಬಗೆಯ ಬದಲಾವಣೆ ಗಮನಿಸುವಂತಹುದು. ವಿಕಾಸವಾದದ ಸ್ವರೂಪದ ಬದಲಾವಣೆಯು ನಿಧಾನ ಮತ್ತು ಕ್ರಮೇಣವಾಗಿ ಸಂಭವಿಸುವುದರಿಂದಾಗಿ ಬದಲಾವಣೆ ಗಮನಕ್ಕೆ ಬಾರದಾಗಿರುತ್ತದೆ. ಸ್ವಾಭಾವಿಕ ಅಂಶಗಳಿಗಿಂತಲೂ ಮಿಗಿಲಾಗಿ ಬದಲಾವಣೆ ತರುವಂತಹ ಮನುಷ್ಯ ನಿರ್ಮಿತ ಅಂಶಗಳು

ಮತ್ತೊಂದು ಬಗೆಯ ಬದಲಾವಣೆಯೇ ಆಗಿದೆ. ಈ ಬಗೆಯ ಬದಲಾವಣೆಗಳು ಕ್ರಾಂತಿಕಾರಕ ಸ್ವರೂಪ ಉಳ್ಳವಾಗಿದ್ದು ಗ್ರಾಮದಲ್ಲಿನ ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ಸಂಘಟನೆಗಳಲ್ಲಿ ಶೀಘ್ರ ಮತ್ತು ಮೂಲಭೂತ ಮಾರ್ಪಾಡುಗಳನ್ನು ತರುತ್ತವೆ. ರೈತ ದಂಗೆಗಳು, ಹಸಿರುಕ್ರಾಂತಿ, ಕ್ಷೀರಕ್ರಾಂತಿ ಮತ್ತು ನೀಲಿಕ್ರಾಂತಿ ಇತ್ಯಾದಿಗಳು ಇದಕ್ಕೆ ನಿದರ್ಶನಗಳಾಗಿವೆ. ವಿಜ್ಞಾನವಾಗಿ ಗ್ರಾಮೀಣ ಸಮಾಜಶಾಸ್ತ್ರ ತನ್ನ ಪಾತ್ರವನ್ನು ಗ್ರಾಮ ಸಮುದಾಯಗಳ ವೈಜ್ಞಾನಿಕ ಅಧ್ಯಯನಕ್ಕೆ ಸೀಮಿತಗೊಳಿಸಿಕೊಂಡಿರುವುದಿಲ್ಲ. ಈ ವಿಜ್ಞಾನದ ಮೂಲ ಪುರುಷರು ಶೈಕ್ಷಣಿಕ ಕಾರಣಗಳಿಗಾಗಿ ಗ್ರಾಮೀಣ ಸಮುದಾಯಗಳನ್ನು ವೈಜ್ಞಾನಿಕ ಅಧ್ಯಯನ ಮಾಡುವುದರಲ್ಲಿ ಆಸಕ್ತಿ ಹೊಂದಿರುವುದು ಮಾತ್ರವಲ್ಲದೆ ಮಾನವರಲ್ಲಿನ ಕಲ್ಯಾಣಕ್ಕೋಸ್ಕರ ಮತ್ತು ಘನತೆಗೋಸ್ಕರ ಮಾನವತೆಯ ಉತ್ಸಾಹವನ್ನು ಹುರಿದುಂಬಿಸುವ ಉದ್ದೇಶವನ್ನು ಕೂಡ ಹೊಂದಿದ್ದರು. ಗ್ರಾಮಗಳಲ್ಲಿ ಮುಂಬರುವ ಅಂಶಗಳನ್ನು ಮನಗಂಡು ಗ್ರಾಮೀಣ ಜನರು ಸವಾಲುಗಳನ್ನು ಹೇಗೆ ಎದುರಿಸಬೇಕು ಎಂಬುದರ ಬಗೆಗೆ ಅರಿವನ್ನು ಉಂಟುಮಾಡುವುದು ಗ್ರಾಮೀಣ ಸಮಾಜಶಾಸ್ತ್ರಜ್ಞರ ಕರ್ತವ್ಯವಾಗಿದೆ. ಈ ಅಂಶವನ್ನು ವಿವರಿಸಲು ನಾವು ಜಾಗತೀಕರಣದ ನಿದರ್ಶನವನ್ನು ಇಲ್ಲಿ ಉಲ್ಲೇಖಿಸಬಹುದು. ನಾವು ಇಷ್ಟಪಡಲಿ ಪಡದಿರಲಿ ಪ್ರಪಂಚವನ್ನೇ ಆವರಿಸಿರುವ ಜಾಗತೀಕರಣದ ಅಲೆಗಳು ಭಾರತವನ್ನೂ ಆವರಿಸಿರುವುದನ್ನು ಕಾಣಬಹುದು. ಆದುದರಿಂದ ಜಾಗತೀಕರಣದಲ್ಲಿರುವ ತೊಂದರೆಗಳು ಮತ್ತು ಅವುಗಳಿಂದ ಉಂಟಾಗುವ ಸವಾಲುಗಳನ್ನು ಎದುರಿಸುವ ಬಗೆಗೆ ಜನರಲ್ಲಿ ತಿಳಿವಳಿಕೆ ಉಂಟುಮಾಡುವುದು ಗ್ರಾಮೀಣ ಸಮಾಜಶಾಸ್ತ್ರಜ್ಞರ ಪ್ರಮುಖ ಕರ್ತವ್ಯವಾಗಿದೆ.

## 1.7 ಪ್ರಮುಖ ಪದಗಳು

**ಜ್ಞಾನೋದಯ (ಜಾಗೃತಿ) (Enlightenment) :** ವಿಜ್ಞಾನದಲ್ಲಿ ಪ್ರಾಯೋಗಿಕ ವಿಧಾನಕ್ಕೆ ಒತ್ತು ನೀಡುವ ಬೌದ್ಧಿಕ ಜಾಗೃತಿ ಮತ್ತು ಚಟುವಟಿಕೆಯ ಗುಣಲಕ್ಷಣ. (ಫ್ರಾನ್ಸ್‌ನಲ್ಲಿ ಹದಿನೆಂಟನೆ ಶತಮಾನದಲ್ಲಿ ಜರುಗಿರುವುದು)

**ಮಾನವತಾವಾದ (Humanitarian Philosophy) :** 14 ಮತ್ತು 15 ನೆ ಶತಮಾನಗಳಲ್ಲಿ ಪಶ್ಚಿಮ ಯುರೋಪಿನಲ್ಲಿ ಮೈದಳೆದ ಈ ತತ್ವವು ಮಾನವತಾವಾದ ಎಂದು ಪರಿಚಿತವಾಗಿದೆ. ಈ ತತ್ವವು ಅಲೌಕಿಕ ವಿಚಾರಗಳಿಗಿಂತ ಹೆಚ್ಚಾಗಿ ಮಾನವನ ಘನತೆ ಗೌರವಗಳಿಗೆ ಒತ್ತು ನೀಡುತ್ತದೆ ಮತ್ತು ಜೀವನದ ಮಾನವೀಯ ಹಾಗೂ ಪ್ರಾಪಂಚಿಕ ಮತ್ತು ಮತಾತೀತ ವಿಚಾರಗಳ ಮೇಲೆ ಬೆಳಕು ಚೆಲ್ಲುತ್ತದೆ.

**ಸಕಾರಾತ್ಮಕ ಪಾರಸ್ಪರಿಕ ಜೀವನ (Symbiosis) :** ಸಹಜೀವನ ಅಥವಾ ಕೂಡು ಜೀವನ. ಅಂದರೆ ಬೇರೆ ಬೇರೆ ಗುಂಪು ಅಥವಾ ವರ್ಗಕ್ಕೆ ಸೇರಿದ ಎರಡು ಜೀವಿಗಳು ಪರಸ್ಪರ ಪ್ರಯೋಜನ ಪಡೆಯುವ ಸಲುವಾಗಿ ಪರಸ್ಪರಾವಲಂಬಿಗಳಾಗಿರುವುದು.

**ಪರಾವಲಂಬಿಕೆ (Parasitic) :** ಒಂದು ಸಸ್ಯ ಅಥವಾ ಪ್ರಾಣಿಯು ಇನ್ನೊಂದು ಜೀವಿ ಜೊತೆ ಆಶ್ರಯ ಪಡೆದಿರುವುದು.

**ಸಾಮೂಹಿಕ ವಲಸೆ (Exodus) :** ಯಾವುದೇ ಒಂದು ಪ್ರದೇಶದಲ್ಲಿ ವಾಸಿಸುವ ಜನರು ಸಾಮೂಹಿಕವಾಗಿ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುವುದು.

**ಶಿಲಾ ವ್ಯವಸ್ಥೆ (Petrified System) :** ಈ ಪರಿಭಾವನೆಯು ಇಂಗ್ಲಿಷ್ ರೂಪಾಂತರದ ಕಲ್ಲು ಅಥವಾ ಬಂಡೆ ಎಂಬ ಅರ್ಥವನ್ನು ಹೊಂದಿರುವ ಪೀಟರ್ ಎಂಬ ಪದದಿಂದ ನಿಷ್ಪನ್ನವಾದುದಾಗಿದೆ. ಅಂದರೆ ಬಂಡೆಯಂತೆ ನಿಶ್ಚೇಷ್ಟಿತವಾಗಿರುವ ಶಿಲಾ ವ್ಯವಸ್ಥೆಯನ್ನು ಸೂಚಿಸುತ್ತದೆ.

## 1.8 ನಿಮ್ಮ ಪ್ರಗತಿ ಪರೀಕ್ಷೆಗೆ ಉತ್ತರಗಳು

**1.** 1.1

**2.** ಅ. ಸರಿ

ಆ. ತಪ್ಪು

ಇ. ಸರಿ

ಈ. ಸರಿ

**3.** ಅ. ಗ್ರಾಮೀಣ ಸಮಾಜಶಾಸ್ತ್ರದ ಉಗಮಕ್ಕೆ ಪುರೋಹಿತರು ಮತ್ತು ಕ್ರೈಸ್ತ ಪಾದ್ರಿಗಳು ದಾರಿ ಮಾಡಿಕೊಟ್ಟರು.

## 1.9 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

1. ಗ್ರಾಮೀಣ ಸಮಾಜಶಾಸ್ತ್ರವು ಸಮಾಜಶಾಸ್ತ್ರದ ವಿಶೇಷ ಶಾಖೆಯಾಗಿ ಬೆಳೆದು ಬಂದ ಸನ್ನಿವೇಶಗಳನ್ನು ವಿವರಿಸಿ.

2. ಗ್ರಾಮೀಣ ಸಮಾಜಶಾಸ್ತ್ರವನ್ನು ವ್ಯಾಖ್ಯಾನಿಸಿ ಅದರ ಸ್ವರೂಪವನ್ನು ವಿವರಿಸಿ.

3. ಗ್ರಾಮೀಣ ಸಮಾಜಶಾಸ್ತ್ರದ ವಸ್ತು ವಿಷಯ ಹಾಗೂ ಸಮಂಜಸತೆಯನ್ನು ತಿಳಿಸಿ.

**ಉತ್ತರಗಳು : ನೋಡಿ**

1. 1.1

2. 1.2 ಮತ್ತು 1.3

3. 1.4 ಮತ್ತು 1.5

## 1.10 ಸಲಹಾ ಗ್ರಂಥಗಳು


J.B. Chitambar ; **Introductory Rural Sociology,** New Delhi, Wiley Eastern Limited, 1985.

A.R. Desai ; **Rural Sociology in India,** Bomaby, Popular Prakashan, 1987.

S.L. Doshi, P.C. Jain ; **Rural Sociology,** New Delhi, Rawat Publications, 1999.

David L. Sills (Editor) ; **International Encyclopedia of the Social Sciences,** New York, The Macmillan, 1972.

G.R. Madan ; **Sociology of Development,** New Delhi, Allied Publishers ; 2003.

Ram Nath Sharma ; **Indian Rural Sociology,** Delhi. Munshiram Manoharlal Publishers, 1979

ಎಸ್. ರಾಜಶೇಖರ್, ಆರ್. ರಾಜೇಶ್ : ಜನಸಂಖ್ಯಾಶಾಸ್ತ್ರ, ಭ್ರಮರ ಪ್ರಕಾಶನ ಶಿವಮೊಗ್ಗ, 2003.

ಎಸ್. ರಾಜಶೇಖರ : ಗ್ರಾಮೀಣ ಸಮಾಜಶಾಸ್ತ್ರ, ಭ್ರಮರ ಪ್ರಕಾಶನ ಶಿವಮೊಗ್ಗ, 1997.

ಪ್ರೊ. ಎಚ್.ವಿ. ನಾಗೇಶ್ : ಭಾರತದಲ್ಲಿ ಗ್ರಾಮೀಣಾಭಿವೃದ್ಧಿ, ಭಾರತ ಪ್ರಕಾಶನ ಧಾರವಾಡ, 1988.

ಎಂ. ನಾರಾಯಣ : ಗ್ರಾಮೀಣ ಸಮಾಜಶಾಸ್ತ್ರ ಮತ್ತು ಭಾರತೀಯ ಗ್ರಾಮೀಣಾಭಿವೃದ್ಧಿ, ಚೇತನ ಬುಕ್‌ಹೌಸ್ ಮೈಸೂರು. 1997.

**ಎಂ.ಎಚ್.ಕೃಷ್ಣಪ್ಪ, ಅಧ್ಯಕ್ಷರು, ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ,**
**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.**

# ಘಟಕ 2 : ಗ್ರಾಮೀಣ ಸಮಾಜಶಾಸ್ತ್ರದ ಐತಿಹಾಸಿಕ ಬೆಳವಣಿಗೆ ; ಪಾಶ್ಚಾತ್ಯ-ಭಾರತ

ರಚನೆ


2.0 ಉದ್ದೇಶಗಳು

2.1 ಪರಿಚಯ

2.2 ಅಮೆರಿಕದಲ್ಲಿ ಗ್ರಾಮೀಣ ಸಮಾಜಶಾಸ್ತ್ರದ ಉಗಮ - ಸನ್ನಿವೇಶಗಳು

2.3 ಅಮೆರಿಕದಲ್ಲಿನ ಗ್ರಾಮೀಣ ಸಮಾಜಶಾಸ್ತ್ರದ ಮೂಲ ಪ್ರವರ್ತಕರು

2.4 ಭಾರತದಲ್ಲಿ ಗ್ರಾಮೀಣ ಸಮಾಜಶಾಸ್ತ್ರದ ಉಗಮ

2.5 ಭಾರತದಲ್ಲಿನ ಗ್ರಾಮೀಣ ಸಮಾಜಶಾಸ್ತ್ರದ ಮೂಲ ಪ್ರವರ್ತಕರು

2.6 ಸಾರಾಂಶ

2.7 ಪ್ರಮುಖ ಪದಗಳು

2.8 ನಿಮ್ಮ ಪ್ರಗತಿ ಪರೀಕ್ಷೆಗೆ ಉತ್ತರಗಳು

2.9 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

2.10 ಸಲಹಾ ಗ್ರಂಥಗಳು

## 2.0 ಉದ್ದೇಶಗಳು

ಭಾರತದಲ್ಲಿ ಮತ್ತು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅದರಲ್ಲೂ ವಿಶೇಷವಾಗಿ ಅಮೆರಿಕದಲ್ಲಿ ಸಮಾಜಶಾಸ್ತ್ರದ ವಿಶೇಷ ಶಾಖೆಯಾಗಿ ಗ್ರಾಮೀಣ ಸಮಾಜಶಾಸ್ತ್ರದ ಉಗಮ ಮತ್ತು ಬೆಳವಣಿಗೆಯ ಇತಿಹಾಸವನ್ನು ಗುರುತಿಸುವ ಪ್ರಯತ್ನವನ್ನು ಈ ಘಟಕದಲ್ಲಿ ಮಾಡಲಾಗಿದೆ. ಈ ಘಟಕವನ್ನು ಅಧ್ಯಯನ ಮಾಡಿದ ನಂತರ ನೀವು ;

- ಅಮೆರಿಕದಲ್ಲಿ 19 ನೆ ಶತಮಾನದ ಕೊನೆಯ ವೇಳೆಗೆ ಸಮಾಜಶಾಸ್ತ್ರದ ವಿಶೇಷ ಶಾಖೆಯಾಗಿ ಗ್ರಾಮೀಣ ಸಮಾಜಶಾಸ್ತ್ರ ಏತಕ್ಕೆ ಬೆಳವಣಿಗೆ ಕಂಡಿತು ಎಂಬುದನ್ನು ವಿವರಿಸುವವರಿದ್ದೀರಿ.
- ಗ್ರಾಮ ಪ್ರಧಾನವಾದ ಭಾರತದಂತಹ ರಾಷ್ಟ್ರದಲ್ಲಿ ಗ್ರಾಮೀಣ ಸಮಾಜಶಾಸ್ತ್ರ ಉಗಮಗೊಂಡಿಲ್ಲವೇಕೆ ಎಂಬುದಕ್ಕೆ ಕಾರಣಗಳನ್ನು ನೀಡಲು ಶಕ್ತರಾಗುವಿರಿ.
- ಅಮೆರಿಕದಲ್ಲಿ ಗ್ರಾಮೀಣ ಸಮಾಜಶಾಸ್ತ್ರದ ಬೆಳವಣಿಗೆಗೆ ಕಾರಣರಾದ ಮೂಲಪ್ರವರ್ತಕರ ಬಗೆಗೆ ಚಿತ್ರಣ ನೀಡಲು ಸಮರ್ಥರಾಗುವಿರಿ.
- ಭಾರತದಲ್ಲಿ ಗ್ರಾಮೀಣ ಸಮಾಜಶಾಸ್ತ್ರದ ಮುಂಚಿನ ಕಾಣಿಕೆಗಳ ಬಗೆಗೆ ವಿವರಣೆ ನೀಡುವವರಿದ್ದೀರಿ.
- ಪ್ರಸ್ತುತ ಭಾರತದಲ್ಲಿನ ಗ್ರಾಮೀಣ ಸಮಾಜಶಾಸ್ತ್ರದ ಸ್ಥಾನವನ್ನು ಹೇಳುವವರಿದ್ದೀರಿ.

## 2.1 ಪರಿಚಯ

'ಮಾನವತಾವಾದದ ಶಿಶು' ಎಂದು ಕರೆಯಲಾಗುವ ಗ್ರಾಮೀಣ ಸಮಾಜಶಾಸ್ತ್ರವು 19 ನೆ ಶತಮಾನದ ಅಂತ್ಯದ ವೇಳೆಗೆ ಉಗಮಗೊಂಡು 20 ನೆ ಶತಮಾನದ ಆರಂಭದ ದಶಕಗಳಲ್ಲಿ ಅಮೆರಿಕದಲ್ಲಿ ಪೂರ್ಣ ಪ್ರಮಾಣದ ಶಾಖೆಯಾಗಿ ಹೊರಹೊಮ್ಮಿತು. ಗ್ರಾಮೀಣ ಸಮಾಜಶಾಸ್ತ್ರದಂತಹ ಹೊಸ ಶಾಖೆಯ ಉಗಮಕ್ಕೆ ಆತಂಕದ ಮತ್ತು ಅಜಾಗರೂಕ ಕೈಗಾರಿಕೀಕರಣ ಮತ್ತು ನಗರೀಕರಣಗಳು ಪ್ರಮುಖ ಕಾರಣವಾಗಿದ್ದವು. ಮಾನವ ಕಲ್ಯಾಣಕ್ಕೋಸ್ಕರವಾಗಿ ಕಟಿಬದ್ಧರಾದ ಕ್ರೈಸ್ತ ಪಾದ್ರಿಗಳ ಪ್ರಯತ್ನವು ಗ್ರಾಮ ಸಮುದಾಯಗಳ ವೈಜ್ಞಾನಿಕ ಅಧ್ಯಯನಕ್ಕೆ ಹಾದಿ ಮಾಡಿಕೊಟ್ಟಿತು ಮತ್ತು ಈ ಹಾದಿಯನ್ನು ಸಾಮಾಜಿಕ ವಿಜ್ಞಾನಿಗಳು ಅನುಸರಿಸಿದರು. ಗ್ರಾಮಗಳ ಪುನರ್‌ನಿರ್ಮಾಣಕ್ಕೆ ಗ್ರಾಮಗಳ ಅಧ್ಯಯನದ ಪ್ರಾಮುಖ್ಯವನ್ನು ಮನಗಂಡ ಅಮೆರಿಕ ಸರ್ಕಾರ ಗ್ರಾಮ ಸಂಶೋಧನೆಗೆ ಉದಾರ ಧನ ಸಹಾಯವನ್ನು ನೀಡಿತು. ಹೀಗಾಗಿ ಹೊಸ ಶಾಖೆ ಉಗಮಗೊಂಡಿತು. ಅಮೆರಿಕದಲ್ಲಿ ಗ್ರಾಮೀಣ ಸಮಾಜಶಾಸ್ತ್ರ ಶೀಘ್ರಗತಿಯಲ್ಲಿ ಬೆಳವಣಿಗೆಯನ್ನು ಮೊದಲ ಮತ್ತು ಎರಡನೆ ಮಹಾಯುದ್ಧಗಳ ನಂತರ ಕಂಡುಕೊಂಡಿತು. ನುರಿತ ವಿದ್ವಾಂಸರಿಂದ ತರಬೇತು ಪಡೆದ ಅಮೆರಿಕ ಸಂಶೋಧಕರಿಂದಾಗಿ ಪ್ರಪಂಚದ ಇತರೆ ಭಾಗಗಳಲ್ಲೂ ಗ್ರಾಮೀಣ ಸಮಾಜಶಾಸ್ತ್ರವು ತನ್ನ ಬೆಳವಣಿಗೆಯನ್ನು ಕಂಡುಕೊಂಡಿತು.

ಭಾರತದಲ್ಲಿ ಮೊದಲಿಗೆ ಗ್ರಾಮ ಅಧ್ಯಯನಗಳನ್ನು ಕೈಗೆತ್ತಿಕೊಂಡಿದ್ದವರು ಅರ್ಥಶಾಸ್ತ್ರಜ್ಞರೆ ಆಗಿದ್ದಾರೆ. ಗ್ರಾಮಗಳಲ್ಲಿನ ಕ್ಷೇತ್ರ ಮಾಹಿತಿ ಆಧಾರದ ಮೇಲೆ ಹಲವಾರು ಏಕವಿಷಯ ಅಧ್ಯಯನದ ಫಲಿತಾಂಶಗಳು ಪ್ರಕಟಗೊಂಡವು. ಮಾನವಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ಅರ್ಥಶಾಸ್ತ್ರಜ್ಞರ ಹಾದಿಯನ್ನು ಶೀಘ್ರವಾಗಿ ಅನುಸರಿಸಿದರು. ಸಹಭಾಗಿ ಅವಲೋಕನ ವಿಧಾನವನ್ನು ಅಳವಡಿಸಿ ಗ್ರಾಮಗಳಲ್ಲಿ ಮಾಹಿತಿ ಸಂಗ್ರಹಿಸಿ ಅದರ ಆಧಾರದ ಮೇಲೆ ಉಪಯುಕ್ತ ಕೃತಿಗಳನ್ನು ಪ್ರಕಟಿಸಿದರು. ಭಾರತದ ಗ್ರಾಮ ಸಮುದಾಯಗಳ ತುಲನಾತ್ಮಕ ಮತ್ತು ವೈಜ್ಞಾನಿಕ ವಿಶ್ಲೇಷಣೆಯನ್ನು ನೀಡಿದ ಗೌರವ ಇಂಗ್ಲೆಂಡಿನ ನ್ಯಾಯಶಾಸ್ತ್ರ ಪರಿಣಿತನೆಂದು ಹೆಸರು ಪಡೆದಿರುವ ಸರ್ ಹೆನ್ರಿ ಸಮ್ನರ್ ಮೇನ್‌ರವರಿಗೆ ಸಲ್ಲುತ್ತದೆ. ಭಾರತೀಯ ಗ್ರಾಮ ಸಮುದಾಯಗಳಲ್ಲಿನ ಸಂಸ್ಥೆಗಳು ಮತ್ತು

ಸಂಘಟನೆಗಳ ಬಗೆಗೆ ಆಳವಾದ ಮತ್ತು ಹರಿತವಾದ ವಿಶ್ಲೇಷಣೆಯನ್ನು ಮಾಡಿರುವುದನ್ನು ಅವರ ಬರಹಗಳಲ್ಲಿ ಕಾಣಬಹುದಾಗಿದೆ. ಸಮತಾವಾದದ ಪಿತಾಮಹನಾದ ಕಾರ್ಲ್‌ಮಾರ್ಕ್ಸ್‌ನ ಹಲವಾರು ಕೃತಿಗಳಲ್ಲಿ ಭಾರತೀಯ ಗ್ರಾಮ ಸಮುದಾಯಗಳ ಮೇಲೆ ವ್ಯಾಪಕವಾದ ಆಧಾರಗಳಿರುವುದು ಗಮನಿಸಬೇಕಾದ ಆಸಕ್ತಿಯುತ ವಿಷಯವಾಗಿದೆ.

ಮುಂಚಿನ ಭಾರತದ ಗ್ರಾಮೀಣ ಸಮಾಜಶಾಸ್ತ್ರಜ್ಞರು ಸಹಭಾಗಿ ಅವಲೋಕನದ ಆಧಾರದ ಮೂಲಕ ಒಂದು ಗ್ರಾಮವನ್ನು ಸೂಕ್ಷ್ಮ ಅಧ್ಯಯನಗಳ ಮೂಲಕ ಆಳವಾಗಿ ಅಧ್ಯಯನ ಮಾಡುತ್ತಿದ್ದರು. ಉತ್ತರ ಪ್ರದೇಶದ ಕರೀಂಪುರ ಗ್ರಾಮವನ್ನು ಆಳವಾಗಿ ಅಧ್ಯಯನ ಮಾಡಿದ ಕೀರ್ತಿ ಡಬ್ಲ್ಯು. ಎಚ್. ವೈಸರ್ (W.H. Wiser) ಗೆ ಸಲ್ಲುತ್ತದೆ. 'ಬಿಹೈಂಡ್ ದಿ ಮಡ್ ವಾಲ್ಸ್' ಮತ್ತು 'ದಿ ಹಿಂದು ಜಾಜ್‌ಮನಿ ಸಿಸ್ಟಮ್' **(Behind the Mud walls and The Hindu Jajmani System)** ಎಂಬ ಎರಡು ಗ್ರಂಥಗಳು ಬಿರುದು ಮತ್ತು ಕಾರ್ನೆಲ್ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪದವಿಯನ್ನು ತರಲು ಕಾರಣವಾದವು. ವೈಸರ್‌ರವರಿಂದ ಸ್ಫೂರ್ತಿ ಪಡೆದ ಹಲವಾರು ಮಾನವಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ಭಾರತದಾದ್ಯಂತ ಇದೇ ಬಗೆಯ ಅಧ್ಯಯನಗಳನ್ನು ಕೈಗೊಂಡರು. ಹೀಗೆ ಗ್ರಾಮೀಣ ಸಮಾಜಶಾಸ್ತ್ರ ತನ್ನ ಬೇರನ್ನು ಭಾರತದ ಮಣ್ಣಿನಲ್ಲಿ ಬಿಟ್ಟಿತು. ಈಗ ಗ್ರಾಮೀಣ ಸಮಾಜಶಾಸ್ತ್ರವು ಪೂರ್ಣ ಪ್ರಮಾಣದಲ್ಲಿ ಶಾಸ್ತ್ರದ ಸ್ಥಾನ ಹೊಂದಿದ್ದು ಭಾರತದ ಯಾವುದೇ ವಿಶ್ವವಿದ್ಯಾನಿಲಯಗಳಲ್ಲಿ ಈ ವಿಷಯವನ್ನು ಬೋಧಿಸದೆ ಇರುವುದನ್ನು ಕಾಣಲಾಗುವುದಿಲ್ಲ.

## 2.2 ಅಮೆರಿಕದಲ್ಲಿ ಗ್ರಾಮೀಣ ಸಮಾಜಶಾಸ್ತ್ರದ ಉಗಮ - ಸನ್ನಿವೇಶಗಳು

ಘಟಕ ಒಂದರಲ್ಲಿ ಗ್ರಾಮೀಣ ಸಮಾಜಶಾಸ್ತ್ರದ ವ್ಯಾಖ್ಯೆಗಳನ್ನು ಮತ್ತು ಸ್ವರೂಪವನ್ನು ಚರ್ಚಿಸುವಾಗ 19 ನೆ ಶತಮಾನದ ಅಂತ್ಯದ ವೇಳೆಗೆ ಅಮೆರಿಕದಲ್ಲಿ ಗ್ರಾಮೀಣ ಸಮಾಜಶಾಸ್ತ್ರದ ಉಗಮಕ್ಕೆ ಕಾರಣವಾದ ಸನ್ನಿವೇಶಗಳ ಬಗೆಗೆ ಉಲ್ಲೇಖ ಮಾಡಲಾಗಿದೆ. ಸಮಾಜಶಾಸ್ತ್ರವನ್ನು ಜ್ಞಾನೋದಯದ ಶಿಶು ಎಂದು ಕರೆಯಲ್ಪಟ್ಟಿದ್ದರೆ ಗ್ರಾಮೀಣ ಸಮಾಜಶಾಸ್ತ್ರವನ್ನು ಮಾನವತಾವಾದದ ಶಿಶು ಎಂದು ಕರೆಯಲಾಗುತ್ತದೆ ಎಂಬುದನ್ನು ಇಲ್ಲಿ ಗಮನಿಸಲಾಗಿದೆ. ಧರ್ಮವನ್ನು ಮತ್ತು ಧರ್ಮದ ಅಂಧಾಭಿಮಾನವನ್ನು ವಿರೋಧಿಸಿದ ವಾಸ್ತವತಾವಾದಿಗಳು ಸಮಾಜಶಾಸ್ತ್ರದ ಉಗಮಕ್ಕೆ ಕಾರಣರಾದರೆ, ಪುರೋಹಿತರು ಮತ್ತು ಕ್ರೈಸ್ತ ಪಾದ್ರಿಗಳಂತಹ ಧಾರ್ಮಿಕ ವ್ಯಕ್ತಿಗಳು ಮಾನವ ಕಲ್ಯಾಣ ಮತ್ತು ಮಾನವ ಘನತೆಯ ಮಾನವತಾ ತತ್ವದ ತತ್ವಗಳಿಂದ ಸ್ಫೂರ್ತಿ ಹೊಂದಿದ್ದು ಗ್ರಾಮೀಣ ಸಮಾಜಶಾಸ್ತ್ರದ ಉಗಮಕ್ಕೆ ದಾರಿ ಮಾಡಿಕೊಟ್ಟಿದ್ದಾರೆ.

19 ನೆ ಶತಮಾನದ ಅಂತ್ಯದ ವೇಳೆಗೆ ಅಮೆರಿಕವು ಕೈಗಾರಿಕೀಕರಣ ಮತ್ತು ಅದರಿಂದುಂಟಾಗುವ ನಗರೀಕರಣದಲ್ಲಿ ಅದ್ಭುತ ಹೆಚ್ಚಳವನ್ನು ಕಂಡಿತು. ಯೋಜಿತವಲ್ಲದ ಮತ್ತು ನಿಯಂತ್ರಣಕ್ಕೊಳಪಡದ ಕೈಗಾರಿಕೀಕರಣ ಮತ್ತು ನಗರೀಕರಣಗಳು ಅಮೆರಿಕದ ಗ್ರಾಮಗಳನ್ನು ತೊಂದರೆಗೆ ಸಿಲುಕಿಸಿದವು.

ನಗರ ಮತ್ತು ಗ್ರಾಮ ಸಮುದಾಯಗಳ ನಡುವೆ ಸಕಾರಾತ್ಮಕ ಪಾರಸ್ಪರಿಕ (ಅನ್ಯೋನ್ಯ) ಸಂಬಂಧವು ಸಾಮಾನ್ಯವಾಗಿ ಆದರ್ಶದ ಸನ್ನಿವೇಶಗಳಲ್ಲಿ ಕಂಡುಬರುತ್ತದೆ. ನಗರ ಮತ್ತು ಗ್ರಾಮಗಳು ಪಾರಸ್ಪರಿಕ ಅವಲಂಬನೆ ಹೊಂದಿರುವುದು ಮಾತ್ರವಲ್ಲದೆ, ಉಳಿವು ಮತ್ತು ಏಳಿಗೆಗೆ ಪರಸ್ಪರ ಸಹಾಯ ಮಾಡುತ್ತವೆ. ಮಾನವ ಶಕ್ತಿ ಮತ್ತು ಕಚ್ಚಾಪದಾರ್ಥಗಳನ್ನು ಗ್ರಾಮಗಳು ನಗರಗಳಿಗೆ ಸರಬರಾಜು ಮಾಡಿದರೆ ವಸ್ತುಗಳು, ಸಿದ್ಧಪಡಿಸಿದ ಉತ್ಪನ್ನಗಳು ಮತ್ತು ಸೇವೆಗಳನ್ನು ನಗರಗಳು ಗ್ರಾಮಗಳಿಗೆ ಒದಗಿಸುತ್ತವೆ. ಇಂತಹ ಆದರ್ಶ ಸನ್ನಿವೇಶಗಳಲ್ಲಿ ಗ್ರಾಮ ಮತ್ತು ನಗರಗಳೆರಡೂ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದು ಮಾತ್ರವಲ್ಲದೆ ಜೊತೆ ಜೊತೆಯಲ್ಲಿಯೇ ಪ್ರಗತಿಯನ್ನು ಕಾಣುತ್ತವೆ. ಇಂತಹ ಸನ್ನಿವೇಶವನ್ನೇ ಸಾಮಾನ್ಯ ಕಾಲವೆಂದು ಕರೆಯಲಾಗುತ್ತದೆ.

ಕೈಗಾರಿಕೀಕರಣ ಮತ್ತು ನಗರೀಕರಣಗಳ ಬಗೆಗೆ ಸರಿಯಾದ ಯೋಜನೆ ಹಾಗೂ ನಿಯಂತ್ರಣವಿಲ್ಲದಿದ್ದಾಗ ಅವುಗಳು ನಿಯಂತ್ರಣವಿಲ್ಲದ ಮತ್ತು ಗುರಿ ಇಲ್ಲದ ರೀತಿಯಲ್ಲಿ ಕೈಗಾರಿಕೆಗಳ ಮತ್ತು ನಗರಗಳ ಬೆಳವಣಿಗೆಗೆ ದಾರಿ ಮಾಡಿಕೊಡುತ್ತವೆ. ಇಂತಹ ಸಂದರ್ಭಗಳಲ್ಲಿ ಗ್ರಾಮಗಳು ತೊಂದರೆಗೆ ಸಿಲುಕುತ್ತವೆ ಮತ್ತು ಹಾಳಾಗುತ್ತವೆ ಇಲ್ಲವೆ ನಾಶವಾಗುತ್ತವೆ. 19 ನೆ ಶತಮಾನದ ಅಂತ್ಯದ ವೇಳೆಗೆ ಅಮೆರಿಕದಲ್ಲಿ ದುರದೃಷ್ಟಕರ ಸನ್ನಿವೇಶ ಸಂಭವಿಸಿತು. ಅಮೆರಿಕದ ಉದ್ದಗಲಕ್ಕೂ ಕೈಗಾರಿಕೆಗಳನ್ನು ಸ್ಥಾಪಿಸಿರುವುದರಿಂದಾಗಿ ನಾಯಿಕೊಡೆಗಳಂತೆ ನಗರಗಳು ಬೆಳವಣಿಗೆಯಾದವು. ನಗರಗಳಲ್ಲಿನ ಹೆಚ್ಚಿನ ಕೂಲಿ ದರವು ಗ್ರಾಮಗಳಿಗೆ ಅಗತ್ಯವಾಗಿ ಬೇಕಾಗಿದ್ದ ಮಾನವ ಶಕ್ತಿಯನ್ನು ಇಲ್ಲದಂತೆ ಮಾಡಿತು. ಗ್ರಾಮಗಳಲ್ಲಿ ಅಗತ್ಯಕ್ಕಿಂತ ಹೆಚ್ಚಾಗಿದ್ದ ಜನಸಂಖ್ಯೆಯನ್ನು ಮಾತ್ರವಲ್ಲದೆ ಅಗತ್ಯವಾಗಿ ಬೇಕಾಗಿದ್ದ ಜನಸಂಖ್ಯೆಯು ಕೂಡ ನಗರ ಪ್ರದೇಶಗಳಲ್ಲಿನ ಗಿರಣಿಗಳು ಮತ್ತು ಕಾರ್ಖಾನೆಗಳು ನೀಡುತ್ತಿದ್ದ ಆಕರ್ಷಕ ದರಗಳಿಗೆ ಮಾರುಹೋಗಿ ಗ್ರಾಮಗಳನ್ನು ಬಿಟ್ಟು ನಗರಗಳ ಕಡೆ ನಡೆದರು. ಇದು ಅಮೆರಿಕದಲ್ಲಿ ಗ್ರಾಮ ಮತ್ತು ನಗರ ಪ್ರದೇಶಗಳ ನಡುವಿನ ಪಾರಸ್ಪರಿಕ ಸಕಾರಾತ್ಮಕ ಸಂಬಂಧಕ್ಕೆ ಮರಣ ಗಂಟೆಯಾಗಿ ಪರಿಣಮಿಸಿತು. ಪಾರಸ್ಪರಿಕ ಸಕಾರಾತ್ಮಕ ಸಂಬಂಧಕ್ಕೆ ಬದಲಾಗಿ ಪರಾವಲಂಬಿ ಸಂಬಂಧವು ಬಂದಿತು. ನಗರಗಳು ಗ್ರಾಮಗಳ ಜೊತೆ ಬೆಳವಣಿಗೆಯನ್ನು ಕಾಣದೆ ಗ್ರಾಮಗಳನ್ನು ತೊಂದರೆಗೆ ಸಿಲುಕಿಸಿ ಬೆಳವಣಿಗೆಯನ್ನು ಕಂಡಿವೆ.

ಗ್ರಾಮ ಸಮುದಾಯಗಳಲ್ಲಿ ಎಂದೂ ಕಾಣಲಾಗದ ಅಧೋಗತಿಯ ಜೀವನಕ್ಕೆ ಇದು ದಾರಿ ಮಾಡಿಕೊಟ್ಟಿತು. ವ್ಯವಸಾಯಕ್ಕೆ, ಗೃಹ ಕೈಗಾರಿಕೆಗಳಿಗೆ ಮತ್ತು ಇತರೆ ವೃತ್ತಿಗಳಿಗೆ ಅಗತ್ಯವಾಗಿ ಬೇಕಾಗಿರುವ ಜನರನ್ನು ನಗರಗಳು ಆಕರ್ಷಿಸಿದುದರಿಂದಾಗಿ ಗ್ರಾಮಗಳ ಆರ್ಥಿಕ ಚಟುವಟಿಕೆಯ ಮೇಲೆ ಪರಿಣಾಮ ಉಂಟಾಯಿತು. ಆರ್ಥಿಕ ಚಟುವಟಿಕೆಗಳು ಕುಂಠಿತಗೊಂಡಿದುದರಿಂದಾಗಿ ಇತರೆ ಚಟುವಟಿಕೆಗಳೂ ಗ್ರಾಮದಲ್ಲಿ ಕುಂಠಿತಗೊಂಡವು. ಸಂಸ್ಕೃತಿ ಮತ್ತು ನಾಗರಿಕತೆಯನ್ನು ಪೋಷಣೆ ಮಾಡಿದಂತಹ ಹಳೆಯ ಸಾಮಾಜಿಕ ಸಂಸ್ಥೆಗಳು, ಪದ್ಧತಿಗಳು, ಸಂಪ್ರದಾಯಗಳು, ಲೋಕರೂಢಿಗಳು, ಜನಪದಗಳು ಕ್ಷೀಣಿಸಿದವು. ಆನಂದ ಮತ್ತು ಹರ್ಷಜೀವನವನ್ನು ಪ್ರತಿಧ್ವನಿಸುತ್ತಿದ್ದ ಗ್ರಾಮಗಳು ದುಃಖತಪ್ತ ಬರಡು ಗ್ರಾಮಗಳಾಗಿವೆ. ಗ್ರಾಮಗಳ ಅವನತಿಯ ಪರಿಸ್ಥಿತಿ 1890-1920 ರ ಅವಧಿಯಲ್ಲಿ ಸಂಭವಿಸುದುದರಿಂದಾಗಿ ಇದನ್ನು ಶೋಷಕರ ಅವಧಿ ಎಂದು ಕರೆಯಲಾಗುತ್ತದೆ.

ಗ್ರಾಮಗಳ ಕರುಣಾಜನಕ ಸ್ಥಿತಿಯು ಸೂಕ್ಷ್ಮ ಮನಸ್ಸಿನ ಪುರೋಹಿತರನ್ನು ಮತ್ತು ಕ್ರೈಸ್ತ ಪಾದ್ರಿಗಳ ಮನಸ್ಸನ್ನು ಕಲುಕಿತು. ಅದೃಷ್ಟವಶಾತ್ ಧಾರ್ಮಿಕ ನಾಯಕರುಗಳು ನೀತಿ ಬೋಧನೆಗೆ ಜೋತು ಬೀಳದೆ ಸೇವೆಯಲ್ಲೂ ಹಾಗೂ ಮಾತಿನಲ್ಲಲ್ಲದೆ ಕಾರ್ಯದಲ್ಲೂ ನಂಬಿಕೆ ಹೊಂದಿ ಸಕ್ರಿಯವಾಗಿ ಗ್ರಾಮಗಳ ಉನ್ನತಿಗೆ ಪ್ರಯತ್ನ ಮಾಡಿದರು. ಈ ನಾಯಕರು ಗ್ರಾಮಗಳಲ್ಲಿದ್ದ ಕೊಳೆಯನ್ನು ತೊಳೆದು ಗ್ರಾಮಗಳನ್ನು ಪುನರ್‌ನಿರ್ಮಾಣ ಮಾಡುವ ಶಪಥವನ್ನು ಕೈಗೊಂಡರು. ಈ ದಿಕ್ಕಿನಲ್ಲಿ ಮೊದಲಿಗೆ ಅವರು ಗ್ರಾಮಗಳ ವೈಜ್ಞಾನಿಕ ಅಧ್ಯಯನವನ್ನು ಕೈಗೊಂಡರು. ಗ್ರಾಮ ಸಮುದಾಯಗಳ ಉಳಿವಿಗೆ ವಿಪತ್ತನ್ನುಂಟುಮಾಡುವ ಸಮಸ್ಯೆಗಳನ್ನು ಕ್ರಮಬದ್ಧವಾದ ವೈಜ್ಞಾನಿಕ ವಿಧಾನಗಳ ಮೂಲಕ ನಿವಾರಿಸಬೇಕೆ ವಿನಾ ಭಾವನಾತ್ಮಕ ಧರ್ಮೋಪದೇಶದಲ್ಲಲ್ಲ ಎಂಬುದನ್ನು ಮನಗಂಡರು. ವೈಜ್ಞಾನಿಕ ಅಧ್ಯಯನವನ್ನು ಗ್ರಾಮಗಳಲ್ಲಿ ಕೈಗೊಂಡ ನಂತರ ಕ್ರಮೇಣ ಗ್ರಾಮೀಣ ಸಮಾಜಶಾಸ್ತ್ರದ ಹೊಸ ವಿಜ್ಞಾನ ಉಗಮಗೊಂಡಿತು.

## 2.3 ಅಮೆರಿಕದಲ್ಲಿನ ಗ್ರಾಮೀಣ ಸಮಾಜಶಾಸ್ತ್ರದ ಮೂಲ ಪ್ರವರ್ತಕರು

ಅಮೆರಿಕದ ಹಲವಾರು ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಸಮಾಜಶಾಸ್ತ್ರದ ಹೊಸ ಶಾಖೆಯನ್ನು ಪರಿಚಯಿಸಲಾಯಿತು. ಗ್ರಾಮೀಣ ಸಾಮಾಜಿಕ ಸಮಸ್ಯೆಗಳು ಮತ್ತು ಗ್ರಾಮೀಣ ಸಂಸ್ಥೆಗಳ ಅಧ್ಯಯನ ಮಾಡಲು ಈ ವಿಭಾಗಗಳಲ್ಲಿ ಕೆಲಸ ಮಾಡುತ್ತಿರುವ ಶೈಕ್ಷಣಿಕ ತಜ್ಞರು ಆಸಕ್ತಿ ತೋರಿಸಿದರು. ಈ ದಿಶೆಯಲ್ಲಿ ಮುಂದಾಳತ್ವವನ್ನು ವಹಿಸಿದ ಮೂಲ ಪ್ರವರ್ತಕರು ಚಾರ್ಲ್ಸ್. ಆರ್. ಹಂಡರ್‌ಸನ್, ಕೆನ್ಯೆನ್ ಎಲ್. ಬಟರ್‌ಫೀಲ್ಡ್, ಅರ್ನೆಸ್ಟ್ ಬರ್‌ಹ್ಯಾಮ್, ಜಾನ್ ಮೊರಿಸ್ ಗಿಲ್ಲೆಟೆ, ಫ್ರಾಂಕ್ಲಿನ್

ಡಿ. ಗಿಡ್ಡಿಂಗ್ಸ್, ಥಾಮಸ್ ನಿಕ್ಸನ್ ಕಾರ್ವ್‌ರ್, ಹೆನ್ರಿ ಸಿ. ಟೇಲರ್ (Charles R. Hunderson, Kenyon.L Butterfield, Earnest Burham, John Morris Gillette, Franklin D. Giddings, Thomas Nixon Carver, Henry .C Tylor.) ಆಗಿದ್ದಾರೆ.

ಗ್ರಾಮೀಣ ಸಮಾಜಶಾಸ್ತ್ರದ ಬೆಳವಣಿಗೆಯ ಇತಿಹಾಸದಲ್ಲಿ 1908 ನೆ ವರ್ಷವು ಮಹತ್ವದ ವರ್ಷವಾಗಿದೆ. ಕಾರಣ ಅಮೆರಿಕದ ಅಧ್ಯಕ್ಷರಾಗಿದ್ದ ಥಿಯೋಡರ್ ರೂಸ್‌ವೆಲ್ಟ್‌ರವರು 1908 ರಲ್ಲಿ ಗ್ರಾಮೀಣ ಜೀವನ ಆಯೋಗ (Country Life Commission) ವನ್ನು ನೇಮಿಸಿದರು. ಗ್ರಾಮೀಣ ಸಮಸ್ಯೆಗಳ ಬಗೆಗೆ ಅಪಾರ ಜ್ಞಾನವನ್ನು ಹೊಂದಿದ್ದ ವಿದ್ವಾಂಸರಾದ ಡೀನ್ ಬೇಯ್ಲಿರವರ ಅಧ್ಯಕ್ಷತೆಯಲ್ಲಿ ನೇಮಕವಾದ ಗ್ರಾಮೀಣ ಜೀವನ ಆಯೋಗ (Country life Commission) ಐದು ಲಕ್ಷ ಪ್ರಶ್ನಾವಳಿಯನ್ನು ರೈತರು ಮತ್ತು ಗ್ರಾಮೀಣ ಪ್ರದೇಶಗಳ ನಾಯಕರುಗಳಿಗೆ ಹಂಚಿ, ಸುಮಾರು ಒಂದು ಲಕ್ಷ ಪ್ರತ್ಯುತ್ತರಗಳನ್ನು ಪಡೆದುಕೊಂಡಿತಲ್ಲದೆ ಅಧ್ಯಯನದ ಆಧಾರದ ಮೇಲೆ ಒಂದು ವರದಿಯನ್ನು ಪ್ರಕಟಿಸಿತು. ಈ ವರದಿಯು ಗ್ರಾಮೀಣ ಸಮಾಜದಲ್ಲಿನ ನ್ಯೂನತೆಗಳನ್ನು ವಿಶ್ಲೇಷಿಸುವ ಮತ್ತು ಅವುಗಳಿಗೆ ಕಾರಣಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಒಳಗೊಂಡಿತ್ತು. ಗ್ರಾಮೀಣ ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಪ್ರಮುಖ ದಾಖಲಾತಿಗಳನ್ನು ಈ ವರದಿಯು ಒದಗಿಸಿಕೊಟ್ಟಿದೆ. ಗ್ರಾಮದಲ್ಲಿನ ಜೀವನವು ಉತ್ತಮಗೊಳ್ಳಲು ಎಲ್ಲಾ ಶಕ್ತಿಗಳು ಪ್ರಯತ್ನಿಸಬೇಕೆಂದು ಶಿಫಾರಸ್ಸು ಮಾಡಿರುವುದಲ್ಲದೆ ಗುರಿ ತಲುಪುವ ಮಾರ್ಗವಾಗಿ ಗ್ರಾಮ ಸಮುದಾಯಗಳ ಸಮೀಕ್ಷೆ ಮತ್ತು ಸಮ್ಮೇಳನದ ಸಂಘಟನೆಯಾಗಬೇಕೆಂದು ಶಿಫಾರಸ್ಸು ಮಾಡಿದೆ. ಗ್ರಾಮೀಣ ಜೀವನ ಚಳವಳಿ ಎಂದು ಅಮೆರಿಕದಲ್ಲಿ ಹೆಸರು ಪಡೆದಿರುವ ಅಮೆರಿಕದಲ್ಲಿನ ಹೊಸ ಚಳವಳಿಯು ಪ್ರಾರಂಭವಾಗಲಿಕ್ಕೆ ಗ್ರಾಮೀಣ ಜೀವನ ಆಯೋಗದ ವರದಿಯು ದಾರಿ ದೀಪವಾಯಿತು.

ಜೇಮ್ಸ್ ಮೈಕೇಲ್ ವಿಲಿಯಮ್ಸ್‌ರ **'ಆ್ಯನ್ ಅಮೆರಿಕನ್ ಟೌನ್' (An American Town),** ವಾರೆನ್ ಎಚ್. ವಿಲ್ಸನ್‌ರವರ **'ಕ್ವಾಕರ್ ಹಿಲ್' (Quaker Hill)** ಮತ್ತು ನೆವೆಲ್ ಎಲ್. ಸಿಮ್ಸ್‌ರವರ **'ಎ ಹೊಸಿಯಾರ್ ವ್ವಿಲೇಜ್' (A Hoosier Village)** ಕೃತಿಗಳು ಅಮೆರಿಕದ ಗ್ರಾಮೀಣ ಸಮುದಾಯಗಳ ಅಧ್ಯಯನಗಳನ್ನು ಪ್ರತಿನಿಧಿಸುತ್ತವೆ. ಸಂಖ್ಯಾಶಾಸ್ತ್ರೀಯ ಮತ್ತು ಐತಿಹಾಸಿಕ ಹಾಗೂ ಕ್ಷೇತ್ರ ಸಂದರ್ಶನ ತಂತ್ರಗಳನ್ನು ಅಳವಡಿಸಿಕೊಂಡುದುದರ ಆಧಾರದ ಮೇಲೆ ಈ ಅಧ್ಯಯನಗಳಿದ್ದವು. ಈ ಅಧ್ಯಯನದ ಫಲಿತಾಂಶಗಳನ್ನು ಸಂಶೋಧನ ದಾಖಲೆಗಳಾಗಿ ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ 1906 ಮತ್ತು 1912 ರ ನಡುವೆ ಮಂಡಿಸಲಾಯಿತು. ಗ್ರಾಮೀಣ ಜೀವನದ ಪ್ರಕ್ರಿಯೆಯಲ್ಲಿ ಆಸಕ್ತಿ ಹೊಂದಿದ್ದ ಇನ್ನು ಕೆಲವರೊಂದಿಗೆ ವಾರೆನ್ ವಿಲ್‌ಸನ್‌ರವರು ಗ್ರಾಮೀಣ ಚರ್ಚುಗಳನ್ನು ಕುರಿತು ಅಧ್ಯಯನ ಮಾಡಿದರು. 1915 ರಲ್ಲಿ ವಿಸ್‌ಕಾನ್ಸಿನ್ ವಿಶ್ವವಿದ್ಯಾನಿಲಯದಲ್ಲಿ ಡಾ. ಸಿ.ಜೆ. ಗಾಲ್ಪಿನ್‌ರವರು ಗ್ರಾಮೀಣ ಜೀವನವನ್ನು ಕುರಿತು ಕೈಗೊಂಡ **'ದಿ ಸೋಶಿಯಲ್ ಎನಾಟಮಿ ಆಫ್ ಆ್ಯನ್ ಆ್ಯಗ್ರಿಕಲ್ಚರ್ ಕಮ್ಯೂನಿಟಿ' (The Social Anatomy of an Agriculture Community)** ಎಂಬ ಅಧ್ಯಯನವು ಗ್ರಾಮೀಣ ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ 1916 ರ ವರೆಗಿನ ಹೆಚ್ಚುವರಿ ಬರವಣಿಗೆಯಲ್ಲಿ ಸೇರಿದೆ.

ಗ್ರಾಮೀಣ ಸಮಾಜಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಮೊದಲ ಕಾಲೇಜು ಪಠ್ಯಪುಸ್ತಕವಾಗಿದ್ದ **'ರೂರಲ್ ಸೋಶಿಯಾಲಜಿ' (Rural Sociology)** ಎಂಬ ಗ್ರಂಥವನ್ನು ಪ್ರೊ. ಜಾನ್ ಎಂ. ಗಿಲ್ಲೆಟೆರವರು 1916 ರಲ್ಲಿ ಪ್ರಕಟಿಸಿದರು. ತರುವಾಯ ಅನೇಕ ಲೇಖಕರು ಗ್ರಾಮೀಣ ಜೀವನವನ್ನು ಅಧ್ಯಯನ ಮಾಡಲು ತಮ್ಮನ್ನು ತಾವೇ ತೊಡಗಿಸಿಕೊಂಡು ಅಮೂಲ್ಯ ಕೃತಿಗಳನ್ನು ಪ್ರಕಟಿಸಿದುದರಿಂದಾಗಿ ಈ ವಿಷಯದ ಸಾಹಿತ್ಯ ಶ್ರೀಮಂತಗೊಂಡಿತು.

ಗ್ರಾಮೀಣ ಸಮುದಾಯಗಳ ಅಧ್ಯಯನದಲ್ಲಿ ಆಸಕ್ತಿ ಹೊಂದಿದ್ದ ಸಮಾಜಶಾಸ್ತ್ರಜ್ಞರ ಗುಂಪೊಂದು 1917 ರಲ್ಲಿ ಗ್ರಾಮೀಣ ಸಮಾಜಶಾಸ್ತ್ರದ ವಿಭಾಗವನ್ನು **ಅಮೆರಿಕನ್ ಸೋಶಿಯಾಲಾಜಿಕಲ್ ಸೊಸೈಟಿ (American Sociological Society)** ಯಲ್ಲಿ ಸ್ಥಾಪನೆ ಮಾಡಿದುದು ಮತ್ತೊಂದು ಪ್ರಮುಖ ಘಟ್ಟವಾಗಿದೆ.

ಮೊದಲ ಮಹಾಯುದ್ಧದ ನಂತರದ ವರ್ಷಗಳಲ್ಲಿ ಗ್ರಾಮೀಣ ಸಮಾಜಶಾಸ್ತ್ರದಲ್ಲಿ ತೀವ್ರ ಬೆಳವಣಿಗೆ ಕಾಣಲಾಯಿತು. 1919 ರ ವರ್ಷದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಕೃಷಿ ವಿಭಾಗವು ವ್ಯಾವಸಾಯಿಕ ಅರ್ಥಶಾಸ್ತ್ರದ ಕಛೇರಿ **(Bureau of Agricultural Economics)** ಯನ್ನು ಪ್ರಾರಂಭಿಸಿತು. ಕೃಷಿ ಜೀವನ ಅಧ್ಯಯನಗಳು **(Farm Life Studies)** ಎಂದು ಕರೆಯಲಾಗುತ್ತಿದ್ದ ಇದರ ಒಂದು ಭಾಗದ ಸಾರಥ್ಯವನ್ನು ಡಾ. ಚಾರ್ಲ್ಸ್ ಜೆ. ಗಾಲ್ಪಿನ್ (Dr. Charles J. Galpin) ವಹಿಸಿದ್ದರು. ಡಾ. ಚಾರ್ಲ್ಸ್ ಜೆ. ಗಾಲ್ಪಿನ್‌ರವರು ಗ್ರಾಮೀಣ ಸಮಾಜಶಾಸ್ತ್ರೀಯ ಸಂಶೋಧನೆಗೆ ಸಂಯುಕ್ತ ಸರ್ಕಾರವನ್ನು ಪರಿಚಯಿಸಲು ಕ್ರಮ ಕೈಗೊಂಡರು. 1925 ರಲ್ಲಿ ಕಾಂಗ್ರೆಸ್ ಪರ್ನೆಲ್ ಆ್ಯಕ್ಟ್ **(Purnell Act)** ನ್ನು ಅಂಗೀಕರಿಸಿತು. ಈ ಕಾನೂನು ಸಾಮಾಜಿಕ ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ಕಾರ್ಯ ಕೈಗೊಳ್ಳಲು ಬಂಡವಾಳವನ್ನು ಒದಗಿಸಿತು. ಗ್ರಾಮೀಣ ಸಮಾಜಶಾಸ್ತ್ರದಲ್ಲಿ ನುರಿತ, ತರಬೇತು ಹೊಂದಿದ ಸಿಬ್ಬಂದಿಯನ್ನು ಅಭಿವೃದ್ಧಿಪಡಿಸಲು ಸಾಮಾಜಿಕ ವಿಜ್ಞಾನ ಸಂಶೋಧನ ಸಮಿತಿ **(The Social Science Research Council)** ಯೋಜನೆಯೊಂದನ್ನು ಪ್ರಾರಂಭಿಸಿತು. ಇದರ ಮೂಲ ಪ್ರವರ್ತಕರು ಶ್ಲಾಘನೀಯ ಕಾರ್ಯವನ್ನು ಈ ಕ್ಷೇತ್ರದಲ್ಲಿ ಮಾಡಿದ್ದಾರೆ. ಕೆಲವೇ ಸಂಗತಿಗಳು ಹಾಗೂ ಸಿದ್ಧಾಂತಗಳನ್ನು ಒಳಗೊಂಡ ನಿಸ್ತೇಜ ಸ್ಥಿತಿಯಲ್ಲಿದ್ದ ಸಮಾಜಶಾಸ್ತ್ರದ ಅಂತಸ್ತನ್ನು ಉನ್ನತ ಮಟ್ಟಕ್ಕೆ ತಂದಿದ್ದಾರೆ. ಸಾಮಾಜಿಕ ವಿಜ್ಞಾನಗಳ ಹಲವಾರು ಶಾಖೆಗಳಲ್ಲಿ ಹೆಸರು ಪಡೆದಿರುವ ವಿದ್ವಾಂಸರ ಮಾರ್ಗದರ್ಶನದಡಿಯಲ್ಲಿ ಇವರು ಉತ್ಸಾಹ ಮತ್ತು ಬದ್ಧತೆಯೊಂದಿಗೆ ಕೆಲಸ ಮಾಡಿದ್ದಾರೆ. ಕಟಿಬದ್ಧ ಮೂಲ ಪ್ರವರ್ತಕರು ನೀಡಿದ ಕಾಣಿಕೆಯು ಗ್ರಾಮೀಣ ಸಮಾಜಶಾಸ್ತ್ರದ ಸಾರವಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

1929 ರಲ್ಲಿ ಪಿತಿರಿಮ್ ಸಾರೋಕಿನ್ ಮತ್ತು ಕಾರ್ಲ್ ಜಿಮ್ಮರ್ ಮ್ಯಾನ್ ಅವರು ಪ್ರಕಟಿಸಿದ 'ಪ್ರಿನ್ಸಿಪಲ್ಸ್ ಆಫ್ ರೂರಲ್ ಅರ್ಬನ್ ಸೋಶಿಯಾಲಜಿ' **(Principles of Rural - Urban Sociology)** ಗ್ರಂಥ ಗ್ರಾಮೀಣ ಸಮಾಜಶಾಸ್ತ್ರದ ಬೆಳವಣಿಗೆಯಲ್ಲಿ ತನ್ನ ಪಾಲನ್ನು ನೀಡಿದೆ. ಈ ಗ್ರಂಥ 1930 ರಲ್ಲಿ ಪಿತಿರಿಮ್ ಸಾರೋಕಿನ್, ಕಾರ್ಲ್ ಜಿಮ್ಮರ್‌ಮ್ಯಾನ್ ಮತ್ತು ಚಾರ್ಲ್ಸ್ ಗಾಲ್ಪಿನ್ ಅವರು ಒಟ್ಟಾಗಿ ಪ್ರಕಟಿಸಿದ 'ಎ ಸಿಸ್ಟಿಮ್ಯಾಟಿಕ್ ಸೋರ್ಸ್ ಬುಕ್ ಇನ್ ರೂರಲ್ ಸೋಶಿಯಾಲಜಿ' **(A Systematic Source Book in Rural Sociology)** ಗ್ರಂಥವು ಗ್ರಾಮೀಣ ಸಮಾಜಶಾಸ್ತ್ರದ ಮುನ್ನಡೆಯನ್ನು ತೀವ್ರಗೊಳಿಸುವಲ್ಲಿ ನಿರ್ಧಾರಕವಾದುದರಿಂದಾಗಿ ಗ್ರಾಮೀಣ ಸಮಾಜಶಾಸ್ತ್ರದ ಬೆಳವಣಿಗೆಯಲ್ಲಿ ಇದನ್ನು ಯುಗಾರಂಭದ ಕೊಡುಗೆ ಎಂದು ಪರಿಗಣಿಸಲಾಗಿದೆ.

ಗ್ರಾಮೀಣ ಸಮಾಜಶಾಸ್ತ್ರದ ಬೆಳವಣಿಗೆಯ ಮುಖ್ಯವಾದ ಹಂತವೆಂದರೆ 1936 ರಲ್ಲಿ ಪ್ರಾರಂಭಗೊಂಡ 'ರೂರಲ್ ಸೋಶಿಯಾಲಜಿ' **(Rural Sociology)** ನಿಯತಕಾಲಿಕವೆ ಆಗಿದೆ. ಗ್ರಾಮೀಣ ಜೀವನದ ವೈಜ್ಞಾನಿಕ ಅಧ್ಯಯನಕ್ಕೆ ಮೀಸಲಾಗಿಟ್ಟ ಈ ನಿಯತಕಾಲಿಕವು ಗ್ರಾಮೀಣ ಸಮುದಾಯಗಳ ಅಧ್ಯಯನದಲ್ಲಿ ಆಸಕ್ತಿ ಹೊಂದಿದ ವಿದ್ವಾಂಸರುಗಳಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು, ಹಂಚಿಕೊಳ್ಳಲು ಮತ್ತು ವಿನಿಮಯ ಮಾಡಿಕೊಳ್ಳಲು ಶೈಕ್ಷಣಿಕ ಚಾವಡಿ ಒದಗಿಸಿತು. 1937 ರಲ್ಲಿ ಸ್ಥಾಪನೆಗೊಂಡ ರೂರಲ್ ಸೋಶಿಯಾಲಜಿಕಲ್ ಸೊಸೈಟಿ **(Rural Sociological Society)** ಗ್ರಾಮೀಣ ಸಮಾಜಶಾಸ್ತ್ರದ ಬೆಳವಣಿಗೆಯಲ್ಲಿ ಮತ್ತೊಂದು ಪ್ರಮುಖ ಹಂತವಾಗಿದೆ. ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ವಿಶ್ವಸಂಸ್ಥೆ ಇವುಗಳು ನೀಡಿದ ಆರ್ಥಿಕ ಪ್ರೋತ್ಸಾಹದಿಂದ ಹಲವಾರು ರಾಷ್ಟ್ರಗಳಲ್ಲಿ ಎರಡನೆಯ ಮಹಾಯುದ್ಧದ ನಂತರ, ಗ್ರಾಮೀಣ ಸಮಾಜಶಾಸ್ತ್ರದಲ್ಲಿ ಪರಿಣತಿ ಪಡೆದ ಹಲವಾರು ವಿದ್ವಾಂಸರು ಗ್ರಾಮಗಳ ಅಧ್ಯಯನವನ್ನು ಕೈಗೊಂಡರು.

ಹೀಗೆ ಮೊದಲು ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರಾರಂಭಗೊಂಡ ಗ್ರಾಮೀಣ ಸಮಾಜಶಾಸ್ತ್ರ ಇತರ ದೇಶಗಳಿಗೂ ಹರಡಿ ತನ್ನ ಬೆಳವಣಿಗೆಯನ್ನು ಕಂಡುಕೊಂಡಿದೆ.

## 2.4 ಭಾರತದಲ್ಲಿ ಗ್ರಾಮೀಣ ಸಮಾಜಶಾಸ್ತ್ರದ ಉಗಮ

ಭಾರತವು ಹಳ್ಳಿಗಳ ನಾಡಾಗಿದ್ದು, ಮುಂದಿನ ಹಲವು ವರ್ಷಗಳಲ್ಲೂ ಇದೇ ಪರಿಸ್ಥಿತಿ ಮುಂದುವರಿಯುತ್ತದೆ. ಗ್ರಾಮೀಣ ಸಮುದಾಯಗಳನ್ನು ಅಧ್ಯಯನ ಮಾಡುವ ಗ್ರಾಮೀಣ ಸಮಾಜಶಾಸ್ತ್ರದಂತಹ ವಿಜ್ಞಾನದ ಬೆಳವಣಿಗೆಯನ್ನು ಕಾಣುವುದರಲ್ಲಿ ಭಾರತವು ಯಾವುದೇ ದೃಷ್ಟಿಯಿಂದಲೂ ಮುಂಚೂಣಿಯಲ್ಲಿರಬೇಕಾಗಿತ್ತು. ಆದರೆ ವಾಸ್ತವವಾಗಿ ಆ ರೀತಿ ಆಗಲಿಲ್ಲ.

ಭಾರತದ ಮಹಾನ್ ಕೃತಿಗಳಾದ ವೇದಗಳು, ಉಪನಿಷತ್‌ಗಳು, ಅರ್ಥಶಾಸ್ತ್ರ, ನೀತಿಶಾಸ್ತ್ರ ಮತ್ತು ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ ಇವುಗಳಲ್ಲಿ ಹಿಂದೆ ಇದ್ದಂತಹ ಗ್ರಾಮೀಣ ಸಮುದಾಯಗಳ ಬಗೆಗೆ ಉಲ್ಲೇಖಗಳನ್ನು ನಾವು ಕಾಣಬಹುದಾಗಿದೆ. ವಾಲ್ಮೀಕಿ ರಾಮಾಯಣದಲ್ಲಿ ಗೋಷ ಮತ್ತು ಗ್ರಾಮ ಎಂಬ ಎರಡು ಬಗೆಯ ಗ್ರಾಮಗಳಿದ್ದು, ಗೋಷ ಎಂಬುದು ಗ್ರಾಮಕ್ಕಿಂತ ಚಿಕ್ಕದಾಗಿತ್ತು. ಈ ಬಗೆಯ ಗ್ರಾಮಗಳು ಅರಣ್ಯದಂಚಿನಲ್ಲಿ ಇರುತ್ತಿದ್ದವು. ಪಶು ಸಂಗೋಪನೆ ಮತ್ತು ಹಾಲು ಉತ್ಪಾದನೆಯೇ ಪ್ರಮುಖ ಚಟುವಟಿಕೆಗಳಾಗಿದ್ದ ಈ ಗ್ರಾಮಗಳಲ್ಲಿ ನಿವಾಸಿಗಳನ್ನು ಗಾಪ್ಸ್ (Gops) ಎಂದು ಕರೆಯಲಾಗುತ್ತಿತ್ತು. ಪ್ರತಿಯೊಂದು ಹಳ್ಳಿಯು ಹೊರ ಪ್ರಪಂಚದ ಸಂಪರ್ಕವೆ ಇಲ್ಲದ ಸ್ವಯಂ ಪರಿಪೂರ್ಣ ಘಟಕಗಳಾಗಿದ್ದವು. ಮರಗಳು, ನದಿಗಳು, ಬೆಟ್ಟಗಳು, ಕೆರೆಗಳು, ಗ್ರಾಮೀಣ ಸಮುದಾಯದ ಭೌಗೋಳಿಕ ಎಲ್ಲೆಯನ್ನು ಗುರುತಿಸುತ್ತಿದ್ದವು. ಕೌಟಿಲ್ಯನ ಅರ್ಥಶಾಸ್ತ್ರವು ಆ ಕಾಲದಲ್ಲಿದ್ದಂತಹ ಗ್ರಾಮೀಣ ಸಮುದಾಯಗಳ ಪೂರ್ಣವಿವರವನ್ನು ಕೊಡುತ್ತದೆ. ಅರ್ಥಶಾಸ್ತ್ರದಲ್ಲಿ ಗ್ರಾಮೀಣ ಸಮುದಾಯಗಳ ಬಗೆಗೆ ಇರುವಂತಹ ವರ್ಣನೆ ಆದರ್ಶಾತ್ಮಕವಾಗಿದೆ ವಿನಾ ಗ್ರಾಮ ಸಮುದಾಯದ ವಾಸ್ತವ ಚಿತ್ರಣವನ್ನು ನೀಡಿಲ್ಲ ಎಂಬುದನ್ನು ಇತಿಹಾಸ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಅದೇ ರೀತಿ ಕುಂಬ, ಪಲ್ಲಿ ಮತ್ತು ಗ್ರಾಮ ಎಂಬ ಮೂರು ಬಗೆಯ ಗ್ರಾಮ ಸಮುದಾಯಗಳನ್ನು ಉಲ್ಲೇಖಿಸಿರುವುದನ್ನು ಶುಕ್ರನೀತಿಸಾರದಲ್ಲಿ ಕಾಣಬಹುದಾಗಿದೆ. 'ಕುಂಬ' ಎನ್ನುವಂತಹ ಗ್ರಾಮ 'ಪಲ್ಲಿ'ಯ ಅರ್ಧದಷ್ಟು ಇದ್ದು ಪಲ್ಲಿಯು 'ಗ್ರಾಮ'ದ ಗಾತ್ರದ ಅರ್ಧದಷ್ಟಿರುತ್ತದೆ.

ಮೇಲೆ ಹೆಸರಿಸಿರುವ ಮಹತ್ವದ ಕೃತಿಗಳ ಬಗೆಗೆ ಶೋಧನೆ ಮಾಡಿರುವಂತಹ ವಿದ್ವಾಂಸರು ಮತ್ತು ಇತಿಹಾಸತಜ್ಞರು ಗ್ರಾಮ ಸಮುದಾಯಗಳು ಮತ್ತು ಅವುಗಳ ಸಂಘಟನೆ ಬಗೆಗಿನ ಸ್ಪಷ್ಟ ಮಾಹಿತಿ ಮತ್ತು ಸಂಗತಿಗಳನ್ನು ಹೊರತರುವಲ್ಲಿ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಈ ಗ್ರಾಮಗಳ ಮೂಲ ಸಂಗತಿಗಳ ಬಗೆಗೆ ಯಾವುದೆ ಪ್ರಮಾಣದ ಸ್ಪಷ್ಟತೆಯೊಂದಿಗೆ ಏನನ್ನು ಹೇಳಲು ಸಾಧ್ಯವಿಲ್ಲ ಎನ್ನುವ ನಿರ್ಧಾರಕ್ಕೆ ಅಂತಿಮವಾಗಿ ಬಂದಿದ್ದಾರೆ. ಈ ಕೃತಿಗಳನ್ನು ಶೋಧನೆ ಮಾಡಿದ ಮೇಲೆ ಗ್ರಾಮ ಸಮುದಾಯಗಳ ಬಗೆಗಿನ ಚಿತ್ರಣವು ಅನಿಶ್ಚಿತತೆ ಮತ್ತು ಅಸ್ಪಷ್ಟತೆಯಿಂದ ಕೂಡಿರುವುದು ಗೊತ್ತಾಗಿದೆ. ಇತಿಹಾಸಕ್ಕಿಂತ ತಾರ್ಕಿಕತೆಗೆ ಹೆಚ್ಚಿನ ಗಮನವನ್ನು ಭಾರತೀಯ ಬರಗಾರರು ನೀಡಿರುವುದು ನೋವಿನ ಸಂಗತಿಯಾಗಿದೆ ಎಂದು ಅನಪೇಕ್ಷಣೀಯ ಸನ್ನಿವೇಶದ ಬಗೆಗೆ ಹೆಸರಾಂತ ಇತಿಹಾಸತಜ್ಞ ಶ್ಯಾಮ ಶಾಸ್ತ್ರಿರವರು ಉಲ್ಲೇಖಿಸಿರುತ್ತಾರೆ. ಈ ಬರಹಗಾರರು ಆ ಕಾಲದಲ್ಲಿದ್ದ ಗ್ರಾಮ ಸಮುದಾಯಗಳ ರಚನೆ ಮತ್ತು ಸಂಘಟನೆಗಳನ್ನು ವ್ಯಾಖ್ಯಾನಿಸುವುದರಲ್ಲಿ, ದಾರ್ಶನಿಕ ಸಿದ್ಧಾಂತಗಳನ್ನು ರೂಪಿಸುವುದರಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಿದ್ದರು. ಇದರ ಪ್ರತಿಫಲವಾಗಿ ಗ್ರಾಮ ಸಮುದಾಯಗಳ ಮೂಲಭೂತ ಲಕ್ಷಣಗಳನ್ನು ತಿಳಿದುಕೊಳ್ಳಲಾರದಂತಹ ಕಗ್ಗತ್ತಲಲ್ಲಿ ಇರಬೇಕಾಯಿತು. ಈ ಸಂಗತಿಯನ್ನು ವಿವರಿಸಲು ಒಂದು ನಿದರ್ಶನವನ್ನು ನೀಡಬಹುದು. ಗ್ರಾಮದಲ್ಲಿ ವಾಸಿಸುವ ಬಹುತೇಕ ಜನರಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ವ್ಯವಸಾಯವೆ ಪ್ರಮುಖ ವೃತ್ತಿಯಾಗಿದ್ದು, ಇದು ಇನ್ನುಳಿದ ಎಲ್ಲಾ ಆರ್ಥಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿದೆ. ಆದರೆ ಭೂ ಒಡೆತನದ ಸ್ವರೂಪದ ಬಗೆಗೆ ಸ್ಪಷ್ಟವಾಗಿ ಏನನ್ನೂ ಹೇಳಲಾಗದ ಪರಿಸ್ಥಿತಿಯಲ್ಲಿ ಇದ್ದೇವೆ. ಗ್ರಾಮದಲ್ಲಿರುವ ಭೂಮಿಯು ಎಲ್ಲರಿಗೂ ಸೇರಿದ್ದು ಎಲ್ಲರೂ ಅದರ ಒಡೆಯರಾಗಿದ್ದರೇ ? ಗ್ರಾಮದಲ್ಲಿ ವಾಸಿಸುವ ಎಲ್ಲರೂ ಈ ವೃತ್ತಿಯನ್ನು ಒಟ್ಟಾಗಿ ಸಾಗುವಳಿ ಮಾಡುತ್ತಿದ್ದರೇ ? ಗ್ರಾಮದಲ್ಲಿರುವ ಎಲ್ಲರೂ ಒಟ್ಟಾರೆಯಾಗಿ ಈ ವೃತ್ತಿಯನ್ನು ಅವಲಂಬಿಸಿದ್ದರೇ?

ಅಥವಾ ವೈಯಕ್ತಿಕವಾಗಿ ಖಾಸಗಿ ಒಡೆತನ ಹೊಂದಿದ್ದರೇ ? ಖಾಸಗಿಯಾಗಿ ಸಾಗುವಳಿ ಮಾಡುತ್ತಿದ್ದರೇ ? ಗ್ರಾಮಗಳಲ್ಲಿನ ಕುಟುಂಬಗಳು ವೈಯಕ್ತಿಕವಾಗಿ ಅವಲಂಬಿಸಿದ್ದರೇ ? ಅಥವಾ ಕ್ಷೇತ್ರವನ್ನು ಆಳುತಿದ್ದ ಆಡಳಿತಗಾರರು ಭೂ ಒಡೆಯರಾಗಿದ್ದರೇ ? ಅಥವಾ ಆಡಳಿತ ನಡೆಸುವವರ ಪರವಾಗಿ ಗುತ್ತಿಗೆದಾರರು ಸಾಗುವಳಿ ಮಾಡುತ್ತಿದ್ದರೆ ? ಈ ಮೂರು ಬಗೆಯ ಭೂ ಒಡೆತನದ ಬಗೆಗೆ ಇರುವ ಉಲ್ಲೇಖಗಳು ಓದುಗರಿಗೆ ದಿಕ್ಕು ತೋರದಂತೆ ಮಾಡುತ್ತವೆ. ಈ ಬಗೆಯ ಮಾಹಿತಿಯ ಸ್ವರೂಪವನ್ನು ಹೊಂದಿರುವ ಈ ಕೃತಿಗಳಿಂದ ಭಾರತದಲ್ಲಿ ಗ್ರಾಮೀಣ ಸಮಾಜಶಾಸ್ತ್ರದ ಬೆಳವಣಿಗೆಯನ್ನು ಕಂಡುಕೊಳ್ಳಲು ಸಾಧ್ಯವಾಗಲಿಲ್ಲ.

ಭಾರತದಲ್ಲಿ ಮೊಗಲರ ಆಡಳಿತ ಒಂದು ಘಟ್ಟವನ್ನು ತಲುಪಿದ ನಂತರ ಗ್ರಾಮ ಸಮುದಾಯಗಳ ಬಗೆಗೆ ಅಧಿಕೃತ ಮಾಹಿತಿಯನ್ನು ಕಲೆ ಹಾಕುವ ಪ್ರಯತ್ನಗಳನ್ನು ಮಾಡಲಾಯಿತು. ಗ್ರಾಮೀಣ ಸಮುದಾಯಗಳ ಅದರಲ್ಲೂ ವಿಶೇಷವಾಗಿ ಭೂ ಒಡೆತನ ವ್ಯವಸ್ಥೆಯ ಬಗೆಗೆ ವೈಜ್ಞಾನಿಕ ಮಾಹಿತಿಯನ್ನು ಕಲೆ ಹಾಕುವ ಕಾರ್ಯವನ್ನು ರಾಜಾ ತೋದರ ಮಲ್ಲನ ಸಹಾಯದಿಂದ ರಾಜ ಅಕ್ಬರ್ ಪ್ರಾರಂಭಿಸಿದನು. ಈ ಪ್ರಯತ್ನಗಳು ಒಳ್ಳೆಯ ಪರಿಣಾಮವನ್ನುಂಟುಮಾಡಿದರು ಕೂಡ ವಿರಳವಾದ ಮತ್ತು ನಿರಂತರ ಪ್ರಯತ್ನದ ಕೊರತೆ ಎದ್ದು ಕಾಣುತ್ತಿತ್ತು. ಆದ್ದರಿಂದ ಮೊಗಲರ ಆಡಳಿತ ಅವಧಿಯಲ್ಲಿಯೂ ಪರಿಸ್ಥಿತಿಯಲ್ಲಿ ಪ್ರಗತಿಯನ್ನು ಕಾಣಲಾಗಲಿಲ್ಲ.

ಭಾರತಕ್ಕೆ ಬ್ರಿಟಿಷರ ಆಗಮನದಿಂದಾಗಿ ಪರಿಸ್ಥಿತಿಯಲ್ಲಿ ಬದಲಾವಣೆ ಉಂಟಾಗಿ ಪ್ರಗತಿ ಕಂಡಿತು. ಗ್ರಾಮೀಣ ಸಮುದಾಯಗಳ ಬಗೆಗೆ ವೈಜ್ಞಾನಿಕ ಮಾಹಿತಿಯನ್ನು ಕಲೆಹಾಕುವ ಮತ್ತು ಅವುಗಳನ್ನು ಕ್ರಮಬದ್ಧ ದಾಖಲೆಗಳಾಗಿ ರೂಪಿಸುವ ಪ್ರಾಮಾಣಿಕ ಪ್ರಯತ್ನವು ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿ ಬ್ರಿಟಿಷ್‌ರ ಆಳ್ವಿಕೆಯಲ್ಲಿ ಪ್ರಾರಂಭವಾಯಿತು. ಜಿಲ್ಲೆಯಲ್ಲಿನ ಎಲ್ಲಾ ಗ್ರಾಮಗಳ ಬಗೆಗೆ ವಿಶಿಷ್ಟ ಉದ್ದೇಶಕ್ಕಾಗಿ ಮಾಹಿತಿಯನ್ನು ಕಲೆ ಹಾಕುವುದಕ್ಕಾಗಿ ಅಧಿಕಾರಿಗಳನ್ನು ನೇಮಿಸಲಾಯಿತು. ಕಲೆ ಹಾಕಿದ ಮಾಹಿತಿಯನ್ನು ಸುವ್ಯವಸ್ಥಿತವಾಗಿ ಇಡುವುದು ಮಾತ್ರವಲ್ಲದೆ ಅವುಗಳನ್ನು ಜಿಲ್ಲಾ ಗೆಜೆಟೆರ್ಸ್‌ನಲ್ಲಿ ಪ್ರಕಟಿಸಲಾಯಿತು. ಭಾರತದಲ್ಲಿನ ಗ್ರಾಮೀಣ ಸಮಾಜಗಳ ವೈಜ್ಞಾನಿಕ ಅಧ್ಯಯನದ ಆರಂಭ ಅಧಿಕಾರಿಗಳು ಕಲೆಹಾಕಿದ ಈ ಬಗೆಯ ಮಾಹಿತಿಯಿಂದ ಪ್ರಾರಂಭಗೊಂಡಿದ್ದು ಎಂದು ಹೇಳಿದರೆ ತಪ್ಪಾಗಲಾರದು.

## 2.5 ಭಾರತದಲ್ಲಿನ ಗ್ರಾಮೀಣ ಸಮಾಜಶಾಸ್ತ್ರದ ಮೂಲ ಪ್ರವರ್ತಕರು

ಗ್ರಾಮೀಣ ಸಮುದಾಯಗಳು ಮತ್ತು ಅವುಗಳ ಸಂಘಟನೆ ಕುರಿತಂತೆ ಕ್ರಮಬದ್ಧವಾದ ವಿಶ್ಲೇಷಣೆಯನ್ನು ಪ್ರಾರಂಭಿಸಿದ ಗೌರವವು ಇಂಗ್ಲೆಂಡಿನ ನ್ಯಾಯಶಾಸ್ತ್ರ ವಿದ್ವಾಂಸರಾದ ಸರ್ ಹೆನ್ರಿ ಸಮ್ನರ್ ಮೇನ್‌ಗೆ ಸಲ್ಲುತ್ತದೆ. 1861 ರಲ್ಲಿ ಅವರು ಪ್ರಕಟಿಸಿದಂತಹ **'ಆ್ಯನ್ಶಂಟ್ ಲಾ' (Ancient Law)** ನಲ್ಲಿ ಭಾರತದಲ್ಲಿನ ಗ್ರಾಮ ಸಮುದಾಯಗಳ ಬಗೆಗೆ ಅದರಲ್ಲೂ ಭೂ ಒಡೆತನ ಪದ್ಧತಿಗಳ ಬಗೆಗೆ ಉಲ್ಲೇಖವನ್ನು ಮಾಡಿರುವುದು ಅವರ ಹೆಸರು ಬೆಳಕಿಗೆ ಬರಲು ಕಾರಣವಾಯಿತು. 1862 ರಲ್ಲಿ ವೈಸ್‌ರಾಯಿ ಆಗಿದ್ದ ಲಾರ್ಡ್ ಎಲ್ಜಿನ್‌ರು ಕಾನೂನು ಸದಸ್ಯರಾಗಿ ಭಾರತಕ್ಕೆ ಬಂದರು. ಎಲ್ಜಿನ್, ಲಾರೆನ್ಸ್ ಮತ್ತು ಮಾಯೋ ಎಂಬ ಈ ಮೂವರು ವೈಸ್‌ರಾಯ್‌ಗಳ ಅಧಿಕಾರಾವಧಿಯಲ್ಲಿ ಕಾನೂನು ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಇವರು ಕಲ್ಕತ್ತಾ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ಇಂಗ್ಲೆಂಡಿಗೆ ಹಿಂದಿರುಗಿದ ಮೇಲೆ 1869 ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ನ್ಯಾಯಶಾಸ್ತ್ರ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಅಲ್ಲಿ ಅವರು ಆರು ಉಪನ್ಯಾಸಗಳನ್ನು ನೀಡಿದರು. ಈ ಉಪನ್ಯಾಸಗಳು 1871ರಲ್ಲಿ **'ವಿಲ್ಲೇಜ್ ಕಮ್ಯೂನಿಟಿಸ್ ಇನ್ ದಿ ಈಸ್ಟ್ ಆ್ಯಂಡ್ ವೆಸ್ಟ್' (Village Communities in the East and West)** ಎಂಬ ಶಿರೋನಾಮೆಯಲ್ಲಿ ಪ್ರಕಟಗೊಂಡಿತು. ಐ.ಸಿ.ಎಸ್. (I.C.S) ತರಬೇತುದಾರರಿಗೆ ನೀಡಿದ ಹದಿಮೂರು ಉಪನ್ಯಾಸಗಳನ್ನೊಳಗೊಂಡ **'ಅರ್ಲಿ ಹಿಸ್ಟರಿ ಆಫ್ ಇನ್‌ಸ್ಟಿಟ್ಯೂಶನ್' (Early History of Institution)** ಎಂಬ ಕೃತಿಯನ್ನು 1875 ರಲ್ಲಿ ಪ್ರಕಟಿಸಿದರು. ಈ

ಕೃತಿಗಳಲ್ಲಿ ಭಾರತದ ಗ್ರಾಮಗಳಲ್ಲಿನ ಹಲವಾರು ಸಂಸ್ಥೆಗಳ ಬಗೆಗಿನ ಶ್ರೇಷ್ಠವಾದ ವಿಶ್ಲೇಷಣೆಯನ್ನು ಕಾಣಬಹುದಾಗಿದೆ.

ವೈಜ್ಞಾನಿಕ ಸಮಾಜವಾದದ ಪಿತಾಮಹನಾದ ಪಾಶ್ಚಿಮಾತ್ಯ ಸಾಂಪ್ರದಾಯಿಕ ಚಿಂತಕರಾದ ಕಾರ್ಲ್‌ಮಾರ್ಕ್ಸ್‌ರವರ ಗಮನವನ್ನು ಭಾರತದ ಗ್ರಾಮ ಸಮುದಾಯಗಳು ಸೆಳೆದಿವೆ. ಕಾರ್ಲ್‌ಮಾರ್ಕ್ಸ್‌ರವರು ತಮ್ಮ ಮೇರು ಕೃತಿ **'ದಾಸ್ ಕ್ಯಾಪಿಟಲ್' (Das Capital)** ನಲ್ಲಿ ಭಾರತದ ಗ್ರಾಮ ಸಮುದಾಯಗಳ ಹಲವಾರು ಲಕ್ಷಣಗಳನ್ನು ಚರ್ಚಿಸಿದ್ದಾರೆ. ಭಾರತದ ಗ್ರಾಮ ಸಮುದಾಯಗಳ ಪರಿವರ್ತನಾ ರಹಿತ ಸ್ಥಿತಿಯ ಬಗೆಗೆ ಹೇಳುತ್ತಾ 'ರಾಜಕೀಯ ಬಿರುಗಾಳಿ ಸೋಂಕಿಲ್ಲದೆ ಸಮಾಜದ ಆರ್ಥಿಕ ಮೂಲಾಂಶಗಳ ರಚನೆಯು ಹಾಗೆಯೇ ಉಳಿದುಕೊಂಡಿದೆ' ಎಂದಿದ್ದಾರೆ. ಭಾರತದ ಮುಂಚಿನ ಗ್ರಾಮಗಳಲ್ಲಿ ಸಮತಾವಾದ ಇತ್ತು ಎಂಬುದನ್ನು ಕಾರ್ಲ್‌ಮಾರ್ಕ್ಸ್ ಕಂಡುಕೊಂಡಿದ್ದಾರೆ.

ಸರ್ ಹೆನ್ರಿ ಸಮ್ನರ್ ಮೇನ್ ನಂತರ ಭಾರತೀಯ ಗ್ರಾಮಗಳ ವೈಜ್ಞಾನಿಕ ಅಧ್ಯಯನಕ್ಕೆ ಗಣನೀಯವಾಗಿ ಕಾಣಿಕೆ ನೀಡಿದ ಮತ್ತೋರ್ವ ಬ್ರಿಟಿಷ್ ವಿದ್ವಾಂಸ ಎಂದರೆ ಲಾರ್ಡ್ ಬೆಡನ್ ಪಾವೆಲ್ (Lord Baden Powell). ಇವರು ಗ್ರಾಮಗಳಲ್ಲಿನ ಭೂ ಒಡೆತನ ಮತ್ತು ಭೂ ಕಂದಾಯ ವ್ಯವಸ್ಥೆಗಳ ಬಗೆಗಿನ ಪರಿಸ್ಥಿತಿಯನ್ನು ತಿಳಿಯಲು ಆಡಳಿತಾಧಿಕಾರಿಯಾಗಿ ಭಾರತಕ್ಕೆ ಬಂದರು. ಸಮೀಕ್ಷಾ ದಾಖಲೆಗಳು, ಜಿಲ್ಲಾ ಗೆಜೆಟೆರ್ಸ್‌ಗಳು, ಕೈಬರಹದಿಂದ ಮಾಡಿದ ಜಿಲ್ಲಾ ಕಡತಗಳು, ಕಂದಾಯ ಪಾವತಿ ದಾಖಲೆಗಳು ಇವುಗಳ ಆಧಾರದ ಮೇಲೆ ಬೆಡನ್ ಪಾವೆಲ್ ಉತ್ತಮ ಮಾಹಿತಿಯನ್ನು ಕಲೆ ಹಾಕಿದರು. ಭಾರತದ ಹಲವಾರು ಭಾಗಗಳಲ್ಲಿನ ಭೂ ಒಡೆತನ ಪದ್ಧತಿಯ ಬಗೆಗಿನ ವಿವರಗಳನ್ನು ಕುರಿತಂತೆ 1892 ರಲ್ಲಿ ಮೂರು ಸಂಪುಟ (volume) ಗಳನ್ನು ಪ್ರಕಟಿಸಿದರು. ಬಂಗಾಳದಲ್ಲಿನ ಭೂ ಒಡೆತನ ಪದ್ಧತಿಯ ಬಗೆಗೆ ಮೊದಲ ಸಂಪುಟ, ಪಂಜಾಬ್ ಮತ್ತು ಅಜ್ಮೀರ್, ಸೆಂಟ್ರಲ್ ಪ್ರಾವಿನ್ಸ್ ಮತ್ತು ನಾರ್ತ್ ವೆಸ್ಟ್ ಪ್ರಾವಿನ್ಸ್‌ಸ್‌ಗಳ ಬಗೆಗೆ ಎರಡನೆಯ ಸಂಪುಟ ಮತ್ತು ಮದ್ರಾಸ್, ಬಾಂಬೆ, ಅಸ್ಸಾಂ, ಬಿಹಾರ್, ಬ್ರಿಟಿಷ್ ಬರ್ಮ ಮತ್ತು ಅಂಡಮಾನ್‌ಗಳ ಬಗೆಗೆ ಮೂರನೆ ಸಂಪುಟ ವಿವರಗಳನ್ನು ಒಳಗೊಂಡಿದೆ. ಇಂಡಿಯನ್ **'ವಿಲೇಜ್ ಕಮ್ಯೂನಿಟಿ' (Indian village Community)** ಎಂಬ ಶಿರೋನಾಮೆಯುಳ್ಳ ಪೂರ್ಣ ಪ್ರಮಾಣದ ಗ್ರಂಥವನ್ನು 1896 ರಲ್ಲಿ ಪ್ರಕಟಿಸಿದ್ದಾರೆ. ಹಾಗೆಯೇ **'ಒರಿಜಿನ್ ಆ್ಯಂಡ್ ಗ್ರೋಥ್ ಆಫ್ ವಿಲೇಜ್ ಸ್ಟಡೀಸ್ ಇನ್ ಇಂಡಿಯಾ' (Origin and Growth of Village Studies in India)** ಎಂಬ ಸಣ್ಣ ಗ್ರಂಥವನ್ನು 1899 ರಲ್ಲಿ ಪ್ರಕಟಿಸಿದ್ದಾರೆ.

ಅಮೆರಿಕದಲ್ಲಿ ಗ್ರಾಮ ಸಮುದಾಯಗಳ ವೈಜ್ಞಾನಿಕ ಅಧ್ಯಯನಗಳನ್ನು ಮಾಡಿದವರು ಅಲ್ಲಿನ ಪುರೋಹಿತ ವರ್ಗ ಮತ್ತು ಕ್ರೈಸ್ತ ಪಾದ್ರಿಗಳು ಎನ್ನುವುದನ್ನು ನಾವು ಗಮನಿಸಿದ್ದೇವೆ. ಆಸಕ್ತಿಯುತ ಅಂಶ ಎಂದರೆ ಭಾರತದಲ್ಲೂ ಮೊದಲಿಗೆ ಗ್ರಾಮ ಸಮುದಾಯಗಳ ವೈಜ್ಞಾನಿಕ ಅಧ್ಯಯನವನ್ನು ಮಾಡಿದವರು ಪುರೋಹಿತರೆ. ಅವರೇ ರೆವರೆಂಡ್ ಲಾಲ್ ಬಿಹಾರಿ ಡೆ (Rev. Lal Bihari Dey). ಪಶ್ಚಿಮ ಬಂಗಾಳದಲ್ಲಿನ ಬರ್ದ್ವಾನ್ (Burdwan) ಸಮೀಪದ ಗ್ರಾಮದಲ್ಲಿನ ತೋಟದ ಮಾಲೀಕರ (planters) ಜೀವನವನ್ನು ಅಧ್ಯಯನ ಮಾಡಿ ಗ್ರಂಥವನ್ನು ಹೊರ ತಂದಿದ್ದಾರೆ. ಇವರು ಹಾಕಿಕೊಟ್ಟ ದಾರಿಯಲ್ಲಿ ಸಾಮಾಜಿಕ ವಿಜ್ಞಾನಿಗಳು ಕೂಡ ಗ್ರಾಮೀಣ ಸಮುದಾಯದ ವೈಜ್ಞಾನಿಕ ಅಧ್ಯಯನವನ್ನು ಕೈಗೊಂಡರು. 20 ನೆ ಶತಮಾನದ ಪ್ರಾರಂಭದ ದಶಕಗಳಲ್ಲಿ ಗ್ರಾಮಗಳ ಅಧ್ಯಯನವನ್ನು ಕೈಗೊಂಡವರಲ್ಲಿ ಅರ್ಥಶಾಸ್ತ್ರಜ್ಞರೇ ಮೊದಲಿಗರಾಗಿದ್ದಾರೆ. ಏಕರೂಪದ ಪ್ರದೇಶಗಳನ್ನು ಮತ್ತು ಆಯ್ದ ಗ್ರಾಮಗಳ ಸಮೀಕ್ಷೆ ನಡೆಸಿ ಏಕವಿಷಯ ಗ್ರಂಥ ರೂಪದಲ್ಲಿ ಸಮೀಕ್ಷೆಯ ಫಲಿತಾಂಶಗಳನ್ನು ಪ್ರಕಟಿಸಿದರು. ಗ್ರಾಮ ಅಧ್ಯಯನ ಮಾಡಿದವುಗಳಲ್ಲಿ ಕೆಲವು ಪ್ರಮುಖವಾಗಿವೆ. ಅವುಗಳು ಇಂತಿವೆ ;

1921 ರಲ್ಲಿ ಬಾಂಬೆ ಸಂಸ್ಥಾನದ ಕೃಷಿ ನಿರ್ದೇಶಕರಾದ ಎಚ್.ಎಸ್. ಮಾನ್‌ರವರು **'ಲ್ಯಾಂಡ್ ಆ್ಯಂಡ್ ಲೇಬರ್ ಇನ್ ಡೆಕ್ಕನ್ ವಿಲೇಜ್' (Land and Labour in Deccan village)** ಎಂಬ ಶಿರೋನಾಮೆಯುಳ್ಳ ಗ್ರಂಥವನ್ನು ಪ್ರಕಟಿಸಿದರು.

ಡೆಕ್ಕನ್ ಸಂಸ್ಥಾನದಲ್ಲಿನ ಆಯ್ದ ಗ್ರಾಮಗಳ ಮೊದಲ ನೇರ ಅನುಭವಾತ್ಮಕ ಅನ್ವೇಷಣೆಯ ಫಲಿತಾಂಶವೇ ಈ ಗ್ರಂಥ. ಪ್ರತಿಯೊಂದು ಗ್ರಾಮದ ಕೃಷಿಯ ಅಂಶಗಳು ಮತ್ತು ಬೆಳೆ ಸಾಗುವಳಿ ಮಾಡುವ ವಿಧಾನ, ಭೂ ಒಡೆತನದ ಸ್ವರೂಪ, ಗ್ರಾಮದ ಭೌಗೋಳಿಕ ಲಕ್ಷಣಗಳನ್ನು ಒಳಗೊಂಡ ಗ್ರಾಮಗಳ ಸಾಮಾನ್ಯ ಲಕ್ಷಣಗಳನ್ನು ಡಾ. ಮಾನ್ ಈ ಗ್ರಂಥದಲ್ಲಿ ವರ್ಣಿಸಿದ್ದಾರೆ. ಸಾಂಖ್ಯಿಕವಾಗಿ ಪ್ರತಿನಿಧಿಸುವಂತಹ ಆದಾಯ, ವೆಚ್ಚ, ಸಾಲ ಇತ್ಯಾದಿಗಳ ಆಧಾರದ ಮೇಲೆ ಜನರ ಆರ್ಥಿಕ ಸ್ಥಿತಿಗತಿಗಳನ್ನು ಅಳೆಯಲಾಗಿದೆ. ಗ್ರಾಮ ಸಮುದಾಯಗಳನ್ನು ಕ್ರಮಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಹಲವಾರು ವಿಧಾನಗಳನ್ನು ಗ್ರಂಥವು ಒಳಗೊಂಡಿದೆ.

ದಕ್ಷಿಣ ಭಾರತದ ಗ್ರಾಮ ಅಧ್ಯಯನಗಳನ್ನು ಪ್ರಾರಂಭಿಸಿದಂತಹ ಕೀರ್ತಿ ಪ್ರೊ. ಗಿಲ್‌ಬರ್ಟ್ ಸ್ಲೇಟರ್ (Prof Gilbert Slater) ಗೆ ಸಲ್ಲುತ್ತದೆ. ಮದ್ರಾಸ್ ವಿಶ್ವವಿದ್ಯಾನಿಲಯದ ಸ್ನಾತಕ ವಿದ್ಯಾರ್ಥಿಗಳ ಸಹಾಯದಿಂದ ಹನ್ನೆರಡು ಗ್ರಾಮಗಳ ಸಮೀಕ್ಷೆಯನ್ನು ಕೈಗೊಂಡರು. ಈ ಸಮೀಕ್ಷೆಗಳಿಂದ ಹೊರಬಂದ ಫಲಿತಾಂಶದ ಆಧಾರದ ಮೇಲೆ 1918 ರಲ್ಲಿ **'ಸಮ್ ಸೌಥ್ ಇಂಡಿಯನ್ ವಿಲೇಜಸ್' (Some South Indian Villages)** ಎಂಬ ಶಿರೋನಾಮೆಯುಳ್ಳ ಗ್ರಂಥವನ್ನು ಪ್ರಕಟಿಸಿದರು. ಇದು ಆರ್ಥಿಕ ಸಂಘಟನೆ, ಸಹಕಾರಿ ಕೈಗಾರಿಕೆಗಳು, ಗ್ರಾಮ ವ್ಯಾಪಾರ, ನೈರ್ಮಲ್ಯ, ಶೈಕ್ಷಣಿಕ ಪದ್ಧತಿ, ಗ್ರಾಮ ಆಡಳಿತದ ಬಗೆಗೆ ಪೂರ್ಣ ವಿವರವನ್ನು ಒಳಗೊಂಡಿದೆ.

ಗ್ರಾಮಗಳ ಅಧ್ಯಯನವನ್ನು ಮಾಡಿರುವ ಮಾಹಿತಿ ಇಂತಿದೆ. ಡಾ. ಎ. ಅಯ್ಯರ್ (Dr. A Ayyar) ರವರ **'ಸ್ಟಡಿ ಆಫ್ ಮಲ್ಬಾರ್ ವಿಲೇಜ್' (Study of Malbar village)**, ಡಾ. ಲುಕಾಸ್ (Dr Lucas) ರವರ **'ಸ್ಟಡಿ ಆಫ್ ಕಬೀರ್‌ಪುರ್ ಇನ್ ಪಂಜಾಬ್' (Study of Kabirpur in Punjab)**, ಎಂ.ಎಲ್. ಡೌಲಿಂಗ್ಸ್ (M.L.Dowling's) ರವರ **'ಪಂಜಾಬ್ ಪೀಝೆಂಟ್ಸ್ ಇನ್ ಪ್ರಾಸ್ಪರಿಟಿ' (Punjab Peasants in Prosperity)**, ಜೆ.ಸಿ. ಜಾಕ್ (J.C. Jack) ರವರ **'ಎಕಾನಾಮಿಕ್ ಲೈಫ್ ಆಫ್ ಬೆಂಗಾಲ್' (Economic life of Bengal)**, ಜಾನ್ ಮಾಥಾಯ್ (John Mathai) ರವರ **'ವಿಲೇಜ್ ಗವರ್ನ್‌ಮೆಂಟ್ ಇನ್ ಬ್ರಿಟಿಷ್ ಇಂಡಿಯ' (Village Government in British India)**, ರಾಧ ಕಮಲ್ ಮುಖರ್ಜಿ (Radha Kamal Mookerjee's) ರವರ **'ಫೌಂಡೇಷನ್ ಆಫ್ ಎಕಾನಾಮಿಕ್ಸ್', 'ಡೆಮಾಕ್ರೆಸಿಸ್ ಆಫ್ ದಿ ಈಸ್ಟ್', 'ಫೀಲ್ಡ್ ಆ್ಯಂಡ್ ಫಾರ್ಮರ್ಸ್ ಇನ್ ಔದ್' (Foundation of Economics, Democracies of the East, Field and Farmers in Oudh)**; ರಾಧ ಕುಮುದ್ ಮುಖರ್ಜಿ (Radha Kumud Mookerjee) ರವರ **'ಲೋಕಲ್ ಗವರ್ನ್‌ಮೆಂಟ್ ಇನ್ ಆ್ಯನ್ಶಂಟ್ ಇಂಡಿಯ' (Local Government in Ancient India)**, ಎಫ್.ಎಲ್. ಬ್ರೆನಿಸ್ **'ವಿಲೇಜ್ ಅಪ್‌ಲಿಫ್ಟ್ ಇನ್ ಇಂಡಿಯ' (F.L.Braynis Village uplift in India)**, ಸ್ಟ್ರಿಕ್ಲಾನ್ **(Stricklan)** ರವರ **'ರೂರಲ್ ವೆಲ್ಫೇರ್ ಇನ್ ಇಂಡಿಯ' (Rural Welfare in India)** ಮುಖ್ಯವಾದವುಗಳಾಗಿವೆ.

ಈ ಕ್ಷೇತ್ರದಲ್ಲಿ ರಾಧ ಕುಮುದ್ ಮುಖರ್ಜಿಯುವರ **'ಲೋಕಲ್ ಗೌವ್ಹರ್ನ್‌ಮೆಂಟ್ ಇನ್ ಆ್ಯನ್ಶಂಟ್ ಇಂಡಿಯ' (Local Government in Ancient India)** ಎನ್ನುವ ಗ್ರಂಥವು ಪ್ರಮುಖವಾಗಿದೆ. ಇದರಲ್ಲಿ ಇವರು ಸಮಾಜ ಮತ್ತು ರಾಜ್ಯಗಳ ನಡುವೆ ವ್ಯತ್ಯಾಸಗಳನ್ನು ಗುರುತಿಸಿದ್ದಾರೆ. ಇವರ ಪ್ರಕಾರ ರಾಜ್ಯ ಎನ್ನುವುದು ರಾಜಧಾನಿ ನಗರವಾಗಿದ್ದು ಅದರಲ್ಲಿ ರಾಜನು ರಾಜ್ಯಾಡಳಿತವನ್ನು ಹೊಂದಿದ್ದರೆ, ಸಮಾಜ ಎನ್ನುವುದು ಸಣ್ಣ ಗ್ರಾಮ ಸಮುದಾಯಗಳಾಗಿದ್ದು ಆತನ ಪರಿಮಿತಿಯಲ್ಲಿ ಬರುತ್ತವೆ. ರಾಜ್ಯ ಮತ್ತು ಸಮಾಜಗಳು ಬೇರೆ ಬೇರೆಯಾಗಿ ಸ್ವತಂತ್ರವಾಗಿದ್ದು ಅವುಗಳ ನಡುವೆ ವ್ಯತ್ಯಾಸಗಳಿದ್ದರೂ ಜೊತೆ ಜೊತೆಯಲ್ಲಿರುವುದು ಭಾರತೀಯ ರಾಜಕೀಯದ ಪ್ರಮುಖ ಲಕ್ಷಣವಾಗಿದೆ ಎಂದು ಮುಖರ್ಜಿಯವರು ಉಲ್ಲೇಖಿಸಿದ್ದಾರೆ. ಇವೆರಡರ ನಡುವೆ ವ್ಯತ್ಯಾಸವಿದ್ದರೂ ಸ್ವತಂತ್ರ ರಚನೆ ಹೊಂದಿದ್ದು ತಮ್ಮದೇ ಆದ ನಿರ್ದಿಷ್ಟ ರಚನೆಗಳು ಮತ್ತು ಕಾರ್ಯಗಳನ್ನು ಹೊಂದಿರುವುದರ ಜೊತೆಗೆ ಅವುಗಳು ತಮ್ಮದೇ ಆದ ವಿಕಾಸ ಮತ್ತು ಬೆಳವಣಿಗೆಯ ನಿಯಮಗಳನ್ನು ಹೊಂದಿವೆ. ರಾಜ್ಯದ ಎಲ್ಲೆಯನ್ನು ನಿರ್ದಿಷ್ಟವಾಗಿ ನಿರ್ಧರಿಸಲಾಗಿರುತ್ತದೆ.

ರಾಜ್ಯವು ಗ್ರಾಮ ಸಮುದಾಯಗಳ ಚಟುವಟಿಕೆಗಳ ಕ್ಷೇತ್ರವನ್ನು ಅತಿಕ್ರಮಣ ಮಾಡುವುದಿಲ್ಲ. ಆದ್ದರಿಂದ ರಾಜನು ರಾಜ್ಯದ ಒಡೆಯನಾಗಿರುತ್ತಾನೆಯೇ ವಿನಾ ಸಮಾಜಕ್ಕಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈ ಪರಿಸ್ಥಿತಿಯನ್ನು ಕಾಣಲಾಗುವುದಿಲ್ಲ. ಅಲ್ಲಿ ರಾಜ್ಯ ಮತ್ತು ಸಮಾಜಗಳೆರಡೂ ಬೆರೆತಿರುತ್ತವೆ (ಐಕ್ಯವಾಗಿರುತ್ತವೆ). ರಾಜನು ಕೇವಲ ರಾಜ್ಯದ ಒಡೆಯನಾಗಿರುವುದಲ್ಲದೆ ಸಮಾಜಕ್ಕೂ ಒಡೆಯನಾಗಿರುತ್ತಾನೆ. ಆದ್ದರಿಂದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ರಾಜನ ಹಣೆಬರಹದೊಂದಿಗೆ ಬಿಡಿಸಲಾಗದ ಸಂಬಂಧವನ್ನು ಗ್ರಾಮ ಸಮುದಾಯಗಳು ಹೊಂದಿರುತ್ತವೆ. ರಾಜನು ಯುದ್ಧದಲ್ಲಿ ನಿರತನಾದಾಗ ಅದರ ಪ್ರತಿಘಾತಗಳು ಗ್ರಾಮಗಳ ಮೇಲೆ ಉಂಟಾಗುತ್ತವೆ. ರಾಜನು ರಾಜಕೀಯ ಒಳಸಂಚಿಗೆ ಒಳಗಾದಾಗ ಗ್ರಾಮಗಳು ಅದರ ಪ್ರಭಾವವನ್ನು ಅನುಭವಿಸಬೇಕಾಗುತ್ತವೆ. ಆದರೆ ಭಾರತದಲ್ಲಿ ರಾಜ್ಯ ಮತ್ತು ಸಮಾಜಗಳು ಸ್ವತಂತ್ರ ಘಟಕಗಳಾಗಿ ಬೇರೆ ಬೇರೆಯಾಗಿ ಇರುವುದರಿಂದ ಇದರ ಪ್ರಭಾವ ಅಷ್ಟಾಗಿ ಕಂಡುಬರುವುದಿಲ್ಲ. ಯುದ್ಧ ಮತ್ತು ಕ್ರಾಂತಿಗಳಿಂದ ಗ್ರಾಮಗಳನ್ನು ರಕ್ಷಿಸಲು ಭಾರತೀಯ ರಾಜ್ಯನೀತಿಯ ವಿಶಿಷ್ಟ ಸ್ವರೂಪ ಕಾರಣವಾಗಿದೆ.

ಪೂರ್ಣ ಪ್ರಮಾಣದ ಸಮಾಜಶಾಸ್ತ್ರೀಯ ಅಧ್ಯಯನವನ್ನು ಅದರಲ್ಲೂ ಭಾರತೀಯ ಗ್ರಾಮಗಳ ಬಗ್ಗೆ ಮಾಡಿದಂತಹ ಕೀರ್ತಿ ಡಬ್ಲ್ಯು. ಎಚ್. ವೈಸರ್‌ಗೆ ಸಲ್ಲುತ್ತದೆ. ಅಮೆರಿಕ ಸಂಜಾತರಾದ ಡಬ್ಲ್ಯು. ಎಚ್. ವೈಸರ್‌ರವರು ಕ್ರೈಸ್ತ ಮಿಷನರಿಯಾಗಿ ಭಾರತಕ್ಕೆ ಬಂದು ಉತ್ತರ ಪ್ರದೇಶದ ಕರೀಂಪುರ ಗ್ರಾಮದಲ್ಲಿ ಅಧ್ಯಯನವನ್ನು ಕೈಗೊಂಡರು. ಸಮಾಜಶಾಸ್ತ್ರೀಯ ದೂರದೃಷ್ಟಿಯನ್ನು ಒಳಗೊಂಡು  ಕರೀಂಪುರ ಗ್ರಾಮದ ವೈಜ್ಞಾನಿಕ ಅಧ್ಯಯನವನ್ನು ಮಾಡುವಾಗ ಸಹಭಾಗಿ ಅವಲೋಕನ ವಿಧಾನವನ್ನು ಅಳವಡಿಸಿಕೊಂಡಿರುವುದು ಕಂಡುಬರುತ್ತದೆ. ಈ ವಿಧಾನದ ಮೂಲಕ ಸಂಗ್ರಹಿಸಿದ ಮಾಹಿತಿ ಆಧಾರದ ಮೇಲೆ ಡಬ್ಲ್ಯು. ಎಚ್. ವೈಸರ್‌ರವರು ಎರಡು ಗ್ರಂಥಗಳನ್ನು ಪ್ರಕಟಿಸಿದರು. **'ಬಿಹೈಂಡ್ ಧಿ ಮಡ್ ವಾಲ್ಸ್'** ಮತ್ತು **'ದಿ ಹಿಂದು ಜಾಜ್‌ಮನಿ ಸಿಸ್ಟಿಮ್'** ಎಂಬುವೇ ಆ ಎರಡು ಗ್ರಂಥಗಳು. ಈ ಗ್ರಂಥಗಳಿಗಾಗಿ ಅಮೆರಿಕದ ಕಾರ್ನೆಲ್ (Cornell) ವಿಶ್ವವಿದ್ಯಾನಿಲಯವು ಡಾಕ್ಟರೇಟ್ ಪದವಿಯನ್ನು ನೀಡಿದೆ.

ಕರೀಂಪುರದ ಸೂಕ್ಷ್ಮ ಅಧ್ಯಯನದಲ್ಲಿ ಡಬ್ಲ್ಯು. ಎಚ್. ವೈಸರ್‌ರವರು ಜಾಜ್‌ಮನಿ ಎಂದು ಕರೆಯಲ್ಪಡುವ ಸಾಂಪ್ರದಾಯಿಕ ಆರ್ಥಿಕ ಸಂಘಟನೆಯನ್ನು ವರ್ಣಿಸಿದ್ದಾರೆ. ಈ ವ್ಯವಸ್ಥೆಯಲ್ಲಿ ಎದ್ದು ಕಾಣುವ ಎರಡು ಗುಂಪುಗಳಿವೆ. ಅವುಗಳೆ ಜಾಜ್‌ಮನ್‌ರು ಮತ್ತು ಕಮೀನರು. ಜಾಜ್‌ಮನ್‌ರು ಭೂ ಒಡೆಯರಾಗಿರುತ್ತಾರೆ, ಕಮೀನರು ಸುಗ್ಗಿಯ ಕಾಲದಲ್ಲಿ ದವಸ ಧಾನ್ಯಗಳ ರೂಪದಲ್ಲಿ ತಮ್ಮ ಕೆಲಸಕ್ಕೆ ಪ್ರತಿಫಲವನ್ನು ಪಡೆಯುವವರಾಗಿರುತ್ತಾರೆ. ಜಾಜ್‌ಮನಿ ಪದ್ಧತಿಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ ನಂತರ ಇದು ಪುರಾತನ ಸಮತಾವಾದದ ಲಕ್ಷಣ ಎಂಬ ಅಭಿಪ್ರಾಯಕ್ಕೆ ಡಬ್ಲ್ಯು. ಎಚ್. ವೈಸರ್ ಬಂದಿದ್ದಾರೆ. ಗ್ರಾಮಗಳಲ್ಲಿರುವ ಎಲ್ಲಾ ಜನರು ಒಟ್ಟಾಗಿ ಭೂ ಒಡೆತನ ಹೊಂದಿದ್ದು ಒಟ್ಟಾರೆಯಾಗಿ ಸಾಗುವಳಿ ಮಾಡುವುದರ ಮೂಲಕ ಒಂದು ಬಗೆಯ ಪುರಾತನ ಸಮತಾವಾದ ಗ್ರಾಮಗಳಲ್ಲಿ ಆಚರಣೆಯಲ್ಲಿತ್ತು ಎನ್ನುವ ಕಾರ್ಲ್‌ಮಾರ್ಕ್ಸ್ ಮತ್ತು ಹೆನ್ರಿ ಸಮ್ನರ್ ಮೇನ್‌ರವರ ಅಭಿಪ್ರಾಯಗಳನ್ನು ಡಬ್ಲ್ಯು. ಎಚ್. ವೈಸರ್ ಒಪ್ಪುತ್ತಾರೆ. ಶತಮಾನದ ನಂತರ ಕ್ರಮೇಣವಾಗಿ ಈ ವ್ಯವಸ್ಥೆ ಬದಲಾಗಿ ಜಾಜ್‌ಮನಿ ಪದ್ಧತಿ ಉಗಮಗೊಳ್ಳಲು ಕಾರಣವಾಯಿತು.

ಜಾಜ್‌ಮನಿ ಪದ್ಧತಿಯು ಉತ್ತರ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರಲಿಲ್ಲ ಎಂದು ಪ್ರಾಸಂಗಿಕವಾಗಿ ಹೇಳಬಹುದಾಗಿದೆ. ಇದು ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಇರುವುದನ್ನು ಕಾಣಬಹುದು. ಉದಾಹರಣೆಗೆ ಮಹಾರಾಷ್ಟ್ರದಲ್ಲಿ ಜಾಜ್‌ಮನಿ ಪದ್ಧತಿಯನ್ನು **'ಬಾರಾಬಲುತೆದಾರ' (Barabalutedar)** ಎಂದು ಕರೆಯಲಾಗುತ್ತದೆ. ಇದರ ಅರ್ಥ ಹನ್ನೆರಡು ದುಡಿಯುವ ವರ್ಗಗಳು ಎಂದು. ಉತ್ತರ ಕರ್ನಾಟಕದ ಪ್ರಾಂತ್ಯಗಳಲ್ಲಿ ಇದನ್ನು **'ಅಯಾ ಪದ್ಧತಿ' (Aya system)** ಎಂದು ಕರೆಯಲಾಗುತ್ತದೆ. ಈ ಪದ್ಧತಿಯಲ್ಲಿ ಎರಡು ಗುಂಪುಗಳಿವೆ. ಅವು ಯಾವುವು ಎಂದರೆ **'ಆಯ್ದ ಕುಳ' (ಭೂ ಒಡೆಯರು)** ಮತ್ತು **'ಅಯಗಾರ' (ದುಡಿಯುವವರು)**. ಆಯ್ದ ಕುಳದವರು ಅಯಗಾರರಿಗೆ ಅಯವನ್ನು ಧಾನ್ಯದ ರೂಪದಲ್ಲಿ ಕೊಡುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ಅಯಗಾರ ಪದ್ಧತಿ ಎಂದು ಹೆಸರು ಪಡೆದಿದ್ದರೆ ದಕ್ಷಿಣ ಕರ್ನಾಟಕ ಪ್ರಾಂತ್ಯಗಳಲ್ಲಿ 'ಹಡದೆ' ಎಂದು ಹೆಸರು ಪಡೆದಿದೆ.

ಭಾರತದ ರೆಡ್‌ಫೀಲ್ಡ್ (Redfield) ಎಂದು ಹೆಸರು ಪಡೆದಿರುವ ಡಾ. ಎಸ್.ಸಿ. ದುಬೆ ಅವರು ಗ್ರಾಮೀಣ ಸಮಾಜಶಾಸ್ತ್ರಕ್ಕೆ ತಮ್ಮದೇ ಆದಂತಹ ಕಾಣಿಕೆಯನ್ನು ನೀಡಿದ್ದಾರೆ. ಇವರು ಆಂಧ್ರ ಪ್ರದೇಶದ ಶಾಮಿರ್‌ಪೇಟ್ ಗ್ರಾಮದಲ್ಲಿ ಕ್ಷೇತ್ರಾಧ್ಯಯನದ ಮೂಲಕ ಮಾಹಿತಿಯನ್ನು ಕಲೆಹಾಕಿ ಅದರ ಆಧಾರದ ಮೇಲೆ 'ಇಂಡಿಯನ್ ವಿಲೇಜ್' (Indian village) ಗ್ರಂಥವನ್ನು ಹೊರತಂದಿದ್ದಾರೆ. ವೈದ್ಯಕೀಯ ಮತ್ತು ಭಾಷಿಕ ವಿಷಯ ತಜ್ಞರು, ಭೂಗರ್ಭಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮನಃಶಾಸ್ತ್ರ, ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಿಸಿದ ಹಲವಾರು ವಿದ್ವಾಂಸರನ್ನೊಳಗೊಂಡ ತಂಡದವರ ಮೂಲಕ ಕ್ಷೇತ್ರಾಧ್ಯಯನ ಮಾಹಿತಿಯನ್ನು ಕಲೆಹಾಕಿರುವುದು ವಿಶೇಷವಾಗಿದೆ.

ಡಾ. ಡಿ.ಎನ್. ಮಜುಮ್‌ದಾರ್‌ರವರ 'ಕಾಸ್ಟ್ ಆ್ಯಂಡ್ ಕಮ್ಯೂನಿಕೇಶನ್ ಟು ಆ್ಯನ್ ಇಂಡಿಯನ್ ವಿಲೇಜ್' (Caste and Communication to an Indian Village) ಎಂಬುದು ಮತ್ತೊಂದು ಗ್ರಾಮೀಣ ಸಮಾಜದ ಅಧ್ಯಯನದಲ್ಲಿ ಪ್ರಮುಖ ಗ್ರಂಥವಾಗಿದೆ. ಉತ್ತರ ಪ್ರದೇಶದ ಮೋಹನ ಎಂಬ ಗ್ರಾಮದ ಬಗೆಗೆ ಆಳವಾದ ಅಧ್ಯಯನವನ್ನು ಕೈಗೊಂಡಿದ್ದಾರೆ. ಈ ಗ್ರಂಥದಲ್ಲಿ ಭಿನ್ನ ಜಾತಿಗಳ ನಡುವೆ ಅಸ್ತಿತ್ವದಲ್ಲಿರುವ ಪಾರಸ್ಪರಿಕ ಸಕಾರಾತ್ಮಕ (ಅನ್ಯೋನ್ಯ) ಸಂಬಂಧಗಳಿರುವುದರ ಬಗೆಗೆ ವಿವರಣೆಯನ್ನು ನೀಡಿದ್ದಾರೆ. ಈ ವಿದ್ಯಮಾನವನ್ನು ವಿವರಿಸುವಾಗ ಚಕ್ರದ ಉಪಮೆ ನೀಡಿದ್ದಾರೆ. ಇವರ ಪ್ರಕಾರ ವ್ಯವಸಾಯವು ಚಕ್ರದ ನಾಭಿ ಇದ್ದ ಹಾಗೆ, ಇನ್ನಿತರೆ ವೃತ್ತಿಗಳು ಚಕ್ರದ ಕೀಲುಗಳಿದ್ದ ಹಾಗೆ. ಹೇಗೆ ಚಕ್ರದ ಕೀಲುಗಳಿಗೂ ಮತ್ತು ನಾಭಿಗೂ ಸಂಬಂಧವಿದೆಯೋ ಹಾಗೆಯೇ ವ್ಯವಸಾಯೇತರ ವೃತ್ತಿಗಳಿಗೂ ಮತ್ತು ವ್ಯವಸಾಯಕ್ಕೂ ಪಾರಸ್ಪರಿಕ ಸಂಬಂಧವಿದ್ದು, ಒಟ್ಟಿಗೆ ಇರುವಂತೆ ಮಾಡಿದೆ. ಗ್ರಾಮದ ರಾಜಕೀಯ ಸಂಘಟನೆಯ ಬಗೆಗೆ ಡಾ. ಮಜುಮ್‌ದಾರ್‌ರವರು ಮುಖ್ಯವಾದ ಅವಲೋಕನವನ್ನು ಕೂಡ ಮಾಡಿದ್ದಾರೆ. ಪೂರ್ಣ ಪ್ರಮಾಣದ ಪ್ರಜಾಪ್ರಭುತ್ವ ಕಂಡುಬರುತ್ತದೆ ಎಂದು ಹೇಳುವುದು ಕಟ್ಟುಕತೆಯಾಗುತ್ತವೆ ಎಂದು ಉಲ್ಲೇಖಿಸುತ್ತಾರೆ. ವಾಸ್ತವದಲ್ಲಿ ಪ್ರಬಲ ಜಾತಿಯವರು ಅಧಿಕಾರವನ್ನು ಚಲಾಯಿಸುತ್ತಾರೆ. ಅಧಿಕಾರಯುತ ಪ್ರಬಲ ಜಾತಿಗಳು ಗ್ರಾಮಗಳನ್ನು ಕ್ರೂರವಾಗಿ ಆಳುವುದರಿಂದಾಗಿ ಪ್ರಜಾಸತ್ತಾತ್ಮಕ ಸಂಸ್ಥೆಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಅವಕಾಶ ನೀಡುವುದಿಲ್ಲ.

ಭಾರತೀಯ ಗ್ರಾಮಗಳಲ್ಲಿ ಗುಂಪು ಪರಿವರ್ತ್ಯತೆಗಳ (Group Dynamcis) ಅಧ್ಯಯನ ಮತ್ತು ಭಾರತದಲ್ಲಿ ಸಾಮುದಾಯಿಕ ಅಭಿವೃದ್ಧಿ ಯೋಜನೆ ಮತ್ತು ಪಂಚಾಯತ್ ರಾಜ್ ವ್ಯವಸ್ಥೆ ಇವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಲುವಾಗಿ ಶಿಫಾರಸ್ಸು ಮಾಡಲು ಅಮೆರಿಕದ ಹೆಸರಾಂತ ಸಮಾಜಶಾಸ್ತ್ರಜ್ಞರಾದ ಆಸ್ಕರ್ ಲ್ಯೂವಿಸ್ (Oscar Lewis) ರವರನ್ನು 1952 ರಲ್ಲಿ ಪಂಚಾಯತ್‌ರಾಜ್ ಮತ್ತು ಸಾಮುದಾಯಿಕ ಅಭಿವೃದ್ಧಿ ಯೋಜನೆ ಮಂತ್ರಿಯಾಗಿದ್ದ ಎಸ್.ಕೆ. ಡೇ (S.K. Dey) ಆಹ್ವಾನಿಸಿದ್ದರು. ಆ ಪ್ರಕಾರವಾಗಿ ಆಸ್ಕರ್ ಲ್ಯೂವಿಸ್‌ರವರು ದೆಹಲಿ ಸಮೀಪದ ರಾಮ್‌ಪುರ ಗ್ರಾಮದ ಅಧ್ಯಯನ ಮಾಡಿ 'ವಿಲೇಜ್ ಲೈಫ್ ಇನ್ ನಾರ್ದರ್ನ್ ಇಂಡಿಯ' (Village life in Northern India) ಎಂಬ ಗ್ರಂಥವನ್ನು ಹೊರ ತಂದರು. ಗುಂಪು ಪರಿವರ್ತ್ಯತೆಗಳಲ್ಲಿ ಘರ್ಷಣೆಯು ಪ್ರಮುಖ ಪಾತ್ರ ವಹಿಸುತ್ತದೆ ಎನ್ನುವ ಸಂಗತಿಗೆ ಭಾರತೀಯ ಗ್ರಾಮಗಳು ಹೊರತಾಗಿಲ್ಲ ಎನ್ನುವುದನ್ನು ಈ ಅಧ್ಯಯನವು ದೃಢಪಡಿಸಿದೆ. ಕುಟುಂಬ, ಬಂಧುತ್ವ (ಕಳ್ಳುಬಳ್ಳಿ ಸಂಬಂಧ), ಜಾತಿ ಮತ್ತು ವರ್ಗ ಇವುಗಳ ಜೊತೆಗೆ ಗುಂಪು ಪರಿವರ್ತ್ಯತೆಯಲ್ಲಿ ನಿರ್ಧಾರಕ ಪಾತ್ರ ವಹಿಸುವ ಇನ್ನೊಂದು ಘಟಕ ಇದೆ. 'ಶತ್ರುವಿನ ಶತ್ರು ನನ್ನ ಮಿತ್ರ' ಎಂಬ ನಾಣ್ನುಡಿ (ಗಾದೆ) ಆಧಾರದ ಮೇಲೆ ರೂಪಿತವಾದ 'ಸ್ವಹಿತಾಸಕ್ತಿ ಗುಂಪು' (faction) ಮತ್ತೊಂದು ಘಟಕವಾಗಿದೆ. ಭಿನ್ನ ಕುಟುಂಬಗಳ, ಕಳ್ಳುಬಳ್ಳಿ ಜನರ, ಜಾತಿಗಳ ಮತ್ತು ಸಮುದಾಯಗಳ ಜನರನ್ನು ಒಳಗೊಂಡಿರುವ ಗುಂಪೇ ಸ್ವಹಿತಾಸಕ್ತಿ ಗುಂಪು. ಮತ್ತೊಂದು ಸ್ವಹಿತಾಸಕ್ತಿ ಗುಂಪಿನ ಸದಸ್ಯರ ಬಗೆಗೆ ಹೊಂದಿರುವ ದ್ವೇಷ ಮತ್ತು ಘರ್ಷಣೆಯು ಸ್ವಹಿತಾಸಕ್ತಿ ಗುಂಪಿನವರು ಒಂದೆಡೆ ಇರುವಂತೆ ಮಾಡಿರುತ್ತದೆ. ಸ್ವಹಿತಾಸಕ್ತಿ ಗುಂಪುಗಳ ಅಸ್ತಿತ್ವ ಮತ್ತು ಅವುಗಳ ಪಾತ್ರವನ್ನು ನಿರ್ಲಕ್ಷಿಸಲಾಗದು ಎಂದು ಆಸ್ಕರ್ ಲ್ಯೂವಿಸ್ ಒತ್ತಿ ಹೇಳಿದ್ದಾರೆ. ಗುಂಪು ಅನನ್ಯತೆಯ

ಆಧಾರಗಳಾಗಿರುವ ಸ್ವಹಿತಾಸಕ್ತಿ ಗುಂಪುಗಳನ್ನು ಸಕಾರಾತ್ಮಕ ಉದ್ದೇಶಗಳಿಗಾಗಿ ಮತ್ತು ಸಾಮುದಾಯಿಕ ಅಭಿವೃದ್ಧಿ ಯೋಜನೆಗಳು ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಪರಿಣಾಮಕಾರಿ ಸಂಪರ್ಕ ಸಾಧನಗಳಾಗಿ ಬಳಸಿಕೊಳ್ಳಬಹುದು.

ಭಾರತದಲ್ಲಿನ ಗ್ರಾಮೀಣ ಸಮಾಜಶಾಸ್ತ್ರದ ಬೆಳವಣಿಗೆಯ ಇತಿಹಾಸದಲ್ಲಿ ಡಾ|| ಎಂ.ಎನ್. ಶ್ರೀನಿವಾಸ್‌ರವರ ಕೊಡುಗೆಗಳು ಅತ್ಯಮೂಲ್ಯವಾಗಿವೆ. 'ರಿಲಿಜನ್ ಆ್ಯಂಡ್ ಸೊಸೈಟಿ ಅಮಾಂಗ್ ದಿ ಕೂರ್ಗ್ಸ್ ಆಫ್ ಸೌಥ್ ಇಂಡಿಯ' **(Religion and Society among the Coorgs of South India)**, 'ಇಂಡಿಯಾಸ್ ವಿಲೇಜಸ್' **(India's Villages)**, 'ಕಾಸ್ಟ್ ಇನ್ ಮಾಡರ್ನ್ ಇಂಡಿಯ ಆ್ಯಂಡ್ ಅದರ್ ಎಸ್ಸೇಸ್' **(Caste in Modern India and other Essays)**, 'ದಿ ರಿಮೆಂಬರ್ಡ್ ವಿಲೇಜ್' **(The Remembered Village)** ಗ್ರಂಥಗಳು ಗ್ರಾಮೀಣ ಸಾಮಾಜಶಾಸ್ತ್ರಕ್ಕೆ ಪ್ರಮುಖ ಕೊಡುಗೆಗಳಾಗಿವೆ. 'ರಿಲಿಜನ್ ಆ್ಯಂಡ್ ಸೊಸೈಟಿ ಅಮಾಂಗ್ ದಿ ಕೂರ್ಗ್ಸ್ ಆಫ್ ಸೌಥ್ ಇಂಡಿಯ' ಗ್ರಂಥವು ಗ್ರಾಮೀಣ ಸಮಾಜಶಾಸ್ತ್ರದ ಬೆಳವಣಿಗೆಗೆ ಪ್ರಮುಖ ಕಾಣಿಕೆಯಾಗಿದೆ. ಡಾ. ಎಂ.ಎನ್. ಶ್ರೀನಿವಾಸ್‌ರವರ ಡಾಕ್ಟರೇಟ್ ಥೀಸಿಸ್‌ನ ಈ ಗ್ರಂಥವು ಸಾಮಾಜಿಕ ವಿಜ್ಞಾನಗಳಲ್ಲಿ ನೋಬೆಲ್ ಪ್ರಶಸ್ತಿಗೆ ಸಮಾನವೆಂದು ಪರಿಗಣಿಸಲಾಗಿರುವ 'ರಿವ್ವರ್ಸ್ ಗೋಲ್ಡ್ ಮೆಡಲ್' **(River's Gold Medal)** ನ್ನು ಪಡೆದಿದೆ. ಮೈಸೂರಿನ ಸಮೀಪದಲ್ಲಿನ ರಾಮ್‌ಪುರ ಗ್ರಾಮದ ಕ್ಷೇತ್ರಾಧ್ಯಯನ ಮಾಹಿತಿ ಆಧಾರದ ಮೇಲೆ **'ಕಾಸ್ಟ್ ಇನ್ ಮಾಡರ್ನ್ ಇಂಡಿಯ ಆ್ಯಂಡ್ ಅದರ್ ಎಸ್ಸೇಸ್'** ಎಂಬ ಗ್ರಂಥವನ್ನು ಹೊರ ತಂದಿದ್ದಾರೆ. ಈ ಗ್ರಂಥದಲ್ಲಿ ಜಾತಿ ಮತ್ತು ಜಾತಿ ಪರಿವರ್ತ್ಯತೆಯ ಪೂರಕ ಅಂಶಗಳಾದ ಸಂಸ್ಕೃತೀಕರಣ, ಹಿಮ್ಮುಖ ಸಂಸ್ಕೃತೀಕರಣ (De Sanskritisation), ಪಾಶ್ಚಾತ್ಯೀಕರಣ ಮತ್ತು ಪ್ರಬಲ ಜಾತಿ ಇವುಗಳ ಬಗೆಗೆ ಸವಿಸ್ತಾರವಾದ ವಿವರಣೆಗಳನ್ನು ನೀಡಿದ್ದಾರೆ.

ಸಂಸ್ಕೃತೀಕರಣ ಎನ್ನುವುದು ಜಾತಿಯಲ್ಲಿನ ಮೇಲ್ಮುಖ ಚಲನೆಗೆ ಸಂಬಂಧಿಸಿದರೆ ಹಿಮ್ಮುಖ ಸಂಸ್ಕೃತೀಕರಣ (De Sanskritisation) ಎನ್ನುವುದು ಜಾತಿಯಲ್ಲಿನ ಕೆಳಮುಖ ಚಲನೆಗೆ ಸಂಬಂಧಿಸಿರುತ್ತದೆ. ಮೇಲ್ವರ್ಗದವರ ಅಥವಾ ಮೇಲ್ಜಾತಿಯವರ ಜೀವನ ವಿಧಾನಗಳನ್ನು ಕೆಳಜಾತಿಯವರು ಹೇಗೆ ಅನುಸರಣೆ ಮಾಡುತ್ತಾರೆಂಬುದನ್ನು ಈ ಪ್ರಬಂಧಗಳಲ್ಲಿ ವಿಶದವಾಗಿ ವರ್ಣಿಸಲಾಗಿದೆ. ಇದನ್ನೇ ಎಂ.ಎನ್. ಶ್ರೀನಿವಾಸ್‌ರವರು ಸಂಸ್ಕೃತೀಕರಣವೆಂದು ಕರೆದಿದ್ದಾರೆ. ಈ ಸಂಸ್ಕೃತೀಕರಣವು ಜಾತಿಯಲ್ಲಿ ಮೇಲ್ಮುಖ ಚಲನೆಗೆ ದಾರಿಮಾಡಿ ಕೊಡುತ್ತದೆ. ಕೆಳಮುಖ ಚಲನೆಯು ಹಿಮ್ಮುಖ ಸಂಸ್ಕೃತೀಕರಣ (De Sanskritisation) ಕ್ಕೆ ಸಂಬಂಧಿಸಿದ್ದರೆ, ಮೇಲ್ಜಾತಿಯವರು ಪಾಶ್ಚಾತ್ಯರ ಜೀವನ ವಿಧಾನವನ್ನು ಅನುಸರಣೆ ಮಾಡುವುದು ಪಾಶ್ಚಾತ್ಯೀಕರಣಕ್ಕೆ ಸಂಬಂಧಿಸಿರುತ್ತದೆ. ಅದೇ ರೀತಿಯಲ್ಲಿ ಪ್ರಬಲ ಜಾತಿ ಕುರಿತ ಎಂ.ಎನ್. ಶ್ರೀನಿವಾಸ್‌ರವರ ಅಭಿಪ್ರಾಯಗಳು ಗ್ರಾಮಗಳಲ್ಲಿನ ಅಧಿಕಾರ ರಚನೆ ಮತ್ತು ಜಾತಿ ಪರಿವರ್ತ್ಯತೆಗಳ ಮೇಲೆ ಉಪಯುಕ್ತ ಬೆಳಕು ಚಲ್ಲುತ್ತದೆ.

ಎಂ.ಎನ್. ಶ್ರೀನಿವಾಸ್‌ರವರ ಮತ್ತೊಂದು ಗ್ರಂಥ **'ದಿ ರಿಮೆಂಬರ್ಡ್ ವಿಲೇಜ್'** ತನ್ನದೇ ಆದಂತಹ ಇತಿಹಾಸವನ್ನು ಹೊಂದಿದೆ. ಆಹ್ವಾನದ ಮೇರೆಗೆ ಎಂ.ಎನ್. ಶ್ರೀನಿವಾಸ್‌ರವರು ಸ್ಟಾನ್‌ಫೋರ್ಡ್ ವಿಶ್ವವಿದ್ಯಾನಿಲಯ (Stanford University) ಕ್ಕೆ ಭೇಟಿ ನೀಡಿದ್ದರು. ಗ್ರಂಥವನ್ನು ಬರೆಯಬೇಕೆನ್ನುವ ಆಹ್ವಾನದಿಂದಾಗಿ ಎಂ.ಎನ್. ಶ್ರೀನಿವಾಸ್‌ರವರು ತಾವು ಕಲೆ ಹಾಕಿದ್ದ ಸಂಶೋಧನ ಸಾಮಗ್ರಿಗಳನ್ನು ತಮ್ಮ ಜೊತೆಯಲ್ಲಿ ತೆಗೆದುಕೊಂಡು ಹೋಗಿದ್ದರು. ಅವರು ಉಳಿದುಕೊಂಡಿದ್ದ ಸ್ಥಳದಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಯಾವುದೋ ವಿಷಯದ ಬಗೆಗೆ ಮುಷ್ಕರಕ್ಕೆ ಕರೆ ನೀಡಿದ್ದರು. ಮುಷ್ಕರವು ಹಿಂಸೆಗೆ ತಿರುಗಿ ಎಂ.ಎನ್ ಶ್ರೀನಿವಾಸ್‌ರವರು ಉಳಿದುಕೊಂಡಿದ್ದ ಅತಿಥಿ ಗೃಹಕ್ಕೆ ಬೆಂಕಿ ತಗುಲಿತು. ಇದರಿಂದ ಅಮೂಲ್ಯವಾದ ಸಂಶೋಧನ ಸಾಮಗ್ರಿಗಳು ಬೆಂಕಿಗೆ ಆಹುತಿಯಾದವು. ಈ ಘಟನೆಯು ಅವರನ್ನು ಎದೆಗುಂದಿಸುವಂತೆ ಮಾಡಿತು. ಎಂ.ಎನ್. ಶ್ರೀನಿವಾಸರವರು ಭಾರತಕ್ಕೆ ಹಿಂದಿರುಗಲು ತೀರ್ಮಾನಿಸಿದರು.

ಆದರೆ ಅವರ ಸಹೋದ್ಯೋಗಿ ಮಿತ್ರರು ಆವರನ್ನು ಅಲ್ಲೇ ಉಳಿದುಕೊಳ್ಳುವುದಕ್ಕೆ ಪ್ರೇರೇಪಿಸಿರುವುದು ಮಾತ್ರವಲ್ಲದೆ, ಒತ್ತಡವನ್ನು ಹಾಕಿದರು. ಗ್ರಾಮವನ್ನು ಅಧ್ಯಯನ ಮಾಡಿದ ಸಂದರ್ಭದ ಸನ್ನಿವೇಶಗಳನ್ನು ಜ್ಞಾಪಿಸಿಕೊಂಡು ಅದರ ಆಧಾರದ ಮೇಲೆ ಗ್ರಂಥವನ್ನು ಬರೆಯುವಂತೆ ಹುರಿದುಂಬಿಸಿದರು. ಅದರ ಪ್ರತಿಫಲವೆ 'ದಿ ರಿಮೆಂಬರ್ಡ್ ವಿಲೇಜ್'. ಗ್ರಾಮಗಳ ಜೀವನದ ಮೇಲೆ ಬೆಳಕನ್ನು ಚೆಲ್ಲುವ ಹಲವಾರು ಅಂಶಗಳನ್ನು ಒಳಗೊಂಡಿರುವ ಆರ್.ಕೆ. ನಾರಾಯಣ್ (R.K. Narayan) ರವರ ಕಾದಂಬರಿಯನ್ನು ಓದಿದಂತಾಗುತ್ತದೆ ಎಂ.ಎನ್. ಶ್ರೀನಿವಾಸ್‌ರವರ ದಿ ರಿಮೆಂಬರ್ಡ್ ವಿಲೇಜ್'. ಆಂದ್ರೆ ಬೀತೆ (Andre beteille) ರವರು ಬರೆದಿರುವ **'ಕಾಸ್ಟ್, ಕ್ಲಾಸ್ ಆ್ಯಂಡ್ ಪಾವರ್' (Caste, Class and Power)** ಎಂಬ ಶಿರೋನಾಮೆಯುಳ್ಳ ಗ್ರಂಥವು ಭಾರತೀಯ ಗ್ರಾಮಗಳ ಮೇಲೆ ಇರುವ ಮತ್ತೊಂದು ಗ್ರಂಥವಾಗಿದೆ. ತಮಿಳುನಾಡಿನಲ್ಲಿ ಶ್ರೀಪುರಂ ಗ್ರಾಮದಲ್ಲಿನ ಕ್ಷೇತ್ರಾಧ್ಯಯನವನ್ನು ಮಾಡಿ ಮಾಹಿತಿ ಸಂಗ್ರಹಿಸಿದ ಪ್ರತಿಫಲವೆ ಈ ಗ್ರಂಥ. ಈ ಗ್ರಂಥದಲ್ಲಿ ಆಂದ್ರೆ ಬೀತೆ ಸ್ತರಗಳ ನಡುವಿನ ಆಂತರಿಕ ಸಂಬಂಧಗಳ ವಿದ್ಯಮಾನದ ವಿಶ್ಲೇಷಣೆಯನ್ನು ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ. ಪಿತಿರಿಮ್ ಸಾರೋಕಿನ್ **(Pitirim Sorokin)** ಸ್ತರಗಳ ನಡುವಿನ ಆಂತರಿಕ ಸಂಬಂಧಗಳ ವಿದ್ಯಮಾನದ ಬಗೆಗೆ ಹೇಳಿದ್ದಾರೆ. ಇವರ ಪ್ರಕಾರ ಒಂದು ಗುಂಪಿನಲ್ಲಿ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಎಂಬ ಮೂರು ಬಗೆಯ ಅಧಿಕಾರಗಳ ಸಂಗಮವು ಇರುತ್ತದೆ. ಒಂದು ಗುಂಪು ಈ ಮೂರರಲ್ಲಿ ಯಾವುದೇ ಒಂದು ಅಧಿಕಾರವನ್ನು ಪಡೆದರೂ ಕೂಡ ಇನ್ನುಳಿದ ಎರಡು ಅಧಿಕಾರವನ್ನು ಪಡೆಯಲು ಪ್ರಯತ್ನಿಸುತ್ತದೆ. ಉದಾಹರಣೆಗೆ ಒಂದು ಗುಂಪು ಆರ್ಥಿಕ ಅಧಿಕಾರ (ಸಂಪತ್ತು) ಹೊಂದಿದ್ದರೆ, ಅದು ಸಾಮಾಜಿಕ ಮತ್ತು ರಾಜಕೀಯ ಅಧಿಕಾರವನ್ನು ಪಡೆಯಲು ಪ್ರಯತ್ನಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ವ್ಯತಿರಿಕ್ತವಾದ ಪರಿಸ್ಥಿತಿಯು ಸಂಭವಿಸುವುದನ್ನು ತಳ್ಳಿಹಾಕುವಂತಿಲ್ಲ. ಮೂರು ಅಧಿಕಾರಗಳ ಮೇಲೆ ಏಕಸ್ವಾಮ್ಯವನ್ನು ಹೊಂದಿರುವ ಗುಂಪು ಮೂರು ಅಧಿಕಾರಗಳಲ್ಲಿ ಯಾವುದೇ ಒಂದನ್ನು ಕಳೆದುಕೊಂಡರೂ ಉಳಿದ ಅಧಿಕಾರಗಳನ್ನು ಕಳೆದುಕೊಳ್ಳಬೇಕಾಗುತ್ತದೆ.

ಶ್ರೀಪುರಂ ಗ್ರಾಮದಲ್ಲಿ ಅಧಿಕಾರದ ಸಮಾಗಮ ಮತ್ತು ಅಧಿಕಾರದ ಬದಲಾಗುವ ಪರಿಸ್ಥಿತಿಯನ್ನು ಆಂದ್ರೆ ಬೀತೆ ಕಂಡುಕೊಂಡಿದ್ದಾರೆ. 1947 ರ ಮೊದಲು ಸ್ವಾತಂತ್ರ್ಯ ಬಂದು ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡ ಅವಧಿಯಲ್ಲೂ ಶ್ರೀಪುರಂ ಗ್ರಾಮದಲ್ಲಿ ಬ್ರಾಹ್ಮಣರು ಮೂರು ಬಗೆಯ ಅಧಿಕಾರಗಳಲ್ಲೂ ಏಕಸ್ವಾಮ್ಯವನ್ನು ಹೊಂದಿದ್ದರು. ಹೆಚ್ಚಿನ ಮಟ್ಟದಲ್ಲಿ ಭೂ ಒಡೆತನವನ್ನು ಶ್ರೀಪುರಂ ಗ್ರಾಮದಲ್ಲಿ ಬ್ರಾಹ್ಮಣರು ಹೊಂದಿರುವುದರಿಂದ ಆರ್ಥಿಕ ಅಧಿಕಾರವನ್ನು ಹೊಂದಿದ್ದರು. ಆಡಳಿತದ ಪ್ರಮುಖ ಹುದ್ದೆಗಳು ಬ್ರಾಹ್ಮಣರ ನಿಯಂತ್ರಣದಲ್ಲಿದ್ದುದರಿಂದಾಗಿ ರಾಜಕೀಯ ಅಧಿಕಾರವು ಬ್ರಾಹ್ಮಣರ ಕೈಲಿತ್ತು. ಜಾತಿ ಅಂತಸ್ತಿನ ಶ್ರೇಣಿಯಲ್ಲಿ ಬ್ರಾಹ್ಮಣರು ಉನ್ನತ ಸ್ಥಾನವನ್ನು ಹೊಂದಿದ್ದರಿಂದಾಗಿ ಸಾಮಾಜಿಕ ಅಧಿಕಾರವು ಕೂಡ ಇತ್ತು.

1947 ರ ನಂತರ ಚುನಾವಣೆಗಳನ್ನು ಪರಿಚಯಿಸಿದ ನಂತರ ಗ್ರಾಮಗಳಲ್ಲಿ ಮಹತ್ತರ ಬದಲಾವಣೆಯನ್ನು ಕಾಣಲಾಯಿತು. ರಾಜಕೀಯ ಪಕ್ಷಗಳು ಬ್ರಾಹ್ಮಣ ವಿರೋಧಿ ಪ್ರಣಾಳಿಕೆಗಳನ್ನು ಘೋಷಿಸಿದ್ದುದರಿಂದಾಗಿ ಅಲ್ಪಸಂಖ್ಯಾತರಾದ ಬ್ರಾಹ್ಮಣರು ಚುನಾವಣೆಗಳಲ್ಲಿ ಸೋಲನ್ನು ಅನುಭವಿಸಿ ರಾಜಕೀಯ ಅಧಿಕಾರವನ್ನು ಕಳೆದುಕೊಳ್ಳಬೇಕಾಯಿತು. ರಾಜಕೀಯ ಅಧಿಕಾರದ ಸಹಾಯದಿಂದ ಹೊಸ ಆಡಳಿತಗಾರರು ಬ್ರಾಹ್ಮಣರಿಂದ ಆರ್ಥಿಕ ಅಧಿಕಾರವನ್ನು ಕಿತ್ತುಕೊಂಡರು. ಭೂ ಒಡೆತನದ ಮೇಲೆ ಭೂ ಮಿತಿ ಶಾಸನವನ್ನು ತರುವುದರ ಮೂಲಕ ಬ್ರಾಹ್ಮಣರು ಹೊಂದಿದ್ದ ಭೂಮಿಯನ್ನು ತೆಗೆದುಕೊಂಡರು. ಕ್ಷೇತ್ರಾಧ್ಯಯನ ಮುಗಿಯುವ ವೇಳೆಗೆ ಬ್ರಾಹ್ಮಣ ವಿರೋಧಿ ಆಡಳಿತಗಾರರು ಬ್ರಾಹ್ಮಣರಿಂದ ಸಾಮಾಜಿಕ ಅಧಿಕಾರವನ್ನು ತೆಗೆದುಕೊಳ್ಳುತ್ತಿದ್ದರು. ಪುರೋಹಿತ ವೃತ್ತಿಯಲ್ಲಿ ಬ್ರಾಹ್ಮಣರು ಹೊಂದಿರುವ ಏಕಸ್ವಾಮ್ಯವನ್ನು ಕೊನೆಗಾಣಿಸಲು ಕಾನೂನುಗಳನ್ನು ತರುವ ಪ್ರಸ್ತಾವಗಳು ಬಂದವು. ದೇವಸ್ಥಾನಗಳಲ್ಲಿ ಪುರೋಹಿತರನ್ನು ನೇಮಿಸುವ ಸಲುವಾಗಿ ಬ್ರಾಹ್ಮಣೇತರಿಗೆ ಪುರೋಹಿತ ವೃತ್ತಿಯ ಬಗೆಗೆ ತರಬೇತಿ ನೀಡಿ ನೇಮಿಸುವ ಪ್ರಯತ್ನ ನಡೆಯಿತು. ಶ್ರೀಪುರಂನಲ್ಲಿ ಸಂಭವಿಸಿರುವ ವಿದ್ಯಮಾನಗಳು ತಮಿಳುನಾಡಿನಾದ್ಯಂತ ಮಾತ್ರವಲ್ಲದೆ ದಕ್ಷಿಣದ ಇತರೆ ರಾಜ್ಯಗಳಲ್ಲೂ ಸಂಭವಿಸುತ್ತವೆ ಎಂದು ಆಂದ್ರೆ ಬೀತೆ ಅಭಿಪ್ರಾಯ ಪಟ್ಟಿದ್ದಾರೆ.

ಅದೇ ರೀತಿಯಲ್ಲಿ ಮಿಲ್ಟನ್ ಸಿಂಗರ್, ಮ್ಯಾಕಿಮ್ ಮ್ಯಾರಿಯೆಟ್, ಸಿ. ಪಾರ್ವತಮ್ಮ, ಕೆ. ಈಶ್ವರನ್, ಎಫ್. ಜಿ. ಬೇಯ್ಲಿ, ಸ್ಕಾರ್ಲೆಟ್ ಎಪ್‌ಸ್ಟೀನ್, ಗೇಲ್ ಓಮವಿಟ್, ಜೇಮ್ಸ್ ಮೇನರ್ (Milton Singer, F.G. Bailey, Mckim Marriot, C. Parvathamma, K. Ishwaran, Scarlet Epstein, Gail Omvedt, James Manor) ಮೊದಲಾದವರು ತಮ್ಮಗಳ ಪಾಂಡಿತ್ಯ ಪೂರ್ಣ ಕೆಲಸದಿಂದ ಭಾರತದಲ್ಲಿ ಗ್ರಾಮೀಣ ಸಮಾಜಗಳ ಮೇಲಿನ ಅಧ್ಯಯನದ ಭಂಡಾರವನ್ನು ಸಮೃದ್ಧಿಗೊಳಿಸಿದ್ದಾರೆ.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ

1. ಗ್ರಾಮೀಣ ಸಮಾಜಶಾಸ್ತ್ರ ಯಾವ ಸನ್ನಿವೇಶಗಳಲ್ಲಿ ತನ್ನ ಉಗಮವನ್ನು ಕಂಡಿತು.

'ಸರಿ' ಅಥವಾ 'ತಪ್ಪು' ಗುರುತಿಸಿ.

2. ಅ. ಅಮೆರಿಕದಲ್ಲಿ ಪುರೋಹಿತರ ಮಾನವೀಯ ಪ್ರಯತ್ನಗಳು ಗ್ರಾಮೀಣ ಸಮಾಜಶಾಸ್ತ್ರದ ಉಗಮಕ್ಕೆ ದಾರಿ ಮಾಡಿಕೊಟ್ಟವು.

   ಆ. ಗ್ರಾಮೀಣ ಸಮಾಜಶಾಸ್ತ್ರದ ಬೆಳವಣಿಗೆಗೆ ಅಮೆರಿಕ ಸರ್ಕಾರವು ಪ್ರೋತ್ಸಾಹ ನೀಡಿದೆ.

   ಇ. ಸರ್ ಹೆನ್ರಿ ಮೇನ್‌ರವರು 'ವಿಲ್ಲೇಜ್ ಕಮ್ಯೂನಿಟಿಸ್ ಇನ್ ದಿ ಈಸ್ಟ್ ಆ್ಯಂಡ್ ವೆಸ್ಟ್' ಎಂಬ ಗ್ರಂಥದ ಕರ್ತೃವಾಗಿದ್ದಾರೆ.

   ಈ. ಎಸ್.ಸಿ. ದುಬೆ ಅವರು ಸಂಸ್ಕೃತೀಕರಣ ಎಂಬ ಪರಿಕಲ್ಪನೆಯನ್ನು ಪರಿಚಯಿಸಿದ್ದಾರೆ.

   ಉ. ಆಂದ್ರೆ ಬೀತೆ ಅವರು ಭಾರತೀಯ ಗ್ರಾಮಗಳಲ್ಲಿನ ಅವಿಭಕ್ತ ಕುಟುಂಬ ವ್ಯವಸ್ಥೆಗೆ ಮಹತ್ವದ ಕಾಣಿಕೆಯನ್ನು ನೀಡಿದ್ದಾರೆ.

ಸರಿ ಉತ್ತರವನ್ನು ಆಯ್ಕೆ ಮಾಡಿ.

3. ಅ. ಇಂಗ್ಲೆಂಡಿನಲ್ಲಿ ಗ್ರಾಮೀಣ ಸಮಾಜಶಾಸ್ತ್ರವು ಉಗಮಗೊಂಡಿದೆ.

   ಆ. ಆಸ್ಕರ್ ಲ್ಯೂವಿಸ್‌ರವರು ಭಾರತೀಯ ಗ್ರಾಮಗಳಲ್ಲಿನ ಸ್ನೇಹಿತಾಸಕ್ತಿ ಗುಂಪುಗಳ ಪಾತ್ರಗಳ ಬಗೆಗೆ ಬೆಳಕು ಚೆಲ್ಲಿದ್ದಾರೆ.

   ಇ. 'ದಿ ರಿಮೆಂಬರ್ಡ್ ವಿಲೇಜ್' ಎಂಬುದು ಎಸ್.ಸಿ. ದುಬೆ ಬರೆದಿರುವ ಗ್ರಂಥದ ಶಿರೋನಾಮೆಯಾಗಿದೆ.

   ಈ. ಜಾಜ್‌ಮನಿ ಪದ್ಧತಿಯು ಉತ್ತರ ಭಾರತಕ್ಕೆ ಸೀಮಿತಗೊಂಡಿದೆ.

   ಉ. ಪಾಶ್ಚಾತ್ಯೀಕರಣವು ಜಾತಿಯೊಳಗಿನ ಚಲನೆಗೆ ಸಂಬಂಧಿಸಿದೆ.

## 2.6 ಸಾರಾಂಶ

ಹೆಚ್ಚು ಕೈಗಾರಿಕೀಕರಣಗೊಂಡಿರುವ ಮತ್ತು ನಗರೀಕರಣಗೊಂಡಿರುವ ರಾಷ್ಟ್ರವಾದ ಅಮೆರಿಕದಲ್ಲಿ ಪೂರ್ಣಪ್ರಮಾಣದ ಶಾಸ್ತ್ರವಾಗಿ ಗ್ರಾಮೀಣ ಸಮಾಜಶಾಸ್ತ್ರವು ಉಗಮಗೊಂಡಿರುವುದು ಆಶ್ಚರ್ಯವಾದರು ವಾಸ್ತವವಾಗಿದೆ. ಕೈಗಾರಿಕೀಕರಣ ಮತ್ತು ನಗರೀಕರಣಗಳ ವಿಸ್ತಾರದಿಂದಾಗಿ ಹದಗೆಟ್ಟಿರುವ ಗ್ರಾಮಗಳನ್ನು ಪುನರುಜ್ಜೀವನ ಮತ್ತು ಪುನರ್‌ನಿರ್ಮಾಣಗೊಳಿಸುವ ಮಾನವ ಪ್ರಯತ್ನಗಳಿಂದಾಗಿ ಗ್ರಾಮೀಣ ಸಮಾಜಶಾಸ್ತ್ರ ಬೆಳಕಿಗೆ ಬಂದಿತು. ಗ್ರಾಮಗಳನ್ನು ಮೊದಲಿನ ಸ್ಥಿತಿಗೆ ತರಲು ಪುರೋಹಿತರು ಮತ್ತು ಕ್ರೈಸ್ತ ಪಾದ್ರಿಗಳು ಗ್ರಾಮ ಸಮುದಾಯಗಳ ವೈಜ್ಞಾನಿಕ ಅಧ್ಯಯನ ಕೈಗೊಂಡ ನಂತರ ಅಮೆರಿಕ ವಿಶ್ವವಿದ್ಯಾನಿಲಯಗಳ ಸಾಮಾಜಿಕ ವಿಜ್ಞಾನಿಗಳು ಕೂಡ ಗ್ರಾಮ ಸಮುದಾಯಗಳ ವೈಜ್ಞಾನಿಕ ಅಧ್ಯಯನವನ್ನು ಮಾಡಲು ಪ್ರಾರಂಭಿಸಿದರು. ಹೀಗಾಗಿ

ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಇತರೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಗ್ರಾಮೀಣ ಸಮಾಜಶಾಸ್ತ್ರ ಪ್ರವೇಶ ಪಡೆಯಿತು. ಗ್ರಾಮೀಣ ಸಮಾಜಶಾಸ್ತ್ರದ ಬೆಳವಣಿಗೆಯ ಇತಿಹಾಸದಲ್ಲಿ 1908 ರ ವರ್ಷವು ಮಹತ್ವದ ನಿರ್ಣಾಯಕ ವರ್ಷವಾಗಿದೆ. ಈ ವರ್ಷದಲ್ಲಿ ಅಮೆರಿಕದ ಅಧ್ಯಕ್ಷರಾಗಿದ್ದ ರೂಸ್ ವೆಲ್ಟ್‌ರವರು **'ಗ್ರಾಮೀಣ ಜೀವನ ಆಯೋಗ' (Country Life Commission)** ಎಂಬುದನ್ನು ನೇಮಿಸಿದರು ಇದು ಗ್ರಾಮೀಣ ಸಮಾಜಶಾಸ್ತ್ರದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿತು.

ಮೊದಲ ಮಹಾಯುದ್ಧದ ತೊಂದರೆಗಳು ಕೊನೆಗೊಂಡನಂತರ ಹೊಸ ಶಾಖೆಯನ್ನು ಚೈತನ್ಯಗೊಳಿಸುವ ಪ್ರಯತ್ನಗಳು ತೀವ್ರಗೊಂಡವು. ಗ್ರಾಮದ ಅಧ್ಯಯನಗಳಲ್ಲಿ ಪ್ರಗತಿ ಸಾಧಿಸಿದ ಹೆಸರಾಂತ ವಿದ್ವಾಂಸರಾದ ಚಾರ್ಲ್ಸ್ ಗಾಲ್ಪಿನ್ (Charles Galpin) ರ ಸಾರಥ್ಯದಲ್ಲಿ 'ಕೃಷಿ ಕ್ಷೇತ್ರ ಜೀವನ ಅಧ್ಯಯನಗಳು' **(Farm Life Studies)** ಎಂಬ ಬೇರೆ ಶಾಖೆಯೇ ಬಂದಿತು. ಪರ್ನೆಲ್ ಆ್ಯಕ್ಟ್ **(Purnell Act)** ಅಡಿಯಲ್ಲಿ ಉದಾರ ಧನಸಹಾಯ ಒದಗಿಸುದುದರಿಂದಾಗಿ ಗ್ರಾಮೀಣ ಸಮಾಜಶಾಸ್ತ್ರದಲ್ಲಿ ವ್ಯಕ್ತಿಗಳಿಗೆ ತರಬೇತು ನೀಡುವ ಕಾರ್ಯವನ್ನು **ಸೋಶಿಯಲ್ ಸೈನ್ಸ್ ರಿಸರ್ಚ್ ಕೌನ್ಸಿಲ್ (Social Science Research Council)** ಮಾಡಲು ಸಾಧ್ಯವಾಯಿತು. ನುರಿತ ವಿದ್ವಾಂಸರ ಅಡಿಯಲ್ಲಿ ಯುವ ವಿದ್ಯಾರ್ಥಿಗಳಿಗೆ ತರಬೇತು ನೀಡಲಾಯಿತು. ಇದರಿಂದಾಗಿ ಗ್ರಾಮ ಸಮುದಾಯಗಳ ವೈಜ್ಞಾನಿಕ ಅಧ್ಯಯನಗಳ ಫಲಿತಾಂಶಗಳನ್ನು ಹೊರ ತರಲಾಯಿತು. 1936 ರಲ್ಲಿ ಪ್ರಕಟಿಸಲಾದ ಗ್ರಾಮೀಣ **ಸಮಾಜಶಾಸ್ತ್ರ (Rural Sociology)** ತ್ರೈಮಾಸಿಕ ನಿಯತಕಾಲಿಕವು ಮಹತ್ವದ ಹೆಜ್ಜೆಯಾಗಿದೆ. ಸಂಶೋಧಕರು ತಮ್ಮ ಸಂಶೋಧನೆಯ ಫಲಿತಾಂಶಗಳನ್ನು ವ್ಯಕ್ತಗೊಳಿಸಲು. ಹಂಚಿಕೊಳ್ಳಲು ಮತ್ತು ವಿನಿಮಯ ಮಾಡಿಕೊಳ್ಳಲು ಇದು ಅನುವು ಮಾಡಿಕೊಟ್ಟಿತು. ಈ ಶೈಕ್ಷಣಿಕ ಆಸಕ್ತಿಯು ಗ್ರಾಮೀಣ ಸಮಾಜಶಾಸ್ತ್ರೀಯ ಸಂಘ**(Rural Sociological Society)** ಸ್ಥಾಪನೆಯೊಂದಿಗೆ ಪ್ರಗತಿ ಹೊಂದಲು ಸಾಧ್ಯವಾಯಿತು.

ಎರಡನೆ ಮಹಾಯುದ್ಧದ ನಂತರ ಅಮೆರಿಕ ಸರ್ಕಾರದ ಜೊತೆ ವಿಶ್ವಸಂಸ್ಥೆಯು ಕೂಡಿ ಅಮೆರಿಕದಲ್ಲಿ ಮಾತ್ರವಲ್ಲದೆ ಪ್ರಪಂಚದಾದ್ಯಂತ ಗ್ರಾಮಾಧ್ಯಯನಗಳನ್ನು ಮಾಡಲಾಯಿತು. ಅಮೆರಿಕದಲ್ಲಿ ತರಬೇತು ಪಡೆದ ಗ್ರಾಮೀಣ ಸಮಾಜಶಾಸ್ತ್ರಜ್ಞರು ಪ್ರಪಂಚದ ವಿವಿಧ ಭಾಗಗಳಿಗೆ ಹೋಗಿ ಗ್ರಾಮಾಧ್ಯಯನಗಳನ್ನು ಮಾಡಿ ಗ್ರಾಮ ಸಮುದಾಯಗಳ ಬಗೆಗೆ ವೈಜ್ಞಾನಿಕ ಜ್ಞಾನ ಹೆಚ್ಚಲು ಕಾರಣರಾದರು.

ಗ್ರಾಮೀಣ ಸಮಾಜಶಾಸ್ತ್ರದ ಬೆಳವಣಿಗೆಯಲ್ಲಿ ಭಾರತವು ಮುಂಚೂಣಿಯಲ್ಲಿ ಇರಬೇಕಾಗಿತ್ತು. ಆದರೆ ಕಾರಣಾಂತರಗಳಿಂದ ಹಾಗಾಗಲಿಲ್ಲ. ಪಾಶ್ಚಾತ್ಯರಿಗಿಂತಲು ಹಳೆಯದಾದ ಮಹತ್ವದ ಮತ್ತು ಪವಿತ್ರವಾದ ಕೃತಿಗಳನ್ನು ಭಾರತವು ಹೊಂದಿರುವುದಕ್ಕೆ ತನ್ನದೇ ಆದ ಲಿಖಿತ ಸಂಪ್ರದಾಯವಿದೆ. ದುರದೃಷ್ಟವಶಾತ್ ಈ ಕೃತಿಗಳು ಗತಕಾಲದ ಗ್ರಾಮ ಸಮುದಾಯಗಳ ಕ್ರಮಬದ್ಧವಾದ ಮತ್ತು ವೈಜ್ಞಾನಿಕವಾದ ಮಾಹಿತಿಯನ್ನು ಹೊಂದಿರುವುದಿಲ್ಲ. ಮಹಾನ್ ಬರಹಗಾರರು ಇತಿಹಾಸ ಬರೆಯುವ ಬದಲು ತಾತ್ವಿಕ, ತಾರ್ಕಿಕ ಮತ್ತು ಧಾರ್ಮಿಕ ವಿಷಯಗಳ ಬಗೆಗೆ ತಮ್ಮ ಗಮನವನ್ನು ಕೇಂದ್ರೀಕರಿಸಿರುವುದು ಇದಕ್ಕೆ ಪ್ರಮುಖ ಕಾರಣವಾಗಿದೆ. ಆದುದರಿಂದಾಗಿ ಗ್ರಾಮ ಸಮುದಾಯಗಳ ಬಗೆಗೆ ನಮಗೆ ಈ ಕೃತಿಗಳ ಮೂಲಕ ದೊರೆತಿರುವ ಚಿತ್ರಣವು ಅಸ್ಪಷ್ಟತೆಯಿಂದ ಕೂಡಿದುದಾಗಿದೆ.

ರಾಜ ಅಕ್ಬರನ ಆಡಳಿತಾವಧಿಯಲ್ಲಿ ಭಾರತದ ಗ್ರಾಮ ಸಮುದಾಯಗಳ ವೈಜ್ಞಾನಿಕ ಅಧ್ಯಯನಗಳ ಪ್ರಯತ್ನಗಳು ನಡೆದಿವೆ. ಗ್ರಾಮಗಳ ಬಗೆಗೆ ಮೂಲ ಮಾಹಿತಿಯನ್ನು ಕಲೆ ಹಾಕುವ ಪ್ರಯತ್ನಗಳನ್ನು ರಾಜಾ ತೋದರ ಮಲ್ ಮತ್ತು ಇತರರು ಮಾಡಿದ್ದಾರೆ. ಇವರು ಮಾಡಿರುವ ಪ್ರಯತ್ನಗಳು ಪ್ರಶಂಸಾರ್ಹವಾದರು ಕೂಡ ನಿರಂತರತೆಯನ್ನು ಕಾಪಾಡಿಕೊಂಡಿರಲಿಲ್ಲ.

ಭಾರತದಲ್ಲಿ ಗ್ರಾಮ ಸಮುದಾಯಗಳ ಕ್ರಮಬದ್ಧ ಹಾಗೂ ವೈಜ್ಞಾನಿಕ ಅಧ್ಯಯನಗಳ ಯುಗ ಪ್ರಾರಂಭಗೊಂಡದ್ದು ಬ್ರಿಟಿಷ್‌ರ ರಾಜ್ಯಭಾರ ಸ್ಥಾಪನೆಗೊಂಡ ಮೇಲೆ ಎಂದು ಹೇಳಬಹುದು. ವಲಯದಲ್ಲಿನ ಗ್ರಾಮಗಳ ಬಗೆಗೆ ಪೂರ್ಣ ವಿವರಗಳನ್ನೊಳಗೊಂಡ ಜಿಲ್ಲಾ ಗೆಜೆಟಿರ್ಸ್‌ಗಳನ್ನು ಸಿದ್ಧಪಡಿಸುವ ಕೆಲಸವನ್ನು ಬ್ರಿಟಿಷ್ ಅಧಿಕಾರಿಗಳಿಗೆ ವಹಿಸಲಾಯಿತು. ಪ್ರಶಂಸೆಗೆ ಒಳಗಾಗುವಂತಹ ಕೆಲಸವನ್ನು

ಅಧಿಕಾರಿಗಳು ಮಾಡಿದರು. ಇಂದಿನವರೆಗೂ ಅವರು ಮಾಡಿರುವ ಕೆಲಸವನ್ನು ಯಾರೂ ಆ ಕ್ಷೇತ್ರದಲ್ಲಿ ಮಾಡಲು ಸಾಧ್ಯವಾಗಿಲ್ಲ. ಅಧಿಕಾರಿಗಳು ಸಿದ್ಧಪಡಿಸಿದ ಜಿಲ್ಲಾ ಗೆಜೆಟಿಯರ್‌ಗಳು ಗ್ರಾಮಗಳು ಮತ್ತು ಗ್ರಾಮಗಳ ನಿವಾಸಿಗಳ ಬಗೆಗಿನ ಮಾಹಿತಿಗಳನ್ನೊಳಗೊಂಡ ಚಿನ್ನದ ಗಣಿಗಳಾಗಿದ್ದವು.

ನ್ಯಾಯಶಾಸ್ತ್ರ ವಿದ್ವಾಂಸರಾದ ಸರ್. ಹೆನ್ರಿ ಸಮ್ನರ್ ಮೇನ್‌ರವರನ್ನು ಭಾರತದಲ್ಲಿನ ಗ್ರಾಮೀಣ ಸಮಾಜಶಾಸ್ತ್ರದ ಪಿತಾಮಹ ಎಂದು ಕರೆಯಬಹುದಾಗಿದೆ. ಗ್ರಾಮ ಸಮುದಾಯಗಳು ಮತ್ತು ಅವುಗಳ ಸಂಸ್ಥೆಗಳ ಬಗೆಗಿನ ಶಾಸ್ತ್ರೀಯ ಅವಲೋಕನಗಳು, ವಿಶ್ಲೇಷಣೆ ಮತ್ತು ವ್ಯಾಖ್ಯಾನಗಳನ್ನು ಅವರ ಮೂರು ಗ್ರಂಥಗಳು ಒಳಗೊಂಡಿವೆ. ಆ್ಯನ್ಶೆಂಟ್ ಲಾ, ಅರ್ಲಿ ಹಿಸ್ಟರಿ ಆಫ್ ಇನ್‌ಸ್ಟಿಟ್ಯೂಶನ್, ಮತ್ತು ವಿಲೇಜ್ ಕಮ್ಯೂನಿಟಿಸ್ ಇನ್ ದಿ ಈಸ್ಟ್ ಆ್ಯಂಡ್ ವೆಸ್ಟ್ **(Ancient Law, Early History of Institution, and Village Communities in the East and West)** ಇವುಗಳೇ ಆ ಮೂರು ಗ್ರಂಥಗಳು. ಬೆಡನ್ ಪಾವೆಲ್ (Baden Powel) ಭಾರತದಲ್ಲಿ ಹಲವಾರು ವರ್ಷಗಳ ಕಾಲ ಭೂ ಒಡೆತನ ಮತ್ತು ಭೂ ಕಂದಾಯ ವ್ಯವಸ್ಥೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದ ಮತ್ತೊಬ್ಬ ಬ್ರಿಟಿಷ್ ಅಧಿಕಾರಿಯಾಗಿದ್ದರು. ಇವರು ಹೊಂದಿದ್ದ ದೀರ್ಘಕಾಲದ ಅನುಭವದ ಆಧಾರದ ಮೇಲೆ ಲ್ಯಾಂಡ್ ಟೆನ್ಯುರ್ ಸಿಸ್ಟಿಮ್ ಆ್ಯಂಡ್ ಇಂಡಿಯನ್ ವಿಲೇಜ್ ಕಮ್ಯೂನಿಟಿ **(Land Tenure System and Indian village community)** ಎನ್ನುವ ಗ್ರಂಥಗಳನ್ನು ಹೊರ ತಂದಿದ್ದಾರೆ. ಈ ಗ್ರಂಥಗಳು ವಿಷಯದ ಬಗೆಗಿನ ಉಪಯುಕ್ತ ಮೂಲ ಸಾಮಗ್ರಿಗಳನ್ನು ಒಳಗೊಂಡಿವೆ.

ರೆವರೆಂಡ್ ಲಾಲ್ ಬಿಹಾರಿ ಡೆ ಅವರು ಭಾರತೀಯ ಗ್ರಾಮದ ಬಗೆಗೆ ಕ್ರಮಬದ್ಧ ಮತ್ತು ವೈಜ್ಞಾನಿಕ ಗ್ರಂಥವನ್ನು ಹೊರತಂದ ಮೊದಲ ಭಾರತೀಯ ಎಂಬುದು ಅಸಾಧಾರಣವಾದ ಕಾಕತಾಳೀಯವಾಗಿದೆ. ಕ್ರಮೇಣ ಸಾಮಾಜಿಕ ವಿಜ್ಞಾನಿಗಳು ಇವರ ಹಾದಿಯನ್ನು ಅನುಸರಿಸಿದರು. ಗ್ರಾಮ ಸಮುದಾಯಗಳ ಕ್ರಮಬದ್ಧವಾದ ಅಧ್ಯಯನ ಮಾಡಿದ ಮುಂಚಿನ ಸಾಮಾಜಿಕ ವಿಜ್ಞಾನಿಗಳೆಂದರೆ ಅರ್ಥಶಾಸ್ತ್ರಜ್ಞರು. ಗ್ರಾಮಗಳನ್ನು ಕುರಿತಂತೆ ಹಲವಾರು ಏಕವಿಷಯ ಅಧ್ಯಯನಗಳನ್ನು ಹೊರತಂದಿದ್ದಾರೆ. ಇದರಿಂದಾಗಿ ಭಾರತೀಯ ಗ್ರಾಮೀಣ ಸಮಾಜಶಾಸ್ತ್ರದ ಇತಿಹಾಸದಲ್ಲಿ ಹೊಸ ಘಟ್ಟ ಬಂದಂತಾಯ್ತು.

ಅಮೆರಿಕದ ಪಾದ್ರಿ ಡಬ್ಲ್ಯು.ಎಚ್. ವೈಸರ್ ರವರು ಭಾರತದ ಗ್ರಾಮಗಳ ಸಮಾಜಶಾಸ್ತ್ರೀಯ ಅಧ್ಯಯನವನ್ನು ಪ್ರಾರಂಭಿಸಿದರು. ಇವರ ಬಿಹೈಂಡ್ ದಿ ಮಡ್ ವಾಲ್ಸ್ ಮತ್ತು ದಿ ಹಿಂದು ಜಾಜ್‌ಮನಿ ಸಿಸ್ಟಿಮ್ ಗ್ರಂಥಗಳು ಇವರಿಗೆ ಹೆಚ್ಚು ಪ್ರಶಂಸೆ ಮಾತ್ರ ತರದೆ ಅಮೆರಿಕದ ಕಾರ್ನೆಲ್ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿಯನ್ನು ತಂದವು.

ಭಾರತೀಯ ಗ್ರಾಮಗಳ ಸೂಕ್ಷ್ಮ ಅಧ್ಯಯನವನ್ನು ಪ್ರಾರಂಭಿಸಿದ ವೈಸರ್‌ರವರಿಂದ ಸ್ಫೂರ್ತಿಗೊಂಡ ಹಲವಾರು ಮಾನವಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ವೈಸರ್‌ರವರ ಹಾದಿಯನ್ನು ಅನುಸರಿಸಿದರು. ಇದರ ಪರಿಣಾಮ ಹೆಸರಾಂತ ವಿದ್ವಾಂಸರಾದ ಎಸ್.ಸಿ. ದುಬೆ, ಡಿ.ಎನ್. ಮಜುಮ್‌ದಾರ್, ರಾಧಾ ಕಮಲ್ ಮುಖರ್ಜಿ, ಎಂ.ಎನ್. ಶ್ರೀನಿವಾಸ್, ಮ್ಯಾಕಿಮ್ ಮ್ಯಾರಿಯೆಟ್, ಆಸ್ಕರ್ ಲ್ಯೂವಿಸ್, ಆಂದ್ರೆ ಬೀತೆ, ಮಿಲ್ಟನ್ ಸಿಂಗರ್, ಎಫ್. ಜಿ. ಬೆಯ್ಲೆ, ಸಿ. ಪಾರ್ವತಮ್ಮ ( S.C. Dube, D.N. Majumdar, Radha Kamal Mookerjee, M.N. Srinivas, Mekim Marriot, Oscai Lewis, Andre Beteille, Milton Singer, F.G. Bailey, C. Parvathamma) ಮತ್ತು ಇತರರು ಗ್ರಾಮಗಳ ಅಧ್ಯಯನ ಮಾಡಿ ಅತ್ಯಮೂಲ್ಯ ಗ್ರಂಥಗಳನ್ನು ಹೊರತಂದಿದ್ದಾರೆ.

## 2.7 ಪ್ರಮುಖ ಪದಗಳು

ಮೂಲ ಪ್ರವರ್ತಕ (**Pioneer**) : ಹೊಸ ಚಿಂತನಾ ಮಾರ್ಗವನ್ನು ಅನ್ವೇಷಣೆ ಮಾಡಿದ ಮೊದಲಿಗ.

ಗೆಜೆಟ್ಟು (**Gazatte**) : ಸಂಸ್ಥೆ ಅಥವಾ ಸಂಘಟನೆಯ ಅಧಿಕೃತ ನಿಯತಕಾಲಿಕ.

ನ್ಯಾಯಶಾಸ್ತ್ರ (**Jurisprudence**) : ಕಾನೂನಿನ ಶಾಸ್ತ್ರ.

ಜಾಜ್‌ಮನಿ ಪದ್ಧತಿ (**Jajmani System**) : ಸೇವೆಯನ್ನು ನೀಡಿದ ಸೇವಾಧಾರಿತ ಜಾತಿಗಳ ಜನರಿಗೆ ಭೂ ಒಡೆಯರು ವಸ್ತು ರೂಪದಲ್ಲಿ ಪ್ರತಿಫಲ ನೀಡುವ ಸಾಂಪ್ರದಾಯಿಕ ಆರ್ಥಿಕ ಸಂಘಟನೆ ವ್ಯವಸ್ಥೆ.

ಒಳಗುಂಪು ಅಥವಾ ಸ್ವಹಿತಾಸಕ್ತಿ ಗುಂಪು (**Faction**) : ಒಂದು ದೊಡ್ಡ ಗುಂಪಿನಲ್ಲಿ ಭಿನ್ನಾಭಿಪ್ರಾಯ ಹೊಂದಿರುವ ಸಣ್ಣ ಒಳಗುಂಪು ಅಥವಾ ಸ್ವಹಿತಾಸಕ್ತಿ ಗುಂಪು.

ಪ್ರಬಲಜಾತಿ (**Dominant Caste**) : ಮೂರು ಬಗೆಯ ಅಧಿಕಾರಗಳಲ್ಲೂ ಪ್ರಾಬಲ್ಯವನ್ನು ಹೊಂದಿರುವ ಜಾತಿ - ಆರ್ಥಿಕ (ಸಂಪತ್ತು), ರಾಜಕೀಯ (ರಾಜಕೀಯ ಮತ್ತು ಆಡಳಿತಾತ್ಮಕ ಅಧಿಕಾರದಲ್ಲಿನ ಸ್ಥಾನವನ್ನು ಹೊಂದಿರುವುದು) ಮತ್ತು ಸಾಮಾಜಿಕ (ಜಾತಿ ಶ್ರೇಣಿಯಲ್ಲಿ ಉನ್ನತ ಸ್ಥಾನವನ್ನು ಹೊಂದಿರುವುದು).

## 2.8 ನಿಮ್ಮ ಪ್ರಗತಿ ಪರೀಕ್ಷೆಗೆ ಉತ್ತರಗಳು

**1.** 2.2

**2.** ಅ. ಸರಿ

ಆ. ಸರಿ

ಇ. ಸರಿ

ಈ. ತಪ್ಪು

ಉ. ತಪ್ಪು

**3.** ಆ. ಆಸ್ಕರ್ ಲ್ಯೂವಿಸ್‌ರವರು ಭಾರತೀಯ ಗ್ರಾಮಗಳಲ್ಲಿನ ಸ್ವಹಿತಾಸಕ್ತಿ ಗುಂಪುಗಳ ಪಾತ್ರಗಳ ಬಗೆಗೆ ಬೆಳಕು ಚೆಲ್ಲಿದ್ದಾರೆ.

## 2.9 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

1. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಗ್ರಾಮೀಣ ಸಮಾಜಶಾಸ್ತ್ರದ ಉಗಮ ಮತ್ತು ಬೆಳವಣಿಗೆಯ ಇತಿಹಾಸವನ್ನು ಗುರುತಿಸಿ.
2. ಭಾರತದಲ್ಲಿ ಗ್ರಾಮೀಣ ಸಮಾಜಶಾಸ್ತ್ರದ ಉಗಮ ಮತ್ತು ಬೆಳವಣಿಗೆಯ ಇತಿಹಾಸವನ್ನು ಗುರುತಿಸಿ.
3. ಭಾರತದ ಗ್ರಾಮೀಣ ಸಮಾಜಶಾಸ್ತ್ರದಲ್ಲಿನ ಪ್ರಮುಖ ಕೃತಿಗಳ ಬಗೆಗೆ ಸಂಕ್ಷಿಪ್ತ ಅಭಿಪ್ರಾಯ ನೀಡಿ.

**ಉತ್ತರಗಳು : ನೋಡಿ**

1. 2.2 ಮತ್ತು 2.3

2. 2.4 ಮತ್ತು 2.8

3. 2.6

## 2.10 ಸಲಹಾ ಗ್ರಂಥಗಳು


J.B. Chitambar; **Introductory Rural Sociology,** New Delhi, Wiley Eastern Limited, 1985.

A.R. Desai; **Rural Sociology in India,** Bomaby, Popular Prakashan, 1987.

S.L. Doshi, P.C. Jain; **Rural Sociology,** New Delhi, Rawat Publciations, 1999.

David L. Sills (Editor); **International Encyclopedia of the Social Sciences,** New York, the Macmillan, 1972.

G.R. Madan; **Sociology of Development,** New Delhi, Allied Publishers; 2003.

Ram Nath Sharma; **Indian Rural Sociology,** Delhi, Munshiram Manoharlal Publishers, 1979

ಎಸ್. ರಾಜಶೇಖರ್, ಆರ್. ರಾಜೇಶ್ : ಜನಸಂಖ್ಯಾಶಾಸ್ತ್ರ, ಭ್ರಮರ ಪ್ರಕಾಶನ, ಶಿವಮೊಗ್ಗ, 2003.

ಎಸ್. ರಾಜಶೇಖರ : ಗ್ರಾಮೀಣ ಸಮಾಜಶಾಸ್ತ್ರ, ಭ್ರಮರ ಪ್ರಕಾಶನ, ಶಿವಮೊಗ್ಗ, 1997.

ಪ್ರೊ.ಎಚ್.ವಿ.ನಾಗೇಶ್ : ಭಾರತದಲ್ಲಿ ಗ್ರಾಮೀಣಾಭಿವೃದ್ಧಿ, ಭಾರತ ಪ್ರಕಾಶನ, ಧಾರವಾಡ, 1988.

ಎಂ.ನಾರಾಯಣ : ಗ್ರಾಮೀಣ ಸಮಾಜಶಾಸ್ತ್ರ ಮತ್ತು ಭಾರತೀಯ ಗ್ರಾಮೀಣಾಭಿವೃದ್ಧಿ, ಚೇತನ ಬುಕ್‌ಹೌಸ್, ಮೈಸೂರು, 1997.



**ಎಂ.ಎಚ್.ಕೃಷ್ಣಪ್ಪ, ಅಧ್ಯಕ್ಷರು, ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ,**
**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.**

# ಘಟಕ 3 : ಗ್ರಾಮ ಸಮುದಾಯ ; ಉಗಮ ಮತ್ತು ಬೆಳವಣಿಗೆ, ವಿನ್ಯಾಸಗಳು (ಮಾದರಿಗಳು)

ರಚನೆ


3.0 ಉದ್ದೇಶಗಳು

3.1 ಪರಿಚಯ

3.2 ಸಾಮಾಜಿಕ ವಿಕಾಸದ ಮೊದಲ ಹಂತಗಳು ಮತ್ತು ಮಾನವನ ಅಲೆಮಾರಿ ಜೀವನ

3.3 ಭೂ ಸಾಗುವಳಿಯ ಆವಿಷ್ಕಾರ ಮತ್ತು ಗ್ರಾಮ ಸಮುದಾಯಗಳ ಉಗಮ

3.4 ಭಾರತದ ಮೂಲ ಗ್ರಾಮ ಸಮುದಾಯಗಳು - ವಿವಾದ

3.5 ಗ್ರಾಮ ವಿನ್ಯಾಸ - ವ್ಯಾಖ್ಯೆ ಮತ್ತು ಅರ್ಥ

3.6 ಗ್ರಾಮ ವಿನ್ಯಾಸಗಳ ಬಗೆಗಳು - ಅನುಕೂಲತೆಗಳು ಮತ್ತು ಅನಾನುಕೂಲತೆಗಳು

3.7 ಸಾರಾಂಶ

3.8 ಪ್ರಮುಖ ಪದಗಳು

3.9 ನಿಮ್ಮ ಪ್ರಗತಿ ಪರೀಕ್ಷೆಗೆ ಉತ್ತರಗಳು

3.10 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

3.11 ಸಲಹಾ ಗ್ರಂಥಗಳು

## 3.0 ಉದ್ದೇಶಗಳು

ಈ ಘಟಕದಲ್ಲಿ ಗ್ರಾಮಗಳ ಉಗಮ, ಬೆಳವಣಿಗೆ, ಸಂಕ್ಷಿಪ್ತ ಇತಿಹಾಸ ಹಾಗೂ ಅವುಗಳ ವಿನ್ಯಾಸವನ್ನು ಕುರಿತು ಚರ್ಚಿಸಲಾಗಿದೆ. ಇದರಲ್ಲಿನ ವಿಷಯಗಳ ಅಧ್ಯಯನದ ನಂತರ ನೀವು ;

- ಮಾನವನು ಸಾಮಾಜಿಕ ವಿಕಾಸದ ನಾಲ್ಕನೆ ಹಂತದ ಎರಡನೆ ಘಟ್ಟವನ್ನು ತಲುಪಿದಾಗ ಗ್ರಾಮಗಳು ಹೇಗೆ ಅಸ್ತಿತ್ವಕ್ಕೆ ಬಂದವು ಎಂಬುದನ್ನು ವಿವರಿಸಲಿದ್ದೀರಿ.
- ಸಾಮಾಜಿಕ ವಿಕಾಸದ ಮೊದಲಿನ ಹಂತಗಳಲ್ಲಿ ಏಕೆ ಮತ್ತು ಯಾವ ರೀತಿಯಲ್ಲಿ ಗ್ರಾಮಗಳು ಉಗಮಗೊಳ್ಳಲು ಅಸಾಧ್ಯವಾಗಿತ್ತು ಎಂಬುದನ್ನು ವಿಶದೀಕರಿಸಲಿದ್ದೀರಿ.
- ಭೂ ಸಾಗುವಳಿಯು ಮುಖ್ಯವಾಗಿ ಗ್ರಾಮಗಳ ಉಗಮಕ್ಕೆ ನಾಂದಿಯಾಯಿತು ಎನ್ನುವ ವಾಸ್ತವಾಂಶವನ್ನು ಪ್ರಶಂಸಿಸುವವರಿದ್ದೀರಿ.
- ವಿವಿಧ ಗ್ರಾಮ ಮಾದರಿಗಳ ಅರ್ಥ, ವಿಧಗಳು ಮತ್ತು ಅನುಕೂಲತೆ ಮತ್ತು ಅನಾನುಕೂಲತೆಗಳನ್ನು ವಿವರಿಸುವವರಿದ್ದೀರಿ.

## 3.1 ಪರಿಚಯ

ಗ್ರಾಮಗಳ ಉಗಮ ಹಾಗೂ ಬೆಳವಣಿಗೆಯು ಒಂದು ಸ್ವಾರಸ್ಯಮಯ ಇತಿಹಾಸವನ್ನು ಹೊಂದಿದೆ. ಈ ಇತಿಹಾಸದ ವಿವಿಧ ಹಂತಗಳನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ ಗ್ರಾಮಗಳು ವಿಕಾಸಗೊಳ್ಳಲು ಸಾವಿರಾರು ವರ್ಷಗಳೇ ಬೇಕಾದವು ಎಂಬುದು ಕಂಡುಬರುತ್ತದೆ. ಹೀಗಾಗಿ ಗ್ರಾಮಗಳು ಒಂದು ನಿರ್ದಿಷ್ಟ ಸಮಯದಲ್ಲಿ ಹಾಗೂ ಒಂದು ನಿರ್ದಿಷ್ಟ ಸ್ಥಳದಲ್ಲಿ ಉಗಮವಾದವೆಂದು ನಾವು ಹೇಳಲಾಗುವುದಿಲ್ಲ. ಜಗತ್ತಿನ ಕೆಲ ಪ್ರದೇಶಗಳಲ್ಲಿ ಅವು ಮುಂಚಿತವಾಗಿಯೇ ವಿಕಾಸಗೊಂಡಿದ್ದರೆ ಇನ್ನುಳಿದ ಪ್ರದೇಶಗಳಲ್ಲಿ ಅವುಗಳ ವಿಕಾಸವು ಕೆಲ ಕಾಲದ ನಂತರವಾಯಿತು. ಅದೇ ಪ್ರಕಾರ ಅವುಗಳ ಬೆಳವಣಿಗೆಯ ಪ್ರಮಾಣ ಹಾಗೂ ಪರಿಮಿತಿ ಎಲ್ಲ ಪ್ರದೇಶ-ಕಾಲಗಳಲ್ಲಿ ಒಂದೇ ತೆರನಾಗಿರಲಿಲ್ಲ. ಜಗತ್ತಿನ ಕೆಲ ಪ್ರದೇಶಗಳಲ್ಲಿ ಅವುಗಳ ಬೆಳವಣಿಗೆ ತೀವ್ರ ಗತಿಯದಾಗಿದ್ದರೆ ಇನ್ನುಳಿದ ಪ್ರದೇಶಗಳಲ್ಲಿ ಅದು ನಿಧಾನವಾಗಿತ್ತು.

ಒಂದು ಗ್ರಾಮದಲ್ಲಿ ಮನೆಗಳು ರಚಿತಗೊಂಡಿರುವ ರೀತಿಗೆ ಗ್ರಾಮ ವಿನ್ಯಾಸವೆಂದು ಹೇಳಬಹುದು. ಗ್ರಾಮ ವಿನ್ಯಾಸವು ಎಲ್ಲೆಡೆ ಒಂದೆ ಸಮನಾಗಿರದೆ ಜಗತ್ತಿನ ವಿವಿಧ ಭಾಗಗಳಲ್ಲಿ ಬೇರೆ ಬೇರೆಯಾಗಿರುತ್ತದೆ. ಈ ವೈವಿಧ್ಯತೆಗೆ ಭೌಗೋಳಿಕ, ಐತಿಹಾಸಿಕ ಹಾಗೂ ಸಾಮಾಜಿಕ-ಸಾಂಸ್ಕೃತಿಕ ಕಾರಣಗಳಿವೆ. ವಿವಿಧ ವಿನ್ಯಾಸಗಳು ತಮ್ಮದೇ ಆದ ಅನುಕೂಲತೆಗಳನ್ನು, ಅನಾನುಕೂಲತೆಗಳನ್ನು ಹೊಂದಿವೆ.

## 3.2 ಸಾಮಾಜಿಕ ವಿಕಾಸದ ಮೊದಲ ಹಂತಗಳು ಮತ್ತು ಮಾನವನ ಅಲೆಮಾರಿ ಜೀವನ

ನೆಲೆಯೂರಿದ ಜೀವನವು (settled life) ಗ್ರಾಮಗಳ ಉಗಮಕ್ಕೆ ಅತಿ ಅವಶ್ಯ. ಯಾವಾಗ ಮತ್ತು ಎಲ್ಲಿ ನೆಲೆಯೂರಿದ ಜೀವನ ಸಾಧ್ಯವೋ ಅಲ್ಲಿ ಗ್ರಾಮಗಳು ರೂಪುಗೊಳ್ಳುತ್ತವೆ. ನೆಲೆಯೂರಿದ ಜೀವನವಿಲ್ಲದೆ ಗ್ರಾಮಗಳು ಅಸ್ತಿತ್ವಕ್ಕೆ ಬರುವುದು ಅಸಾಧ್ಯ. ಹೀಗಾಗಿ ಆದಿಮಾನವರು ತಮ್ಮ ಅಲೆಮಾರಿ ಜೀವನವನ್ನು ಅಂತ್ಯಗೊಳಿಸಿ ಒಂದು ನಿರ್ದಿಷ್ಟ ಸ್ಥಳದಲ್ಲಿ ನೆಲೆಯೂರಿ ನಿಂತಾಗ ಗ್ರಾಮಗಳು ಉಗಮಗೊಂಡವೆಂದು ಹೇಳಬಹುದು. ಸಾಮಾಜಿಕ ವಿಕಾಸದ ನಾಲ್ಕನೆ ಹಂತದ ಉತ್ತರಾರ್ಧವನ್ನು ಪ್ರವೇಶಿಸಿದಾಗ ಮಾತ್ರ ಆದಿ ಮಾನವನು ಒಂದು ಸ್ಥಳದಲ್ಲಿ ನೆಲೆಯೂರಿ ವಾಸಿಸುವುದು ಸಾಧ್ಯವಾಯಿತು. ಈ ಸಾಮಾಜಿಕ ವಿಕಾಸದ ನಾಲ್ಕನೆ ಹಂತದ ಉತ್ತರಾರ್ಧಕ್ಕೆ ಭೂ ಸಾಗುವಳಿ ಹಂತವೆಂದು ಕರೆಯಲಾಗುವುದು. ಈ ಹಂತದಲ್ಲಿ ಮಾತ್ರ ಗ್ರಾಮಗಳು ಉಗಮಗೊಂಡವು. ಗ್ರಾಮಗಳ ಉಗಮಕ್ಕೆ

ನೆಲೆಯೂರಿದ ಜೀವನ ಹೇಗೆ ಅವಶ್ಯವೆಂಧು ಮನಗಾಣಲು ನಾವು ಸಾಮಾಜಿಕ ವಿಕಾಸದ ವಿವಿಧ ಹಂತಗಳನ್ನು ಹಾಗೂ ಆ ಹಂತಗಳಲ್ಲಿ ಆದಿ ಮಾನವನ ಬದುಕಿನ ರೀತಿಯನ್ನು ಪರಿಶೀಲಿಸುವುದು ಅತ್ಯವಶ್ಯವಾಗಿದೆ. ಗ್ರಾಮಗಳ ಉಗಮದ ಬೆಳವಣಿಗೆಯನ್ನು ಕೇಂದ್ರವಾಗಿಟ್ಟುಕೊಂಡು ನಾವು ಸಾಮಾಜಿಕ ವಿಕಾಸವನ್ನು ನಾಲ್ಕು ಹಂತಗಳಲ್ಲಿ ವಿಂಗಡಿಸಬಹುದು. ಆ ನಾಲ್ಕು ಹಂತಗಳಾವುವೆಂದರೆ - **ಆಹಾರ ಸಂಗ್ರಹಣಾ ಹಂತ, ಬೇಟೆಯಾಡುವ ಹಂತ, ಹುಲ್ಲುಗಾವಲು ಹಂತ ಹಾಗೂ ಭೂ ಸಾಗುವಳಿ ಹಂತ.** ಕೊನೆಯದಾದ ಭೂ ಸಾಗುವಳಿಯ ಹಂತವನ್ನು ಎರಡು ಉಪ ಹಂತಗಳಲ್ಲಿ ವಿಂಗಡಿಸಲಾಗಿದೆ. ಆ ಉಪ ಹಂತಗಳಾವುವೆಂದರೆ - **ಬೂದಿ ಸಾಗುವಳಿ ಹಂತ ಮತ್ತು ಭೂ ಸಾಗುವಳಿ ಹಂತ.** ಮೊದಲಿನ ಮೂರು ಹಂತಗಳಲ್ಲಾಗಲಿ ಅಥವಾ ನಾಲ್ಕನೆ ಹಂತದ ಪೂರ್ವಾವಧಿಯಲ್ಲಾಗಲಿ ಗ್ರಾಮಗಳು ಏಕೆ ಅಸ್ತಿತ್ವಕ್ಕೆ ಬರಲಿಲ್ಲ ಎಂಬ ವಿಷಯವನ್ನು ಕೂಲಂಕಷವಾಗಿ ಚರ್ಚಿಸೋಣ.

**ಆಹಾರ ಸಂಗ್ರಹಣಾ ಹಂತ**

ಈ ಹಂತದಲ್ಲಿ ಆದಿ ಮಾನವರ ಬದುಕು ನಿಸರ್ಗದ ಕೊಡುಗೆಗಳಾದ ಹಣ್ಣು ಹಂಪಲ, ಗೆಡ್ಡೆ-ಗೆಣಸು, ಕಾಯಿ-ತೊಪ್ಪಲುಗಳನ್ನವಲಂಬಿಸಿತ್ತು. ಈ ಹಂತದಲ್ಲಿ ಮಾನವನಿಗೂ ಹಾಗೂ ಇನ್ನುಳಿದ ಪಶು ಪ್ರಾಣಿಗಳಿಗೂ ಆಹಾರದ ವಿಷಯದಲ್ಲಿ ಯಾವುದೆ ವಿಶೇಷ ವ್ಯತ್ಯಾಸವಿರಲಿಲ್ಲ. ಹಾಗೆ ನೋಡಿದರೆ, ಕಷ್ಟ, ಕೇಡು, ಗಂಡಾಂತರಗಳಿಂದ ಕೂಡಿದ ಆ ದಂಡಕಾರಣ್ಯದಲ್ಲಿ ಜೀವನ ನಡೆಸಲು ಮಾನವನಿಗಿಂತ ಪಶು ಪ್ರಾಣಿಗಳೆ ಹೆಚ್ಚು ಸಾಮರ್ಥ್ಯ ಹೊಂದಿದ್ದವೆಂದು ಹೇಳಬಹುದು. ಆ ಹಂತದಲ್ಲಿ ಮಾನವನು ಸಾವಿನ ದವಡೆಯಿಂದ ತನ್ನ ತುತ್ತನ್ನು ಕಿತ್ತು ತಿನ್ನುತ್ತಿದ್ದನೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇಂತಹ ಗಂಡಾಂತರಮಯ ಅನಿಶ್ಚಿತ ಜೀವನವನ್ನು ನಡೆಸುವ ಮಾನವರು ನಿಸರ್ಗದ ಕೊಡುಗೆಗಳನ್ನು ಅರಸುತ್ತ ಅಲೆಮಾರಿ ಜೀವನವನ್ನು ನಡೆಸದೆ ಗತ್ಯಂತರವಿರಲಿಲ್ಲ. ಆದ್ದರಿಂದ ಋತುಮಾನಗಳು ಬದಲಾದಂತೆ ಮಾನವನ ವಾಸ್ತವ್ಯವು ಬದಲಾಗಲೇಬೇಕಾಯಿತು. ಆ ಕಾರಣದಿಂದ ಈ ಹಂತದ ಮಾನವರು ಋತುಗಳನ್ನು ಹಿಂಬಾಲಿಸಿದರು ಎನ್ನಲಾಗುತ್ತದೆ (They followed Seasons). ನೆಲೆಯೂರಿದ ಜೀವನ ಅಸಾಧ್ಯವಾದ ಈ ಹಂತದಲ್ಲಿ ಗ್ರಾಮಗಳು ಅಸ್ತಿತ್ವಕ್ಕೆ ಬರಲಿಲ್ಲ.

**ಬೇಟೆಯಾಡುವ ಹಂತ**

ಸಾಮಾಜಿಕ ವಿಕಾಸದ ಎರಡನೆಯ ಹಂತವನ್ನು ಬೇಟೆಯಾಡುವ ಹಂತವೆಂದು ಕರೆಯಲಾಗುತ್ತದೆ. ಈ ಹಂತದಲ್ಲಿ ಎರಡು ಪ್ರಮುಖ ಬೆಳವಣಿಗೆಗಳು ಗೋಚರವಾದವು. ಮೊದಲನೆಯದು ಆದಿಮಾನವರು ಕೆಲವೊಂದು ಉಪಕರಣಗಳನ್ನು ರೂಪಿಸಿ ಅವುಗಳನ್ನು ಪ್ರಯೋಗಿಸುವ ಕುಶಲತೆಯನ್ನು ಕಲಿತುಕೊಂಡರು. ಉಪಕರಣಗಳನ್ನು ನಿರ್ಮಿಸಿ ಅವುಗಳನ್ನು ಉಪಯೋಗಿಸುವ ಏಕಮಾತ್ರ ಪ್ರಾಣಿ ಎಂದು ಮಾನವನನ್ನು ಕರೆಯಲಾಗುತ್ತದೆ (Man is the only tool making and tool using animal). ಮಾನವನು ಉಪಕರಣಗಳನ್ನು ನಿರ್ಮಿಸಿ ಅವುಗಳನ್ನು ಪ್ರಯೋಗಿಸುವ ಕಲೆಯನ್ನು ಪಡೆಯಲು ಎರಡು ಮುಖ್ಯ ಕಾರಣಗಳನ್ನು ನಾವು ಗುರುತಿಸಬಹುದು. ಮೊದಲನೆಯದು ಆತನ ಬುದ್ಧಿಶಕ್ತಿ, ಎರಡನೆಯದು ನಾಲ್ಕು ಬೆರಳುಗಳ ಎದುರಿಗೆ ಹೆಬ್ಬೆರಳನ್ನು ಹೊಂದಿದ ಅಂಗ ರಚನೆ (Opposable thumb). ಈ ರೀತಿಯ ಅಂಗರಚನೆಯನ್ನು ಹೊಂದಿದ ಏಕಮೇವ ಪ್ರಾಣಿಯಾದ ಮಾನವ ಮೊದ ಮೊದಲು ಕಲ್ಲು ಕಟ್ಟಿಗೆಗಳಿಂದ ಉಪಕರಣಗಳ ಆಯುಧಗಳನ್ನು ನಿರ್ಮಿಸಿ ಅವುಗಳ ಸಹಾಯದಿಂದ ಕಾಡು ಪ್ರಾಣಿಗಳ ಬೇಟೆಯಾಡತೊಡಗಿದ. ಹೀಗಾಗಿ ಆತನ ಜೀವನ ಮಟ್ಟವು ಸುಧಾರಿಸಿತು. ಈಗ ಆತ ಹಣ್ಣು ಹಂಪಲು, ಗೆಡ್ಡೆ-ಗೆಣಸು, ಕಾಯಿ-ತೊಪ್ಪಲುಗಳನ್ನಲ್ಲದೇ ಪ್ರಾಣಿಗಳ ಮಾಂಸವನ್ನು ಸೇವಿಸತೊಡಗಿದ. ಅಷ್ಟು ಮಾತ್ರವಲ್ಲದೇ ತನ್ನನ್ನು ಕಡು ಬಿಸಿಲು, ಕಡು ಚಳಿಯಿಂದ ರಕ್ಷಿಸಿಕೊಳ್ಳಲು ಪ್ರಾಣಿಗಳ ಚರ್ಮವನ್ನು ಹೊದಿಕೆಯಂತೆ ಉಪಯೋಗಿಸತೊಡಗಿದ.

ಈ ಹಂತದ ಎರಡನೆಯ ಆವಿಷ್ಕಾರ ಎಂದರೆ ಬೆಂಕಿ. ಮಾನವನು ಬೆಂಕಿಯನ್ನು ಆಕಸ್ಮಿಕವಾಗಿ ಎರಡು ಒಣಗಿದ ಕಟ್ಟಿಗೆಗಳನ್ನು ಅಥವಾ ಎರಡು ಕಲ್ಲುಗಳನ್ನು ಉಜ್ಜುವುದರಿಂದ ಕಂಡುಕೊಂಡನೆಂದು ಹೇಳಲಾಗುತ್ತದೆ. ಹೀಗೆ ಆಕಸ್ಮಿಕವಾಗಿ ಕಂಡು ಹಿಡಿದ ಬೆಂಕಿಯು ಅತಿ ಉಪಯುಕ್ತವಾದ ಒಂದು ಶಕ್ತಿಯಾಗಿ ಪರಿಣಮಿಸಿತು. ಬೆಂಕಿಯ ಸಹಾಯದಿಂದ ಕಾಡು ಮಾನವರು ಈವರೆಗೆ ಬೇಯಿಸದೆ ಹಸಿಯಾಗಿ ತಿನ್ನುತ್ತಿದ್ದ ಆಹಾರವನ್ನು ಬೇಯಿಸಿ ತಿನ್ನತೊಡಗಿದರು. ಹೀಗೆ ಬೇಯಿಸಿದ ಆಹಾರವು ಜೀರ್ಣ ಕ್ರಿಯೆಗೆ ಸಹಾಯಕಾರಿಯಾಯಿತು. ಅಷ್ಟು ಮಾತ್ರವಲ್ಲದೇ ಬೆಂಕಿಯ ಸಹಾಯದಿಂದ ಮಾನವರು ಕಡು ಚಳಿಯಿಂದ ರಕ್ಷಿಸಿಕೊಂಡರಲ್ಲದೇ ಅದರ ಸಹಾಯದಿಂದ ನರ ಭಕ್ಷಕ ಕಾಡು ಪ್ರಾಣಿಗಳನ್ನು ಬೆದರಿಸಿ ತಮ್ಮನ್ನು ರಕ್ಷಿಸಿಕೊಳ್ಳುವ ತಂತ್ರವನ್ನು ಕಲಿತರು.

ಎರಡನೆಯ ಹಂತದಲ್ಲಿ ಈ ಎಲ್ಲ ಸುಧಾರಣೆಗಳು ಕಂಡು ಬಂದರೂ ಕೂಡ ಮಾನವನು ಒಂದು ಸ್ಥಳದಲ್ಲಿ ನೆಲೆಯೂರಿ ನಿಲ್ಲುವುದು ಸಾಧ್ಯವಾಗದೆ ಹೋಯಿತು. ಈ ಹಂತದಲ್ಲಿ ಕೂಡ ಮಾನವನು ಅಲೆಮಾರಿ ಜೀವನವನ್ನು ಮುಂದುವರಿಸಬೇಕಾಯಿತು. ಮೊದಲನೆಯ ಹಂತದಲ್ಲಿ ಮಾನವನು ಋತುಗಳನ್ನು ಹಿಂಬಾಲಿಸಿದರೆ ಈ ಹಂತದಲ್ಲಿ ಅವನು ಬೇಟೆಯಾಡಿ ತಿನ್ನುವ ಪ್ರಾಣಿಗಳನ್ನು ಹಿಂಬಾಲಿಸಿದ. ಪ್ರಾಣಿಗಳು ತಮ್ಮ ಆಹಾರವನ್ನು ಅರಸುತ್ತ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅಲೆದಂತೆ ಮಾನವನು ಆ ಪ್ರಾಣಿಗಳ ಬೆನ್ನಟ್ಟಿ ತಾನೂ ಸಹಿತ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸತತವಾಗಿ ಅಲೆಯತೊಡಗಿದ. ಆದುದರಿಂದ ನೆಲೆಯೂರಿದ ಜೀವನ ಸಾಧ್ಯವಾಗದೇ ಗ್ರಾಮಗಳು ಅಸ್ತಿತ್ವಕ್ಕೆ ಬರಲಿಲ್ಲ.

**ಹುಲ್ಲುಗಾವಲು ಹಂತ**

ಪ್ರಾಣಿಗಳ ಪಳಗಿಸುವಿಕೆಯ ಕಲೆಯು ಹುಲ್ಲುಗಾವಲು ಹಂತವನ್ನು ಬರುವಂತೆ ಮಾಡಿತು ಎಂದು ಹೇಳಬಹುದು. ಮಾನವನು ಕುದುರೆ, ಕುರಿ, ಆಡು, ಎತ್ತು, ಆಕಳು, ಎಮ್ಮೆ, ಒಂಟೆ, ಕತ್ತೆ ಹೀಗೆ ಮುಂತಾದ ಪ್ರಾಣಿಗಳನ್ನು ಪಳಗಿಸತೊಡಗಿದ. ಈ ಪ್ರಾಣಿಗಳನ್ನು ಪಳಗಿಸುದುದರಿಂದಾಗಿ ಆತನ ಜೀವನದಲ್ಲಿ ಅನೇಕ ಸುಧಾರಣೆಗಳು ಗಣನೀಯವಾಗಿ ಉಂಟಾದವು. ಆತನ ಆಹಾರ ಸಂಗ್ರಹವು ಹೆಚ್ಚಿತು. ನಿಸರ್ಗದಿಂದ ವಿಪುಲವಾಗಿ ದೊರಕುವ ಹಣ್ಣು-ಹಂಪಲು, ಗೆಡ್ಡೆ-ಗೆಣಸು, ಕಾಯಿ-ತೊಪ್ಪಲು, ಬೇಟೆ-ಪ್ರಾಣಿಗಳಿಂದ ದೊರಕುವ ಮಾಂಸವಲ್ಲದೇ ಈ ಹಂತದ ಮಾನವರು ತಾವು ಪಳಗಿಸಿ ಸಾಕಿದ ಪ್ರಾಣಿಗಳ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಅವಲಂಬಿಸಿದ್ದರು. ಕಷ್ಟಕರ ಪರಿಸ್ಥಿತಿಯಲ್ಲಿ ತಮ್ಮ ಹಸಿವನ್ನು ನೀಗಿಸಿಕೊಳ್ಳಲು ತಾವು ಪಳಗಿಸಿ ಸಾಕಿದ ಪ್ರಾಣಿಗಳನ್ನು ಕೊಂದು ತಿನ್ನುತ್ತಿದ್ದರು.

ಸಾಕು ಪ್ರಾಣಿಗಳು ಮಾನವನ ಜೀವನದಲ್ಲಿ ಅನೇಕ ಸುಧಾರಣೆಗಳಿಗೆ ಕಾರಣವಾದರೂ ಮಾನವನು ಒಂದೇ ಸ್ಥಳದಲ್ಲಿ ನೆಲೆಯೂರಿ ನಿಲ್ಲಲು ಅನುವಾಗಲಿಲ್ಲ. ತದ್ವಿರುದ್ಧವಾಗಿ ಸಾಕು ಪ್ರಾಣಿಗಳು ಮಾನವನ ಅಲೆಮಾರಿತನವನ್ನು ಉಲ್ಬಣಗೊಳಿಸಿದವೆಂದು ಅನೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಏಕೆಂದರೆ ಈ ಹಂತದಲ್ಲಿ ಮಾನವರು ಕೇವಲ ತಮಗೆ ಬೇಕಾದ ಆಹಾರವನ್ನಲ್ಲದೆ ತಾವು ಸಾಕಿ ಸಲುಹಿದ ಪ್ರಾಣಿಗಳಿಗೂ ಆಹಾರವನ್ನು ಸಂಗ್ರಹಿಸಬೇಕಾಯಿತು. ಹೀಗಾಗಿ ಈ ಹಂತದಲ್ಲಿ ಮಾನವರು ತಾವು ಪಳಗಿಸಿ ಸಾಕಿದ ಪ್ರಾಣಿಗಳನ್ನು ಮೇಯಿಸಲು ಬೇಕಾದ ಹುಲ್ಲುಗಾವಲುಗಳನ್ನು ಅರಸುತ್ತ ಹೊರಟರು. ತಮ್ಮಲ್ಲಿರುವ ಸಾರಿಗೆಯ ಪ್ರಾಣಿಗಳಾದ ಎತ್ತು, ಕತ್ತೆ, ಕುದುರೆ, ಒಂಟೆ ಮುಂತಾದವುಗಳ ಸಹಾಯದಿಂದ ಹೆಚ್ಚಿನ ಸರಕು ಸಾಮಗ್ರಿಗಳನ್ನು ಹೇರಿಕೊಂಡು ದೂರ ದೂರ ಪ್ರದೇಶಗಳಿಗೆ ಪ್ರಯಾಣ ಮಾಡಬಲ್ಲವರಾದರು. ಹೀಗಾಗಿ ಈ ಹಂತದಲ್ಲಿಯೂ ಕೂಡ ಗ್ರಾಮಗಳು ಉಗಮವಾಗದೆ ಹೋದವು.

## 3.3 ಭೂ ಸಾಗುವಳಿಯ ಆವಿಷ್ಕಾರ ಮತ್ತು ಗ್ರಾಮ ಸಮುದಾಯಗಳ ಉಗಮ

**ಭೂ ಸಾಗುವಳಿ ಹಂತ**

ಭೂ ಸಾಗುವಳಿ ಹಂತವು ಮಾನವನ ಇತಿಹಾಸದಲ್ಲಿ ಒಂದು ಮಹತ್ವದ ಘಟ್ಟವಾಗಿದ್ದು ಮಾನವನ ಸಂಸ್ಕೃತಿಯ ದಿಕ್ಕನ್ನೇ

ಬದಲಾಯಿಸಿತು ಎನ್ನಬಹುದು.. ಈ ಹಂತದಲ್ಲಿ ಮಾನವನು ಒಂದು ಸ್ಥಳದಲ್ಲಿ ನೆಲೆಯೂರಿ ನಿಲ್ಲುವಂತಾಯಿತಲ್ಲದೆ, ಗ್ರಾಮಗಳು ಅಸ್ತಿತ್ವಕ್ಕೆ ಬರುವಂತಾಯಿತು.

ಸಾಗುವಳಿ ಹಂತವನ್ನು ಬೂದಿ ಸಾಗುವಳಿ ಹಂತ ಮತ್ತು ಭೂ ಸಾಗುವಳಿ ಹಂತ ಎಂದು ಎರಡು ಉಪ ಹಂತಗಳಾಗಿ ವಿಂಗಡಿಸಬಹುದು.

**ಬೂದಿ ಸಾಗುವಳಿ ಹಂತ**

ಮೊದ ಮೊದಲು ಮಾನವರು ಭೂ ಸಾಗುವಳಿಗೆ ಅತ್ಯವಶ್ಯವಾದ ಗುದ್ದಲಿ - ನೇಗಿಲು, ರಂಟೆ-ಕುಂಟೆಗಳನ್ನು (Hoe and Plow) ಕಂಡು ಹಿಡಿದಿರಲಿಲ್ಲ. ಹೀಗಾಗಿ ಅವರು ಭೂಮಿಯನ್ನು ಉತ್ತು ಬೀಜಗಳನ್ನು ಬಿತ್ತುವ ಸ್ಥಿತಿಯಲ್ಲಿರಲಿಲ್ಲ. ಆದರೆ ಗುದ್ದಲಿ - ನೇಗಿಲುಗಳ ಸಹಾಯವಿಲ್ಲದೆ ಸಾಗುವಳಿ ಮಾಡುವ ಒಂದು ವಿಧಾನವನ್ನು ಅನುಸರಿಸುತ್ತಿದ್ದರು. ಅವರು ಒಂದು ದಟ್ಟವಾಗಿ ಬೆಳೆದ ಕಾಡಿನಲ್ಲಿನ ಗಿಡಗಳನ್ನು ಕಡಿದು ಉರುಳಿ ಬಿದ್ದ ಮರಗಳ ರಾಶಿಗೆ ಬೆಂಕಿ ಇಡುತ್ತಿದ್ದರು. ಹೀಗೆ ಎಲ್ಲ ಮರಗಳು ಸುಟ್ಟು ಬೂದಿಯಾದ ನಂತರ ಆ ಬೂದಿಯಲ್ಲಿ ಬೀಜಗಳ ಚರಗ ಚೆಲ್ಲುತ್ತಿದ್ದರು. ಹೀಗೆ ಚರಗ ಚೆಲ್ಲಿದ ಬೀಜಗಳು ಮೆತ್ತಗಾದ ಬೂದಿಯಲ್ಲಿ ಕುಸಿದು ಮೊಳಕೆಯೊಡೆದು ಪೈರಾಗಿ ಬೆಳೆದು ಕೆಲ ತಿಂಗಳ ನಂತರ ಫಲ ನೀಡುತ್ತಿದ್ದವು. ಈ ತೆರನಾದ ಸಾಗುವಳಿಗೆ ಬೂದಿ ಸಾಗುವಳಿ, ಅರಣ್ಯ ಸಾಗುವಳಿ, ಕಾಡು ಸಾಗುವಳಿ, ಸರತಿ ಸಾಗುವಳಿ ಇತ್ಯಾದಿಯಾಗಿ ಹೆಸರುಗಳಿವೆ. ಬೂದಿ ಸಾಗುವಳಿ ಮಾನವನ ಆಹಾರ ಸಂಗ್ರಹವನ್ನು ಹೆಚ್ಚಿಸಲು ತುಸು ಸಹಾಯಕಾರಿಯಾದರೂ ಅದು ಮಾನವನು ನೆಲೆಯೂರಿ ನಿಲ್ಲಲು ಸಹಾಯಕವಾಗಲಿಲ್ಲ. ಋತುಗಳನ್ನು ಹಿಂಬಾಲಿಸಿ, ಬೇಟೆ ಪ್ರಾಣಿಗಳನ್ನು ಬೆಂಬತ್ತಿ, ಹುಲ್ಲುಗಾವಲುಗಳನ್ನರಸುತ್ತ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸತತವಾಗಿ ಅಲೆದಾಡಿದ ಮಾನವ ಬೂದಿ ಸಾಗುವಳಿ ಹಂತದಲ್ಲಿಯೂ ಅದೇ ಜೀವನವನ್ನು ಮುಂದುವರೆಸಬೇಕಾಯಿತು. ಏಕೆಂದರೆ ಒಮ್ಮೆ ಸುಟ್ಟು ಬೂದಿಯಾದ ಕಾಡು ಮತ್ತೆ ಕಾಡಾಗಿ ಬೆಳೆದು ನಿಲ್ಲಲು ಅನೇಕ ವರ್ಷಗಳೆ ಬೇಕಾಗುತ್ತಿತ್ತು. ಆದ್ದರಿಂದ ಬೂದಿ ಸಾಗುವಳಿಯ ಈ ಹಂತದಲ್ಲಿ ಮಾನವರು ಹೊಸ ಹೊಸ ಕಾಡುಗಳನ್ನು ಅರಸುತ್ತ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅಲೆದಾಡಿದರು. ಈ ಹಂತದಲ್ಲಿಯೂ ನೆಲೆಯೂರಿದ ಜೀವನವಿಲ್ಲದ್ದರಿಂದ ಗ್ರಾಮಗಳೂ ಇಲ್ಲದಂತಾದವು.

**ಭೂ ಸಾಗುವಳಿ ಹಂತ**

ಮಾನವನು ಭೂ ಸಾಗುವಳಿಗೆ ಅತ್ಯವಶ್ಯವಾದ ಗುದ್ದಲಿ - ನೇಗಿಲುಗಳನ್ನು ಕಂಡು ಹಿಡಿದಾಗ ಭೂ ಸಾಗುವಳಿ ಹಂತವು ಅಸ್ತಿತ್ವಕ್ಕೆ ಬಂದಿತೆಂದು ಹೇಳಬಹುದು. ಈ ರೈತಾಪಿ ಉಪಕರಣಗಳ ಸಹಾಯದಿಂದ ಮಾನವನು ಭೂಮಿಯನ್ನು ಉತ್ತು ಬೀಜಗಳನ್ನು ಬಿತ್ತುವಂತಾಯಿತು. ಇದನ್ನು ಅದೇ ಭೂಮಿಯಲ್ಲಿ ಪ್ರತಿ ವರ್ಷವು ಮಾಡಬಹುದಾಗಿತ್ತು. ಹೀಗೆ ಉತ್ತು ಬಿತ್ತಿ ಬೆಳೆದ ಪೈರುಗಳ ಸಹಾಯದಿಂದ ಮಾನವನು ಪ್ರಪ್ರಥಮವಾಗಿ ತನ್ನ ಆಹಾರವನ್ನು ತಾನೇ ಬೆಳೆದುಕೊಳ್ಳತೊಡಗಿದನು. ಅಷ್ಟು ಮಾತ್ರವಲ್ಲದೆ ಆತನು ಒಂದೇ ಸ್ಥಳದಲ್ಲಿ ನೆಲೆಯೂರಿ ನಿಲ್ಲುವಂತೆಯೂ ಆಯಿತು. ಮಾನವನ ಸಾಮಾಜಿಕ ವಿಕಾಸದ ಈ ದೀರ್ಘವಾದ ಇತಿಹಾಸವನ್ನು ಟೊನ್ನಿಸ್ ಹಾಗೂ ಮಂಪೋರ್ಡರು ಚಿಕ್ಕ ಹಾಗೂ ಚೊಕ್ಕ ಶಬ್ದಗಳಲ್ಲಿ ಅತಿ ಪರಿಣಾಮಕಾರಿಯಾಗಿ ವರ್ಣಿಸಿದ್ದಾರೆ. ಟೊನ್ನಿಸ್ ಅವರು 'ಉತ್ತಿದ ತುಂಡು ಜಮೀನು ಅಲೆಮಾರಿಗಳ ಕಾಲುಗಳನ್ನು ಕಟ್ಟಿ ಹಾಕಿತು' ಎಂದು ಹೇಳಿದರೆ ಮಂಪೋರ್ಡ ಅವರು 'ಸಸ್ಯ ಸಂಗೋಪನೆ'ಯೇ (ಪ್ರಾಣಿ ಸಂಗೋಪನೆಯಲ್ಲ) ಮಾನವನ ನೆಲೆಯೂರಿದ ಜೀವನಕ್ಕೆ ನಾಂದಿಯಾಯಿತು' ಎಂದು ಹೇಳಿದ್ದಾರೆ. ಹಳ್ಳ-ಕೊಳ್ಳ, ನದಿ-ಕೆರೆಗಳ ಮಗ್ಗುಲಿನ ಫಲವತ್ತಾದ ಸ್ಥಳಗಳನ್ನು ಆಯ್ದು ಆ ಭೂಮಿಯಲ್ಲಿ ತನಗೆ ಬೇಕಾದ ಆಹಾರವನ್ನು ಬೆಳೆಯತೊಡಗಿದ. ಅದೇ ಜಮೀನಿನಲ್ಲಿ ಪ್ರತಿ ವರ್ಷವೂ ಸಾಗುವಳಿ ಮಾಡಿ ತನ್ನ ಆಹಾರವನ್ನು ಬೆಳೆಯಬಹುದಾದ್ದರಿಂದ ಆತನ ಅಲೆದಾಟಕ್ಕೆ ತೆರೆಬಿದ್ದಂತಾಯಿತು. ಆತನ ಅಲೆಮಾರಿ ಜೀವನ ಕೊನೆಗೊಂಡಿತು. ನೆಲೆಯೂರಿ ನಿಂತ ಮಾನವ ಪ್ರಪ್ರಥಮವಾಗಿ ಗ್ರಾಮಗಳನ್ನು ನಿರ್ಮಿಸಿ ಅವುಗಳಲ್ಲಿಯೇ ನೆಲಸತೊಡಗಿದ.

## 3.4 ಭಾರತದ ಮೂಲ ಗ್ರಾಮ ಸಮುದಾಯಗಳು - ವಿವಾದ

ಭಾರತದ ಗ್ರಾಮೀಣ ಸಮಾಜಶಾಸ್ತ್ರದ ಹರಿಕಾರರೆಂದೇ ಗುರುತಿಸಲ್ಪಟ್ಟ ಸರ್ ಹೆನ್ರಿ ಸಮ್ನರ್ ಮೇನ್ ಹಾಗೂ ಲಾರ್ಡ್ ಬೆಡನ್ ಪಾವೆಲ್ ಅವರುಗಳು ಭಾರತದ ಮೂಲಗ್ರಾಮಗಳ ಗುಣಲಕ್ಷಣಗಳ ಬಗ್ಗೆ ವಿಭಿನ್ನ ಅಭಿಪ್ರಾಯವನ್ನು ಹೊಂದಿದ್ದಾರೆ. ಭಾರತದಲ್ಲಿ ಯಾವ ತರಹದ ಗ್ರಾಮಗಳು ಮೊದಲು ಅಸ್ತಿತ್ವಕ್ಕೆ ಬಂದವು ಎಂಬುದು ಇವರ ನಡುವಣ ವಿವಾದದ ಅತಿ ಪ್ರಮುಖವಾದ ಅಂಶವಾಗಿದೆ. ಸರ್ ಹೆನ್ರಿ ಮೇನ್ ಅವರು ಜಂಟಿ-ಗ್ರಾಮಗಳು (joint type villages) ಮೊದಲಿಗೆ ಅಸ್ತಿತ್ವಕ್ಕೆ ಬಂದವೆಂದೂ ತದನಂತರ ಕಾರಣಾಂತರಗಳಿಂದ ರೈತವಾರಿ ಗ್ರಾಮಗಳು (Raiyatwari villages) ಅಸ್ತಿತ್ವಕ್ಕೆ ಬಂದವೆಂದೂ ಪ್ರತಿಪಾದಿಸುತ್ತಾರೆ. ಆದರೆ ಬೇಡನ್ ಪಾವೆಲ್ ಅವರು ತದ್ವಿರುದ್ಧವಾಗಿ ರೈತವಾರಿ ಗ್ರಾಮಗಳು ಮೊಟ್ಟ ಮೊದಲು ಅಸ್ತಿತ್ವಕ್ಕೆ ಬಂದವೆಂದೂ ತದನಂತರ ಜಂಟಿ ಗ್ರಾಮಗಳು ಅಸ್ತಿತ್ವಕ್ಕೆ ಬಂದವೆಂದು ಪ್ರತಿಪಾದಿಸುತ್ತಾರೆ.

ಈ ವಿವಾದ ಕುರಿತು ಚರ್ಚೆ ಮಾಡುವ ಮೊದಲು ನಾವು ಜಂಟಿ ಗ್ರಾಮ, ರೈತವಾರಿ ಗ್ರಾಮಗಳೆಂದರೇನು? ಅವುಗಳ ಗುಣ ವಿಶೇಷಗಳಾವುವು ಎಂಬ ವಿಷಯವನ್ನು ತಿಳಿದುಕೊಳ್ಳೋಣ.

ಜಂಟಿ ಗ್ರಾಮ **(Joint Type Village)**

- ಅವಿಭಕ್ತ ಕುಟುಂಬ ; ಅನೇಕ ವಿಷಯಗಳಲ್ಲಿ ಜಂಟಿ ಗ್ರಾಮವು ಜಂಟಿ (ಅವಿಭಕ್ತ) ಕುಟುಂಬವನ್ನು ಹೋಲುತ್ತಿತ್ತು.
- ಕಳ್ಳು ಬಳ್ಳಿ ; ಜಂಟಿ ಕುಟುಂಬಗಳಂತೆ ಕಳ್ಳು ಬಳ್ಳಿಯು (Kinship) ಜಂಟಿ ಗ್ರಾಮದ ಮೂಲ ತಳಹದಿಯಾಗಿದ್ದಿತು. ಇಂತಹ ಗ್ರಾಮದಲ್ಲಿ ವಾಸಿಸುವವರೆಲ್ಲರೂ ತಾವು ರಕ್ತ ಸಂಬಂಧಿಗಳೆಂದು ದೃಢವಾಗಿ ನಂಬಿದ್ದರು. ಅಷ್ಟು ಮಾತ್ರವಲ್ಲದೆ ತಾವೆಲ್ಲರೂ ಒಬ್ಬನೆ ಮೂಲ ಪುರುಷನ ಸಂತತಿಯವರೆಂದೂ ತಮ್ಮೆಲ್ಲರ ನರನಾಡಿಗಳಲ್ಲಿ ಹರಿಯುವ ರಕ್ತ ಆ ಮೂಲ ಪುರುಷನ ರಕ್ತವೆಂದೂ ತಿಳಿದಿದ್ದರು.
- ಹಿರಿಯ (ಮುಖ್ಯಸ್ಥ) ; ಜಂಟಿ ಕುಟುಂಬಗಳಲ್ಲಿದ್ದಂತೆ ಪ್ರತಿ ಜಂಟಿ ಗ್ರಾಮದಲ್ಲಿಯೂ ಒಬ್ಬ ಹಿರಿಯ ಅಥವಾ ಮುಖ್ಯಸ್ಥನಿರುತ್ತಿದ್ದ. ಈತನಿಗೆ 'ಗೌಡ' 'ಬುದ್ಧಿವಂತ' 'ಯಜಮಾನ' 'ಧಣಿ' 'ಪೆದ್ದ' 'ಗಾಂವಕಾರ' 'ಮುಖಿಯಾ' ಇತ್ಯಾದಿ ಹೆಸರುಗಳು ಇದ್ದವು. ಈ ಹಿರಿಯ ಗ್ರಾಮದಲ್ಲಿರುವ ಎಲ್ಲ ಕಳ್ಳು-ಬಳ್ಳಿಗಳಲ್ಲಿನ ಅತಿ ಹಿರಿದಾದ ಕಳ್ಳುಬಳ್ಳಿಯ ಜ್ಯೇಷ್ಠ ಪುತ್ರನಾಗಿರುತ್ತಿದ್ದ (He was the eldest male member of the oldest kinship line). ಈತನು ಗ್ರಾಮವಾಸಿಗಳೆಲ್ಲರ ಮೇಲೆ ಸರ್ವಾಧಿಕಾರ ಹೊಂದಿದ್ದ. ಆ ಸರ್ವಾಧಿಕಾರವನ್ನು ಗ್ರಾಮದ ಸದಸ್ಯರು ಶಿರಬಾಗಿ ಒಪ್ಪುತ್ತಿದ್ದರಲ್ಲದೇ ಯಾರೊಬ್ಬರೂ ಆ ಅಧಿಕಾರವನ್ನು ಪ್ರಶ್ನಿಸುವಂತಿರಲಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಗ್ರಾಮಸ್ಥರೆಲ್ಲರೂ ಈ ಹಿರಿಯ ಗತಿಸಿಹೋದ ತಮ್ಮ ಪೂರ್ವಜನ ಸಾಕ್ಷಾತ್ ಅವತಾರವೆಂದೂ, ಆತನ ನರ-ನಾಡಿಗಳಲ್ಲಿ ಹರಿಯುವ ರಕ್ತ ತಮ್ಮ ಪೂರ್ವಜನ ಅಕಲುಷಿತ ಪರಿಶುದ್ಧ ರಕ್ತವೆಂದೂ ನಂಬಿದ್ದರು. ಹೀಗಾಗಿ ಗ್ರಾಮದ ಹಿರಿಯನನ್ನು ಸನ್ಮಾನಿಸುವುದೆಂದರೆ ತಮ್ಮ ಪೂರ್ವಜರನ್ನು ಸನ್ಮಾನಿಸಿದಂತೆ ಹಾಗೂ ಆತನಿಗೆ ವಿಧೇಯವಾಗಿರುವುದೆಂದರೆ ತಮ್ಮ ಪೂರ್ವಜರಿಗೆ ವಿಧೇಯವಾಗಿದ್ದಂತೆ ಎಂಬುದು ಅವರ ನಂಬುಗೆಯಾಗಿತ್ತು. ಈ ಹಿರಿತನವು ವಂಶ ಪರಂಪರೆಯದಾಗಿತ್ತು.
- ಭೂ ಒಡೆತನ ; 'ಸಾಮೂಹಿಕ ಒಡೆತನ, ಸಾಮೂಹಿಕ ಸಾಗುವಳಿ ಹಾಗೂ ಸಾಮೂಹಿಕ ಫಲಾನುಭವ' (Jointly owned, jointly cultivated and jointly enjoyed) ಇದು ಜಂಟಿ ಗ್ರಾಮಗಳ ಜಮೀನುಗಳಿಗೆ ಅನ್ವಯಿಸುವ ತತ್ವವಾಗಿತ್ತು. ಹೀಗಾಗಿ 'ಸ್ವಂತ ಜಮೀನು' (Private Property) ಎಂಬ ವಿಚಾರವೇ ಇರಲಿಲ್ಲ. ಈ ಸಾಮೂಹಿಕ ಒಡೆತನದ ತತ್ವವು ಕೇವಲ ಜಮೀನುಗಳಿಗೆ ಸೀಮಿತವಾಗಿರದೆ ಇನ್ನಿತರ ಎಲ್ಲ ಆಸ್ತಿ - ಪಾಸ್ತಿಗಳಿಗೂ ಅನ್ವಯಿಸುತ್ತಿತ್ತು.

- ಭೂಮಿ ಮಾರಲಾಗದ ವಸ್ತು ; ಭೂಮಿ ಖರೀದಿಸುವ ಒಂದು ವಸ್ತುವಾಗಿರಲಿಲ್ಲ - ಗ್ರಾಮದ ಜಮೀನು ಎಲ್ಲ ಗ್ರಾಮವಾಸಿಗಳ ಸಾಮೂಹಿಕ ಒಡೆತನದಲ್ಲಿದ್ದುದರಿಂದ ಇಂತಹ ಗ್ರಾಮಗಳಲ್ಲಿ ಜಮೀನನ್ನು ಮಾರುವುದಾಗಲಿ, ವಿನಿಮಯ ಮಾಡುವುದಾಗಲಿ, ಒತ್ತೆ ಇಡುವುದಾಗಲಿ ಅಥವಾ ಉಯಿಲು ಮಾಡುವುದಾಗಲಿ ಅಸಾಧ್ಯವಾಗಿತ್ತು (Land could not be sold, exchanged, mortgaged or bequeathed).

ರೈತವಾರಿ ಗ್ರಾಮ **(Raiyatwari village)**

- ರೈತವಾರಿ ಗ್ರಾಮವು ಹಲವು ಸ್ವತಂತ್ರ ಕುಟುಂಬಗಳ ಒಂದು ಸಮೂಹವಾಗಿತ್ತು. ಇಂತಹ ಗ್ರಾಮಗಳಲ್ಲಿ ಪ್ರತಿ ಕುಟುಂಬವು ತನ್ನದೆ ಆದ ಸ್ವಂತ ಜಮೀನು, ಆಸ್ತಿ-ಪಾಸ್ತಿಯನ್ನು ಹೊಂದಿದ್ದಿತು.
- ತಳಹದಿ - ಜಂಟಿ ಗ್ರಾಮಗಳಲ್ಲಿದ್ದಂತೆ ಕಳ್ಳುಬಳ್ಳಿ ಸಂಬಂಧ ಈ ಗ್ರಾಮಗಳ ತಳಹದಿಯಾಗಿರಲಿಲ್ಲ. ಈ ಗ್ರಾಮದ ನಿವಾಸಿಗಳು ತಾವೆಲ್ಲ ಒಬ್ಬನೇ ಮೂಲ ಪುರುಷನ ಸಂತತಿಯವರೆಂದು ನಂಬಿರಲಿಲ್ಲ. ಹೀಗಾಗಿ ಈ ಗ್ರಾಮವಾಸಿಗಳಲ್ಲಿ ಒಗ್ಗಟ್ಟನ್ನು ಮೂಡಿಸುವ ಬಂಧನ (Bond of Unity) ಕಳ್ಳುಬಳ್ಳಿಯಾಗಿರದೇ ಅವರು ವಾಸಿಸುವ ಪ್ರದೇಶವಾಗಿತ್ತು (Common habitation was the bond of unity). ಅಂದರೆ ಒಂದು ಸಾಮಾನ್ಯ ಪ್ರದೇಶವು ಜನರಲ್ಲಿ ಪರಸ್ಪರ ಸಂಬಂಧವು ಬೆಳೆಯಲು ಕಾರಣವಾಯಿತು.
- ಹಿರಿಯ ; ಈ ಗ್ರಾಮಗಳಲ್ಲಿ ಒಬ್ಬನೇ ಪೂರ್ವಜ, ಒಂದೇ ರಕ್ತ ಇತ್ಯಾದಿ ನಂಬುಗೆಗಳು ಇಲ್ಲದೆ ಹೋದದ್ದರಿಂದ ಸರ್ವಾಧಿಕಾರತ್ವವನ್ನು ಹೊಂದಿದ ಗ್ರಾಮದ ಹಿರಿಯನಿರಲಿಲ್ಲ. ಆತನ ಸ್ಥಾನದಲ್ಲಿ ಗ್ರಾಮ ಪಂಚಾಯತಿ 'ಊರವರು', 'ಗಾಂವಕಾರಿಯ ಎಂಬ ಇತ್ಯಾದಿ ಹೆಸರುಗಳಿಂದ ಗುರುತಿಸಲ್ಪಡುವ ಜಂಟಿ ಅಧಿಕಾರ ವ್ಯವಸ್ಥೆ (collegiate authority) ಇತ್ತು. ಈ ಪಂಚಾಯಿತಿ ಸದಸ್ಯರು ಚುನಾಯಿತರಾದವರಾಗಿದ್ದರು.
- ಸಂಪತ್ತಿನ ಇತರ ಬಾಬತ್ತುಗಳಂತೆಯೇ ಗ್ರಾಮದಲ್ಲಿ ಅಂಗ ಘಟಕಗಳಾದ ಕುಟುಂಬಗಳು ಖಾಸಗಿಯಾಗಿ ಭೂಮಿಯನ್ನು ಹೊಂದಬಹುದಾಗಿತ್ತು. ಅಷ್ಟೇ ಅಲ್ಲ ಖಾಸಗಿಯಾಗಿ ಸಾಗುವಳಿ ಮಾಡಬಹುದಾಗಿತ್ತು ಮತ್ತು ಅದರಿಂದ ಬಂದ ಪ್ರತಿಫಲವನ್ನು ಖಾಸಗಿಯಾಗಿ ಅನುಭವಿಸಬಹುದಾಗಿತ್ತು.
- ಈ ಗ್ರಾಮಗಳಲ್ಲಿ ಭೂಮಿಯು ಸಾಮೂಹಿಕ ಒಡೆತನಕ್ಕೊಳಗಾಗಿರದೆ ಸ್ವಂತ ಒಡೆತನಕ್ಕೆ ಒಳಗಾದದ್ದರಿಂದ ಗ್ರಾಮಸ್ಥರು ತಮ್ಮ ಜಮೀನನ್ನು ಮಾರಾಟ ಮಾಡಬಹುದಿತ್ತು, ವಿನಿಮಯ ಮಾಡಬಹುದಿತ್ತು. ಒತ್ತೆ ಇಡಬಹುದಿತ್ತು ಇಲ್ಲವೆ ಉಯಿಲು ಮಾಡಬಹುದಿತ್ತು.

ಭಾರತದ ಮೂಲ ಗ್ರಾಮಗಳಲ್ಲಿ ಕಂಡು ಬರುವ ಭೂ ಒಡೆತನದ ಸ್ವರೂಪವು, ಸರ್ ಹೆನ್ರಿ ಮೇನ್ ಹಾಗೂ ಲಾರ್ಡ್ ಬೆಡೆನ್ ಪಾವೆಲ್ ಅವರುಗಳ ನಡುವಿನ ವಿವಾದದ ತಿರುಳಾಗಿದೆ. ಸರ್ ಮೇನ್‌ರವರ ಪ್ರಕಾರ ಭಾರತದ ಮೂಲ ಗ್ರಾಮಗಳಲ್ಲಿ ಜಮೀನು ಸ್ವಂತ ಆಸ್ತಿಯಾಗಿರದೆ ಅದು ಇಡೀ ಗ್ರಾಮದ ಜಂಟಿ (ಒಟ್ಟಾರೆ) ಆಸ್ತಿಯಾಗಿದ್ದಿತು. ಯಾವುದೆ ಒಂದು ಕುಟುಂಬವು ಗ್ರಾಮದ ಜಮೀನಿನ ಮೇಲೆ ತನ್ನ ಸ್ವಂತ ಹಕ್ಕನ್ನು ಹೊಂದಿರಲಿಲ್ಲ. ಮುಂದೆ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ - ಸಾಂಸ್ಕೃತಿಕ ಕಾರಣಗಳಿಂದ ಈ ಜಂಟಿ ಆಸ್ತಿಯು ಒಡೆದು ಹೋಳಾಗಿ ಖಾಸಗಿ ಆಸ್ತಿಯಾಗಿ ಪರಿಣಮಿಸಿತು. ಆದರೆ ಲಾರ್ಡ್ ಪಾವೆಲ್ ಅವರು ಈ ವಾದವನ್ನು ಒಪ್ಪುವುದಿಲ್ಲ. ಅವರ ಪ್ರಕಾರ ಭಾರತದ ಮೂಲ ಗ್ರಾಮಗಳಲ್ಲಿ ಜಮೀನು ಖಾಸಗಿ ಒಡೆತನದಲ್ಲಿ ಇದ್ದಿತು ಹಾಗೂ ಕಾಲಾಂತರ - ಕಾರಣಾಂತರಗಳಿಂದ ಜಮೀನಿನ ಜಂಟೀ ಸ್ವಾಧೀನತೆಯನ್ನು ಹೊಂದಿದ ಜಂಟಿ ಗ್ರಾಮಗಳು ಅಸ್ತಿತ್ವಕ್ಕೆ ಬಂದವು.

ಈ ಇಬ್ಬರು ಮೇಧಾವಿಗಳ ಅಭಿಪ್ರಾಯಗಳನ್ನು ತುಸು ವಿವರವಾಗಿ ಚರ್ಚಿಸೋಣ.

ಮೇನ್‌ರವರ ಅಭಿಪ್ರಾಯ ಮಂಡನೆ

ಜಗತ್ತಿನ ಎಲ್ಲಾ ದೇಶಗಳಲ್ಲಿದ್ದಂತೆ ಭಾರತದಲ್ಲಿಯೂ ಕೂಡ ಜಮೀನಿನ ಸ್ವಾಧೀನತೆಯು ಎಲ್ಲರಿಗೂ ಸೇರಿದ್ದು, ಎಲ್ಲರೂ ಒಟ್ಟಾಗಿಯೇ ಸಾಗುವಳಿ ಮಾಡಿ, ಒಟ್ಟಾಗಿಯೇ ಎಲ್ಲರು ಪ್ರತಿಫಲವನ್ನು ಅನುಭವಿಸುತ್ತಿದ್ದರು. ಹೀಗಾಗಿ ಜಂಟಿ ಗ್ರಾಮಗಳು ಮೊಟ್ಟ ಮೊದಲು ಉಗಮವಾದವು. ಪ್ರಪ್ರಥಮವಾಗಿ ಅಸ್ತಿತ್ವಕ್ಕೆ ಬಂದ ಈ ಮೂಲ ಗ್ರಾಮಗಳಲ್ಲಿ ಜಮೀನನ್ನು ಆಗಿನ ಆದಿವಾಸಿಗಳೆಲ್ಲರೂ ಜಂಟಿಯಾಗಿ ಉತ್ತು-ಬಿತ್ತಿ ಬೆಳೆದು ಸಂಗ್ರಹಿಸಿದ ಫಲವನ್ನು ಜಂಟಿಯಾಗಿಯೇ ಅನುಭವಿಸುತ್ತಿದ್ದರು. ಸಾವಿರಾರು ವರ್ಷಗಳ ಹಿಂದಿನ ಆ ಪರಿಸ್ಥಿತಿಯಲ್ಲಿ ಸಾಮೂಹಿಕ ಜೀವನವು ಮಾನವ ಜೀವನದಲ್ಲಿ ಹಾಸು ಹೊಕ್ಕಾಗಿತ್ತು. ಒಂದು ರೀತಿಯಿಂದ ಹೇಳುವುದಾದರೆ ಗ್ರಾಮದ ಜನರೆಲ್ಲರೂ ಸಮೂಹ ಜೀವನ ನಡೆಸದೆ ಅವರಿಗೆ ಗತ್ಯಂತರವಿರಲಿಲ್ಲ. ದಂಡಕಾರಣ್ಯದಲ್ಲಿ ಕ್ರೂರ ಮೃಗಗಳ ಮಧ್ಯೆ ಹೆಜ್ಜೆ ಹೆಜ್ಜೆಗೂ ಗಂಡಾಂತರಗಳನ್ನು ಎದುರಿಸುವುದು ಕೈಬೆರಳಿನಷ್ಟು ಸದಸ್ಯರಿಗೆ ಅಸಾಧ್ಯವಾದ ಮಾತಾಗಿದ್ದಿತು. ಅಷ್ಟು ಮಾತ್ರವಲ್ಲದೆ ಸಾಮೂಹಿಕ ಜೀವನ ಅಂದಿನ ಜನರಿಗೆ ಹೊಸ ವಿಷಯವೇನಾಗಿರಲಿಲ್ಲ. ಹಿಂದಿನ ಎಲ್ಲ ಹಂತಗಳಲ್ಲಿ ಅಂದರೆ ಆಹಾರ ಸಂಗ್ರಹಣಾ ಹಂತ, ಬೇಟೆಯಾಡುವ ಹಂತ, ಹುಲ್ಲುಗಾವಲು ಹಂತ, ಬೂದಿ ಸಾಗುವಳಿ ಹಂತಗಳಲ್ಲಿ ಮಾನವರು ತಮ್ಮೆದುರಿನ ಸವಾಲುಗಳನ್ನು ಒಟ್ಟಾಗಿ ಎದುರಿಸಿದರೇ ವಿನಾ ಪ್ರತ್ಯೇಕ ಕುಟುಂಬ-ಕುಟುಂಬವಾಗಿ ಅಲ್ಲ. ಅದೇ ಪ್ರಕಾರ ಈ ಹಿಂದಿನ ಎಲ್ಲಾ ಹಂತಗಳಲ್ಲಿ ಸಾಗಿ ಬಂದ ಸಾಮೂಹಿಕ ಜೀವನ ಕ್ರಮವು ಮಾನವನು ಭೂ ಸಾಗುವಳಿ ಹಂತವನ್ನು ತಲುಪಿದಾಗಲೂ ಮುಂದುವರೆಯಿತು. ಇಲ್ಲಿಯವರೆಗೆ ಎಲ್ಲವನ್ನು ಒಗ್ಗಟ್ಟಾಗಿಯೇ ಎದುರಿಸಿದ ಮಾನವರು ಈ ಹಂತದಲ್ಲಿ ಉತ್ತು-ಬಿತ್ತಿ ಬೆಳೆಯುವ ಕಾರ್ಯವನ್ನೂ ಕೂಡ ಒಟ್ಟಾಗಿಯೇ ಕೈಗೊಂಡರು. ಭೂ ಸಾಗುವಳಿ ಮಾಡುವ ಯಾವ ಯಂತ್ರ-ತಂತ್ರಗಳನ್ನರಿಯದ ಆ ಕಾಲದ ಜನರು ಎಲ್ಲರೂ ಕೈಗೂಡಿಸಿದಾಗ ಮಾತ್ರ ತಮ್ಮ ಆಹಾರವನ್ನು ತಾವು ಬೆಳೆಯಬಹುದಾಗಿತ್ತು. ಆದ್ದರಿಂದ ಆ ಕಾಲದಲ್ಲಿ ಸ್ವಂತ ಜಮೀನು ಸ್ವಂತ ಆಸ್ತಿ ಎಂಬ ವಿಚಾರಗಳು ಕನಸಿನಲ್ಲಿಯೂ ಕೂಡ ಹೊಳೆಯುವ ಸಾಧ್ಯತೆ ಇರಲಿಲ್ಲ.

ಆದರೆ ಮುಂದೆ ಕಾಲ ಕ್ರಮೇಣ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ-ಸಾಂಸ್ಕೃತಿಕ ಕಾರಣಗಳಿಂದ ಜನಜೀವನ ಬದಲಾಯಿತಲ್ಲದೆ ಸಾಮೂಹಿಕ ಒಡೆತನ ಹಾಗೂ ಸಾಮೂಹಿಕ ಜೀವನದ ವಿಚಾರಗಳು ಹಿಂದೂಡಲ್ಪಟ್ಟು ಸ್ವಂತ ಒಡೆತನ, ಸ್ವಂತ ಆಸ್ತಿ, ಸ್ವತಂತ್ರ ಜೀವನ ಎಂಬಿತ್ಯಾದಿ ವಿಚಾರಗಳು ಜಾರಿಯಲ್ಲಿ ಬಂದವು.

ಈ ಎಲ್ಲ ಬದಲಾವಣೆಗಳ ಅತಿ ಮುಖ್ಯ ಪರಿಣಾಮವೆಂದರೆ ಕುಲಗೋತ್ರಗಳ ವಿಭಜನೆ. ಕುಲಗಳು ಒಡೆದು ಛಿನ್ನ ಛಿದ್ರವಾದವು (Fragmentation of clans). ಹೀಗೆ ಛಿನ್ನ ಛಿದ್ರವಾದ ಕುಲ ಗೋತ್ರಗಳು ಜಮೀನಿನ ಛಿನ್ನ ಛಿದ್ರತೆಗೆ ಕಾರಣವಾದವು. ಹೀಗಾಗಿ ಜಮೀನಿನ ಖಾಸಗಿ ಒಡೆತನ ಅಸ್ತಿತ್ವಕ್ಕೆ ಬಂದಿತು. ಮಾನವನ ಇತಿಹಾಸದಲ್ಲಿ ಜರುಗಿದ ಒಂದು ವಿಪರ್ಯಾಸದ ಸಂಗತಿ ಎಂದರೆ ಜಮೀನಿನ ಖಾಸಗಿ ಒಡೆತನವು ಕುಲ-ಗೋತ್ರಗಳ ಕೇಂದ್ರ ಬಿಂದುವಾದ 'ಹಿರಿಯ'ನಿಂದಲೇ ಪ್ರಾರಂಭವಾಯಿತು. ಜಗತ್ತು ಕಂಡ ಪ್ರಪ್ರಥಮ ಜಮೀನುದಾರನೆಂದರೆ ಗ್ರಾಮದ ಹಿರಿಯನಾದ ಮುಖ್ಯಸ್ಥ. ಗ್ರಾಮದ ಹಿರಿಯನಿಂದ ಆರಂಭವಾದ ಖಾಸಗಿ ಜಮೀನಿನ ವಿಚಾರವು ಮುಂದೆ ಗ್ರಾಮದೆಲ್ಲೆಡೆ ಹರಡಿ ಗ್ರಾಮದ ಜಮೀನುಗಳು ಖಾಸಗಿ ಒಡೆತನಕ್ಕೆ ಒಳಗಾದವು.

ಪಾವೆಲ್ ಅವರ ಅಭಿಪ್ರಾಯ ಮಂಡನೆ

ಮೇನ್ ಅವರು ಮಂಡಿಸಿದ ಅಭಿಪ್ರಾಯ ಒಬ್ಬ ತೂಗಾಲೆಯ ತತ್ವಜ್ಞಾನಿಯ ಅಭಿಪ್ರಾಯವೆಂದೂ, ಭಾರತದ ಮೂಲೆ ಮೂಲೆಯಲ್ಲಿನ ಹಳ್ಳಿಗಳ ವಾಸ್ತವತೆಯ ಅರಿವಿಲ್ಲದವರ ಕಪೋಲ ಕಲ್ಪಿತ ತತ್ವವೆಂದೂ ಹೇಳಿದ್ದಾರೆ. ಭೂ-ಗೇಣಿ ಹಾಗೂ ಭೂ ಕಂದಾಯ ಇಲಾಖೆಯ ಅಧಿಕಾರಿಯಾಗಿದ್ದ ಪಾವೆಲ್ ಅವರು ಭಾರತದಾದ್ಯಂತ ಸಂಚರಿಸಿ ಜಮೀನಿಗೆ ಸಂಬಂಧಿಸಿದ ಅತ್ಯಮೂಲ್ಯ ವಿಷಯಗಳನ್ನು ಸಂಗ್ರಹಿಸಿ ಅವುಗಳ ಆಧಾರದ ಮೇಲೆ ತಮ್ಮ ವಾದವನ್ನು ಮಂಡಿಸಿದ್ದಾರೆ. ಅವರ ಪ್ರಕಾರ ಭಾರತದ ಮೂಲ ಗ್ರಾಮಗಳು

ಸ್ವಂತ ಜಮೀನುಗಳನ್ನು ಹೊಂದಿದ ಕುಟುಂಬಗಳನ್ನು ಪಡೆದ ರೈತವಾರಿ ಗ್ರಾಮಗಳಾಗಿದ್ದವು. ಮುಂದೆ ಕಾಲ ಕ್ರಮೇಣ ವಿವಿಧ ಕಾರಣಾಂತರಗಳಿಂದ ಜಂಟಿ ಗ್ರಾಮಗಳು ಅಸ್ತಿತ್ವಕ್ಕೆ ಬಂದವು. ಅವರು ಹೇಳುವಂತೆ ಜಂಟಿ ಗ್ರಾಮಗಳು ಭಾರತಕ್ಕೆ ಆಗಮಿಸಿದ ಆರ್ಯರ ಕೊಡುಗೆಯಾಗಿದ್ದವು. ಆರ್ಯರ ಆಗಮನಕ್ಕಿಂತ ಮುಂಚೆ ಭಾರತದಲ್ಲಿ ಕೇವಲ ರೈತವಾರಿ ಗ್ರಾಮಗಳಿದ್ದವು. ತಮ್ಮ ಕುಲ, ಗೋತ್ರ - ವರ್ಣಗಳ ಬಗ್ಗೆ ಅತಿಯಾದ ಪ್ರತಿಷ್ಠೆ ಹೊಂದಿದ ಆರ್ಯರು ಭಾರತದಲ್ಲಿ ನೆಲೆಯೂರಿ ಮೂಲ ನಿವಾಸಿಗಳ ಜಮೀನನ್ನು ಕಿತ್ತುಕೊಂಡು ಜಮೀನಿನ ಸಾಮೂಹಿಕ ಒಡೆತನವುಳ್ಳ ಜಂಟಿ ಗ್ರಾಮಗಳನ್ನು ಅಸ್ತಿತ್ವಕ್ಕೆ ತಂದರು. ತಮ್ಮ ವಿಚಾರಧಾರೆಗೆ ಬೆಂಬಲವಾಗಿ ಅವರು ಮಂಡಿಸಿದ ಸಾಕ್ಷಿ ಪುರಾವೆಗಳೆಂದರೆ ಉತ್ತರ ಭಾರತದಲ್ಲಿ ಜಂಟಿ ಗ್ರಾಮಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದರೆ ದಕ್ಷಿಣ ಭಾರತದಲ್ಲಿ ರೈತವಾರಿ ಗ್ರಾಮಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದವು ಎಂಬುದೆ ಆಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಉತ್ತರ ಭಾರತದಲ್ಲಿ ಆರ್ಯ ಸಂಸ್ಕೃತಿಯ ಪ್ರಭಾವ ಹೆಚ್ಚು, ದಕ್ಷಿಣ ಭಾರತದಲ್ಲಿ ಆರ್ಯ ಸಂಸ್ಕೃತಿಯ ಪ್ರಭಾವ ಕಡಿಮೆ.

ಈ ಎರಡು ವಾದಗಳಲ್ಲಿ ಯಾವುದು ಸತ್ಯ ? ಯಾವುದು ನಂಬಲರ್ಹ ? ಸಮತಾವಾದ - ಬಂಡವಾಳಶಾಹಿ ವಾದಗಳ ತರ್ಕ - ವಿಕರ್ತಕ್ಕೆ ನಾವು ಕೈ ಹಾಕದೆ ಈ ವಿಷಯದ ಬಗ್ಗೆ ಒಂದು ಅಭಿಪ್ರಾಯಕ್ಕೆ ಬರಬಹುದು. ವಿಷಯ ಮಂಡನೆ, ವಿಚಾರ ಸಾಂಗತ್ಯ ತರ್ಕವನ್ನು ನಾವು ಗಮನಿಸಿದಾಗ ಮೇನ್ ಅವರ ವಿಚಾರಧಾರೆಯು ಹೆಚ್ಚು ಗಮನಾರ್ಹ ಹಾಗೂ ಸ್ವೀಕಾರಾರ್ಹವೆಂದೆನಿಸುತ್ತದೆ. ಇದೇ ಕಾರಣದಿಂದಲೋ ಏನೊ ಆರ್.ಕೆ. ಮುಖರ್ಜಿ, ರಾಯ್ಸ್ ಡೇವಿಡ್, ಇ.ಬಿ. ಹ್ಯಾವೆಲ್, ಡಬ್ಲ್ಯೂ. ಎಚ್. ವೈಸರ್ ಮುಂತಾದ ಮೇಧಾವಿಗಳು ಮೇನ್ ಅವರ ಸಿದ್ಧಾಂತವನ್ನು ಬೆಂಬಲಿಸಿದ್ದಾರೆ.

## 3.5 ಗ್ರಾಮ ವಿನ್ಯಾಸ - ವ್ಯಾಖ್ಯೆ ಮತ್ತು ಅರ್ಥ

ಒಂದು ಗ್ರಾಮದಲ್ಲಿನ ಮನೆಗಳು ಪರಸ್ಪರ ಹಾಗೂ ಗ್ರಾಮದ ಜಮೀನಿನೊಂದಿಗೆ ಹೊಂದಿದ ಆಂತರಿಕ ಸಂಬಂಧಕ್ಕೆ ಗ್ರಾಮ ವಿನ್ಯಾಸವೆನ್ನುವರು. ತಿಳಿ ಭಾಷೆಯಲ್ಲಿ ಹೇಳುವುದಾದರೆ ಒಂದು ಗ್ರಾಮದಲ್ಲಿ ಮನೆಗಳನ್ನು ಕಟ್ಟಿದ ರೀತಿ, ರೂಪ, ಆಕಾರ ಹಾಗೂ ಮನೆ ಮನೆಗಳ ಮತ್ತು ಮನೆ ಹೊಲಗಳ ಮಧ್ಯೆ ಇರುವ ಅಂತರ ಸಾಮೀಪ್ಯಕ್ಕೆ ಗ್ರಾಮ ವಿನ್ಯಾಸವೆನ್ನಬಹುದು.

ಗ್ರಾಮಗಳ ಪ್ರಕಾರಗಳು, ಗ್ರಾಮಗಳ ಬಗೆಗಳು ಮತ್ತು ಗ್ರಾಮಗಳ ವಿನ್ಯಾಸಗಳು ಅಥವಾ ಮಾದರಿಗಳು ಎನ್ನುವ ಪದಗಳೆಲ್ಲ ಒಂದೇ ಅರ್ಥವನ್ನು ನೀಡುತ್ತವೆ. ಗ್ರಾಮೀಣ ಸಮಾಜಶಾಸ್ತ್ರದ ವಿದ್ಯಾರ್ಥಿಗಳಿಗೆ ಗ್ರಾಮ ವಿನ್ಯಾಸದ ಅಧ್ಯಯನ ಏಕೆ ಹಾಗೂ ಹೇಗೆ ಮುಖ್ಯ ಎಂಬುದನ್ನು ಈ ಕೆಳಗಿನ ಕಾರಣಗಳಿಂದ ವಿವರಿಸಬಹುದು.

- ಗ್ರಾಮ ವಿನ್ಯಾಸವು ಗ್ರಾಮೀಣ ಸಮುದಾಯದ ಸಾಮಾಜಿಕ ಸಂಘಟನೆಯ ಒಂದು ಪ್ರಮುಖ ಅಂಶ. ಅದು ಗ್ರಾಮವಾಸಿಗಳ ನಡುವಣ ಪರಸ್ಪರ ಸಂಬಂಧಗಳ ಮೇಲೆ ತನ್ನ ಪ್ರಭಾವವನ್ನು ಉಂಟು ಮಾಡುತ್ತದಲ್ಲದೇ ಗ್ರಾಮದಲ್ಲಿನ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ - ಸಾಂಸ್ಕೃತಿಕ ಆಗು ಹೋಗುಗಳನ್ನು ಕೂಡ ನಿರ್ಧರಿಸುತ್ತದೆ.
- ಭಾಷೆ, ಧರ್ಮ, ನೃತ್ಯ, ಸಂಗೀತ, ರೀತಿ - ನೀತಿಗಳು, ಲೋಕರೂಢಿಗಳು, ತತ್ವ - ತರ್ಕಗಳು ಇತ್ಯಾದಿಗಳು ಒಂದು ಜನಾಂಗದ ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗಗಳು. ಅದೇ ಪ್ರಕಾರ ಗ್ರಾಮ ವಿನ್ಯಾಸವೂ ಕೂಡ ಒಂದು ಜನಾಂಗದ ಸಾಂಸ್ಕೃತಿಕ ಪರಂಪರೆಯ ಒಂದು ಅವಿಭಾಜ್ಯ ಅಂಗ. ಈ ಪರಂಪರೆಯ ಎಲ್ಲ ಅಂಶಗಳು ಹೇಗೆ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಬಳುವಳಿಯಾಗಿ ಮುಂದುವರೆಯುವವೋ, ಅದೇ ರೀತಿ ಗ್ರಾಮ ವಿನ್ಯಾಸವು ಕೂಡ ಪರಂಪರೆಯ ಬಳುವಳಿಯಾಗಿ ಮುಂದುವರೆಯುವುದು. ಅಷ್ಟು ಮಾತ್ರವಲ್ಲ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಹೋಗುವ ಜನರು ತಮ್ಮೊಂದಿಗೆ ತಮ್ಮ ಭಾಷೆ, ಧರ್ಮ, ರೀತಿ-ನೀತಿಗಳನ್ನು ತಮ್ಮೊಂದಿಗೆ ಹೊತ್ತೊಯ್ಯುವಂತೆ ಗ್ರಾಮ ವಿನ್ಯಾಸವನ್ನು ಕೂಡ ಹೊತ್ತೊಯ್ಯುತ್ತಾರೆ.

ಅವರು ಬೇರೊಂದು ಕಡೆಗೆ ನೆಲೆಯೂರಿದಾಗ ತಾವು ಹಿಂದೆ ಮೂಲ ಸ್ಥಳದಲ್ಲಿ ರಚಿಸಿದ ವಿನ್ಯಾಸದಂತೆಯೇ ತಮ್ಮ ಮನೆಗಳನ್ನು ರಚಿಸುತ್ತಾರೆ.

ಈ ವಿಷಯವನ್ನು ಕುರಿತು ಒಂದು ಸ್ವಾರಸ್ಯಮಯ ಕಥೆಯನ್ನು ಇಲ್ಲಿ ಹೇಳಬಹುದು.

ಭಾರತದಲ್ಲಿದ್ದಂತೆ ಆಫ್ರಿಕಾ ದೇಶದಲ್ಲಿಯೂ ಕೂಡ ಗುಡ್ಡ-ಗಾಡುಗಳಲ್ಲಿ ವಾಸವಾಗಿರುವ ಆದಿವಾಸಿಗಳ ಅಭಿವೃದ್ಧಿಗಾಗಿ ಯೋಜನೆಗಳಿವೆ. ಒಂದು ಸಲ ಈ ಯೋಜನೆಯ ಅಡಿಯಲ್ಲಿ ಅರಣ್ಯವಾಸಿಗಳಿಗೆ ಯೋಗ್ಯವಾದ, ಹವಾಮಾನಕ್ಕೆ ತಕ್ಕುದಾದ, ಸಾಕಷ್ಟು ಸ್ಥಳಾವಕಾಶ ಹೊಂದಿದ ಕಟ್ಟಡವನ್ನು ಕಟ್ಟಿಸಿಕೊಡುವ ವಿಚಾರದಿಂದ ಒಂದು ವಿಶಾಲವಾದ ಭವ್ಯ ಕಟ್ಟಡವನ್ನು ಕಟ್ಟಲಾಯಿತು. ಆ ಭವ್ಯವಾದ ಕಟ್ಟಡದ ಸಮಾರಂಭಕ್ಕೆ ಆ ದೇಶದ ಸಾಮುದಾಯಿಕ ಅಭಿವೃದ್ಧಿ ಯೋಜನೆಯ ಮಂತ್ರಿಯನ್ನು ಕೂಡ ಆಮಂತ್ರಿಸಿ ಹಾರತುರಾಯಿ, ಬೆಂಡು ಬೆತ್ತಾಸಗಳಿಂದ ಸಾಮುದಾಯಿಕ ಅಭಿವೃದ್ಧಿ ಯೋಜನೆಯ ಮಂತ್ರಿಗಳನ್ನು ಸ್ವಾಗತಿಸಲಾಯಿತು. ಸಾಮುದಾಯಿಕ ಅಭಿವೃದ್ಧಿ ಯೋಜನೆಯ ಮಂತ್ರಿಗಳು ಆದಿವಾಸಿಗಳ ಏಳಿಗೆಗಾಗಿ ತಾವು ಹಮ್ಮಿಕೊಂಡ ಅನೇಕ ಕಾರ್ಯಕ್ರಮಗಳ ಬಗ್ಗೆ ಒಂದು ಉದ್ದನೆಯ ಭಾಷಣವನ್ನೇ ಬಿಗಿದರು. ನಂತರ ಅವರನ್ನು ಆ ಭವ್ಯ ಕಟ್ಟಡಕ್ಕೆ ಕರೆದೊಯ್ದು ಕಟ್ಟಡದ ಮುಖ್ಯ ದ್ವಾರದಲ್ಲಿ ಅಡ್ಡಾಗಿ ಕಟ್ಟಿದ ಪಟ್ಟಿಯನ್ನು (Ribbon) ಕತ್ತರಿಸಿ ಕಟ್ಟಡವನ್ನು ಉದ್ಘಾಟಿಸಲು ಕೇಳಿಕೊಳ್ಳಲಾಯಿತು. ಅದೇ ಪ್ರಕಾರ ಅವರು ಟೇಪನ್ನು ಕತ್ತರಿಸಿ ಒಳಗೆ ಕಾಲಿಡುತ್ತಲೇ ಅವರಿಗೊಂದು ಅಚ್ಚರಿ ಕಾಯ್ದಿತ್ತು. ತಲತಲಾಂತರವಾಗಿ ಬೆತ್ತದಿಂದ ಹೆಣೆದ ಗುಡಿಸಲುಗಳಲ್ಲಿ ವಾಸವಾಗಿದ್ದ ಆ ಗುಡ್ಡಗಾಡು ಜನರು ಆ ಭವ್ಯ ಕಟ್ಟಡದ ನಡುವೆ ಕೂಡ ಪರಂಪರಾಗತವಾಗಿ ಬಂದ ವಿನ್ಯಾಸದಂತೆ ಗುಡಿಸಲುಗಳನ್ನು ಕಟ್ಟಿಕೊಂಡಿದ್ದರು.

ಈ ಮೇಲೆ ಹೇಳಿದ ಕಥೆಯ ಒಂದು ಕಟ್ಟು ಕಥೆಯಾಗಿರಬಹುದು ಇಲ್ಲವೆ ವಾಸ್ತವವಾಗಿರಬಹುದು. ಆದರೆ ಅದು ಒಂದು ಸತ್ಯವನ್ನು ಸಾರುತ್ತದೆ. ಅದೇನೆಂದರೆ ನಮ್ಮ ಧರ್ಮ, ಭಾಷೆ, ರೀತಿ-ನೀತಿಗಳನ್ನು ಬಿಟ್ಟುಕೊಡುವುದು ಎಷ್ಟು ಕಷ್ಟ ಸಾಧ್ಯವೋ ಅದೇ ರೀತಿ ಪರಂಪರೆಯಾಗಿ ಬಳುವಳಿ ಪಡೆದ ನಮ್ಮ ಗ್ರಾಮ ವಿನ್ಯಾಸವನ್ನು ಕೂಡ ಬಿಟ್ಟುಕೊಡುವುದು ಅಷ್ಟೇ ಕಷ್ಟ ಸಾಧ್ಯ. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಜನರು ಮಾರ್ಪಾಡು ಮಾಡಿಕೊಳ್ಳಬಹುದು ಇಲ್ಲವೆ ಹಳೆಯದನ್ನು ಬಿಟ್ಟುಬಿಡಬಹುದು.

ಗ್ರಾಮ ವಿಕಾಸ ಹಾಗೂ ಗಿರಿಜನ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿದ ಸರಕಾರಿ ಹಾಗೂ ಸರಕಾರೇತರ ಸಂಘ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿಗಳು ಹಾಗೂ ಇನ್ನಿತರ ಸಿಬ್ಬಂದಿಗೆ ಗ್ರಾಮ ವಿನ್ಯಾಸದ ತಿಳಿವಳಿಕೆ ಹಾಗೂ ಅದರ ಮಹತ್ವದ ಅರಿವು ಅತಿ ಅವಶ್ಯ. ಅದರಲ್ಲೂ ಬೃಹತ್ ಅಣೆಕಟ್ಟುಗಳು, ಸೈನ್ಯ ಹಾಗೂ ನೌಕಾ ಪಡೆಗಳ ನೆಲೆಗಳು, ಅಣು ಸ್ಥಾವರಗಳು ಇತ್ಯಾದಿ ಬೃಹತ್ ಯೋಜನೆಗಳಿಂದ ತಮ್ಮ ವಾಸಸ್ಥಗಳಿಂದ ಸ್ಥಳಾಂತರಗೊಂಡು ನಿರಾಶ್ರಿತರಾದ ಲಕ್ಷಾಂತರ ಜನರ ಮರುವಸತಿ ಕಾರ್ಯಗಳಲ್ಲಿ ತೊಡಗಿದ ಅಧಿಕಾರಿಗಳಿಗಂತೂ ಈ ಜ್ಞಾನ ಅತಿ ಅವಶ್ಯ.

ಭಾರತದಾದ್ಯಂತ ಗ್ರಾಮ ವಿನ್ಯಾಸದಲ್ಲಿ ಕಂಡು ಬರುವ ಒಂದು ವೈಶಿಷ್ಟ್ಯವೆಂದರೆ ಮನೆಗಳ ಜಾತಿವಾರು ಹಂಚಿಕೆ. ಈ ಕುರಿತು ಒಂದು ನನ್ನ ಸ್ವಂತ ಅನುಭವದ ಒಂದು ಘಟನೆಯನ್ನು ಇಲ್ಲಿ ಸ್ಮರಿಸಬಹುದು. ಬಾಗಲಕೋಟೆ ಜಿಲ್ಲೆಯಲ್ಲಿ ಕೃಷ್ಣಾ ನದಿಗೆ ಅಡ್ಡವಾಗಿ ಆಲಮಟ್ಟಿ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಮನೆ-ಮಠಗಳನ್ನು ಕಳೆದುಕೊಂಡ ಸಾವಿರಾರು ನಿರಾಶ್ರಿತ ಕುಟುಂಬಗಳ ಮರುವಸತಿ ಕಾರ್ಯಕ್ರಮದಲ್ಲಿ ಕಂಡು ಬರುವ ಸಮಸ್ಯೆಗಳಾವುವು, ಅವುಗಳನ್ನು ಪರಿಹರಿಸುವ ಉಪಾಯ- ತಂತ್ರಗಳಾವುವು ಎಂಬುದರ ಅಧ್ಯಯನಕ್ಕೆ ಕರ್ನಾಟಕ ಸರಕಾರವು ಒಂದು ಸಮಿತಿಯನ್ನು ನೇಮಿಸಿತ್ತು. ಆ ಸಮಿತಿಯ ಸದಸ್ಯರಲ್ಲಿ ನಾನೂ ಒಬ್ಬ. ಮರುವಸತಿಯ ವಿಷಯವನ್ನು ಕುರಿತು ಚರ್ಚಿಸಲು ಸಮಿತಿಯ ಸದಸ್ಯರೆಲ್ಲರೂ ಮರುವಸತಿ ಕಾರ್ಯಕ್ರಮದ ಮೇಲಧಿಕಾರಿಯಾದ ಒಬ್ಬ ದಕ್ಷ ಹಾಗೂ ಪ್ರಗತಿಪರ ವಿಚಾರಗಳನ್ನು ಹೊಂದಿದ ಐ.ಎ.ಎಸ್. ಅಧಿಕಾರಿಯನ್ನು ಭೇಟಿಯಾದೆವು. ಈ ಅಧಿಕಾರಿ ಹೊಸದಾಗಿ ನಿರ್ಮಿಸಲ್ಪಟ್ಟ ಮರುವಸತಿ

ಗ್ರಾಮಗಳಲ್ಲಿ ಜಾತ್ಯಾತೀತತೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಗಾಂಧೀಜಿಯವರ ಸರ್ವೋದಯ ಗ್ರಾಮಗಳ ಮಾದರಿಯಲ್ಲಿ ಜಾತಿ-ಭೇದವಿಲ್ಲದ ಎಲ್ಲ ಜಾತಿಯ ಕುಟುಂಬಗಳು ಸಮ್ಮಿಶ್ರವಾಗಿರಬಹುದಾದಂತಹ ಒಂದು ವಿನ್ಯಾಸವನ್ನು ತಯಾರಿಸಿ ಅದರ ಪ್ರಕಾರ ಮನೆ ಕಟ್ಟುವ ಜಾಗಗಳನ್ನು ಹಂಚುವ ಒಂದು ಉತ್ತಮ ವಿಚಾರವನ್ನು ಹೊಂದಿದ್ದರು. ಈ ವಿಚಾರವನ್ನು ಜನರ ಮುಂದಿಟ್ಟು ಅವರ ಅಭಿಪ್ರಾಯವನ್ನು ಪಡೆಯುವ ದೃಷ್ಟಿಯಿಂದ ಅವರು ನಿರಾಶ್ರಿತರ ಒಂದು ಸಭೆಯನ್ನು ಕರೆದು ಅಲ್ಲಿ ತಮ್ಮ ನಿಲುವನ್ನು ಮಂಡಿಸಿದರು. ಆದರೆ ಅವರಿಗೊಂದು ಆಘಾತ ಕಾಯ್ದಿತ್ತು. ಅವರು ತಮ್ಮ ನಿಲುವನ್ನು ಮಂಡಿಸಿದ ತಕ್ಷಣ ಕೆಲ ಮುಖಂಡರು ಎದ್ದು ನಿಂತು 'ಸಾಹೇಬರೇ, ನಿಮ್ಮ ಘನ ವಿಚಾರಗಳನ್ನು ನಿಮ್ಮಲ್ಲಿಯೇ ಇಟ್ಟುಕೊಳ್ಳಿ. ಅವುಗಳನ್ನು ನಮ್ಮ ಮೇಲೆ ಹೇರಿದರೆ ಕೃಷ್ಣೆ ಕೆಂಪಾದೀತು' ಎಂದು ರಕ್ತಪಾತದ ಬೆದರಿಕೆ ಹಾಕಿದರು. ಹೀಗಾಗಿ ಆ ಅಧಿಕಾರಿ ತಾನು ಹೊಂದಿದ್ದ ತಮ್ಮ ಪ್ರಗತಿಪರ ವಿಚಾರಗಳನ್ನು ಗತ್ಯಂತರವಿಲ್ಲದೆ ಕೈಬಿಡಬೇಕಾಯಿತು.

## 3.6 ಗ್ರಾಮ ವಿನ್ಯಾಸಗಳ ಬಗೆಗಳು - ಅನುಕೂಲತೆ ಮತ್ತು ಅನಾನುಕೂಲತೆಗಳು

ಗ್ರಾಮ ವಿನ್ಯಾಸಗಳಲ್ಲಿ ಮೂರು ಪ್ರಮುಖ ಪ್ರಕಾರಗಳಿವೆ. ಅವು ಯಾವುವೆಂದರೆ :

- ಗುಂಪು ಮನೆಗಳ ಗ್ರಾಮಗಳು
- ಚದುರಿದ ಮನೆಗಳ ಗ್ರಾಮಗಳು
- ಸಾಲು ಮನೆಗಳ ಗ್ರಾಮಗಳು

ಈ ಮೂರು ಪ್ರಕಾರದ ಗ್ರಾಮಗಳನ್ನು ಕುರಿತು ವಿವರವಾಗಿ ಚರ್ಚಿಸೋಣ.

**ಗುಂಪು ಮನೆಗಳ ಗ್ರಾಮಗಳು**

ಮೇಲ್ಕಾಣಿಸಿದ ಮೂರು ಪ್ರಕಾರದ ಗ್ರಾಮಗಳಲ್ಲಿ ಗುಂಪು ಮನೆಗಳ ಗ್ರಾಮಗಳು ಅತಿ ಪ್ರಾಚೀನವಾದ ಗ್ರಾಮಗಳೆನ್ನಬಹುದು. ತಜ್ಞರ ಪ್ರಕಾರ ಅಲೆಮಾರಿ ಜೀವನವನ್ನು ಸಾಗಿಸುತ್ತಿದ್ದ ಆದಿ ಮಾನವರು ಭೂ ಸಾಗುವಳಿಯನ್ನು ಆರಂಭಿಸಿ ನೆಲೆಯೂರಿದ ಜೀವನವನ್ನು ಪ್ರಾರಂಭಿಸಿದಾಗ ಮೊಟ್ಟ ಮೊದಲಿಗೆ ಅಸ್ತಿತ್ವಕ್ಕೆ ಬಂದ ಗ್ರಾಮಗಳೆಂದರೆ ಗುಂಪು ಮನೆಯ ಗ್ರಾಮಗಳೇ ಆಗಿವೆ. ತದನಂತರ ಮಾನವನ ಭೌತ ಸಂಸ್ಕೃತಿ (Material Culture) ಪ್ರಗತಿಯಾದಂತೆ ಆತ ಹೊಸ ಹೊಸ ಹಾಗೂ ಹೆಚ್ಚಿನ ಸಾಮರ್ಥ್ಯವುಳ್ಳ ಉಪಕರಣಗಳನ್ನು ಶೋಧಿಸಿ ಅವುಗಳ ಸಹಾಯದಿಂದ ನಿಸರ್ಗದ ಅಂಧ ಶಕ್ತಿಗಳನ್ನು (Blind forces of nature) ತನ್ನ ನಿಯಂತ್ರಣಕ್ಕೆ ತಂದಂತೆ ಇನ್ನುಳಿದ ಪ್ರಕಾರದ ಗ್ರಾಮಗಳು ಅಸ್ತಿತ್ವಕ್ಕೆ ಬರುವಂತಾಯಿತು.


ಈ ಮೊದಲೆ ಚರ್ಚಿಸಿದಂತೆ ಗುಂಪು ಮನೆ ಗ್ರಾಮಗಳು ಪ್ರಪ್ರಥಮವಾಗಿ ಅಸ್ತಿತ್ವಕ್ಕೆ ಬರಲು ಅನಿವಾರ್ಯ ಕಾರಣಗಳಿದ್ದವು. ಹಿಂದಿನ ಎಲ್ಲ ಹಂತಗಳಲ್ಲಿ ಎಂದರೆ ಆಹಾರ ಸಂಗ್ರಹಣಾ, ಬೇಟೆಯಾಡುವ, ಹುಲ್ಲುಗಾವಲು ಹಾಗೂ ಬೂದಿ ಸಾಗುವಳಿ ಹಂತಗಳಲ್ಲಿ ಅಲೆಮಾರಿಗಳಾದ ಆದಿ ಮಾನವರು ಎಲ್ಲ ಕೆಲಸ ಕಾರ್ಯಗಳನ್ನು ಒಟ್ಟಾಗಿ ಸಾಮೂಹಿಕವಾಗಿ ಕೈಗೊಳ್ಳುವುದು ಅನಿವಾರ್ಯವಾದಂತೆ ಭೂ ಸಾಗುವಳಿಯನ್ನು ಕೂಡ ಒಟ್ಟಾಗಿ ಸಾಮೂಹಿಕವಾಗಿ ಮಾಡದೆ ಬೇರೆ ಯಾವುದೆ ಮಾರ್ಗ ಅವರಿಗೆ ಇರಲಿಲ್ಲ. ಹೀಗಾಗಿ ಅವರುಗಳು ತಾವು ಸಾಗುವಳಿ ಮಾಡುವ ಜಮೀನಿನ ಆಜು ಬಾಜಿನ ನಿರ್ದಿಷ್ಟ ಪ್ರದೇಶದಲ್ಲಿ ತಮ್ಮ ಮನೆಗಳನ್ನು ಕಟ್ಟಿಕೊಂಡು ಸಾಮೂಹಿಕವಾಗಿ ವಾಸಿಸತೊಡಗಿದರು. ಇದು ಗುಂಪು ಮನೆ ಗ್ರಾಮಗಳು ಅಸ್ತಿತ್ವಕ್ಕೆ ಬಂದ ರೀತಿ.

ಅಲೆಮಾರಿಗಳಾಗಿ ಜೀವನ ನಡೆಸುತ್ತಿದ್ದ ಆದಿಮಾನವರು ರಕ್ತ ಸಂಬಂಧಗಳಿಂದ ಬಂಧಿಸಲ್ಪಟ್ಟ ಕುಲಗೋತ್ರಗಳಿಂದಾಗಿಯೇ

ಗುಂಪು ಮನೆ ಗ್ರಾಮಗಳು ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಆಗಿನ ಕಾಲದಲ್ಲಿ ರಕ್ತ ಸಂಬಂಧಗಳು ಪ್ರಮುಖ ಪಾತ್ರವನ್ನು ವಹಿಸುತ್ತಿದ್ದವು. ಅವು ಯಾವುವು ಎಂದರೆ ಅತಿ ಪುರಾತನವಾದ ಆ ಕಾಲದಲ್ಲಿ ಎರಡೇ ಎರಡು ಸಂಬಂಧಗಳು ಗುರುತಿಸಲ್ಪಟ್ಟಿದ್ದವು, ರಕ್ತ ಸಂಬಂಧಿ ಅಥವಾ ವೈರಿ. 'ಸಂಬಂಧಿಯನ್ನು ರಕ್ಷಿಸು: ವೈರಿಯನ್ನು ವಧಿಸು' ಎಂಬುವುದೆ ಆಗಿನ ಕಾಲದ ಧ್ಯೇಯವಾಕ್ಯವಾಗಿತ್ತು. ಆದ್ದರಿಂದಲೇ ಆಗಿನ ಕಾಲದಲ್ಲಿ ರಕ್ತವೇ (Blood was the foundation) ಎಲ್ಲ ಸಮೂಹಗಳ ತಳಹದಿಯಾಗಿತ್ತು. ಮುಂದೆ ಕಾಲ ಕಳೆದಂತೆ ಈ ರಕ್ತಕ್ಕಿದ್ದ ತಳಹದಿಯ ಸ್ಥಾನವನ್ನು ಭೂಮಿ ಆಕ್ರಮಿಸಿತು.

ಗುಂಪು ಮನೆ ಗ್ರಾಮಗಳು ಪ್ರಪ್ರಥಮವಾಗಿ ಅಸ್ತಿತ್ವಕ್ಕೆ ಬರಲು ಮೂರನೆಯ ಕಾರಣವೇನೆಂದರೆ ಮಾನವನು ಹೊಸದಾಗಿ ಕಂಡು ಹಿಡಿದ ಭೂ ಸಾಗುವಳಿ ಉದ್ಯೋಗ - ವ್ಯವಸಾಯ. ಅದೇ ತಾನೆ ಹೊಸದಾಗಿ ಕಂಡುಹಿಡಿದ ಭೂ ಸಾಗುವಳಿಯನ್ನು ಮುಂದುವರೆಸಿಕೊಂಡು ಹೋಗುವುದು ಒಂದು ಸಾಮಾನ್ಯ ಕೆಲಸವಾಗಿರಲಿಲ್ಲ. ಭೂಮಿಯನ್ನು ಉತ್ತುವ, ಹದ ಮಾಡುವ ಹಾಗೂ ಬೀಜಗಳನ್ನು ಬಿತ್ತುವ, ಬೆಳೆಗಳನ್ನು ಕಾಯುವ, ಪೈರನ್ನು ಕೊಯ್ದು ರಾಶಿ ಮಾಡಿ ಸಂಗ್ರಹಿಸುವ ಕಾರ್ಯಗಳಿಗೆ ಅತೀ ಅವಶ್ಯವಾದ, ಸೂಕ್ತ ಉಪಕರಣಗಳಿರಲಿಲ್ಲ. ಹೀಗಾಗಿ ಒಂದು ಸ್ಥಳದಲ್ಲಿ ನೆಲೆಯೂರಿ ನಿಂತ ಎಲ್ಲರಿಗೂ ಕೈಗೂಡಿ ಸಾಮೂಹಿಕವಾಗಿ ಕಾರ್ಯ ನಿರ್ವಹಿಸಿದರೆ ಮಾತ್ರ ಭೂ ಸಾಗುವಳಿಯನ್ನು ಮಾಡಬಹುದಿತ್ತು. ಆದ್ದರಿಂದ ಎಲ್ಲರೂ ಗುಂಪಾಗಿ ಒಂದೇ ಸ್ಥಳದಲ್ಲಿ ವಾಸಿಸತೊಡಗಿದರು.

ಗುಂಪು ಮನೆಯ ಗ್ರಾಮವು ಸಾಮಾನ್ಯವಾಗಿ ಕೆಳಗೆ ತೋರಿಸಿದಂತೆ ರಚನೆಯನ್ನು ಹೊಂದಿರುತ್ತದೆ.




ಮಧ್ಯ ವರ್ತುಳದಲ್ಲಿದ್ದ ಮನೆಗಳು ಜಗತ್ತಿನ ವಿವಿಧ ಭಾಗಗಳಲ್ಲಿ ಮೂರು ವಿಧಗಳಲ್ಲಿ ರಚಿಸಲ್ಪಟ್ಟಿರುತ್ತವೆ. ಆ ಮೂರು ಪ್ರಕಾರಗಳೆಂದರೆ ಮುಂಡಾಕಾರ, ಚೌಕಾಕಾರ ಹಾಗೂ ಲಂಬಾಕಾರ. ದುಂಡಾಕಾರದ ಮನೆಗಳುಳ್ಳ ಗ್ರಾಮಗಳು ಜರ್ಮನಿ ಮತ್ತು ಆಫ್ರಿಕಾದಲ್ಲಿ, ಲಂಬಾಕಾರದ ಮನೆಗಳುಳ್ಳ ಗ್ರಾಮಗಳು ಫ್ರಾನ್ಸ್‌ನಲ್ಲಿ ಹಾಗೂ ಚೌಕಾಕಾರದ ಮನೆಗಳುಳ್ಳ ಗ್ರಾಮಗಳನ್ನು ಭಾರತ, ಮೆಕ್ಸಿಕೋ, ಸ್ಪೇನ್ ಹಾಗೂ ಇನ್ನಿತರ ದೇಶಗಳಲ್ಲಿ ಕಾಣಬಹುದು.

### ಅನುಕೂಲತೆ ಮತ್ತು ಅನಾನುಕೂಲತೆಗಳು

ಗುಂಪು - ಮನೆ - ಗ್ರಾಮಗಳು ತಮ್ಮದೇ ಆದ ಅನುಕೂಲತೆಗಳನ್ನು ಹಾಗೂ ಅನಾನುಕೂಲತೆಗಳನ್ನು ಹೊಂದಿವೆ.

#### ಅನುಕೂಲತೆಗಳು

- ಸಮಾಜಶಾಸ್ತ್ರದ ದೃಷ್ಟಿಯಿಂದ ಈ ಗ್ರಾಮಗಳ ಅತಿ ಮುಖ್ಯ ಅನುಕೂಲತೆ ಎಂದರೆ ಅಲ್ಲಿ ಕಂಡುಬರುವ 'ನಾವು-ನಮ್ಮವರು' ಎಂಬ ಭಾವನೆ. ಜನರು ತಲೆಮಾರುಗಳ ಕಾಲ ಒಂದೇ ಸ್ಥಳದಲ್ಲಿ ಮಗ್ಗು - ಮಗ್ಗುಲಾಗಿ (ಅಕ್ಕ-ಪಕ್ಕದಲ್ಲಿ) ವಾಸಿಸುವುದರಿಂದ ಅವರಲ್ಲಿ ನಾವು ನಮ್ಮವರು ಎಂಬ ಬಾಂಧವ್ಯ ಕುದುರುತ್ತದೆ.
- ಇಂತಹ ಗ್ರಾಮಗಳಲ್ಲಿ ವಾಸಿಸುವ ಜನರು ವೈರಿಗಳ ದಾಳಿಯಿಂದ, ನರಭಕ್ಷಕ ಕಾಡು ಮೃಗಗಳ ಕಾಟದಿಂದ ಸಂರಕ್ಷಣೆಯನ್ನು ಹೆಚ್ಚು ಸಮರ್ಥವಾಗಿ ಮಾಡಿಕೊಳ್ಳಬಹುದು. ಅದೂ ಅಲ್ಲದೆ ಅತಿವೃಷ್ಟಿ, ಮಹಾಪೂರ, ಬಿರುಗಾಳಿ, ಬೆಂಕಿ ಮುಂತಾದ ನೈಸರ್ಗಿಕ ವಿಕೋಪಗಳು ಜರುಗಿದಾಗಲೂ ಕೂಡ ಅವರು ಒಬ್ಬರಿಗೊಬ್ಬರು ಸಹಾಯ ಹಸ್ತವನ್ನು ನೀಡಬಲ್ಲರು.
- ಗುಂಪು - ಮನೆ - ಗ್ರಾಮಗಳಲ್ಲಿ ಆರ್ಥಿಕ ಸ್ವರೂಪದ ಕೆಲವೊಂದು ಪ್ರಮುಖ ಅನುಕೂಲತೆಗಳಿವೆ. ಆ ಗ್ರಾಮದ ಮಕ್ಕಳ ವಿದ್ಯಾರ್ಜನೆಯ ಕಾರ್ಯವನ್ನು ಪೂರೈಸಲು ಒಂದು ಶಾಲೆ, ಆ ಗ್ರಾಮದ ಜನರ ಆರೋಗ್ಯ ರಕ್ಷಣೆ ಮಾಡಲು ಒಂದು ಆಸ್ಪತ್ರೆ (ದವಾಖಾನೆ), ಗ್ರಾಮದ ಕಾಯ್ದೆ ಕಾನೂನಿನ ವ್ಯವಸ್ಥೆ ಮಾಡಲು ಒಂದು ಪೊಲೀಸ್ ಠಾಣೆ, ಅಂಚೆಗೆ ಸಂಬಂಧಿಸಿದ ಕಾರ್ಯಗಳನ್ನು ಪೂರೈಸಲು ಒಂದು ಅಂಚೆ ಕಛೇರಿ, ಸಹಕಾರಿ ಕಾರ್ಯಗಳನ್ನು ಪೂರೈಸಲು ಒಂದು ಸಹಕಾರಿ ಸಂಘ ಹೀಗೆ ಗ್ರಾಮಸ್ಥರ ವಿವಿಧ ಅಗತ್ಯಗಳನ್ನು ಪೂರೈಸಲು ಒಂದೊಂದು ಸಂಘ ಸಂಸ್ಥೆಗಳಿದ್ದರೆ ಸಾಕು.
- ಮನೋವಿಜ್ಞಾನಿಗಳ ಪ್ರಕಾರ ಗುಂಪು ಮನೆ ಗ್ರಾಮಗಳಲ್ಲಿ ಹುಟ್ಟಿ ಬೆಳೆದ ಜನರಲ್ಲಿ ಮಾನವೀಯತೆಯ ತಿರುಳಿನ ಗುಣಗಳಾದ ಪರಸ್ಪರ ಪ್ರೀತಿ, ದಯೆ, ಕರುಣೆ, ಅನುಕಂಪ ಇತ್ಯಾದಿಗಳನ್ನು ಕಾಣಬಹುದು. ಈ ಗ್ರಾಮಗಳಲ್ಲಿನ ಮಕ್ಕಳ ಸಾಮಾಜೀಕರಣ (Socialization) ಪ್ರಕ್ರಿಯೆಯಲ್ಲಿ ಮಾನವೀಯತೆಯ ಗುಣಗಳು ಅಂಕುರಿಸಿ ವೃದ್ಧಿಗೊಳ್ಳಲು ಅನುಕೂಲವಾಗಿದೆ.

#### ಅನಾನುಕೂಲತೆಗಳು

- ಗುಂಪು-ಮನೆ-ಗ್ರಾಮಗಳ ಒಂದು ಮುಖ್ಯ ಅನಾನುಕೂಲತೆ ಎಂದರೆ ಸಂಪ್ರದಾಯಬದ್ಧತೆ. ತಲೆತಲಾಂತರಗಳಿಂದ ಒಂದೇ ಸ್ಥಳದಲ್ಲಿ ಸಾಮೂಹಿಕವಾಗಿ ಜನರು ವಾಸಿಸುವುದರಿಂದ ಅವರುಗಳ ರೂಢಿ ಪದ್ಧತಿಗಳು, ಆಚಾರ-ವಿಚಾರಗಳು ಹೆಪ್ಪುಗಟ್ಟಿ ಪ್ರಗತಿಪರ ಬದಲಾವಣೆಗಳಿಗೆ ತೊಡಕಾಗಿ ಪರಿಣಮಿಸುತ್ತವೆ.
- ಇಂತಹ ಗ್ರಾಮಗಳು ಆರೋಗ್ಯಕ್ಕೆ ಅನುಕೂಲವಾದ ಪರಿಸರವನ್ನು ಹೊಂದಿರುವುದಿಲ್ಲ. ನೂರಾರು ಇಲ್ಲವೆ ಸಾವಿರಾರು ಜನರು ಹಾಗೂ ಅವರೊಂದಿಗೆ ನೂರಾರು ಸಾವಿರಾರು ಪ್ರಾಣಿಗಳು ಒಂದು ಸೀಮಿತವಾದ ಪ್ರದೇಶದಲ್ಲಿ ವಾಸಿಸುವುದರಿಂದ ಅಲ್ಲಿ ಅನಾರೋಗ್ಯಕರವಾದ ವಾತಾವರಣ ಉಂಟಾಗುತ್ತದೆ. ಈ ಕಾರಣದಿಂದ ಇಂತಹ ಗ್ರಾಮಗಳಲ್ಲಿ ಜನರು ಅನೇಕ ರೋಗ ರುಜಿನಗಳಿಂದ ಬಳಲುವ ಸಾಧ್ಯತೆ ಇದೆ.
- ಗುಂಪು ಮನೆ ಗ್ರಾಮಗಳು ಆರ್ಥಿಕ ದೃಷ್ಟಿಯಿಂದ ಕೆಲ ಅನುಕೂಲತೆಗಳನ್ನು ಹೊಂದಿದ್ದರೂ ಕೆಲವೊಂದು ಅನಾನುಕೂಲತೆಗಳನ್ನು ಹೊಂದಿವೆ. ನಾವು ಈ ಹಿಂದೆ ಕಾಣಿಸಿದ ಗುಂಪು ಮನೆ ಗ್ರಾಮಗಳ ರಚನೆಯನ್ನು ಗಮನಿಸಿದಾಗ ಈ ವಿಷಯ ಕಂಡು ಬರುತ್ತದೆ. ಈ ರಚನೆಯ ಪ್ರಕಾರ ಜನರ ವಾಸ ನಡುಮಧ್ಯದ ವರ್ತುಳದಲ್ಲಿದ್ದರೆ ಅವರು ಸಾಗುವಳಿ ಮಾಡುವ ಜಮೀನು ಮೂರನೆಯ

ವರ್ತುಳದಲ್ಲಿರುತ್ತದೆ. ಹೀಗಾಗಿ ರೈತರು ಪ್ರತಿದಿನ ಮುಂಜಾನೆ ತಮ್ಮ ಎತ್ತುಗಾಡಿ (ಚಕ್ಕಡಿ) ಹಾಗೂ ಇತರ ಉಪಕರಣಗಳೊಂದಿಗೆ ಸಾಕಷ್ಟು ಅಂತರದಲ್ಲಿರುವ ತಮ್ಮ ತಮ್ಮ ಜಮೀನುಗಳಿಗೆ ಹೋಗಿ ಇಡೀ ದಿನ ಅಲ್ಲಿ ದುಡಿದು ತಿರುಗಿ ಸಾಯಂಕಾಲ ತಮ್ಮ ಎತ್ತುಗಾಡಿ (ಚಕ್ಕಡಿ) ಹಾಗೂ ಉಪಕರಣಗಳೊಂದಿಗೆ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಬೇಕು. ಹೀಗೆ ನೂರಾರು ರೈತರು ದಿನಂಪ್ರತಿ ತಮ್ಮ ಹೊಲಗಳಿಗೆ ಹೋಗಿ ಬರುವ ಅನಿವಾರ್ಯತೆಯು ಆರ್ಥಿಕ ದೃಷ್ಟಿಯಿಂದ ಹಾನಿಕರವಾದದ್ದು. ರೈತರು ಗುಂಪು ಮನೆಗಳ ಗ್ರಾಮದಲ್ಲಿ ವಾಸಿಸದೆ ತಮ್ಮ ಜಮೀನಿನ ಮಧ್ಯದಲ್ಲಿ ಅಥವಾ ಅದರ ಪಕ್ಕದಲ್ಲಿ ಮನೆ ಕಟ್ಟಿಕೊಂಡು ವಾಸವಾದದ್ದೇ ಆದರೆ ಈ ಅನಗತ್ಯ ಆರ್ಥಿಕ ಹಾನಿಯನ್ನು ತಪ್ಪಿಸಬಹುದಾಗಿದೆ.

ಈ ಗ್ರಾಮಗಳ ಇನ್ನೊಂದು ಕೊರತೆ ಏನೆಂದರೆ ವರ್ಷದಿಂದ ವರ್ಷಕ್ಕೆ ಕುಂದುವ ಮಾನವ ಮತ್ತು ಜಮೀನು ನಡುವಿನ ಅನುಪಾತ-ಪ್ರಮಾಣ (Man-land ratio). ಪ್ರತಿ ವರ್ಷ ಜನಸಂಖ್ಯಾ ಪ್ರಮಾಣ ಬೆಳೆಯುವುದರಿಂದಲೂ ಜಮೀನಿನ ಪ್ರಮಾಣ ಯಥಾಸ್ಥಿತಿಯಲ್ಲುಳಿಯುವುದರಿಂದಲೂ ಈ ತೊಂದರೆ ಹುಟ್ಟಿಕೊಳ್ಳುವುದು ಅನಿವಾರ್ಯ. ಹೀಗಾಗಿ ಜಮೀನಿನ ಮೇಲೆ ಒತ್ತಡ ಹೆಚ್ಚಾಗಿ ಜಮೀನುಗಳು ಛಿದ್ರೀಕರಣಗೊಂಡು ಆರ್ಥಿಕ ಮಿತವ್ಯಯಕ್ಕೆ ಬಾಧೆಯಾಗಿ ಪರಿಣಮಿಸುತ್ತವೆ. ಭಾರತದಲ್ಲಿ ಕೃಷಿ ಆಧುನೀಕರಣ ಪ್ರಕ್ರಿಯೆಗೆ ಅತಿ ಮುಖ್ಯ ಅಡೆತಡೆ ಇದೇ ಆಗಿದೆ.

ಚದುರಿದ ಮನೆಗಳ ಗ್ರಾಮಗಳು

ಈ ತರಹದ ಗ್ರಾಮಗಳಲ್ಲಿ ವಾಸಿಸುವ ಜನರು ಮನೆಗಳನ್ನು ಗುಂಪು ಗುಂಪಾಗಿ ಕಟ್ಟಿಕೊಳ್ಳದೆ ತಾವು ಸಾಗುವಳಿ ಮಾಡುವ ಜಮೀನಿನ ಮಧ್ಯದಲ್ಲಾಗಲೀ ಅಥವಾ ಅದರ ಹತ್ತಿರದಲ್ಲಾಗಲೀ, ಮಗ್ಗಲಿನಲ್ಲಾಗಲಿ ಕಟ್ಟಿಕೊಂಡು ವಾಸವಾಗಿರುತ್ತಾರೆ. ಹೀಗಾಗಿ ಇಂತಹ ಗ್ರಾಮಗಳಿಗೆ ಚದುರಿದ ಮನೆಗಳುಳ್ಳ ಗ್ರಾಮಗಳೆಂದು ಕರೆಯಲಾಗುತ್ತದೆ. ಇವುಗಳಿಗೆ ಹೊಲ ಮನೆಗಳೆಂದೂ ಕರೆಯುವುದುಂಟು. ಚದುರಿದ ಗ್ರಾಮಗಳು 17 ನೆ ಶತಮಾನದ ಮುಂಚಿನ ಅವಧಿಯಲ್ಲಿನ ಅಮೆರಿಕದ ಬಳುವಳಿಯಾಗಿದೆ. ಪ್ರಪಂಚದ ಇತರೆ ಭಾಗಗಳಲ್ಲಿ ಈ ಬಗೆಯ ಗ್ರಾಮಗಳು ಕಂಡುಬಂದರು ಕೂಡ ಯುರೋಪಿನ ಜನರು ವಲಸೆ ಬಂದು ನೆಲೆಸಿದುದರಿಂದಾಗಿ ಅಮೆರಿಕ, ಆಸ್ಟ್ರೇಲಿಯ, ನ್ಯೂಜಿಲ್ಯಾಂಡ್, ದಕ್ಷಿಣ ಆಫ್ರಿಕಾದಲ್ಲಿ ಇವುಗಳು ಹೆಚ್ಚಾಗಿವೆ.

ಇತಿಹಾಸ ; ಹೊಸದಾಗಿ ಆವಿಷ್ಕಾರಿಸಿದ ಅಮೆರಿಕಾದಲ್ಲಿ ಯುರೋಪಿನ ಬಿಳಿ ಜನ ಕಾಲಿಟ್ಟಾಗ ಹೊಲ ಮನೆ ಗ್ರಾಮಗಳನ್ನು ಪರಿಚಯಿಸಲಾಯಿತು ಎಂಬುದು ಐತಿಹಾಸಿಕ ಬೆಳವಣಿಗೆಯನ್ನು ಅವಲೋಕಿಸಿದಾಗ ಕಂಡುಬಂದ ಅಂಶವಾಗಿದೆ. ಈ ಗ್ರಾಮಗಳ ಬಗ್ಗೆ ವಿವರಿಸುತ್ತ ಲಿನ್‌ಸ್ಮಿತ್ ಎಂಬ ಅಮೆರಿಕಾದ ಗ್ರಾಮೀಣ ಸಮಾಜಶಾಸ್ತ್ರಜ್ಞರು ಹೀಗೆ ಹೇಳುತ್ತಾರೆ. 'ಗುಂಪು ಮನೆಯ ಗ್ರಾಮಗಳು ಚದುರಿದ ಮನೆಗಳುಳ್ಳ ಗ್ರಾಮಗಳಿಗೆ ಪರಿವರ್ತನೆಗೊಂಡದ್ದು ಇಡೀ ಅಮೆರಿಕ ದೇಶದ ಇತಿಹಾಸವನ್ನೇ ಅದಲು ಬದಲು ಮಾಡಿದ ಒಂದು ಪ್ರಕ್ರಿಯೆ'. ಅದೇ ದಾಟಿಯಲ್ಲಿ ಮುಂದುವರಿದು ಅವರು ಇನ್ನೊಂದು ವಿಷಯವನ್ನು ಪ್ರಸ್ತಾಪಿಸುತ್ತಾರೆ. ಅದೇನೆಂದರೆ ಈ ಚದುರಿದ ಮನೆಗಳುಳ್ಳ ಗ್ರಾಮಗಳು ಯಾವಾಗ ಹಾಗೂ ಯಾವ ಕಾರಣದಿಂದ ಅಸ್ತಿತ್ವಕ್ಕೆ ಬಂದವೆಂದು ಕಂಡುಹಿಡಿಯುವುದು ಒಂದು ಅಸಾಧ್ಯವಾದ ಕೆಲಸ ಎನ್ನುವುದು. ಅಮೆರಿಕಾಕ್ಕೆ ಸಂಬಂಧಿಸಿದ ನೂರಾರು ಐತಿಹಾಸಿಕ ಗ್ರಂಥಗಳನ್ನು ಹಾಗೂ ಈ ವಿಷಯಕ್ಕೆ ಸಂಬಂಧಿಸಿದ ಅನೇಕ ಪ್ರಮಾಣ ಪತ್ರ ದಾಖಲೆಗಳನ್ನು ತಿರುವಿ ಹಾಕಿದರೂ ಈ ಪರಿವರ್ತನೆ ಎಂದಾಯಿತು, ಹೇಗಾಯಿತು ಮತ್ತು ಏಕಾಯಿತು ಎಂದು ಹೇಳುವುದು ಕಷ್ಟವಾಗಿದೆ.

ಲಿನ್‌ಸ್ಮಿಥ್ ಅವರ ಈ ಹೇಳಿಕೆಯನ್ನು ಒಪ್ಪುವುದು ಕಷ್ಟ, ಅವರ ವಿವರಣೆಯನ್ನು ಓದುತ್ತ ಹೋದ ಹಾಗೆ ಸ್ಮಿಥ್ ಅವರು ಏನೋ ಒಂದು ವಿಷಯವನ್ನು ಮರೆಮಾಚುತ್ತಿದ್ದಾರೆ ಎಂಬ ಸಂಶಯವು ಓದುಗರಲ್ಲಿ ಹುಟ್ಟದೇ ಇರದು. ಏಕೆಂದರೆ ಆಧುನಿಕ ಅಮೆರಿಕಾ ದೇಶದ ಉಗಮ ಬೆಳವಣಿಗೆಯ ಇತಿಹಾಸವನ್ನು ಕೊಂಚ ಬಲ್ಲವರಿಗಂತೂ ಅವರ ಹೇಳಿಕೆಗಳು ನುಂಗಲಾರದ ತುತ್ತಾಗಿ ಪರಿಣಮಿಸುತ್ತವೆ.

ಈ ವಿಷಯ ಕುರಿತು ಆಧುನಿಕ ಅಮೆರಿಕಾದ ಇತಿಹಾಸ ಹೇಳುವ ಒಂದು ಕಟು ಸತ್ಯವೆಂದರೆ ಚದುರಿದ ಮನೆಗಳುಳ್ಳ ಗ್ರಾಮಗಳು ಯುರೋಪಿನ ಬಿಳಿಯರು ಅಮೆರಿಕಾದ ಮೂಲನಿವಾಸಿಗಳಾದ ರೆಡ್ ಇಂಡಿಯನ್ನರ ನರಹತ್ಯೆ ಮಾಡಿ ಅವರನ್ನು ನಿರ್ನಾಮಗೊಳಿಸಿ ಅವರ ಸಮಾಧಿಗಳ ಮೇಲೆ ಕಟ್ಟಿದ ಗ್ರಾಮಗಳು. ಅದರ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತಿದೆ.

ಹೊಸದಾಗಿ ಕಂಡುಹಿಡಿದ ಹೊಸ ಜಗತ್ತು ಎಂದೇ ಕರೆಯಲ್ಪಡುವ ಅಮೆರಿಕಾಕ್ಕೆ ಯೂರೋಪಿಯನ್ನರು ವಲಸೆ ಹೋಗುವ ಪೂರ್ವದಲ್ಲಿಯೇ ಅಲ್ಲಿಯ ಮೂಲ ನಿವಾಸಿಗಳಾದ ರೆಡ್ ಇಂಡಿಯನ್ನರು ಅಲ್ಲಿನ ದಂಡಕಾರಣ್ಯವನ್ನು ಕಡಿದು, ಜಮೀನನ್ನು ಹದಗೊಳಿಸಿ, ಗ್ರಾಮಗಳನ್ನು ನಿರ್ಮಿಸಿ, ಅವುಗಳಲ್ಲಿ ವಾಸವಾಗಿದ್ದರು. ಹೀಗಾಗಿ ವಲಸೆ ಬಂದ ಯುರೋಪಿನ ಬಿಳಿಯರಿಗೆ ದಟ್ಟ ಕಾಡನ್ನು ಕಡಿದು, ಜಮೀನು ಹಸನು ಮಾಡಿ, ಉತ್ತು - ಬಿತ್ತಿ ಗ್ರಾಮಗಳನ್ನು ಸ್ಥಾಪಿಸುವ ಪ್ರಮೇಯವೇ ಬರಲಿಲ್ಲ. ಆದಿವಾಸಿಗಳಾದ ರೆಡ್ ಇಂಡಿಯನ್ನರನ್ನು ನಿರ್ನಾಮಗೊಳಿಸಿ ಅವರ ಗ್ರಾಮಗಳನ್ನೂ, ಅತೀ ಫಲವತ್ತಾದ ಜಮೀನುಗಳನ್ನೂ, ನಿಸರ್ಗ ಸಂಪತ್ತನ್ನೂ ಮುಟ್ಟುಗೋಲು ಹಾಕುವ ಉಪಾಯವೇನು ? ಎಂಬುದರತ್ತ ಅವರ ಗಮನ ಹರಿದಿತ್ತು. ಈ ಕಾರ್ಯವನ್ನು ಅವರು ಅತಿ ಸಮರ್ಥವಾಗಿಯೇ ಮಾಡಿದರೆಂದು ಹೇಳಬಹುದು. ಯುದ್ಧೋಪಕರಣಗಳಲ್ಲಿ ಹಾಗೂ ಯುದ್ಧ ಮಾಡುವ ಷಡ್ಯಂತ್ರಗಳಲ್ಲಿ ಬಡಪಾಯಿ ರೆಡ್ ಇಂಡಿಯನ್ನರು ಬಿಳಿಯ ಯುರೋಪಿಯನ್ನರ ಎದುರು ಹಸುಗೂಸುಗಳಾಗಿದ್ದರೆಂದೇ ಹೇಳಬಹುದು. ಬಿಲ್ಲು ಬಾಣಗಳಿಂದ, ಖಡ್ಗ ಕಠಾರಿಗಳಿಂದ ಹೋರಾಡಬಲ್ಲವರಾದ ರೆಡ್ ಇಂಡಿಯನ್ನರು ಮದ್ದು ಗುಂಡುಗಳಿಂದ, ಬಂದೂಕು ತುಪಾಕಿಗಳಿಂದ ಸುಸಜ್ಜಿತವಾದ ಬಿಳಿಯರಿಗೆ ಹೇಗೆ ತಾನೇ ಸರಿಸಾಟಿಯಾದಾರು ? ಆದ್ದರಿಂದ ಬಿಳಿಯರು ರೆಡ್ ಇಂಡಿಯನ್ನರನ್ನು ಇರುವೆಗಳನ್ನು ಹೊಸಕಿ ಹಾಕಿದಂತೆ ಹೊಸಕಿ ಹಾಕಿ ಅವರ ಸಂಪತ್ತನ್ನೆಲ್ಲ ನುಂಗಿ ನೀರು ಕುಡಿದರು. ಹೀಗೆ ಕಬಳಿಸಿದ ನೆಲದ ಮೇಲೆ ಚದುರಿದ ಮನೆಗಳುಳ್ಳ ಗ್ರಾಮಗಳು ಅಸ್ತಿತ್ವಕ್ಕೆ ಬಂದವು.

ಚದುರಿದ ಮನೆಗಳುಳ್ಳ ಗ್ರಾಮಗಳ ಉಗಮದ ಹಿಂದಿರುವ ಈ ದುರಂತ ಕಥೆಯನ್ನು ಮರೆಮಾಚಲು ಮಾಡಿದ ಪ್ರಯತ್ನವನ್ನು ಹೊರತುಪಡಿಸಿ ಅದಕ್ಕೆ ಸಂಬಂಧಿಸಿದ ಇನ್ನಿತರ ಬೆಳವಣಿಗೆಗಳ ಬಗ್ಗೆ ಸ್ಮಿಥ್ ಅವರು ಸರಿಯಾಗಿಯೇ ವಿವರಿಸಿದ್ದಾರೆನ್ನಬಹುದು.

ಯುರೋಪಿನ ಬಿಳಿಯರು ಅಮೆರಿಕಾದಲ್ಲಿ ಜೇಮ್ಸ್ ಟೌನ್ ಎಂಬ ಹೆಸರಿನ ವಸಾಹತುವನ್ನು 1607 ರಲ್ಲಿ ಸ್ಥಾಪಿಸಿದರು. ಈ ಸಮಯದಲ್ಲಿ ಆದಷ್ಟು ಬೇಗನೆ ಜಮೀನನ್ನು ಕಬಳಿಸುವ ತವಕವು ಎಲ್ಲ ಬಿಳಿಯ ವಲಸೆಗಾರರ ಮನದಾಳವನ್ನು ಆವರಿಸಿತ್ತು. ಎಲ್ಲೆ ಮೀರಿದ ತವಕವು ಪರಸ್ಪರರಲ್ಲಿ ಕಚ್ಚಾಟ, ಬಡಿದಾಟಕ್ಕೆ ಮೂಲವಾಗಿ, ಅಶಾಂತತೆ - ಅರಾಜಕತೆಗೆ ಎಡೆಮಾಡಿಕೊಟ್ಟಿತು. ಈ ಅರಾಜಕತೆಯ ಬೆಳವಣಿಗೆಯನ್ನು ಹತೋಟಿಯಲ್ಲಿಟ್ಟು ಒಂದು ವ್ಯವಸ್ಥೆಯನ್ನು ಜಾರಿಗೆ ತರುವ ಉದ್ದೇಶದಿಂದ ಎಲ್ಲ ಬಿಳಿಯರ ವಸಾಹತುಗಳ ಮೇಲೆ ಅಧಿಕಾರ ಹೊಂದಿದ 'ಜನರಲ್ ಕೋರ್ಟ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ಪ್ರಮುಖ ಉದ್ದೇಶವೆಂದರೆ ಹೊಸ ಹೊಸ ವಸಾಹತುಗಳನ್ನು ಸ್ಥಾಪಿಸುವುದು ಹಾಗೂ ಅಲ್ಲಿಯ ಜಮೀನನ್ನು ವ್ಯವಸ್ಥಿತವಾಗಿ ಪಡಿತರ ಮಾಡುವುದು. ಹೀಗೆ ಸ್ಥಾಪಿತಗೊಂಡ 'ಜನರಲ್ ಕೋರ್ಟ್' ಗುಂಪು ಮನೆಗಳ ಗ್ರಾಮಗಳನ್ನು ಸ್ಥಾಪಿಸುವ ನಿಲುವು ಹೊಂದಿತ್ತೇ ವಿನಾ ಚದುರಿದ ಮನೆಗಳುಳ್ಳ ಗ್ರಾಮಗಳನ್ನಲ್ಲ. ಆದರೆ ಆದಷ್ಟು ಜಮೀನನ್ನು ಸಾಧ್ಯವಾದಷ್ಟು ಬೇಗನೆ ಕಬಳಿಸಲು ಹಾತೊರೆಯುತ್ತಿದ್ದ ಬಿಳಿಯ ವಲಸಿಗರಿಗೆ 'ಜನರಲ್ ಕೋರ್ಟಿನ' ಈ ನಿಲುವು 'ಹಸಿದು ಬಂದ ಬಕಾಸುರನಿಗೆ ಅರೆಕಾಸಿನ ಮಜ್ಜಿಗೆ ನೀಡಿದಂತಾಯಿತು', ಆದ್ದರಿಂದ ರೊಚ್ಚಿಗೆದ್ದ ಅವರು 'ಜನರಲ್ ಕೋರ್ಟ್'ನ ವಿರುದ್ಧ ಬಂಡೆದ್ದು ಅದನ್ನು ಮುಚ್ಚಿಹಾಕಿ, ಕಟ್ಟು ಪಾಡುಗಳಿಲ್ಲದ ಭೂ ಕಬಳಿಕೆಗೆ ದಾರಿಮಾಡಿಕೊಟ್ಟರು. ಸಾವಿರಾರು ಎಕರೆ ಫಲವತ್ತಾದ ಭೂಮಿಗಳು ತೆರೆದ ಪೇಟೆಗಳಲ್ಲಿ ಹರಾಜು ಹಾಕಲ್ಪಟ್ಟಿದುದರಿಂದಾಗಿ ಹೆಚ್ಚು ಹಣವನ್ನು ಕೊಟ್ಟವರ ಪಾಲಾಯಿತು. ಈ ಅರಾಜಕತೆಯ ವಾತಾವರಣವು ಕುತಂತ್ರಿಗಳಿಗೆ, ಮೋಸಗಾರರಿಗೆ ಒಂದು ರಸದೌತಣವನ್ನೇ ನೀಡಿದಂತಾಯಿತು. ಈ ಹದಗೆಟ್ಟ ವ್ಯವಸ್ಥೆಯ ಸಂಕೇತವೇನೋ ಎಂಬಂತೆ 'ಚಕ್ಕಳಿ ಚಳವಳಿ' ಆರಂಭವಾಯಿತು. ಈ ಚಳವಳಿಯ

ಪ್ರಕಾರ ಯಾರಾದರೊಬ್ಬ ಬಿಳಿಯನಿಗೆ ಒಂದು ಫಲವತ್ತಾದ ಜಮೀನು ಬೇಕಾದರೆ ಆತನು ಮಾಡಬೇಕಾದ ಕೆಲಸವಿಷ್ಟೇ. ತಾನು ಬಯಸಿದ ಜಮೀನಿನ ನಡುವೆ 'ಚಕ್ಕಳಿ' ಕೂತು 'ಈ ಜಮೀನು ನನ್ನದು' ಎಂದು ಸಾರಿಬಿಡುವುದು. ಅಷ್ಟು ಮಾಡಿದ ಮಾತ್ರಕ್ಕೆ ನೂರಾರು ಸಾವಿರಾರು ಎಕರೆ ವಿಸ್ತಾರವಿದ್ದ ಜಮೀನು ಅವನದಾಗಿಬಿಡುತ್ತಿತ್ತು.

ಈ ಸಂದರ್ಭದಲ್ಲಿ ಜೇಮ್ಸ್ ಸ್ಟ್ರೀಟ್ ಎಂಬುವರು ರಚಿಸಿದ 'ಟ್ಯಾಪ್ ರೂಟ್ಸ್' ಎಂಬ ಪ್ರಸಿದ್ಧ ಕಾದಂಬರಿಯಲ್ಲಿ ಬರುವ ಒಂದು ಸನ್ನಿವೇಶವನ್ನು ಸ್ಮರಿಸುವುದು ಸೂಕ್ತವೆಂದೆನಿಸುತ್ತದೆ. ಈ ಕಾದಂಬರಿಯ ನಾಯಕನ ಹೆಸರು ಸ್ಯಾಮ್ ಡಾಬ್ನೆ. ಬೆಳಗು ಹರಿಯುವುದರೊಳಗೆ ಶ್ರೀಮಂತನಾಗಬೇಕೆಂಬ ಆಸೆಯನ್ನು ಹೊತ್ತು ಬಂದ ಬಿಳಿ ವಲಸಿಗ. ಬಂದೂಕು, ತುಪಾಕಿ, ಮದ್ದು ಗುಂಡುಗಳಿಂದ ಸುಸಜ್ಜಿತರಾದ ಕೆಲವು ಬಾಡಿಗೆ ಬಂಟರೊಡನೆ ರೆಡ್ ಇಂಡಿಯನ್ನರು ವಾಸವಾಗಿದ್ದ ಒಂದು ಫಲವತ್ತಾದ ಕೊಳ್ಳಕ್ಕೆ ಹೋಗಿ ಅವರ ಮೇಲೆ ಮನಸೋ ಇಚ್ಛೆ ಗುಂಡು ಹಾರಿಸಿ ಅವರೆಲ್ಲರನ್ನೂ ಹತ್ಯೆ ಮಾಡುತ್ತಾನೆ. ಎಲ್ಲರೂ ಹತರಾದರು ಎಂಬುದನ್ನು ಖಚಿತಪಡಿಸಿಕೊಂಡ ನಂತರ ಅವನು ಆ ಪ್ರದೇಶದಲ್ಲಿಯೇ ಅತಿ ಎತ್ತರವಾದ ಒಂದು ಮರವನ್ನು ಏರಿ ತುತ್ತ ತುದಿಯನ್ನು ಮುಟ್ಟಿ ಕೆಳಗಿಳಿಯುತ್ತಾನೆ. ಕೆಳಗಿಳಿದ ತಕ್ಷಣ ತನ್ನ ಸೊಂಟದಲ್ಲಿದ್ದ ಚಿಗ್ಗತ್ತಿಯನ್ನು ತೆಗೆದು ಆ ಮರದ ವಿಶಾಲ ಬೊಡ್ಡೆಯ ಮೇಲೆ 'ಈ ಮರದ ತುತ್ತ ತುದಿಯಿಂದ ಕಾಣಿಸುವ ಎಲ್ಲ ಜಮೀನು ಶ್ಯಾಮ ಡಾಬ್ನೆ ಹಾಗೂ ಆತನ ಪುತ್ರರ ಆಸ್ತಿ' ಎಂದು ಕೆತ್ತುತ್ತಾನೆ. ಹೇಗಿದೆ ಈ ಕಬಳಿಕೆಯ ಕಥೆ !

ಚದುರಿದ ಮನೆಗಳುಳ್ಳ ಗ್ರಾಮಗಳ ಉಗಮ ಹಾಗೂ ಬೆಳವಣಿಗೆಯ ಇತಿಹಾಸ ಕೇವಲ ಅಮೇರಿಕ ದೇಶಕ್ಕೆ ಸೀಮಿತವಾಗಿಲ್ಲ. ಯುರೋಪಿನ ಬಿಳಿಯರು ವಲಸೆಹೋದ ಇನ್ನುಳಿದ ದೇಶಗಳಾದ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಕೆನಡಾ, ಇತ್ಯಾದಿ ದೇಶಗಳಲ್ಲಿಯೂ ಕೂಡ ಈ ಕಣ್ಣೀರ ಕಥೆಯು ಪುನರಾವರ್ತಿಯಾಯಿತು.

ಅನುಕೂಲತೆ ಹಾಗೂ ಅನಾನುಕೂಲತೆಗಳು

ಚದುರಿದ ಮನೆಗಳುಳ್ಳ ಗ್ರಾಮಗಳು ಕೂಡ ತಮ್ಮದೇ ಆದ ಅನುಕೂಲತೆ ಹಾಗೂ ಅನಾನುಕೂಲತೆಗಳನ್ನು ಹೊಂದಿವೆ.

ಅನುಕೂಲತೆಗಳು

- ಭೂ ಮಾಲೀಕನು ತನ್ನ ಜಮೀನಿನ ನಡು ಮಧ್ಯ ಅಥವಾ ಅದರ ಬಳಿಯಲ್ಲಿಯೇ ವಾಸವಾಗಿ ಭೂ ಸಾಗುವಳಿಯ ಎಲ್ಲ ಹಂತದಲ್ಲಿಯೂ ಜಾಗರೂಕತೆ ವಹಿಸುವುದರಿಂದ ಭೂ ಸಾಗುವಳಿಯು ಅತ್ಯಂತ ಯೋಗ್ಯ ರೀತಿಯಿಂದ ಜರುಗುವುದು.
- ಗುಂಪು ಮನೆಗಳ ಗ್ರಾಮಗಳಂತೆ ದಿನಂಪ್ರತಿ ಎರಡು ಸಲ ಮನೆಯಿಂದ ಹೊಲಕ್ಕೆ, ಹೊಲದಿಂದ ಮನೆಗೆ ಹೋಗಿ ಬರಲು ಅನಾವಶ್ಯವಾಗಿ ವ್ಯಯವಾಗುವ ಸಮಯ, ಹಣ ಹಾಗೂ ಶಕ್ತಿಯ ಉಳಿತಾಯವಾಗುತ್ತದೆ.
- ವಿಶಾಲವಾದ ಜಮೀನನ್ನು ಹೊಂದಿದ ಇಂತಹ ಗ್ರಾಮಗಳಲ್ಲಿ ವ್ಯವಸಾಯದ ಆಧುನೀಕರಣ ಸಾಧ್ಯವಾಗುತ್ತದೆ. ಹೀಗಾಗಿ ಒಕ್ಕಲುತನದಿಂದಾಗಿ ರೈತಾಪಿ ಜನರು ಸಮಗ್ರ ದೇಶಕ್ಕೆ ಸಾಕಾಗುವಷ್ಟು ಆಹಾರವನ್ನು ಹಾಗೂ ಬೃಹತ್ ಉದ್ಯಮಗಳಿಗೆ ಬೇಕಾಗುವ ಕಚ್ಚಾ ಸರಕನ್ನು ಉತ್ಪಾದಿಸುವಂತಾಯಿತು. ಇದರಿಂದಾಗಿ ವ್ಯವಸಾಯವು ಲಾಭದಾಯಕ ವೃತ್ತಿಯಾಗಿ ಆಹಾರದ ಅಭಾವವು ಗತ ವಿಷಯವಾಯಿತು.
- ವ್ಯವಸಾಯದಲ್ಲಿನ ಯಾಂತ್ರೀಕರಣದಿಂದ ಭೂಮಿಯ ಮೇಲಿನ ಜನಸಂಖ್ಯಾ ಒತ್ತಡವು ಕಡಿಮೆಯಾಯಿತು. 10-15 ಜನರು ಮಾಡುವಂತಹ ಕೆಲಸವನ್ನು ಕೇವಲ ಒಂದು ಯಂತ್ರ ಮಾಡಿ ಮುಗಿಸಬಹುದಾದ್ದರಿಂದ ಅನೇಕ ಜನರು ವ್ಯವಸಾಯ ವೃತ್ತಿಯಿಂದ ಬಿಡುಗಡೆಗೊಂಡು ಉದ್ದಿಮೆಗಳಲ್ಲಿ ದುಡಿಯುವಂತಾಯಿತು. ಹೀಗೆ ವ್ಯವಸಾಯ ಹಾಗೂ ಉದ್ದಿಮೆಗಳು ಸರಿಸಾಟಿಯಾಗಿ ಬೆಳೆಯುವಂತಾಯಿತು.

- ಇಂತಹ ಗ್ರಾಮಗಳಲ್ಲಿ ಭೂಮಿಯ ಮೇಲೆ ಜನಸಂಖ್ಯಾ ಒತ್ತಡವಿಲ್ಲದೆ ಇರುವುದರಿಂದ ಜಮೀನಿನ ಛಿದ್ರೀಕರಣದ ಪ್ರಮೇಯವೆ ಇರದು.
- ಗುಂಪು- ಮನೆ ಗ್ರಾಮಗಳಲ್ಲಿ ಕಂಡು ಬರುವ ಅನಾರೋಗ್ಯಕರ ಪರಿಸರ ಹಾಗೂ ವಾತಾವರಣ ಇಂತಹ ಗ್ರಾಮಗಳಲ್ಲಿ ಕಾಣದು. ಈ ಗ್ರಾಮಗಳಲ್ಲಿ ಮಾನವರು ಒತ್ತಡವಿಲ್ಲದ, ಅಂಟುರೋಗಕ್ಕೆ ಆಸ್ಪದವಿಲ್ಲದ, ಅತಿ ಹಿತಕರವಾದ ಆರೋಗ್ಯಕರ ವಾತಾವರಣದಲ್ಲಿ ಜೀವಿಸುತ್ತಾರೆ.
- ಚದುರಿದ ಮನೆಗಳುಳ್ಳ ಗ್ರಾಮಗಳಲ್ಲಿ ಹುಟ್ಟಿ ಬೆಳೆದ ಮಾನವರು ಧೈರ್ಯಶಾಲಿಗಳೂ, ಸಾಹಸಿಗಳೂ, ಮುನ್ನುಗ್ಗುವ ಪ್ರವೃತ್ತಿಯುಳ್ಳವರೂ ಆಗಿರುತ್ತಾರೆಂದು ಹೇಳಲಾಗಿದೆ. ಈ ಗ್ರಾಮ ವಾಸಿಗಳು ಸಾವಿರಾರು ಎಕರೆ ಜಮೀನಿನ ಮಧ್ಯೆ ಇರುವ ಏಕಮೇವ ಕುಟುಂಬದಲ್ಲಿ ಹುಟ್ಟಿ ಬೆಳೆದು ಇನ್ನುಳಿದವರ ಸಹಾಯವಿಲ್ಲದೆ ಏಕಾಂಗಿಯಾಗಿ ಎಲ್ಲ ಸವಾಲುಗಳನ್ನೆದುರಿಸುವ ಕೆಚ್ಚನ್ನು ಮೈಗೂಡಿಸಿಕೊಂಡಿರುತ್ತಾರೆ.
- ಚದುರಿದ ಗ್ರಾಮಗಳಲ್ಲಿ ಹುಟ್ಟಿ ಬೆಳೆದ ಜನ ಕಂದಾಚಾರಿಗಳಾಗಿರದೇ ಸದಾಕಾಲ ಹೊಸ ಹೊಸ ವಿಚಾರದಾರೆ, ಉಪಾಯಗಳ ಅನ್ವೇಷಣೆಯಲ್ಲಿರುತ್ತಾರೆ.

ಅನಾನುಕೂಲತೆಗಳು

- ನಾವು-ನಮ್ಮವರೆಂಬ ಬಾಂಧವ್ಯ ಈ ಗ್ರಾಮಗಳಲ್ಲಿ ಅಪರೂಪ. ನಾವು-ನಮ್ಮವರೆಂಬ ಸ್ಥಾನದಲ್ಲಿ 'ನಾನು' 'ನನ್ನದು' ಎಂಬ ಭಾವನೆ ಹೆಚ್ಚಾಗಿ ಕಂಡುಬರುತ್ತದೆ. ಪರಸ್ಪರ ಪ್ರೀತಿ, ಸದ್ಭಾವನೆ, ದಯೆ, ಕರುಣೆ ಇತ್ಯಾದಿ ಮಾನವೀಯತೆಯ ಗುಣಗಳ ಅಭಾವವನ್ನೂ ಈ ಗ್ರಾಮಗಳಲ್ಲಿ ಗುರುತಿಸಲಾಗಿದೆ.
- ಗುಂಪು-ಮನೆ ಗ್ರಾಮಗಳಲ್ಲಿ ಕಂಡು ಬರುವ ಸಾಮೂಹಿಕ ಜೀವನದ ಆರ್ಥಿಕ ಅನುಕೂಲತೆಗಳಾದ ಗ್ರಾಮಕ್ಕೊಂದು ಶಾಲೆ, ಒಂದು ಅಂಚೆ ಕಛೇರಿ, ಒಂದು ಆಸ್ಪತ್ರೆ, ಒಂದು ಸಹಕಾರಿ ಸಂಘ ಇತ್ಯಾದಿ ಈ ಗ್ರಾಮಗಳಲ್ಲಿ ಕಂಡು ಬರಲಾರದ್ದರಿಂದ ಅಲ್ಲಿಯ ನಿವಾಸಿಗಳು ಈ ಸವಲತ್ತುಗಳನ್ನು ಪಡೆಯಲು ಹೆಚ್ಚಿನ ಹಣ, ಸಮಯ, ಹಾಗೂ ಶಕ್ತಿಯನ್ನು ವಿನಿಯೋಗಿಸಬೇಕಾಗುತ್ತದೆ.
- ಸಾಂಸ್ಕೃತಿಕ ಇತಿಹಾಸಕಾರರು ಹೇಳುವ ಪ್ರಕಾರ ಇಂತಹ ಗ್ರಾಮಗಳಲ್ಲಿ ಕಾಯಿದೆ-ಕಾನೂನು ಹಾಗೂ ಸುವ್ಯವಸ್ಥೆಯನ್ನು ಕಾಪಾಡುವುದು ಕಷ್ಟಸಾಧ್ಯವಾದ ವಿಷಯ. 'ಕೌಬಾಯ್' ಚಲನಚಿತ್ರಗಳನ್ನು ನೋಡಿದವರಿಗೆ ಈ ವಿಷಯದ ಬಗ್ಗೆ ಹೆಚ್ಚು ಹೇಳುವ ಅವಶ್ಯಕತೆಯಿಲ್ಲ.

ಸಾಲು ಮನೆ ಗ್ರಾಮಗಳು

ಸಾಲು ಮನೆ ಗ್ರಾಮಗಳಲ್ಲಿ ಜನವಸತಿಯ ಮನೆಗಳು ಒಂದು ಗುಂಪಿನಲ್ಲಿರದೆ ಅವು ಸಾಲು ಸಾಲಾಗಿ ಕಟ್ಟಲ್ಪಟ್ಟಿರುತ್ತವೆ. ಈ ತರಹದ ಗ್ರಾಮಗಳನ್ನು ನಾವು ಹೆಚ್ಚಾಗಿ ಹೊಳೆ ಹಳ್ಳಗಳ ದಡದಲ್ಲಿ, ಸಾಗರದ ತೀರದಲ್ಲಿ, ಸರೋವರಗಳ ಅಂಚಿನಲ್ಲಿ, ಕಾಲುವೆ ಹಾಗೂ ಪ್ರಮುಖ ರಾಜಮಾರ್ಗಗಳ ಎಡ ಬಲದಲ್ಲಿ ಕಾಣಬಹುದು.

ಸಾಲು ಮನೆ ಗ್ರಾಮಗಳು ಮಾನವನ ಇತಿಹಾಸದಲ್ಲಿ ಅತಿ ಪ್ರಾಮುಖ್ಯ ಪಾತ್ರವನ್ನು ವಹಿಸಿವೆ. ಅವುಗಳನ್ನು ಮಾನವ ಸಂಸ್ಕೃತಿಯ ತೊಟ್ಟಿಲುಗಳೆಂದೇ ಕರೆಯಲಾಗುತ್ತದೆ. ಡೆನೊಬೊ ನದಿ ತೀರದ ರೋಮ್ ಸಂಸ್ಕೃತಿ, ನೈಲ್ ನದಿ ತೀರದ ಈಜಿಪ್ಟ್

ಸಂಸ್ಕೃತಿ, ಸಿಂಧೂ ನದಿ ತೀರದ ಸಿಂಧೂ ಸಂಸ್ಕೃತಿ ಈ ಸಂದರ್ಭದಲ್ಲಿ ಕೊಡಬಹುದಾದ ಕೆಲ ಉದಾಹರಣೆಗಳು. ಇಂದಿನ ಆಧುನಿಕ ಜಗತ್ತಿನಲ್ಲಿಯೂ ಕೂಡ ಜಗತ್ಪ್ರಸಿದ್ಧವಾದ ಮಹಾನ್ ನಗರಗಳೂ ಕೂಡ ನದಿ ತೀರಗಳಲ್ಲಿಯೇ ನೆಲೆಗೊಂಡಿರುವುದಕ್ಕೆ ನಿದರ್ಶನಗಳಾಗಿ ಲಂಡನ್ (ಥೇಮ್ಸ್), ನ್ಯೂಯಾರ್ಕ್ (ಹಡ್ಸನ್), ಮಾಸ್ಕೊ (ವೋಲ್ಗಾ) ಮತ್ತು ದೆಹಲಿ (ಯಮುನಾ) ನಗರಗಳನ್ನು ನೀಡಬಹುದು.

ಸಾಲು ಮನೆ ಗ್ರಾಮಗಳು ಅತಿ ಪ್ರಾಚೀನ ಇತಿಹಾಸವನ್ನು ಹೊಂದಿದ್ದರೂ ಕೂಡ ಅವು ಗುಂಪು-ಮನೆ ಗ್ರಾಮಗಳ ಸಮಕಾಲೀನ ಗ್ರಾಮಗಳೆಂದು ಹೇಳಲಾಗದು. ಗುಂಪು-ಮನೆ ಗ್ರಾಮಗಳ ಅಸ್ತಿತ್ವಕ್ಕೆ ಬಂದ ತುಸು ಕಾಲದ ನಂತರ ಅವು ಬೆಳೆದು ಬಂದವೆನ್ನಬಹುದು. ಈ ಬಗೆಯ ಗ್ರಾಮಗಳು ಹೆಚ್ಚಾಗಿ ಫ್ರಾನ್ಸ್‌ನಲ್ಲಿ ಕಂಡುಬರುವುದನ್ನು ಅವಲೋಕಿಸಬಹುದಾಗಿದೆ.

ಸಾಲು ಮನೆ ಗ್ರಾಮಗಳು ಹೆಚ್ಚಾಗಿ ನದಿ, ಹಳ್ಳ, ಸರೋವರ, ಸಮುದ್ರ ಇತ್ಯಾದಿ ನೀರಿನ ಸಂಗ್ರಹದ ಅಂಚಿನಲ್ಲಿ ಹೇಗೆ ಮತ್ತು ಏಕೆ ಉಗಮವಾದವು ಎಂಬ ವಿಷಯವನ್ನು ಅವಲೋಕಿಸೋಣ. ಹೀಗಾಗಲು ಮುಖ್ಯ ಕಾರಣಗಳೆಂದರೆ;

- ಮೊಟ್ಟ ಮೊದಲನೆಯ ಕಾರಣವೆಂದರೆ ನೀರಿನ ಪೂರೈಕೆ. ಹೊಳೆ-ಹಳ್ಳ ಇತ್ಯಾದಿ ನೀರಿನ ಸಂಗ್ರಹಗಳು ಮಾನವನಿಗೆ, ಆತನು ಸಾಕಿದ ಪಶು ಪಕ್ಷಿಗಳಿಗೆ ಹಾಗೂ ಸಾಗುವಳಿ ಮಾಡುವ ಜಮೀನಿಗೆ ಅತಿ ಅವಶ್ಯವಾದ ನೀರಿನ ಪೂರೈಕೆಯ ಭರವಸೆದಾಯಕ ಸಂಪನ್ಮೂಲಗಳಾಗಿದ್ದವು. ಹೀಗಾಗಿ ನದಿ ತೀರದಲ್ಲಿ ವಾಸಿಸುವ ಜನರು ನದಿತೀರದಾಚೆಗೆ ವಾಸಿಸುವ ಜನರಿಗಿಂತ ಹೆಚ್ಚು ನಿಸರ್ಗ ವಿಕೋಪಗಳಾದ ಬರಗಾಲ, ಅನಾವೃಷ್ಟಿಗಳಿಂದ ಅಭಾದಿತರಾಗಿದ್ದರು.
- ನದಿ ತೀರದ ಫಲವತ್ತಾದ ಭೂಮಿಯೂ ಕೂಡ ವ್ಯವಸಾಯವು ಪ್ರಗತಿ ಹೊಂದಲು ಸೂಕ್ತವಾಗಿದೆ. ಫಲವತ್ತು ಭೂಮಿ ಹಾಗೂ ಸತತ ನೀರಿನ ಪೂರೈಕೆಯಿಂದ ಈ ಗ್ರಾಮಗಳು ಕಾಳಿನ ಕಣಜಗಳಾಗಿ ಪರಿವರ್ತನೆಗೊಂಡವು. ಹೀಗಾಗಿ ಇಂತಹ ಗ್ರಾಮಗಳನ್ನು ವಲಯಗಳಿಗೆ 'ಬತ್ತದ ಕಣಜ' 'ಗೋದಿಯ ಕಣಜ' 'ಹತ್ತಿಯ ಕಣಜ' ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ.
- ಜಲ ಸಂಗ್ರಹದ ಬದಿಯಲ್ಲಿ ಗ್ರಾಮಗಳ ಉಗಮಕ್ಕೆ ಮೂರನೆಯ ಕಾರಣವೆಂದರೆ ಸಾರಿಗೆಯ ಅನುಕೂಲತೆಗಳು. ಸಾರಿಗೆಯಲ್ಲಿ ಮೂರು ಮುಖ್ಯ ಮಾರ್ಗಗಳಿವೆ. ಅವು ಯಾವುವು ಎಂದರೆ ರಸ್ತೆ ಸಾರಿಗೆ, ವಾಯು ಸಾರಿಗೆ ಹಾಗೂ ಜಲ ಸಾರಿಗೆ, ಈ ಮೂರು ತೆರನಾದ ಸಾರಿಗೆಗಳಲ್ಲಿ ಜಲ ಸಾರಿಗೆ ಅತ್ಯಂತ ಕಡಿಮೆ ಖರ್ಚಿನದೆಂದು ಹೇಳಬಹುದು. ಹೀಗಾಗಿ ಗ್ರಾಮಗಳು ಜಲ ಸಂಗ್ರಹದ ಮಗ್ಗುಲಿನಲ್ಲಿ ಉಗಮಗೊಂಡವು.
- ಜಲ ಸಂಗ್ರಹವು ಮೀನು ಮುಂತಾದ ಜಲವಾಸಿ ಜೀವಿಗಳ ರೂಪದಲ್ಲಿ ಆಹಾರವನ್ನು ಒದಗಿಸುತ್ತದೆ. ಹೀಗಾಗಿ ಜಲ ಸಂಗ್ರಹದ ಬದಿಯಲ್ಲಿನ ಲಂಬಾಕಾರದ ಗ್ರಾಮಗಳ ನಿವಾಸಿಗಳು ತಮ್ಮ ಆಹಾರ ಸಂಗ್ರಹವನ್ನು ಜಲವಾಸಿ ಜೀವಿಗಳಿಂದ ಹೆಚ್ಚಿಸಿಕೊಳ್ಳಬಹುದಾಗಿತ್ತು.
- ಆದಿಕಾಲದ ಜನರು ಜಲಸಂಗ್ರಹದ ಬದಿಯಲ್ಲಿ ಗ್ರಾಮಗಳನ್ನು ಸ್ಥಾಪಿಸಲು ಇನ್ನೊಂದು ಮುಖ್ಯ ಕಾರಣವೆಂದರೆ ಸುರಕ್ಷಿತತೆ. ಕಾಡು ಮೃಗಗಳು, ಕಳ್ಳಕಾಕರು, ವೈರಿಗಳು ಹಾಗೂ ಕಾಡಿನ ಬೆಂಕಿ, ನೀರಿನ ಸಂಗ್ರಹವಿರುವ ದಿಕ್ಕಿನಿಂದ ಬಂದು ಗ್ರಾಮವಾಸಿಗಳ ಮೇಲೆ ಹಲ್ಲೆ ಮಾಡುವುದು ಕಷ್ಟಸಾಧ್ಯವಾದ್ದರಿಂದ ಕನಿಷ್ಟ ಪಕ್ಷ ಒಂದು ದಿಕ್ಕಿನಿಂದಾದರೂ ಗ್ರಾಮಸ್ಥರು ಸುರಕ್ಷಿತರಾಗಿದ್ದರು.

ಹೀಗಾಗಿ ಹೊಳೆದಂಡೆಯಲ್ಲಿದ್ದ ಗ್ರಾಮಗಳ ನಿವಾಸಿಗಳು ತಮ್ಮ ಗ್ರಾಮಗಳನ್ನು ಭೂಸ್ವರ್ಗಗಳೆಂದೇ ಭಾವಿಸುವುದಲ್ಲದೆ ಅವುಗಳ ಬಗ್ಗೆ ಅಪಾರ ಪ್ರೀತಿ-ಒಲುಮೆ, ಹೆಮ್ಮೆಯನ್ನು ಹೊಂದಿರುತ್ತಾರೆ. ಈ ವಿಷಯವನ್ನು ಕುರಿತು ಚರ್ಚಿಸುವಾಗ ಬಾಗಲಕೋಟೆಯ ಕೃಷ್ಣಾ ನದಿಗೆ ಅಡ್ಡವಾಗಿ ಕಟ್ಟಿದ ಆಲಮಟ್ಟಿ ಅಣೆಕಟ್ಟೆಯನ್ನು ಪೂರ್ಣಗೊಳಿಸಿ ಜಲ-ಸಂಗ್ರಹ ವಲಯದಲ್ಲಿದ್ದ ನದಿ ತೀರದ ಅನೇಕ ಗ್ರಾಮಗಳನ್ನು ತೆರವು ಮಾಡುವಾಗ ಜರುಗಿದ ಮನ ಕಲಕುವ ದೃಶ್ಯವು ನೆನಪಿಗೆ ಬರುತ್ತದೆ. ಈ ನದಿ ತೀರದಲ್ಲಿ ವಾಸಿಸುವ ಗ್ರಾಮಸ್ಥರಿಗೆ

ಬೇರೆ ಕಡೆಗಳಲ್ಲಿ ಮರು ನಿವೇಶನಾ ವ್ಯವಸ್ಥೆ ಮಾಡಿ ಅವರಿಗೆ ಈ ಪ್ರದೇಶವೆಲ್ಲ ಜಲಾವೃತವಾಗುತ್ತದೆ, ನೀವೆಲ್ಲರೂ ನಿಮ್ಮ ನಿಮ್ಮ ಗ್ರಾಮಗಳನ್ನು ತೊರೆದು ಹೊಸದಾಗಿ ನಿರ್ಮಿಸಿದ ಗ್ರಾಮಗಳಿಗೆ ಹೋಗಿ ಎಂದು ಅನೇಕ ಬಾರಿ ತಾಕೀತು ಮಾಡಿದರೂ ಸಹಿತ ಆ ಜನರು ತಮ್ಮ ಪ್ರೀತಿಯ ಗ್ರಾಮಗಳನ್ನು ಬಿಟ್ಟು ಹೋಗಲು ಸರ್ವಥಾ ಸಿದ್ಧರಿರಲಿಲ್ಲ. ಕೆಲ ಗ್ರಾಮಗಳಲ್ಲಂತೂ ಜಲಾಶಯದ ನೀರು ಅವರ ಮನೆಗಳ ಹೊಸ್ತಿಲನ್ನು ತಲುಪಿದರೂ ಕೂಡ ಅವರು ತಮ್ಮ ನೆಚ್ಚಿನ ಗ್ರಾಮವನ್ನು ತ್ಯಜಿಸಲು ಸಿದ್ಧರಿರಲಿಲ್ಲ. ಹೀಗಾಗಿ ಅಧಿಕಾರಿಗಳು ಅವರನ್ನು ಬಲಾತ್ಕಾರವಾಗಿ ಹೊತ್ತು ಲಾರಿಗಳಲ್ಲಿ ಕುಳ್ಳಿರಿಸಿ ಬೇರೆ ಕಡೆಗೆ ಕರೆದೊಯ್ಯುವ ಪ್ರಸಂಗ ಬಂದೊದಗಿತು. ಬಲಾತ್ಕಾರದಿಂದ ಹೊತ್ತೊಯ್ಯುತ್ತಿರುವಾಗ 'ಸಾಹೇಬರೆ ನಮ್ಮನ್ನು ನಮ್ಮ ಪಾಡಿಗೆ ಬಿಟ್ಟು ಬಿಡ್ರಿ, ನಮ್ಮ ಹಳ್ಳಿ ಕೂಡ ನಾವೂ ಮುಳುಗಿ ಸಾಯತೀವಿ' ಎಂಬ ಅವರ ಆಕ್ರಂದನ ಕರಳು ಕಿವಚಿದಂತಿತ್ತು.

## ಅನಾನುಕೂಲತೆಗಳು

ಮೇಲೆ ಕಾಣಿಸಿದ ವಿಷಯಗಳು ಸಾಲು-ಮನೆ ಗ್ರಾಮಗಳ ಅನುಕೂಲತೆಗಳನ್ನು ಸೂಚಿಸುತ್ತವೆ. ಆದರೆ ಇಂತಹ ಗ್ರಾಮಗಳು ತಮ್ಮದೆ ಆದ ಅನಾನುಕೂಲತೆಗಳನ್ನೂ ಹೊಂದಿವೆ. ಅವು ಯಾವುವು ಎಂದರೆ ;

ಚದುರಿದ ಮನೆಗಳುಳ್ಳ ಗ್ರಾಮಗಳಂತೆ ಇಂತಹ ಗ್ರಾಮಗಳು ಕೂಡ ಸಾಮೂಹಿಕ ಜೀವನದ ಕೆಲವೊಂದು ಆರ್ಥಿಕ ಅನುಕೂಲತೆಯಿಂದ ವಂಚಿತವಾಗಿರುತ್ತವೆ. ಈ ಗ್ರಾಮಗಳಲ್ಲಿ ಮನೆಗಳು ಒಂದು ಸ್ಥಳದಲ್ಲಿ ಗುಂಪು ಗುಂಪಾಗಿ ರಚಿತವಾಗಿರುವುದಿಲ್ಲವಾದ್ದರಿಂದ ಅಲ್ಲಿ ಒಂದೇ ಶಾಲೆ, ಒಂದೇ ಅಂಚೆ ಕಛೇರಿ, ಒಂದೇ ಆಸ್ಪತ್ರೆ, ಒಂದೇ ಸಹಕಾರಿ ಸಂಘ ಇತ್ಯಾದಿಗಳನ್ನು ಹೊಂದುವುದು ಅಸಾಧ್ಯ. ಆದ್ದರಿಂದ ಇಂತಹ ಗ್ರಾಮಸ್ಥರು ಈ ಎಲ್ಲಾ ಸೌಕರ್ಯಗಳನ್ನು ಪಡೆಯುವಲ್ಲಿ ಅಪಾರ ಸಮಯ, ಹಣ ಹಾಗೂ ಶಕ್ತಿಯನ್ನು ವಿನಿಯೋಗಿಸಬೇಕಾಗುವುದು.

ಕೆಲವೊಂದು ಸಲ ಅವರ ಜೀವನದ ಮೂಲಾಧಾರವಾದ ಜಲ ಸಂಗ್ರಹವೇ ಅವರಿಗೆ ಕುತ್ತಾಗಿ ಸಾವಾಗಿ ಪರಿಣಮಿಸುವ ಪ್ರಸಂಗಗಳೂ ಬಂದೊದಗುತ್ತವೆ. ಮಹಾಪೂರ ಹಾಗೂ ಸುಂಟರಗಾಳಿಗಳು ಕೆಲವೊಂದು ಸಲ ಈ ಗ್ರಾಮಗಳನ್ನು ನಾಶಮಾಡಿ ಅಲ್ಲಿನ ಜನರನ್ನು ಅತೀವ ಸಂಕಟಕ್ಕೆ ಒಳಪಡಿಸುತ್ತವೆ. ಸ್ವಾಭಾವಿಕ ವಿಪತ್ತುಗಳು ಇಂದು ಹೇಗೆ ಸಂಭವಿಸುತ್ತವೆಯೋ ಅದೇ ಮಾದರಿಯಲ್ಲಿ ಅಂದು ಸಂಭವಿಸುತ್ತಿದ್ದವು. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮಾನವ ಏನೆಲ್ಲಾ ಮುನ್ನಡೆ ಸಾಧಿಸಿದ್ದಾಗ್ಯೂ ಪ್ರಕೃತಿಯ ಅಂದ ಶಕ್ತಿಗಳನ್ನು ಪಳಗಿಸಲಾಗಲಿಲ್ಲ.

## ಭಾರತದಲ್ಲಿ ಕಂಡುಬರುವ ಗ್ರಾಮ ವಿನ್ಯಾಸಗಳು

ಭಾರತ ದೇಶದಲ್ಲಿ ಮೂರು ಬಗೆಯ ಗ್ರಾಮ ವಿನ್ಯಾಸಗಳನ್ನು - ಗುಂಪು ಮನೆಗಳುಳ್ಳ, ಚದುರಿದ ಮನೆಗಳುಳ್ಳ ಹಾಗೂ ಸಾಲು ಮನೆಗಳುಳ್ಳ ಗ್ರಾಮಗಳನ್ನು ಕಾಣಬಹುದು. ಆದರೆ ಈ ಮೂರು ಪ್ರಕಾರದ ವಿನ್ಯಾಸಗಳಲ್ಲಿ ಮೊದಲನೆ ಪ್ರಕಾರದ ಅಂದರೆ ಗುಂಪು ಮನೆಗಳುಳ್ಳ ಗ್ರಾಮಗಳೆ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತವೆ. ಅಷ್ಟು ಮಾತ್ರವಲ್ಲ ಅವು ಭಾರತದ ಯಾವುದೆ ಒಂದು ಭಾಗಕ್ಕೆ ಸೀಮಿತವಾಗಿರದೆ ಭಾರತದ ಎಲ್ಲ ಪ್ರದೇಶಗಳಲ್ಲಿ ಕಂಡು ಬರುತ್ತವೆ. ಆದರೆ ಅವುಗಳ ರಚನೆಯು ನಾವು ಹಿಂದೆ ಕಾಣಿಸಿದ ರೇಖಾಚಿತ್ರಕ್ಕೆ (ಡಾಯ್‌ಗ್ರ್ಯಾಮ್) ನೂರಕ್ಕೆ ನೂರರಷ್ಟು ಸರಿಹೊಂದುವುದಿಲ್ಲ. ಭಾರತದಲ್ಲಿ ಅತಿಯಾಗಿ ಬೆಳೆಯುತ್ತಿರುವ ಜನಸಂಖ್ಯಾ ಒತ್ತಡದಿಂದ ಗ್ರಾಮಗಳ ಅಂಚಿನಲ್ಲಿರುವ ಹುಲ್ಲುಗಾವಲು ಹಾಗೂ ಅರಣ್ಯ ಪ್ರದೇಶಗಳು ಒತ್ತುವರಿಗೆ ಒಳಗಾಗಿ ಈಗ ಕಣ್ಮರೆಯಾಗಿವೆ.

ಚದುರಿದ ಮನೆಗಳುಳ್ಳ ಗ್ರಾಮಗಳನ್ನು ನಾವು ಭಾರತದ ವಿವಿಧ ಕಡೆಗಳಲ್ಲಿ ಕಾಣಬಹುದು. ಆದರೆ ಗಮನಿಸಬೇಕಾದ ಒಂದು ವಿಷಯವೆಂದರೆ ಹೆಚ್ಚಾಗಿ ಕಂಡು ಬರುತ್ತಿದ್ದ ಈ ಗ್ರಾಮಗಳು ನದಿಕೊಳ್ಳಗಳಲ್ಲಿ, ಪರ್ವತಗಳ ತಪ್ಪಲು ಪ್ರದೇಶಗಳಲ್ಲಿ,

ದಂಡಕಾರಣ್ಯಗಳಲ್ಲಿ ಹಿಂದೆ ಗಿರಿಜನರ ಮೂಲ ವಾಸಸ್ಥಾನಗಳಾಗಿದ್ದವೆಂಬುದು ಒಂದು ಗಮನಾರ್ಹ ಸಂಗತಿ. ಆದರೆ ಆ ಪ್ರದೇಶಗಳಲ್ಲಿ ಈಗ ಕಂಡುಬರುವ ಚದುರಿದ ಮನೆಗಳ ಗ್ರಾಮಗಳಲ್ಲಾಗಲಿ, ಹೊಲಮನೆಗಳಲ್ಲಾಗಲಿ ವಾಸಿಸುವವರು ಗಿರಿಜನರಾಗಿರದೆ ಅತ್ಯಂತ ಶ್ರೀಮಂತರಾದ ಚಹ ತೋಟದ, ಕಾಫಿ ತೋಟದ, ರಬ್ಬರ್ ತೋಟದ ಒಡೆಯರು ಇದ್ದಾರೆ. ಹೀಗೇಕಾಯಿತು ? ಗಿರಿಜನರ ಈ ಪ್ರದೇಶಗಳು ಧಣಿಗಳ ಸ್ವಾಧೀನಕ್ಕೆ ಏಕೆ, ಹೇಗೆ ಮತ್ತು ಯಾವಾಗ ಬಂದವು ? ಈ ಪ್ರಶ್ನೆಗಳ ಹಿಂದೆ ಒಂದು ದಾರುಣ ಕಥೆ ಇದೆ.

ಚದುರಿದ ಮನೆಗಳುಳ್ಳ ಗ್ರಾಮಗಳಿಂದ ತುಂಬಿದ ಅಮೆರಿಕ, ಆಸ್ಟ್ರೇಲಿಯಾ, ಕೆನಡಾ, ನ್ಯೂಜಿಲ್ಯಾಂಡ್ ಇತ್ಯಾದಿ ದೇಶಗಳಲ್ಲಿ ಯುರೋಪಿನ ಬಿಳಿಯರು ಆದಿವಾಸಿಗಳ ಜಮೀನುಗಳನ್ನು ಕಬಳಿಸಿದ ದುರಂತವು ನಮ್ಮ ದೇಶದಲ್ಲಿಯೂ ನಡೆಯಿತು. ಆದರೆ ಇಲ್ಲಿನ ಇತಿಹಾಸಕ್ಕೆ ಒಂದು ಭಿನ್ನತೆ ಇದೆ. ಆ ದೇಶಗಳಲ್ಲಿ ಮದ್ದು-ಗುಂಡು, ಬಂದೂಕು-ತುಪಾಕಿಗಳು ಸಾಧಿಸಿದ ಕೆಲಸವನ್ನು ಭಾರತದಲ್ಲಿ ಲೇಖನಿಯು ಸಾಧಿಸಿತು. ಅಲ್ಲಿ ರಕ್ತಕ್ರಾಂತಿಯಾದರೆ ಇಲ್ಲಿ ಯುಕ್ತಿಕ್ರಾಂತಿಯಾಯಿತು. ಸಾವಿರಾರು ವರ್ಷಗಳಿಂದ ಆ ಪ್ರದೇಶಗಳಲ್ಲಿ ವಾಸಿಸುತ್ತ ಬಂದಿರುವ ಮುಗ್ಧ ನಿರಕ್ಷರ ಗಿರಿವಾಸಿಗಳನ್ನು 'ಅತಿ ಸುಧಾರಿತ' 'ಒಳ್ಳೆಯ ಸಂಸ್ಕೃತಿಯನ್ನು ಹೊಂದಿದ' 'ವಿದ್ಯಾವಂತರಾದ' ಉಚ್ಚ ವರ್ಗದ' ಜನರು ಮೋಸಮಾಡಿ ಇಲ್ಲದ ಕಾಗದ ಪತ್ರ ದಾಖಲೆಗಳನ್ನು ಸೃಷ್ಟಿಸಿ ಅವರ ಜಮೀನುಗಳನ್ನು ಲಪಟಾಯಿಸಿ ಅಲ್ಲಿ ಚದುರಿದ ಮನೆಗಳುಳ್ಳ ಗ್ರಾಮಗಳನ್ನು ಅಥವಾ ಹೊಲ ಮನೆಗಳನ್ನು ಸ್ಥಾಪಿಸಿದರು. ತಮ್ಮ ಜಮೀನುಗಳನ್ನು ಕಳೆದುಕೊಂಡ ಆದಿವಾಸಿಗಳು ಈ ಮಾಲೀಕರ ಜೀತದಾಳುಗಳಾಗಬೇಕಾಯಿತು.

ಜಗತ್ತಿನ ಇನ್ನಿತರ ದೇಶಗಳಲ್ಲಿದ್ದಂತೆ ಭಾರತದಲ್ಲಿಯೂ ಸಾಲು ಮನೆಗಳುಳ್ಳ ಗ್ರಾಮಗಳು ಹೊಳೆ ದಂಡೆ, ಕಾಲುವೆಗಳ ಮಗ್ಗಲು, ರಾಜಮಾರ್ಗಗಳ ಇಬ್ಬದಿಗೆ ಕಂಡುಬರುತ್ತವೆ.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ.

1. 'ಗ್ರಾಮಗಳ ಉಗಮಕ್ಕೆ ನೆಲೆಯೂರಿದ ಜೀವನ ಅತ್ಯವಶ್ಯ' ಚರ್ಚಿಸಿ.

'ಸರಿ' ಅಥವಾ 'ತಪ್ಪು' ಗುರುತಿಸಿ.

2. ಅ. ಮಾನವನು ಬೂದಿ ಸಾಗುವಳಿ ಹಂತವನ್ನು ತಲುಪಿದಾಗ ನೆಲೆಯೂರಿದ ಜೀವನವು ಸಾಧ್ಯವಾಯಿತು.
   ಆ. ಪಶು ಸಂಗೋಪನೆಯು ನೆಲೆಯೂರಿದ ಜೀವನಕ್ಕೆ ನಾಂದಿಯಾಯಿತು.
   ಇ. ಚದುರಿದ ಮನೆಗಳುಳ್ಳ ಗ್ರಾಮಗಳು ಅತಿ ಪ್ರಾಚೀನವಾದ ಗ್ರಾಮಗಳು.
   ಈ. ಸಾಲು ಮನೆಗಳುಳ್ಳ ಗ್ರಾಮಗಳು ಮಾನವನ ಸಂಸ್ಕೃತಿಯ ತೊಟ್ಟಿಲುಗಳು.

ಸರಿ ಉತ್ತರವನ್ನು ಆಯ್ಕೆ ಮಾಡಿ.

3. ಅ. ಮಾನವನು ಉಪಕರಣಗಳನ್ನು ನಿರ್ಮಿಸಿ ಅವುಗಳನ್ನು ಉಪಯೋಗಿಸುವ ಏಕ ಮಾತ್ರ ಪ್ರಾಣಿ.
   ಆ. ರೈತವಾರಿ ಗ್ರಾಮಗಳು ಉತ್ತರ ಭಾರತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ.
   ಇ. ಸಾಹಸಿ ಪ್ರವೃತ್ತಿಯು ಗುಂಪು ಮನೆಗಳುಳ್ಳ ಗ್ರಾಮಗಳಲ್ಲಿ ಕಂಡು ಬರುವ ಒಂದು ಮುಖ್ಯ ಗುಣಲಕ್ಷಣ.
   ಈ. ಭಾರತದಲ್ಲಿ ರೈತವಾರಿ ಗ್ರಾಮಗಳೇ ಮೊದಲು ಉಗಮವಾದವೆಂದು ಸರ್ ಹೆನ್ರಿ ಮೆನ್ ಅವರು ಅಭಿಪ್ರಾಯಪಟ್ಟರು.

## 3.7 ಸಾರಾಂಶ

ನೆಲೆಯೂರಿದ ಜೀವನವು ಗ್ರಾಮಗಳ ಉಗಮಕ್ಕೆ ಅತ್ಯವಶ್ಯ. ಆದಿಮಾನವರು ಸಾಮಾಜಿಕ ವಿಕಾಸದ ಮೊದಲು ಮೂರು ಹಂತಗಳಲ್ಲಿ ಎಂದರೆ ಆಹಾರ ಸಂಗ್ರಹಣಾ ಹಂತ, ಬೇಟೆಯಾಡುವ ಹಂತ, ಹುಲ್ಲುಗಾವಲು ಹಂತ ಹಾಗೂ ಬೂದಿ ಸಾಗುವಳಿ ಹಂತಗಳಲ್ಲಿ ಅಲೆಮಾರಿ ಜೀವನ ನಡೆಸುವುದು ಅನಿವಾರ್ಯವಾದ್ದರಿಂದ ಆ ಹಂತಗಳಲ್ಲಿ ಗ್ರಾಮಗಳು ಅಸ್ತಿತ್ವಕ್ಕೆ ಬರುವುದು ಅಸಾಧ್ಯವಾಗಿತ್ತು. ಹೀಗಾಗಿ ಆದಿ ಮಾನವರು ವ್ಯವಸಾಯಕ್ಕೆ ಅತ್ಯವಶ್ಯವಾದ ಉಪಕರಣಗಳಾದ ಗುದ್ದಲಿ-ನೇಗಿಲು (ರಂಟೆ-ಕುಂಟೆ)ಗಳನ್ನು ಕಂಡುಹಿಡಿದಾಗ ಮಾತ್ರ ನೆಲೆಯೂರಿದ ಜೀವನವು ಸಾಧ್ಯವಾಯಿತು. ಅಲ್ಲದೆ ಗ್ರಾಮಗಳು ಕೂಡ ಅಸ್ತಿತ್ವಕ್ಕೆ ಬರುವಂತಾಯಿತು.

ಗ್ರಾಮ ವಿನ್ಯಾಸ ಅರ್ಥಾತ್ ಗ್ರಾಮಗಳಲ್ಲಿನ ಮನೆಗಳು ಪರಸ್ಪರ ಹಾಗೂ ಸಾಗುವಳಿ ಮಾಡುವ ಭೂಮಿಯೊಂದಿಗೆ ಹೊಂದಿದ ಸಂಬಂಧ, ಮೂರು ಪ್ರಕಾರಗಳನ್ನು ಹೊಂದಿವೆ. ಅವು ಯಾವುವು ಎಂದರೆ ಗುಂಪು ಮನೆಗಳುಳ್ಳ ಗ್ರಾಮಗಳು, ಚದುರಿದ ಮನೆಗಳುಳ್ಳ ಗ್ರಾಮಗಳು ಹಾಗೂ ಸಾಲು ಮನೆಗಳುಳ್ಳ ಗ್ರಾಮಗಳು. ಭೌಗೋಳಿಕ, ಆರ್ಥಿಕ, ಐತಿಹಾಸಿಕ, ಹಾಗೂ ಸಾಮಾಜಿಕ - ಸಾಂಸ್ಕೃತಿಕ ಕಾರಣಗಳು ಗ್ರಾಮಗಳ ವಿನ್ಯಾಸವನ್ನು ನಿರ್ಣಯಿಸುತ್ತವೆ. ಆದ್ದರಿಂದ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆಯಾದ ಗ್ರಾಮ ವಿನ್ಯಾಸವನ್ನು ಕಾಣುತ್ತೇವೆ. ಈ ಮೂರು ಗ್ರಾಮ ವಿನ್ಯಾಸ ಪ್ರಕಾರಗಳು ತಮ್ಮದೆ ಆದ ಅನುಕೂಲತೆ ಹಾಗೂ ಅನಾನುಕೂಲತೆಗಳನ್ನು ಹೊಂದಿವೆ. ಗ್ರಾಮ ವಿನ್ಯಾಸವು ಒಂದು ಜನಾಂಗದ ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗವಾಗಿರುವುದರಿಂದ 'ಸುಧಾರಕರು' ಈ ಬಗ್ಗೆ ಯಾವುದೆ ಬದಲಾವಣೆಗಳನ್ನು ಕೈಗೊಳ್ಳುವಾಗ ಈ ವಿಷಯವನ್ನು ನೆನಪಿನಲ್ಲಿಡುವುದು ಸೂಕ್ತ.

## 3.8 ಪ್ರಮುಖ ಪದಗಳು

**ಅಲೆದಾಟ ಅಲೆತ (Peripatetic) :** ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸುವುದು.

**ಸಾರಿಗೆ ಪ್ರಾಣಿಗಳು (Draught animals) :** ಭಾರಿ ಹೊರೆಯನ್ನು ಸಾಗಿಸಲು ಬಳಸುವ ಪ್ರಾಣಿಗಳು.

**ಹರವು (Broadcast) :** ಬೀಜಗಳನ್ನು ಸಾಲಾಗಿ ಬಿತ್ತುವುದಕ್ಕೆ ಬದಲಾಗಿ ಬೀಜಗಳನ್ನು ಚೆಲ್ಲುವುದು.

**ಬೇಟೆಯಾಟ (Game) :** ಕ್ರೂರ ಪ್ರಾಣಿಗಳನ್ನು ಆಹಾರಕ್ಕಾಗಿ ಬೇಟೆಯಾಡುವುದು.

**ಅಪಹರಿಸುವಿಕೆ (Usurpation) :** ಕಾನೂನುಬಾಹಿರವಾಗಿ ಅಥವಾ ಬಲಾತ್ಕಾರವಾಗಿ ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವುದು.

**ಮೂಲ ಪ್ರವರ್ತಕ (Pioneer) :** ಹೊಸ ಪ್ರದೇಶದಲ್ಲಿ ನೆಲೆಯೂರಿದವನು ಅಥವಾ ಹೊಸ ಪ್ರದೇಶವನ್ನು ಆವಿಷ್ಕಾರ ಮಾಡಿದವನು.

**ಅಂಚು (Abut) :** ನಿರ್ದಿಷ್ಟ ಪ್ರದೇಶದ ಅಕ್ಕ ಪಕ್ಕ ಅಥವಾ ಆಜು ಬಾಜು.

## 3.9 ನಿಮ್ಮ ಪ್ರಗತಿ ಪರೀಕ್ಷೆಗೆ ಉತ್ತರಗಳು

**1.** 3.2 ಮತ್ತು 3.3

**2.** ಅ. ತಪ್ಪು

ಆ. ತಪ್ಪು

ಇ. ತಪ್ಪು

ಈ. ಸರಿ

3. ಅ. ಮಾನವನು ಉಪಕರಣಗಳಷ್ಟು ನಿರ್ಮಿಸಿ ಅವುಗಳನ್ನು ಉಪಯೋಗಿಸುವ ಏಕ ಮಾತ್ರ ಪ್ರಾಣಿ.

## 3.10 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

1. 'ಉತ್ತಿದ ಭೂಮಿಯು ಅಲೆಮಾರಿ ಮಾನವನ ಕಾಲುಗಳನ್ನು ಕಟ್ಟಿ ಹಾಕಿತು' - ಚರ್ಚಿಸಿ.

2. ಭಾರತದ ಮೂಲ ಗ್ರಾಮಗಳ ಬಗ್ಗೆ ಸರ್ ಹೆನ್ರಿ ಮೇನ್ ಹಾಗೂ ಲಾರ್ಡ್ ಬೇಡನ್ ಪಾವೆಲ್ಲರ ನಡುವಿನ ವಿವಾದವನ್ನು ವಿವರಿಸಿ.

3. ಗ್ರಾಮ ವಿನ್ಯಾಸವೆಂದರೇನು ? ವಿವಿಧ ಗ್ರಾಮ ವಿನ್ಯಾಸಗಳ ಮುಖ್ಯ ಗುಣ ವಿಶೇಷಗಳನ್ನು ಬಣ್ಣಿಸಿ.

ಉತ್ತರಗಳು : ನೋಡಿ

1. 3.2, 3.3
2. 3.4
3. 3.5, 3.6

## 3.11 ಸಲಹಾ ಗ್ರಂಥಗಳು


T. Lynn Smith : **The Sociology of Rural Life,** Revised Edition, Harper Brothers, New York and London, 1947.

P.A. Sorokin and C.Zimmerman : **Principles of Rural Urban Sociology,** Henry Halt and Company, New York, 1969.

A.R. Desai : **Rural Sociology in India,** Popular Prakashan, Bombay, 1994.

Henry Sumner Maine : **Village Communities in the East and West,** London, 1876.

Baden Powell : **Indian Village Community,** New Haven, 1957.

A.E. Punit : **Social Systems in Rural India**, Sterling Publishers, New Delhi, 1978.



ಡಾ.ಎ.ಇ. ಪುನೀತ, ನಿವೃತ್ತ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

## ಘಟಕ 4 : ಗ್ರಾಮೀಣ ಸಮಾಜ ; ಗುಣಲಕ್ಷಣಗಳು, ಗ್ರಾಮ-ನಗರ ತುಲನೆ, ಗ್ರಾಮ ನಗರಗಳ ಸಾತತ್ಯ, ಗ್ರಾಮ ನಗರಗಳ ಪರಸ್ಪರಾವಲಂಬನೆ

ರಚನೆ


4.0 ಉದ್ದೇಶಗಳು

4.1 ಪರಿಚಯ

4.2 ಗ್ರಾಮೀಣ ಸಮಾಜದ ಗುಣಲಕ್ಷಣಗಳು

4.3 ಗ್ರಾಮ-ನಗರ ತುಲನೆ

4.4 ಗ್ರಾಮ-ನಗರಗಳ ಸಾತತ್ಯ

4.5 ಗ್ರಾಮ-ನಗರಗಳ ಪರಸ್ಪರಾವಲಂಬನೆ

4.6 ಸಾರಾಂಶ

4.7 ಪ್ರಮುಖ ಪದಗಳು

4.8 ನಿಮ್ಮ ಪ್ರಗತಿ ಪರೀಕ್ಷೆಗೆ ಉತ್ತರಗಳು

4.9 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

4.10 ಸಲಹಾ ಗ್ರಂಥಗಳು

## 4.0 ಉದ್ದೇಶಗಳು

ಈ ಘಟಕದಲ್ಲಿ ಗ್ರಾಮಗಳ ಗುಣಲಕ್ಷಣಗಳನ್ನು ಪರಿಚಯಿಸಿ ಗ್ರಾಮ-ನಗರಗಳ ಒಂದು ತೌಲನಿಕ ವಿಶ್ಲೇಷಣೆಯನ್ನು ಮಾಡಲಾಗಿದೆ. ಈ ವಿಶ್ಲೇಷಣೆಯು ಗ್ರಾಮಗಳ ಗುಣ ವೈಶಿಷ್ಟ್ಯಗಳನ್ನು ಎತ್ತಿ ತೋರಿಸುವುದಲ್ಲದೆ ಗ್ರಾಮ-ನಗರಗಳ ಸಾತತ್ಯ (Continuum)ದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಈ ಸಾತತ್ಯ ವಲಯದಲ್ಲಿರುವ ಸಮೂಹಗಳು ಗ್ರಾಮ ಹಾಗೂ ನಗರಗಳ ಗುಣಲಕ್ಷಣಗಳನ್ನು ಸಮಪಾಲಾಗಿ ಹೊಂದಿರುವುದರಿಂದ ಅವುಗಳನ್ನು ಗ್ರಾಮಗಳಿಂದಾಗಲೀ ಅಥವಾ ನಗರಗಳಿಂದಾಗಲೀ ಖಚಿತವಾಗಿ ಗುರುತಿಸುವುದು ಕಷ್ಟ ಸಾಧ್ಯ. **ಈ ಘಟಕದಲ್ಲಿನ ವಿಷಯಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದಾಗ ನೀವು ;**

- ಗ್ರಾಮ ಸಮುದಾಯಗಳ ವಿಶಿಷ್ಟ ಗುಣಲಕ್ಷಣಗಳನ್ನು ವಿವರಿಸುವವರಿದ್ದೀರಿ.
- ಅಂತಿಮವಾಗಿ ಗ್ರಾಮ-ನಗರ ಸಮುದಾಯಗಳು ಆದರ್ಶ ಪ್ರರೂಪಗಳು ಎನ್ನುವುದರ ಮೇಲೆ ಬೆಳಕು ಚೆಲ್ಲಲು ಶಕ್ತರಾಗುವಿರಿ.
- ಗ್ರಾಮ-ನಗರ ಸಮುದಾಯಗಳ ನಡುವಿನ ಸಾಮಾಜಿಕ ಸಂಬಂಧಗಳ ನಿರಂತರ ಸಾತತ್ಯವನ್ನು ಪ್ರಶಂಸಿಸುವವರಿದ್ದೀರಿ.
- ಗ್ರಾಮ-ನಗರ ಸಮುದಾಯಗಳ ನಡುವಿನ ನಿರಂತರ ಪರಸ್ಪರಾವಲಂಬನೆಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವವರಿದ್ದೀರಿ.

## 4.1 ಪರಿಚಯ

ಗ್ರಾಮ-ನಗರ ಸಮುದಾಯಗಳು ಮಾನವರ ಅತಿ ಪ್ರಮುಖ ನಿವಾಸ ಸ್ಥಾನದ ಆಧಾರಗಳಾಗಿವೆ. ಆದಿ ಮಾನವರು ನೆಲೆಯೂರಿ ನಿಂತ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಗ್ರಾಮಗಳು ದೀರ್ಘವಾದ ಇತಿಹಾಸವನ್ನು ಹೊಂದಿವೆ. ಗ್ರಾಮ-ಗ್ರಾಮಗಳ ನಡುವೆ ಕಾಲ-ಪ್ರದೇಶಕ್ಕನುಗುಣವಾಗಿ ಕೆಲವೊಂದು ವ್ಯತ್ಯಾಸಗಳು ಕಂಡುಬಂದರೂ ಸರ್ವಸಾಧಾರಣವಾಗಿ ಗ್ರಾಮಗಳು ಕೆಲವೊಂದು ನಿಖರ ಗುಣಲಕ್ಷಣಗಳನ್ನು ಹೊಂದಿರುತ್ತವೆ. ಹೀಗಾಗಿ ಆ ಗುಣಲಕ್ಷಣಗಳನ್ನು ಗ್ರಾಮಗಳ ಸಾರ್ವತ್ರಿಕ ಗುಣಲಕ್ಷಣಗಳೆಂದು ಹೇಳಬಹುದು.

ಗ್ರಾಮಗಳಿಗೆ ಹೋಲಿಸಿ ನೋಡಿದಾಗ ನಗರಗಳ ಉಗಮವು ಇತ್ತೀಚಿನದೆಂದು ಹೇಳಲೇ ಬೇಕು. ಪ್ರಾಚೀನ ಕಾಲದಲ್ಲಿಯು ಕೂಡ ರಾಜ-ಮಹಾರಾಜರು ವಾಸವಾಗಿರುವ ಸ್ಥಳ (ರಾಜಧಾನಿ), ಪುಣ್ಯ ಕ್ಷೇತ್ರ, ವ್ಯಾಪಾರ-ವ್ಯವಹಾರಗಳು ನಡೆಯುವ ಮಾರುಕಟ್ಟೆಗಳಿರುವ ಸ್ಥಳ, ಗುರುಕುಲಗಳುಳ್ಳ ಪ್ರದೇಶಗಳು ನಗರಗಳ ಕೆಲವೊಂದು ಗುಣಲಕ್ಷಣಗಳನ್ನು ಹೊಂದಿದ್ದರು ಕೂಡ ಪ್ರಚಲಿತ ವ್ಯಾಖ್ಯಾನದ ಪ್ರಕಾರ ಅವುಗಳನ್ನು ನಗರಗಳೆಂದು ಪರಿಗಣಿಸಲಾಗದು. ಆದ್ದರಿಂದ ನಗರಗಳೆಂದು ವ್ಯಾಖ್ಯಾನಿಸಲ್ಪಡುವ ಹಾಗೂ ಅಪಾರ ಜನಸಂಖ್ಯೆಯ ತಾಣಗಳಾದ ನಗರಗಳು ಕೈಗಾರಿಕಾ ಕ್ರಾಂತಿಯ (Industrial Revolution) ನಂತರವೇ ಅಸ್ತಿತ್ವಕ್ಕೆ ಬಂದವೆನ್ನಬಹುದು. ಹೀಗೆ ಉಗಮವಾದ ನಗರಗಳು ಕೆಲವೇ ಸಮಯದಲ್ಲಿ ತಮ್ಮದೇ ಆದ ಹಾಗೂ ಗ್ರಾಮಗಳಿಂದ ವಿಭಿನ್ನವಾದ ಗುಣಲಕ್ಷಣಗಳನ್ನು ಪಡೆದುಕೊಂಡವು.

ಗ್ರಾಮ-ನಗರಗಳ ಗುಣ ವಿಶೇಷಗಳನ್ನು ಅರಿತುಕೊಳ್ಳುವ ಅತ್ಯುತ್ತಮ ಮಾರ್ಗವೆಂದರೆ ಅವುಗಳ ತೌಲನಿಕ ವಿಶ್ಲೇಷಣೆ. ಈ ತರಹದ ವಿಶ್ಲೇಷಣೆಯು ಗ್ರಾಮ-ನಗರಗಳ ಗುಣವಿಶೇಷಗಳನ್ನು ನಿಚ್ಚಳವಾಗಿ ಹೊರಹೊಮ್ಮಿಸುವುದಲ್ಲದೇ ಗ್ರಾಮ-ನಗರಗಳ ಬಗೆಗೆ ಒಂದು ಅಂತಿಮ ಸತ್ಯ (Ultimate Fact) ವನ್ನು ಎತ್ತಿ ತೋರಿಸುತ್ತದೆ. ಆ ಅಂತಿಮ ಸತ್ಯವೆಂದರೆ ಗ್ರಾಮ-ನಗರಗಳು ಕೇವಲ ಸಾಪೇಕ್ಷ ಪರಿಕಲ್ಪನೆಗಳೇ (Relative Concepts) ವಿನಾ ವಾಸ್ತವದಲ್ಲಿ ಕಂಡುಬರುವ ಅಮಿಶ್ರಿತ ಪರಿಶುದ್ಧ ಅಸ್ತಿತ್ವವುಳ್ಳ ಸಮುದಾಯಗಳಲ್ಲ. (They are not unmixed and pure entities).

ಗ್ರಾಮ-ನಗರಗಳನ್ನು ಕುರಿತು ನಾವು ಮನಗಾಣುವ ಇನ್ನೊಂದು ವೈಶಿಷ್ಟ್ಯವೆಂದರೆ ಅವುಗಳ ಸತತತೆ ಅಥವಾ ಸಾತತ್ಯ. ಗ್ರಾಮ-ನಗರಗಳ ಗುಣಲಕ್ಷಣಗಳು ಒಂದರೊಳಗೊಂದು ಹಾಸುಹೊಕ್ಕಾಗಿ ಹೆಣೆದುಕೊಂಡ ಹೆಣಿಗೆಗೆ ಹಾಗೂ ಒಂದರಿಂದ ಇನ್ನೊಂದನ್ನು ಬಿಡಿಸಲಾಗದಂತೆ ಅಂಟಿದ ನಂಟಿಗೆ ಗ್ರಾಮ-ನಗರಗಳ ಸಾತತ್ಯ (Rural-Urban Continuum) ಎನ್ನಲಾಗುತ್ತದೆ. ಗ್ರಾಮ-ನಗರಗಳ ನಡುವಣ ಕೆಲವೊಂದು ವಲಯಗಳಲ್ಲಿ ಈ ನಂಟಿನ ಅಂಟು ಎಷ್ಟು ಗಾಢವಾಗಿರುವುದೆಂದರೆ ನಾವು ಅಲ್ಲಿ ಒಂದು ಗೆರೆಯನ್ನು ಕೊರೆದು 'ಇಲ್ಲಿಗೆ-ಇಂತು' ಗ್ರಾಮವು ಕೊನೆ ಹೊಂದಿತು. 'ಇಲ್ಲಿಂದ-ಹೀಗೆ' ನಗರ ಪ್ರಾರಂಭವಾಯಿತು ಎಂದು ಹೇಳುವುದು ಅಸಾಧ್ಯ. ಹೀಗೆ ಗ್ರಾಮ-ನಗರಗಳೆಂದು ವಿಂಗಡಿಸಲಾಗದ ಈ ವಲಯಗಳಿಗೆ ನಗರಗಳ ಸೆರಗು (ಅಂಚು Urban fringe) ಎಂದು ಕರೆಯಲಾಗುವುದು.

ಇಂತಹ ಗಾಢ ಸಂಬಂಧಗಳನ್ನು ಹೊಂದಿದ ಗ್ರಾಮ-ನಗರಗಳ ನಡುವೆ ಪರಸ್ಪರಾವಲಂಬನೆ ಇರುವುದು ಸ್ವಾಭಾವಿಕ. ಈ ಸಂಬಂಧಕ್ಕೆ ಪರಸ್ಪರಾವಲಂಬನೆ ಅಥವಾ ಸಹಬಾಳ್ವೆ (Symbiosis) ಎಂದು ಕರೆಯಲಾಗುತ್ತದೆ.

ಒಂದು ವಿಶಿಷ್ಟ ರಾಜಕೀಯ ವ್ಯವಸ್ಥೆಯನ್ನು (Unique Polity) ಹೊಂದಿದ ಪ್ರಾಚೀನ ಭಾರತದಲ್ಲಿ ಗ್ರಾಮ-ನಗರಗಳು ಅಷ್ಟೊಂದು ನಿಕಟವಾದ ಸಂಬಂಧವನ್ನು ಹೊಂದಿರಲಿಲ್ಲ. ಆದರ ಬದಲಾಗಿ ಅವುಗಳ ನಡುವಣ ಸಂಬಂಧವನ್ನು 'ಸೂಕ್ಷ್ಮ ಹಾಗೂ ಅಲ್ಪಕಾಲಿಕ ಸಂಬಂಧ' (Tenuous and Temporary)' ವೆಂದು ಬಣ್ಣಿಸಬಹುದು. ಆದರೆ ಕಾಲ ಕಳೆದಂತೆ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಸಾಂಸ್ಕೃತಿಕ ಕಾರಣಗಳಿಂದ ಈ ಸಂಬಂಧವು ಬಲಗೊಂಡು, ನೆಲೆಗೊಂಡು ಈಗ 'ಗ್ರಾಮವಿಲ್ಲದೇ ನಗರವಿಲ್ಲ ; ನಗರವಿಲ್ಲದೇ ಗ್ರಾಮವಿಲ್ಲ' ಎಂಬ ಮಟ್ಟವನ್ನು ತಲುಪಿದೆ.

## 4.2 ಗ್ರಾಮೀಣ ಸಮಾಜದ ಗುಣಲಕ್ಷಣಗಳು

ರಾಬರ್ಟ್ ರೆಡ್‌ಫೀಲ್ಡ್, ಗೋಲ್ಡನ್ ವೀಜರ್, ಹೆನ್ರಿ ಮೇನ್, ಟೊನ್ನಿಸ್, ಡರ್ಖೀಂ, ಸಮ್ನರ್, ಮಿಲ್ಟನ್ ಸಿಂಗರ್, ಎಂ.ಎನ್. ಶ್ರೀನಿವಾಸ್, ಎ.ಆರ್. ದೇಸಾಯಿ, ಎಸ್.ಸಿ. ದುಬೆ ಮುಂತಾದ ಸಮಾಜಶಾಸ್ತ್ರಜ್ಞರು ಹಾಗೂ ಮಾನವಶಾಸ್ತ್ರಜ್ಞರು, ಲೋಕ ಸಮಾಜಗಳು (Folk Societies), ಪುಟ್ಟ ಸಮುದಾಯಗಳು (Little Communities), ಆದಿ ಸಮುದಾಯಗಳು (Primitive Communities) ಎಂಬ ಇತ್ಯಾದಿ ಹೆಸರುಗಳ ಅಡಿಯಲ್ಲಿ ಗ್ರಾಮೀಣ ಸಮಾಜಗಳ ಗುಣಲಕ್ಷಣಗಳನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ. ಈ ಎಲ್ಲ ಗ್ರಂಥಗಳಲ್ಲಿ ಚರ್ಚಿಸಿದ ಗ್ರಾಮಗಳ ಗುಣಲಕ್ಷಣಗಳನ್ನು ಹೆಕ್ಕಿ ತೆಗೆದು ಈ ಕೆಳಗೆ ನಮೂದಿಸಲಾಗಿದೆ.

ಗ್ರಾಮಗಳ ಗುಣಲಕ್ಷಣಗಳನ್ನು ಚರ್ಚಿಸುವ ಕೆಲಸಕ್ಕೆ ಕೈಹಾಕುವ ಮೊದಲು ಒಂದು ಅತಿ ಮುಖ್ಯವಾದ ಎಚ್ಚರಿಕೆಯನ್ನು ಗಮನದಲ್ಲಿಟ್ಟುಕೊಳ್ಳುವುದು ಅವಶ್ಯ. ಅದೇನೆಂದರೆ ನಾವೀಗ ಚರ್ಚಿಸಲಿರುವ ಗ್ರಾಮಗಳ ಗುಣಲಕ್ಷಣಗಳು ಕೇವಲ ಆದರ್ಶ ಪ್ರರೂಪಗಳು (Ideal types). ಇಂತಹ ಆದರ್ಶ ಪ್ರರೂಪಗಳ ಗುಣಲಕ್ಷಣಗಳನ್ನು ನಾವು ಕೇವಲ ಊಹಿಸಬಹುದೇ ವಿನಾ ಅವುಗಳನ್ನು ನಿಜ ಜೀವನದಲ್ಲಿ ಕಾಣಲಾರೆವು. ತಿಳಿ ಭಾಷೆಯಲ್ಲಿ ಹೇಳಬೇಕೆಂದರೆ ಇಲ್ಲಿ ಕಾಣಿಸಿದ ಎಲ್ಲ ವೈಶಿಷ್ಟ್ಯಗಳನ್ನು ತದ್ರೂಪವಾಗಿ, ಕೊಂಕು-ಕಳಂಕವಿಲ್ಲದೇ ಪಡೆದ ಗ್ರಾಮಗಳನ್ನು ನಾವು ಕಾಣುವುದು ಅಸಾಧ್ಯ. ಅದರ ಬದಲಾಗಿ ಈ ಗುಣಲಕ್ಷಣಗಳನ್ನು ಸರಿಸುಮಾರಾಗಿ, ಹತ್ತಿರ ಹತ್ತಿರವಾಗಿ (Approximately) ಹೊಂದಿದ ಗ್ರಾಮಗಳನ್ನು ಕಾಣಬಹುದು. ಈ ಎಚ್ಚರಿಕೆಯನ್ನು ಗಮನದಲ್ಲಿಟ್ಟುಕೊಂಡು ಗ್ರಾಮಗಳ ಗುಣಲಕ್ಷಣಗಳ ಬಗೆಗಿನ ಚರ್ಚೆಯನ್ನು ಕೈಗೆತ್ತಿಕೊಳ್ಳೋಣ.

- ಪ್ರದೇಶ **(Location) :** ಆದರ್ಶ ಪ್ರರೂಪ ಗ್ರಾಮಗಳು ತಮ್ಮದೇ ಆದ, ಹೊರ ಜಗತ್ತಿನೊಂದಿಗೆ ಸಂಬಂಧವಿಲ್ಲದ, ಏಕಾಂತವಾದ, ಪ್ರತ್ಯೇಕ ನೆಲೆಯನ್ನು ಹೊಂದಿರುತ್ತವೆ. ಈ ವಿಷಯವನ್ನು ಕುರಿತು ರಾಬರ್ಟ್ ರೆಡ್‌ಫೀಲ್ಡ್‌ರು ಈ ರೀತಿಯಾಗಿ ಹೇಳಿದ್ದಾರೆ. 'ಈ ಏಕಾಂತ ಪ್ರತ್ಯೇಕತೆಯು ಕೇವಲ ಭೌಗೋಳಿಕ ಪ್ರತ್ಯೇಕತೆಯಾಗಿರದೇ ಅದು ಮಾನಸಿಕ ಪ್ರತ್ಯೇಕತೆಯೂ ಹೌದು. ನಾಗರಿಕ ಸಂಸ್ಕೃತಿಯನ್ನು ಹೊಂದಿದ ಜನ ತಮ್ಮ ಸಮಕಾಲೀನರೊಂದಿಗೂ ಹಾಗೂ ಇನ್ನುಳಿದ ಕಾಲದ ಜನರೊಂದಿಗೂ ಪುಸ್ತಕಗಳ ಮೂಲಕ, ಪತ್ರಿಕೆಗಳ ಮೂಲಕ ಸಂಪರ್ಕ-ಸಂವಹನವನ್ನು (Communication) ಹೊಂದಿರುತ್ತಾರೆ. ಆದರೆ ಅನಕ್ಷರಸ್ಥರಾಗಿರುವ ಗ್ರಾಮವಾಸಿಗಳು ಈ ಸೌಲಭ್ಯದಿಂದ ವಂಚಿತರಾಗಿರುತ್ತಾರೆ. ಅವರ ಸಂಪರ್ಕ ಸಾಧನ ಕೇವಲ ಆಡು ಭಾಷೆಯಾಗಿದ್ದರಿಂದ ಅವರ ಸಂವಹನ ತಮ್ಮ ಭಾಷೆಯನ್ನಾಡುವ ತಮ್ಮ ಸಮೂಹದ ಇನ್ನಿತರರೊಂದಿಗೆ ಸೀಮಿತವಾಗಿರುತ್ತದೆ. ಅಷ್ಟು ಮಾತ್ರವಲ್ಲ, ಅವರ ಅನಕ್ಷರತೆಯು ಗ್ರಂಥಗಳಲ್ಲಿ ಸಂಗ್ರಹವಾಗಿಟ್ಟ, ಬೇರೆ ಇನ್ನಿತರ ಅನುಭವದ ಅಥವಾ ಸ್ವಂತ ತಮ್ಮ ಪೂರ್ವಜರ ಅನುಭವದ ಪೂರ್ತಿ ಲಾಭವನ್ನು ಓದಿ ತಿಳಿದುಕೊಳ್ಳದಂತೆಯೂ ಮಾಡುತ್ತದೆ. ಹೀಗಾಗಿ ಇಂತಹ ಸಮಾಜಗಳಲ್ಲಿ ಮೌಖಿಕ (ಬಾಯಿ ಮಾತಿನ) ಸಂಪ್ರದಾಯದ ಬೆಳವಣಿಗೆಗೆ ಯಾವ (Oral tradition) ತೊಡಕು-ತೊಂದರೆ, ಸ್ಪರ್ಧೆ-ಪೈಪೋಟಿ ಇಲ್ಲದಂತಾಗುತ್ತದೆ. ಆದ್ದರಿಂದ ಇಂತಹ ಗ್ರಾಮವಾಸಿಗಳಿಗೆ 'ಅಜ್ಜಂದಿರ ಕಾಲದ' ಆಚೆಗಿನ ಎಲ್ಲ ವಿಷಯಗಳು ದಾಖಲೆ-ಪುರಾವೆಗಳಿಲ್ಲದೆ ಅಸ್ಪಷ್ಟತೆಯಿಂದ ಕೂಡಿದ್ದು ಇತಿಹಾಸದ ಬಗೆಗೆ, ವೇದಾಂತದ ಬಗೆಗೆ, ವಿಜ್ಞಾನದ ಬಗೆಗೆ ಅವರು ಸಂಪೂರ್ಣ ಮುಗ್ಧರಾಗಿದ್ದರು.
- ಗಾತ್ರ **(Size) :** "ಪುಟ್ಟ ಸಮುದಾಯಗಳು" ಎಂಬ ಹೆಸರೇ ಸೂಚಿಸುವಂತೆ ಈ ಸಮುದಾಯಗಳು ಚಿಕ್ಕ ಗಾತ್ರದವು. ಒಂದು ಸಮುದಾಯವನ್ನು "ಪುಟ್ಟ ಸಮೂಹ" ವೆಂದು ಗುರುತಿಸಲು ಎಷ್ಟು ಚಿಕ್ಕದಾಗಿರಬೇಕು ? ಇಂತಿಷ್ಟೇ ಜನಸಂಖ್ಯೆಯನ್ನು ಹೊಂದಿರಬೇಕೆಂದು ಹೇಳಲಾಗದು. ಆದರೆ ರೆಡ್‌ಫೀಲ್ಡ್‌ರು ತಮ್ಮದೇ ಆದ ರೀತಿಯಲ್ಲಿ ಈ ಪ್ರಶ್ನೆಗೆ ಉತ್ತರ ನೀಡಿದ್ದಾರೆ. **''ಒಂದು ಪುಟ್ಟ ಸಮೂಹದಲ್ಲಿ ಪರಸ್ಪರ ನಿಕಟ ಸಂಬಂಧ ಹೊಂದಬಲ್ಲವರಿಗಿಂತ ಹೆಚ್ಚಿನ ಜನರಿರುವುದಿಲ್ಲ, ''(There are no more people than can come to know each other well)''** ಎಂದು ಹೇಳಿದ್ದಾರೆ.



- ಜನಸಂಖ್ಯಾ ಸಂರಚನೆ **(Population composition) :** ಏಕರೂಪತೆಯು ಗ್ರಾಮ ಸಮುದಾಯಗಳ ಇನ್ನೊಂದು ಮುಖ್ಯ ಗುಣಲಕ್ಷಣ. ರೆಡ್‌ಫೀಲ್ಡ್‌ರ ಪ್ರಕಾರ ತಲೆತಲಾಂತರಗಳಿಂದ ಪರರ ಸಂಬಂಧ-ಸಂಪರ್ಕವಿಲ್ಲದೇ ಗಾಢ ಸಂಬಂಧಿಗಳಾಗಿ ಬೆಳೆದ

ಗ್ರಾಮಸ್ಥರು ಒಂದೇ ಜೈವಿಕ ವರ್ಗವಾಗಿ (Biological Type) ಪರಿಣಮಿಸುತ್ತಾರೆ. ಗ್ರಾಮವಾಸಿಗಳ ಈ ಭೌತಿಕ ಏಕರೂಪತೆಯನ್ನು (Somatic homogeneity) ಇನ್ನಿತರ ಅನೇಕ ಸಮಾಜಶಾಸ್ತ್ರಜ್ಞರೂ, ಮಾನವಶಾಸ್ತ್ರಜ್ಞರೂ ತಮ್ಮ ಸಂಶೋಧನೆಗಳಲ್ಲಿ ದೃಢಪಡಿಸಿದ್ದಾರೆ.

- ಆಧಾರ (**Basis**) **:** ಒಂದು ಆದರ್ಶ ಪ್ರರೂಪದ ಗ್ರಾಮದ ಆಧಾರ ಕಳ್ಳುಬಳ್ಳಿಯೇ ವಿನಾ ಪ್ರಾದೇಶಿಕ ನೆಲೆಗಟ್ಟಲ್ಲ (Territory). ನಿಜವಾಗಿ ಹೇಳಬೇಕೆಂದರೆ ಪುಟ್ಟ ಸಮುದಾಯಗಳು ಕುಟುಂಬಗಳ ಸಂರಚನೆಗಳು; ಅವು ವ್ಯಕ್ತಿಗಳ ಸಂರಚನೆಗಳಲ್ಲ (Communities of families but not of individuals). ಹೀಗಾಗಿ ಗ್ರಾಮಗಳನ್ನು ಕುಟುಂಬ ಸಮುದಾಯಗಳೆಂದೂ ಕರೆಯಲಾಗುತ್ತದೆ. ಈ ರೀತಿ ಒಟ್ಟಾರೆ ಸಮಾಜವು ಕಳ್ಳುಬಳ್ಳಿಗಳ ಒಂದು ಹೆಣಿಗೆ ಅಥವಾ ಜಾಳಿಗೆ ಆಗಿರುತ್ತದೆ. ಆದ್ದರಿಂದ ಕೆಲವೊಂದು ಸಲ ರಕ್ತ ಸಂಬಂಧಿಗಳಲ್ಲದ 'ಪರರೂ' ಕೂಡ ಕೆಲವೊಂದು ಸಂಸ್ಕಾರಗಳ, ಧಾರ್ಮಿಕ ವಿಧಿ-ವಿಧಾನಗಳ ಮೂಲಕ ರಕ್ತ ಸಂಬಂಧಿಯ ಸ್ಥಾನವನ್ನು ಪಡೆಯುವುದುಂಟು. ಆಫ್ರಿಕಾದಲ್ಲಿ ರೂಢಿಯಲ್ಲಿರುವ ಒಂದು ಪದ್ಧತಿಯನ್ನು ಇಲ್ಲಿ ಉದಾಹರಣೆಗಾಗಿ ಉಲ್ಲೇಖಿಸಬಹುದು. ರಕ್ತ ಸಂಬಂಧಿಯಲ್ಲದ ಒಬ್ಬ ಹೊರಗಿನವನನ್ನು ತಮ್ಮ ಸಮೂಹದ ಸದಸ್ಯನನ್ನಾಗಿ ಸೇರಿಸಿಕೊಳ್ಳಲು ಅಲ್ಲಿನ ಕೆಲವೊಂದು ಸಮೂಹಗಳು ಒಂದು ಸಂಸ್ಕಾರವನ್ನು ಆಚರಿಸುತ್ತಿದ್ದವು. ತನ್ನದಲ್ಲದ ಸಮೂಹದ ಸದಸ್ಯತ್ವವನ್ನು ಬಯಸಿ ಬಂದವನ ಹಾಗೂ ಬರಮಾಡಿಕೊಳ್ಳುವನ ಸಮೂಹದ ಮುಖ್ಯಸ್ಥನ ಮುಂಗೈ ಮಣಿಕಟ್ಟುಗಳಿಗೆ (wrists) ಗಾಯಗೊಳಿಸಿ ರಕ್ತ ಹರಿಯುವಂತೆ ಮಾಡಿ ಅವರಿಬ್ಬರ ಮುಂಗೈ ಮಣಿಕಟ್ಟುಗಳು ಕೂಡುವಂತೆ ಕೆಲ ಸಮಯದವರೆಗೆ ಕಟ್ಟುತ್ತಿದ್ದರು. ಹೀಗೆ ಕಟ್ಟಿದಾಗ ಅವರಿಬ್ಬರ ರಕ್ತ ಬೆರೆತು ಅವರಲ್ಲಿ ರಕ್ತ ಸಂಬಂಧವನ್ನು ಕುದುರಿಸುವುದೆಂದು ಅವರ ನಂಬುಗೆಯಾಗಿತ್ತು. ಅಷ್ಟೇ ಏಕೆ ನಮ್ಮ ದೇಶದ ಎಲ್ಲ ಕಡೆಗೂ ಕಂಡು ಬರುವ ದತ್ತು ಪದ್ಧತಿಯೂ ಕೂಡ ರಕ್ತ ಸಂಬಂಧವಿಲ್ಲದವರನ್ನು ರಕ್ತ ಸಂಬಂಧಿಗಳಾಗಿ ಪರಿವರ್ತಿಸುವ ಒಂದು ಪದ್ಧತಿಯೆ! ಹೀಗಾಗಿ ನಮ್ಮ ಗ್ರಾಮಗಳಲ್ಲಿ ಕಳ್ಳುಬಳ್ಳಿ ಸಂಬಂಧಿಕರನ್ನು ಸಂಬೋಧಿಸುವ ಪದಗಳಾದ ಅಣ್ಣ-ತಮ್ಮ, ಅಕ್ಕ-ತಂಗಿ, ಅತ್ತೆ-ಮಾವ, ಚಿಕ್ಕಪ್ಪ-ದೊಡ್ಡಪ್ಪ, ಅಜ್ಜ-ಅಜ್ಜಿ ಮುಂತಾದ ಸಂಬಂಧಿಕರಲ್ಲದವರನ್ನೂ ಸಂಬೋಧಿಸಲು ಪ್ರಯೋಗಿಸುವುದು ಸರ್ವೇಸಾಮಾನ್ಯ.

- ವೃತ್ತಿ (**Occupation**) **:** ವ್ಯವಸಾಯ ಮತ್ತು ಪಶು ಸಂಗೋಪನೆಗಳು ಬಹುಮಟ್ಟಿನ ಪುಟ್ಟ ಸಮುದಾಯ (ಗ್ರಾಮ) ನಿವಾಸಿಗಳ ಪ್ರಮುಖ ವೃತ್ತಿಗಳಾಗಿವೆ. ಮೀನು ಸಾಕಾಣಿಕೆ ಹಾಗೂ ಕಾಡುಗಳಲ್ಲಿ ದೊರೆಯುವ ಹಣ್ಣು-ಹಂಪಲು, ಎಲೆ-ತೊಗಟೆ, ಜೇನು, ಗಿಡ-ಮೂಲಿಕೆ, ಅಂಟು ಇತ್ಯಾದಿಗಳನ್ನು ಸಂಗ್ರಹಿಸಿ ಅವುಗಳನ್ನು ಮಾರಿ ಉಪ ಜೀವನ ಸಾಗಿಸುವ ವೃತ್ತಿಯನ್ನು ಹೊಂದಿದ ಗ್ರಾಮಗಳೂ ಅಸ್ತಿತ್ವದಲ್ಲಿವೆ. ಹೀಗಾಗಿ ನಾವು ಗ್ರಾಮವಾಸಿಗಳ ಜೀವನದ ಮೂಲಾಧಾರ ಸಸ್ಯ-ವನಸ್ಪತಿಗಳೂ, ಪ್ರಾಣಿ-ಪಕ್ಷಿಗಳೂ (Flora and Fauna) ಎಂದು ಹೇಳಬಹುದು.

- ಸ್ವಾವಲಂಬನೆ (**Self-Sufficiency**) **:** ಆದರ್ಶ ಪ್ರರೂಪದ ಗ್ರಾಮವು "ಗ್ರಾಮವಾಸಿಗಳಿಗೆ ಹುಟ್ಟಿನಿಂದ ಸಾವಿನವರೆಗೆ ಬೇಕಾಗುವ ಎಲ್ಲಾ ಅಗತ್ಯಗಳನ್ನು ಪೂರೈಸುವ" ಒಂದು ಸಮುದಾಯವಾಗಿದೆ. ಅವು ತಮ್ಮ ಬಾಳ್ವೆಗಾಗಿ ಬೇರೆಯವರನ್ನು ಅವಲಂಬಿಸಿರುವುದಿಲ್ಲ. ತಮ್ಮ ಬೇಕು-ಬೇಡಿಕೆಗಳನ್ನು ತಾವೇ ಉತ್ಪಾದಿಸುವ ಉತ್ಪನ್ನಗಳಿಗೆ ಸೀಮಿತಗೊಳಿಸಿ ಪರಾವಲಂಬನೆಯನ್ನು ಆದಷ್ಟು ಮಟ್ಟಿಗೆ ಹತೋಟಿಯಲ್ಲಿಡುತ್ತಾರೆ. ಕೆಲವೊಮ್ಮೆ ಇಂತಹ ಅವಲಂಬನೆ ಅನಿವಾರ್ಯವಾದಾಗ ಆ ಅವಲಂಬನೆಯು ತಗ್ಗಿಸಲಾರದ ತಳದಲ್ಲಿ (Irreducible minimum) ಇರುವಂತೆ ನೋಡಿಕೊಳ್ಳುತ್ತಾರೆ. ಆದ್ದರಿಂದ ಗ್ರಾಮಗಳಿಗೆ ತಿನ್ನುವುದನ್ನು ಬೆಳೆವ; ಬೆಳೆಯುವುದನ್ನು ತಿನ್ನುವ (**Consume what they produce; produce what they consume**) ಸಮುದಾಯಗಳೆಂದು ಕರೆಯಲಾಗುತ್ತದೆ.

- ಸಾಮಾಜಿಕ ನಿಯಂತ್ರಣ (**Social Control**) **:** ವೃದ್ಧರಾಡಳಿತವು (Gerontocracy) ಗ್ರಾಮಗಳ ಸಾಮಾಜಿಕ ನಿಯಂತ್ರಣ ವ್ಯವಸ್ಥೆಯ ಒಂದು ಪ್ರಮುಖ ಗುಣಲಕ್ಷಣ. ಅನಕ್ಷರತೆ, ಬಾಯಿ ಮಾತಿನ (ಮೌಖಿಕ) ಸಂಪ್ರದಾಯ ಹಾಗೂ ವೃದ್ಧರಾಡಳಿತ (Illiteracy, oral tradition and gerontocracy) ಈ ಮೂರು ಸದಾ ಸಂಗಾತಿಗಳಾಗಿರುವಂತಹವಾಗಿವೆ. ಅನಕ್ಷರಸ್ಥರಿಂದ ತುಂಬಿದ ಸಮಾಜದಲ್ಲಿ ಬಾಯಿ ಮಾತು (Spoken word and not written word) ಹಾಗೂ ಆಡು-ಸಂಪ್ರದಾಯಗಳು (Oral Tradition) ಮುಖ್ಯ ಪಾತ್ರವನ್ನು ವಹಿಸುತ್ತವೆ. ರೀತಿ-ನೀತಿ, ಪದ್ಧತಿ-ಪರಂಪರೆ, ಸಂಪ್ರದಾಯಗಳು ಕೇವಲ ಜನರ ನೆನಪಿನಲ್ಲಿರುವ ವಿಷಯಗಳೇ ವಿನಾ ಪುಸ್ತಕ-ಗ್ರಂಥಗಳಲ್ಲಿ ದಾಖಲಿಸಿದ ವಿಷಯಗಳಲ್ಲ. ವಯೋವೃದ್ಧರ ಜ್ಞಾಪಕ ಶಕ್ತಿಯೇ (Memory) ಅವುಗಳ ಉಗ್ರಾಣ (Store house). ಹೀಗಾಗಿ ಇಂತಹ ಸಮಾಜಗಳಲ್ಲಿ ವಯೋವೃದ್ಧರು ನಿರೂಪಣೆ (Enunciator), ಅರ್ಥೈಸುವಿಕೆ (Interpreter) ಹಾಗೂ ಪದ್ಧತಿಗಳು, ಸಂಪ್ರದಾಯಗಳು ಮತ್ತು ಆಚರಣೆಗಳನ್ನು ಜಾರಿಗೊಳಿಸುವಂತಹ (**Implementer**) ಮೂರು ಪ್ರಮುಖ ಪಾತ್ರವನ್ನು ಮಾಡುತ್ತಾರೆ. ಇಂತಹ ಪ್ರಮುಖ ಪಾತ್ರವನ್ನು

ಮಾಡುವ ಹಿರಿಯರು ಸ್ವಾಭಾವಿಕವಾಗಿ ಈ ಸಮಾಜಗಳಲ್ಲಿ ಉನ್ನತ ಸ್ಥಾನವನ್ನು ಹೊಂದಿ ವೃದ್ಧರಾಡಳಿತಕ್ಕೆ ಕಾರಣರಾಗುತ್ತಾರೆ.

ಅನಕ್ಷರಸ್ಥರಿಂದಲೇ ತುಂಬಿದ ಪುರಾತನ ಭಾರತೀಯ ಗ್ರಾಮಗಳಲ್ಲಿ ವಯೋವೃದ್ಧರ ಪಾತ್ರ ಎಷ್ಟು ಮಹತ್ವದ್ದಾಗಿದ್ದಿತೆಂದು ಸಿದ್ಧಪಡಿಸಲು ಒಂದು ಉದಾಹರಣೆಯನ್ನು ನೀಡಬಹುದು. ಇತ್ತೀಚೆಗೆ ತಮಿಳುನಾಡಿನ ಚಿಂಗ್ಲೆಪುತ (Chingleput) ಜಿಲ್ಲೆಯ ಉತ್ತರ ಮಲ್ಲೂರು ಎಂಬ ಗ್ರಾಮದಲ್ಲಿ 11ನೆ ಶತಮಾನದ ಕೆಲವೊಂದು ಶಿಲಾ ಶಾಸನಗಳ ಉತ್ಖನನವಾಯಿತು. ಅವುಗಳಲ್ಲಿ ಒಂದು ಶಿಲಾ ಶಾಸನವು ತಮಿಳು ನಾಡಿನಲ್ಲಿ "ಊರವರು" ಎಂದು ಕರೆಯಲ್ಪಡುತ್ತಿದ್ದ ಗ್ರಾಮ ಪಂಚಾಯತಿಗಳಿಗೆ ಸಂಬಂಧಿಸಿದೆ. ಆ ಶಾಸನದಲ್ಲಿ ಊರವರ ಸದಸ್ಯರಾಗಲು ಬಯಸುವ ವ್ಯಕ್ತಿಯು ಯಾವ್ಯಾವ ಅರ್ಹತೆಗಳನ್ನು ಹೊಂದಿರಬೇಕೆಂದು ನಮೂದಿಸಲಾಗಿದೆ. ಅವುಗಳಲ್ಲಿ ಪ್ರಪ್ರಥಮ ಅರ್ಹತೆ ಎಂದರೆ ಆ ವ್ಯಕ್ತಿಯು ೪೦ ವರ್ಷಗಳ ವಯಸ್ಸನ್ನು ದಾಟಿದವನಾಗಿರಬೇಕು. ಯಾಕೆ? ಆ ಶಾಸನದಲ್ಲಿ ಕಾರಣವನ್ನು ಕೊಡಲಾಗಿದೆ. ಅದೇನೆಂದರೆ 'ಯವ್ವನ ಹಾಗೂ ದುರುಳುತನ ಸಹವರ್ತಿಗಳು' ಎಂಬುದೇ. ಇದರ ಅರ್ಥವಿಶ್ಲೇ: ಪರಂಪರೆಯ ಅರಿವಿಲ್ಲದ ಹಾಗೂ ಅವುಗಳ ಮಹತ್ವವನ್ನರಿಯದ ಯುವಕರು ಪರಂಪರೆಯನ್ನು ಉಲ್ಲಂಘಿಸಿ ಸಮಾಜದ ಸ್ವಾಸ್ಥ್ಯವನ್ನು ಹದಗೆಡಿಸುವ ಪ್ರವೃತ್ತಿಯನ್ನು ಹೊಂದಿರುವುದರಿಂದ ಅವರು ಸಮಾಜದ ಮುಖ್ಯಸ್ಥರಾಗಲು ಅನರ್ಹರು. ಆದರೆ ವಯೋವೃದ್ಧರು ಹಾಗಲ್ಲ. ಗ್ರಾಮದ ಪರಂಪರೆಗಳ ಸಂಪೂರ್ಣ ಜ್ಞಾನವನ್ನು ಹೊಂದಿದ ಅವರು ಪರಂಪರೆಗಳನ್ನು ಚಾಚೂ ತಪ್ಪದೇ ಜಾರಿಗೊಳಿಸಲರ್ಹರಾದದ್ದರಿಂದ ಅವರೇ ಗ್ರಾಮಗಳ ಯಜಮಾನರಾಗಲು ತಕ್ಕವರು.


- **ಸಂಚಲನೆ (Mobility) :** ಆದರ್ಶ ಪ್ರರೂಪ ಗ್ರಾಮಗಳಲ್ಲಿ ಸಾಮಾಜಿಕ ಹಾಗೂ ಆಂತರಿಕ ಸಂಚಲನೆಯ ಪ್ರಮಾಣ ಅತಿ ಕಡಿಮೆ. ಇಂತಹ ಗ್ರಾಮಗಳಲ್ಲಿನ ನಿವಾಸಿಗಳ ಸ್ಥಾನಗಳು ಹುಟ್ಟಿನಿಂದಲೇ ನಿರ್ಧರಿಸಲ್ಪಟ್ಟಿರುವುವವಲ್ಲದೇ ಅವು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ವರ್ಗಾವಣೆಗೊಳ್ಳುವವು. ಹೀಗಾಗಿ ಇಂತಹ ಸಮಾಜಗಳಲ್ಲಿ ಸ್ಥಾನಮಾನಗಳ ಪಲ್ಲಟನೆ ಅಥವಾ ಬದಲಾವಣೆಯಾಗುವುದು ಕ್ವಚಿತ ಅಥವಾ ಅಪರೂಪ. ಅದೇ ರೀತಿ ಹೊರ ಪ್ರಪಂಚದೊಂದಿಗೆ ಯಾವುದೇ ತರಹದ ಸಂಪರ್ಕ ಹೊಂದದ ಸ್ವಾವಲಂಬಿಗಳಾದ ಈ ಗ್ರಾಮದ ನಿವಾಸಿಗಳು ಇನ್ನೊಂದು ಗ್ರಾಮಕ್ಕೆ ಅಥವಾ ನಗರಕ್ಕೆ ಹೋಗಿ-ಬರುವ ಪ್ರಸಂಗಗಳು ಅತಿ ವಿರಳ. ಭಾರತದ ಗ್ರಾಮವಾಸಿಗಳ ಈ ಆಂತರಿಕ ಚಲನ ಹೀನತೆಯ ಬಗ್ಗೆ ವಿವರಿಸುತ್ತ ಕಿಂಗಸ್ಲೇ ಡೇವಿಸ್‌ರವರು " The population of India and Pakistan" ಎಂಬ ತಮ್ಮ ಹೆಸರಾಂತ ಗ್ರಂಥದಲ್ಲಿ ಹೀಗೆ ವಿವರಿಸಿದ್ದಾರೆ. "ಭಾರತೀಯ ಗ್ರಾಮಸ್ಥರು ತಮ್ಮ ಗ್ರಾಮ ಹಾಗೂ ತಮ್ಮ ಜಮೀನುಗಳ ಬಗ್ಗೆ ಅತೀವ ವಾತ್ಸಲ್ಯವನ್ನು ಹೊಂದಿದವರು. ಅವರು ಎರಡೇ ಎರಡು ಸಂದರ್ಭಗಳಲ್ಲಿ ತಮ್ಮ ಗ್ರಾಮ-ಜಮೀನುಗಳನ್ನು ತ್ಯಜಿಸಿ ಬೇರೆ ಕಡೆಗೆ ಹೋಗುವ ಸಾಧ್ಯತೆ ಇದೆ. ಆ ಎರಡು ಸಂದರ್ಭಗಳೆಂದರೆ : ಕಡು ಹಸಿವು ಹಾಗೂ ಮರಣ. ಅರ್ಥಾತ್, ಇನ್ನೇನು ಕಡು ಹಸುವಿನಿಂದ ಸಾಯುವುದೊಂದೇ ಮಾರ್ಗ ಎಂಬ ಪರಿಸ್ಥಿತಿ ಬಂದೋದಗುವವರೆಗೆ ಅವರು ತಮ್ಮ ಗ್ರಾಮ-ಜಮೀನುಗಳನ್ನು ಬಿಟ್ಟು ಕದಲಲು ಎಂದೂ ಬಯಸುವವರಲ್ಲ.
- **ಸಾಮಾಜಿಕ ಬದಲಾವಣೆ (Social Change) :** ಮೇಲ್ಕಾಣಿಸಿದ ವಿವಿಧ ಗುಣಲಕ್ಷಣಗಳಿಂದ ಆದರ್ಶ ಪ್ರರೂಪ ಗ್ರಾಮಗಳಲ್ಲಿ - ಆರ್ಥಿಕ, ರಾಜಕೀಯ, ಇಲ್ಲವೇ ಸಾಮಾಜಿಕ-ಸಾಂಸ್ಕೃತಿಕ-ಬದಲಾವಣೆಗಳಿಗೆ ಆಸ್ಪದವಿಲ್ಲ. ಸಮಾಜದಲ್ಲಿ ಬದಲಾವಣೆಯನ್ನು ತಂದೊಡ್ಡುವ ಬಾಹ್ಯ ಹಾಗೂ ಆಂತರಿಕ ಬದಲಾವಣಾ ಕಾರಣಾಂಶಗಳಿಂದ ದೂರವಿದ್ದ ಈ ಸಮುದಾಯಗಳು ಬದಲಾವಣಾ ನಿರೋಧಕ ಸಮುದಾಯಗಳೆನ್ನಬಹುದು. ಈ ವಿಷಯವನ್ನು ಕುರಿತು ರೆಡ್‌ಫೀಲ್ಡ್‌ರು ಮಂಡಿಸಿದ ವಿಚಾರಗಳು ಗಮನಾರ್ಹ: "ಇಂತಹ ಪುಟ್ಟ ಸಮುದಾಯಗಳಲ್ಲಿ ವಾಸಿಸುವ ಜನರ ಜೈವಿಕ ರಚನೆಯು ಬಾಲ್ಯಾವಸ್ಥೆಯಲ್ಲಿಯೇ ಅಲ್ಲಿ ಪ್ರಚಲಿತವಿರುವ ರೂಢಿ-ಪದ್ಧತಿಗಳಿಗೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಸಂಪೂರ್ಣ ತಾಳಮೇಳವಾದದ್ದರಿಂದ ಬದಲಾವಣೆಯನ್ನು ಕುರಿತು ವಿಚಾರಿಸುವುದೂ ಕೂಡ ಅವರಿಗೆ ಮಾನಸಿಕ-ದೈಹಿಕ ವೇದನೆಯನ್ನುಂಟು ಮಾಡುತ್ತದೆ.

## 4.3 ಗ್ರಾಮ - ನಗರಗಳ ತುಲನೆ

ಗ್ರಾಮ-ನಗರಗಳ ತುಲನೆಯನ್ನು ಒಂದು ಎಚ್ಚರಿಕೆಯ ಮಾತಿನಿಂದಲೇ ಪ್ರಾರಂಭಿಸುವುದು ಸೂಕ್ತ. ಆ ಎಚ್ಚರಿಕೆಯ ಮಾತೇನೆಂದರೆ ಗ್ರಾಮ-ನಗರ ಸಮುದಾಯಗಳು ಆದರ್ಶ ಪ್ರರೂಪಗಳು. ಗ್ರಾಮ-ನಗರಗಳು ಕೇವಲ ಮಾನಸಿಕ ಪರಿಕಲ್ಪನೆಗಳೇ ವಿನಾ ನಿಜ ಜೀವನದಲ್ಲಿ ಕಂಡು ಬರುವ ವಾಸ್ತವಿಕ ಸಮುದಾಯಗಳಲ್ಲ. ವಾಸ್ತವದಲ್ಲಿ ನಾವು ಯಾವುದೇ ತರಹದ ಕಲಬೆರಕೆ ಇಲ್ಲದ ನೂರಕ್ಕೆ ನೂರರಷ್ಟು ಪರಿಶುದ್ಧ ಗ್ರಾಮವನ್ನಾಗಲೀ, ನಗರವನ್ನಾಗಲೀ ಕಾಣಲು ಅಸಾಧ್ಯ. ಗ್ರಾಮ ನಗರಗಳು ಒಂದರಿಂದೊಂದು ಬೇರ್ಪಟ್ಟು ನಿರ್ವಾತ (vaccuum) ಸ್ಥಿತಿಯಲ್ಲಿ ಕಂಡು ಬರುವ ಘಟಕಗಳಲ್ಲವಾದ್ದರಿಂದ ಗ್ರಾಮದ ಕೆಲವೊಂದು ಪ್ರಮುಖ ಗುಣಲಕ್ಷಣಗಳನ್ನು ನಗರದಲ್ಲಿಯೂ ನಗರದ ಕೆಲವೊಂದು ಗುಣಲಕ್ಷಣಗಳನ್ನು ಗ್ರಾಮದಲ್ಲಿಯೂ ನಾವು ಕಾಣುತ್ತೇವೆ. ಹೀಗಾಗಿ ನಿಜ ಜೀವನದಲ್ಲಿ ನಾವು ಕಾಣುವುದು ಗ್ರಾಮ-ನಗರಗಳ ಗುಣಲಕ್ಷಣಗಳ ಒಂದು ವರ್ಣಪಟಲ (Spectrum). ಈ ವರ್ಣಪಟಲದಲ್ಲಿ ಕಾಡಿನಲ್ಲಿರುವ ಬುಟಕಟ್ಟಿನ (Tribe) ಗುಣಲಕ್ಷಣಗಳು

ಉಪ-ಗ್ರಾಮದಲ್ಲಿಯೂ (Sub-Rural), ಉಪ-ಗ್ರಾಮದ ಗುಣಲಕ್ಷಣಗಳು ಗ್ರಾಮದಲ್ಲಿಯೂ, ಗ್ರಾಮದ ಗುಣಲಕ್ಷಣಗಳು ಉಪ-ನಗರದಲ್ಲಿಯೂ, ಉಪ-ನಗರದ ಗುಣಲಕ್ಷಣಗಳು ನಗರದಲ್ಲಿಯೂ, ನಗರದ ಗುಣಲಕ್ಷಣಗಳು ಮಹಾನಗರದಲ್ಲಿಯೂ, ಮಹಾನಗರದ ಗುಣಲಕ್ಷಣಗಳು ಬೃಹತ್‌ನಗರದಲ್ಲಿಯೂ ಸಂಗಮವಾಗುವುದನ್ನು ಕಾಣುತ್ತೇವೆ. ಆದ್ದರಿಂದ ಸಮುದಾಯಗಳನ್ನು ಗ್ರಾಮ-ನಗರಗಳೆಂದು ವರ್ಗೀಕರಿಸಲು ನಾವು ಒಂದು ಪ್ರಣಾಲಿಯನ್ನು ಉಪಯೋಗಿಸಬೇಕೇ ವಿನಾ ದ್ವಿಭಾಜಕವನ್ನಲ್ಲ. ಹೀಗಾಗಿ ನಾವು 'X' ಸಮುದಾಯವನ್ನು ಒಂದು ಗ್ರಾಮವೆಂದೂ 'Y' ಸಮುದಾಯವನ್ನು ಒಂದು ನಗರವೆಂದು ಹೇಳುವ ಅರ್ಥ 'X' ಸಮುದಾಯವು ನಗರಗಳ ಗುಣಲಕ್ಷಣಗಳಿಗಿಂಥ ಹೆಚ್ಚು ಗ್ರಾಮೀಣ ಗುಣಲಕ್ಷಣಗಳನ್ನು ಹೊಂದಿದ ಸಮಾಜವೆಂದೂ, 'Y' ಸಮಾಜವು ಗ್ರಾಮೀಣ ಗುಣಲಕ್ಷಣಗಳಿಗಿಂಥ ಹೆಚ್ಚು ನಗರದ ಗುಣ ಲಕ್ಷಣಗಳನ್ನು ಹೊಂದಿದ ಸಮಾಜವೆಂಬುದು ಮಾತ್ರ ಅಷ್ಟೇ.

ಗ್ರಾಮ-ನಗರಗಳ ಸಾತತ್ಯದ ವರ್ಣಪಟಲ




ಈ ವಾಸ್ತವಿಕತೆಯನ್ನು ಮನಸ್ಸಿನಲ್ಲಿ ದೃಢವಾಗಿಟ್ಟುಕೊಂಡು ನಾವು ಗ್ರಾಮ-ನಗರಗಳ ತುಲನಾತ್ಮಕ ವಿಶ್ಲೇಷಣೆಯನ್ನು ಕೈಗೆತ್ತಿಕೊಳ್ಳೋಣ.

- **ಕಾಲಾನುಕ್ರಮ (Time Sequence) :** ಕಾಲಾನುಕ್ರಮವಾಗಿ ಹೇಳಬೇಕೆಂದರೆ ಗ್ರಾಮ ಸಮುದಾಯಗಳು ಅಸ್ತಿತ್ವಕ್ಕೆ ಬಂದ ಅನೇಕ ಶತಮಾನಗಳ ನಂತರ ನಗರಗಳು ಉಗಮವಾದವು. ಈ ಹಿಂದೆ ನಾವು ಗಮನಿಸಿದಂತೆ ಆದಿಮಾನವರು ಸಾಮಾಜಿಕ ವಿಕಾಸದ ನಾಲ್ಕನೆಯ ಹಂತವಾದ ಭೂಮಿ ಸಾಗುವಳಿ ಹಂತವನ್ನು ತಲುಪಿದಾಗ ಗ್ರಾಮಗಳು ಅಸ್ತಿತ್ವಕ್ಕೆ ಬಂದವು. ಹೀಗಾಗಿ ಗ್ರಾಮಗಳು ಸಾವಿರಾರು ವರ್ಷಗಳ ಪ್ರಾಚೀನ ಇತಿಹಾಸವನ್ನು ಹೊಂದಿದ್ದರೆ ನಗರಗಳು ಕೇವಲ ಕೆಲವು ನೂರು ವರ್ಷಗಳ ಇತಿಹಾಸವನ್ನು ಹೊಂದಿವೆ.

- **ಉಗಮದ ಸ್ವರೂಪ (Nature of Origin) :** ಗ್ರಾಮಗಳು ನೈಸರ್ಗಿಕ ವಿಕಾಸದ ಫಲಗಳಾದರೆ ನಗರಗಳು ಮಾನವ ನಿರ್ಮಿತ ಸಮಾಜಗಳಾಗಿವೆ. ಹೆಸರಾಂತ ಭೂಗೋಳಶಾಸ್ತ್ರಜ್ಞರಾದ ಡಾ.ರಾಮಚಂದ್ರನ್ ಅವರ ಮಾತಿನಲ್ಲಿ ಹೇಳಬೇಕೆಂದರೆ 'ನಗರಗಳು ಸಾಮಾಜಿಕ ಕುಶಲ ವಸ್ತುಗಳು' ಆದ್ದರಿಂದ ಇಂಗ್ಲಿಷ್ ಭಾಷೆಯಲ್ಲಿ, **ದೇವರು ಗ್ರಾಮಗಳನ್ನು ನಿರ್ಮಿಸಿದ; ಮಾನವ ನಗರಗಳನ್ನು ನಿರ್ಮಿಸಿದ' (God made villages; man made cities)** ಎಂಬ ನಾಣ್ಣುಡಿ ಇದೆ.

- **ಗಾತ್ರ (Size) :** ಜನಸಂಖ್ಯಾ ಗಾತ್ರದಲ್ಲಿ ಗ್ರಾಮಗಳು ಚಿಕ್ಕವು, ನಗರಗಳು ದೊಡ್ಡವು. ಆದರೆ ಒಂದು ಸಮುದಾಯವನ್ನು ಗ್ರಾಮವೆಂದು ಗುರುತಿಸಬೇಕಾದರೆ ಇಂತಿಷ್ಟು ಜನಸಂಖ್ಯೆ ಇರಬೇಕೆಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದ ಒಂದು ನಿರ್ದಿಷ್ಟ ಮಾನದಂಡವಿಲ್ಲ. ಈ ಮಾನದಂಡವು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆಯಾಗಿರುತ್ತದೆ. ಉದಾ: ಅಮೆರಿಕಾದಲ್ಲಿ 2500 ಅಥವಾ ಅದಕ್ಕೂ ಕಡಿಮೆ ಜನಸಂಖ್ಯೆಯನ್ನು ಹೊಂದಿದ ಸಮುದಾಯ ಗ್ರಾಮವೆಂದೂ 2500 ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ಸಮುದಾಯ ನಗರವೆಂದೂ ಪರಿಗಣಿಸಲಾಗುತ್ತದೆ. ಆದರೆ ಭಾರತದಲ್ಲಿ 5000 ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಸಮೂಹವನ್ನು ಗ್ರಾಮವೆಂದು ಪರಿಗಣಿಸಲಾಗುತ್ತದೆ. ಗ್ರಾಮ-ನಗರವನ್ನು ಜನಸಂಖ್ಯಾಶಾಸ್ತ್ರದ ದೃಷ್ಟಿಯಿಂದ ವರ್ಗೀಕರಿಸುವಾಗ ಜನ ಸಾಂದ್ರತೆಯನ್ನು ಪರಿಗಣಿಸುತ್ತಾರೆ. ಸಾಮಾನ್ಯವಾಗಿ ಗ್ರಾಮಗಳು ಕಡಿಮೆ ಪ್ರಮಾಣದ ಸಾಂದ್ರತೆಯನ್ನೂ ನಗರಗಳು ಹೆಚ್ಚಿನ ಪ್ರಮಾಣದ ಸಾಂದ್ರತೆಯನ್ನೂ ಹೊಂದಿರುತ್ತವೆ. ಇದಕ್ಕೆ ಕಾರಣವೆಂದರೆ ಗ್ರಾಮ-ನಗರಗಳ ಉದ್ಯೋಗ